ಹುಬ್ಬಳ್ಳಿ
ಶುಕ್ರವಾರ, 5 ಜೂನ್ 2026
ಸಂಪುಟ 16, ಸಂಚಿಕೆ 72, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಇಂದು ವಿಶ್ವ ಪರಿಸರ ದಿನ

ಕೇರಳ ಪ್ರವೇಶಿಸಿದ ನೈಋತ್ಯ ಮುಂಗಾರು | ೦೭
ದಾಳಿ ಸಂಚು ವಿಫಲ: ಉಗ್ರರಿಬ್ಬರ ಸೆರೆ | ೦೭
ಪ್ರಕೃತಿಯೊಂದಿಗೆ ಸಹಬಾಳ್ವೆ ಇಂದಿನ ಅಗತ್ಯ | ೦೬

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಶ್ರವಣ

ದಿನದ ಮಾತು

ತಿಳುವಳಿಕೆ ಇರುವವನು ಮುಂದಾಲೋಚನೆಯಿಂದ ಕೆಟ್ಟದ್ದನ್ನು ನಿರಾಕರಿಸುತ್ತಾನೆ.
▲ ನಾಣ್ನುಡಿ

ಟಿಕೇಟ್-ಬಕೇಟ್‌ಗಳ ನಡುವೆ ಹೋರಾಟ ಎಲ್ಲಿದೆ?

ಉಘೇ ವೀರ ಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ನಾಳೆ ಡಾ.ಹೆಡಗೆವಾರ್ ಜೀವನಾಧಾರಿತ ನಾಟಕ
ಪುಟ ೫

ವಿಶ್ವಕ್ಕೆ ಭಾರತದ ಚಿಂತನೆ ಪರಿಹಾರ: ಭಾಗ್ವತ್
ಪುಟ ೫

ಸಿಎಂ ಮುಂದಿದೆ ದೊಡ್ಡ ಸವಾಲು: ವಿಜಯೇಂದ್ರ
ಪುಟ ೫

ಆಟೋಮೊಬೈಲ್ ಕ್ಷೇತ್ರದಿಂದ ಮಹತ್ತರ ಸಾಧನೆ
ಪುಟ ೦೭

ಪದವಿ ಮರೆಮಾಚಿ ಉದ್ಯೋಗ ಸರಿಯಲ್ಲ
ಪುಟ ೦೭

ಪುಣೆಯ ವಿಪ್ರೋದಲ್ಲೂ ಬಲವಂತದ ಮತಾಂತರ
ಪುಟ ೦೭

2005ರ ಜ್ಞಾನವಾಪಿ ಗಲಭೆ: 14 ಆರೋಪಿಗಳ ಖುಲಾಸೆ
ಪುಟ ೦೭

ರಾಜ್ಯಸಭಾ ಚುನಾವಣೆ: 11 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ
ಪುಟ ೦೭



• ಪುಟ ೦೭
ಸುದ್ದಿ ಸಮಗ್ರ

ನ್ಯಾಯಸಮ್ಮತ, ಭ್ರಷ್ಟಾಚಾರ ಮುಕ್ತ ಸೇವೆ: ಸಿಎಂ ಡಿಕೆಶಿ ಭರವಸೆ

ಪಾರದರ್ಶಕ ಆಡಳಿತ



- ಜನರ ಸಮಸ್ಯೆಗಳಿಗೆ ತ್ವರಿತ ಪರಿಹಾರಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ
- ಒತ್ತಡಕ್ಕೆ ಮಣಿಯದೆ ಕಾನೂನಿನ ಚೌಕಟ್ಟಿನೊಳಗೆ ಕೆಲಸ ಮಾಡಲು ನಿರ್ದೇಶನ
- 15 ದಿನಗಳಲ್ಲಿ ಇಲಾಖಾವಾರು ಕಾರ್ಯಯೋಜನೆ ಸಲ್ಲಿಸಲು ಸೂಚನೆ

ಪ್ರತಿ ತಾಲ್ಲೂಕಿಗೆ ವಿಶೇಷ ಪೊಲೀಸ್ ತಂಡ

ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲೂ ರೌಡಿಶೀಟರ್‌ಗಳ ಮೇಲೆ ನಿಗಾ ವಹಿಸಲು ಸುಮಾರು 10 ಪೊಲೀಸ್ ಸಿಬ್ಬಂದಿಯನ್ನು ಒಳಗೊಂಡ ವಿಶೇಷ ತಂಡ ರಚಿಸುವಂತೆ ಪೊಲೀಸ್ ಇಲಾಖೆಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

• **ಬೆಂಗಳೂರು:** ರಾಜ್ಯದ ಜನರ ಅಹವಾಲುಗಳು ಮತ್ತು ಬೇಡಿಕೆಗಳನ್ನು ತ್ವರಿತವಾಗಿ ಪರಿಹರಿಸಲು ಪ್ರತ್ಯೇಕ ಸಚಿವಾಲಯ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದ್ದಾರೆ. ಜತೆಗೆ ಸರ್ಕಾರವು ಮುಕ್ತ, ನ್ಯಾಯಸಮ್ಮತ ಹಾಗೂ ಭ್ರಷ್ಟಾಚಾರ ಮುಕ್ತ ಆಡಳಿತ ನೀಡಲು ಬದ್ಧವಾಗಿದೆ ಎಂದು ಅವರು ತಿಳಿಸಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮರುದಿನವೇ ಉನ್ನತ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ ಶಿವಕುಮಾರ್, ಯಾವುದೇ ಒತ್ತಡಕ್ಕೆ ಮಣಿಯದೆ ಕಾನೂನಿನ ಚೌಕಟ್ಟಿನೊಳಗೆ ಕೆಲಸ ಮಾಡುವಂತೆ ಸೂಚನೆ ನೀಡಿದರು.

ಉನ್ನತ ಅಧಿಕಾರಿಗಳ ಜತೆ ಸಿಎಂ ಸಭೆ

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ವಿವಿಧ ಭಾಗಗಳಿಂದ ಜನರು ತಮ್ಮ ಸಮಸ್ಯೆಗಳೊಂದಿಗೆ ಬೆಂಗಳೂರಿಗೆ ಆಗಮಿಸುತ್ತಾರೆ. ಪ್ರತಿಭಟನೆ, ಧರಣಿ ನಡೆಸುವವರ ಅಹವಾಲುಗಳನ್ನು ಆಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಪ್ರತ್ಯೇಕ ಸಚಿವರ ನೇತೃತ್ವದಲ್ಲಿ ವಿಶೇಷ ಕಾರ್ಯದರ್ಶಿ ಕಚೇರಿ ಸ್ಥಾಪಿಸಲಾಗುವುದು ಎಂದು ಹೇಳಿದರು.

ಜನರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ: ಪ್ರತಿದಿನ ಹಲವಾರು ಸಂಘಟನೆಗಳು ಹಾಗೂ ಗುಂಪುಗಳು ತಮ್ಮ ಬೇಡಿಕೆಗಳೊಂದಿಗೆ ಬರುತ್ತಿವೆ. ಅವರ ಬೇಡಿಕೆಗಳು ಕಾನೂನುಬದ್ಧವೇ ಅಥವಾ ಅಲ್ಲವೇ ಎಂಬುದನ್ನು ಪರಿಶೀಲಿಸಿ ಪರಿಹಾರ ಕಂಡುಕೊಳ್ಳುವುದು ಅಗತ್ಯವಾಗಿದೆ. ಈ ಉದ್ದೇಶಕ್ಕಾಗಿ ಪ್ರತ್ಯೇಕ ವ್ಯವಸ್ಥೆ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಪುಟ ೪

ಜಾತಿ-ಧರ್ಮ ಆಧಾರಿತ ಪ್ರಭಾವಕ್ಕೆ ಅವಕಾಶ ಇಲ್ಲ

ಸರ್ಕಾರ ಜಾತಿ ಅಥವಾ ಧರ್ಮದ ಆಧಾರದ ಮೇಲೆ ಯಾವುದೇ ಪ್ರಭಾವವನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಡಿ.ಕೆ. ಶಿವಕುಮಾರ್ ಅವರು, ಅಧಿಕಾರಿಗಳು ಜನರ ಭಾವನೆಗಳಿಗೆ ಪಾರದರ್ಶಕವಾಗಿ ಸ್ಪಂದಿಸಬೇಕು ಎಂದು ಸೂಚಿಸಿದರು. ಎಲ್ಲ ಇಲಾಖೆಗಳು 15 ದಿನಗಳೊಳಗೆ ಕಾರ್ಯಯೋಜನೆ ಸಿದ್ಧಪಡಿಸಿ ಸಲ್ಲಿಸಬೇಕೆಂದೂ ಆದೇಶಿಸಿದರು. ಸಚಿವರು, ಶಾಸಕರು ಅಥವಾ ನನ್ನ ಕಚೇರಿಯಿಂದ ಒತ್ತಡ ಬಂದರೂ ಅಧಿಕಾರಿಗಳು ಮಣಿಯಬಾರದು. ಕಾನೂನು ಬದ್ಧವಾಗಿ ಕೆಲಸ ಮಾಡಿ ಸಮಸ್ಯೆಗಳಿಗೆ ವ್ಯವಸ್ಥೆಯೊಳಗೇ ಪರಿಹಾರ ಕಂಡುಕೊಳ್ಳಬೇಕು ಎಂದು ಹೇಳಿದರು.

ಎರಡು ಪ್ರತ್ಯೇಕ ಸಚಿವಾಲಯ

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಪ್ರತ್ಯೇಕ ಎನ್‌ಆರ್‌ಐ ಕಾರ್ಯದರ್ಶಿ ಕಚೇರಿ ಸ್ಥಾಪನೆಗೂ ಕ್ರಮ ಕೈಗೊಳ್ಳಲಾಗುತ್ತಿದೆ. ವಿದೇಶಿ ಹೂಡಿಕೆದಾರರಿಗೆ ಅಗತ್ಯ ನೆರವು ಮತ್ತು ಕಾನೂನುಬದ್ಧ ಸೌಲಭ್ಯಗಳನ್ನು ಒದಗಿಸಲು ಯೋಜನೆ ರೂಪಿಸಲಾಗುತ್ತಿದೆ. ಅಂತೆಯೇ ಸಾರ್ವಜನಿಕರ ಕುಂದುಕೊರತೆ ಸಚಿವಾಲಯ ಆರಂಭಿಸಿ, ಜನರ ಅರ್ಜಿ, ವಿಚಾರಧಾರೆ, ಸಮಸ್ಯೆ ಆಲಿಸಲು ಪ್ರತ್ಯೇಕ ಸಚಿವರ ನೇಮಕ ಮಾಡಲಾಗುವುದು ಎಂದು ಶಿವಕುಮಾರ್ ಹೇಳಿದರು.

56 ಸಾವಿರ ಹುದ್ದೆ ಭರ್ತಿಗೆ ಸಮಯ ನಿಗದಿ

ರಾಜ್ಯದಲ್ಲಿ 56 ಸಾವಿರ ಹುದ್ದೆಗಳ ಭರ್ತಿಗೆ ಸಮಯ ನಿಗದಿ ಮಾಡಲಾಗುವುದು. ಜತೆಗೆ ದಿನಾಂಕ ತಿಳಿಸಲಾಗುವುದು. 15 ದಿನಗಳ ಒಳಗಾಗಿ ಎಲ್ಲಾ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ಬಗ್ಗೆ ಮಾಹಿತಿ ನೀಡಿ ಎಂದು ಅಧಿಕಾರಿಗಳಿಗೆ ಆದೇಶಿಸಿದ್ದೇನೆ.

ಪುಟ ೪

ಗವರ್ನರ್ ಬಂದ ಮೇಲೆ ಪಟ್ಟಿಗೆ ಸಹಿ

ಸಿಎಂ ಡಿಕೆಶಿ ಬಳಿಯೇ ಹಣಕಾಸು ಇಲಾಖೆ


ಪರಮೇಶ್ವರ್


ಪ್ರಿಯಾಂಕ್ ಖರ್ಗೆ


ಯು.ಟಿ.ಖಾದರ್


ಯತೀಂದ್ರ

• **ಬೆಂಗಳೂರು:** ಸಂಪುಟದ 13 ಸಚಿವರಿಗೆ ಖಾತೆಗಳ ಹಂಚಿಕೆಯಾಗಿದ್ದು, ನೂತನ ಸಚಿವರ ಪಟ್ಟಿಯನ್ನು ರಾಜ್ಯಪಾಲರಿಗೆ ಕಳುಹಿಸಲಾಗಿದ್ದು, ಇಂದೋರ್‌ಗೆ ತೆರಳಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಬೆಂಗಳೂರಿಗೆ ವಾಪಸ್ ಬಂದ ನಂತರ ಅಂಕಿತ ಹಾಕಲಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹಣಕಾಸು ಇಲಾಖೆಯನ್ನು ತಮ್ಮ ಬಳಿ ಇಟ್ಟುಕೊಂಡಿದ್ದು, ಈ ಹಿಂದೆ ಸಚಿವರು ನಿರ್ವಹಿಸುತ್ತಿದ್ದ ಕೆಲವು ಖಾತೆಗಳ ಬದಲಾವಣೆಯಾಗಿವೆ. ಡಿ.ಕೆ. ಶಿವಕುಮಾರ್ ಬಳಿ ಇದ್ದ ಜಲಸಂಪನ್ಮೂಲ ಇಲಾಖೆ ರಾಮಲಿಂಗಾರೆಡ್ಡಿಗೆ, ಅವರು ನಿರ್ವಹಿಸುತ್ತಿದ್ದ ಸಾರಿಗೆ ಇಲಾಖೆ ಬೈರತಿ ಸುರೇಶ್‌ಗೆ, ಯತೀಂದ್ರ ಸಿದ್ದರಾಮಯ್ಯ ಅವರಿಗೆ ನಗರಾಭಿವೃದ್ಧಿ ಖಾತೆ (ಬೆಂಗಳೂರು ಹೊರತು ಪಡಿಸಿ) ನೀಡಲಾಗಿದೆ ಎಂದು ತಿಳಿದುಬಂದಿದೆ.

ಪುಟ ೪

ರಾಜ್ಯಸಭೆಗೆ ಕೈ ಅಭ್ಯರ್ಥಿ ಆಯ್ಕೆ

• **ಬೆಂಗಳೂರು:** ಕರ್ನಾಟಕದಿಂದ ರಾಜ್ಯಸಭೆಗೆ ಸ್ಪರ್ಧಿಸಲಿರುವ ಅಭ್ಯರ್ಥಿಗಳನ್ನು ಕಾಂಗ್ರೆಸ್ ಅಂತಿಮಗೊಳಿಸಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮನ್ಸೂರ್ ಅಲಿ ಖಾನ್, ಪವನ್ ಖೇರಾ ಹೆಸರು ಘೋಷಣೆ ಮಾಡಲಾಗಿದೆ.

ಪುಟ ೪

ಸಚಿವರಿಗೆ ಖಾತೆ ಹಂಚಿಕೆ

- ಡಿ.ಕೆ. ಶಿವಕುಮಾರ್ ಸಿಎಂ: ಹಣಕಾಸು ಇಲಾಖೆ, ಡಿಪಿಎಆರ್, ಹಂಚಿಕೆಯಾಗದ ಎಲ್ಲ ಖಾತೆಗಳು.
- ಡಾ.ಜಿ ಪರಮೇಶ್ವರ ಡಿಸಿಎಂ: ಕಂದಾಯ ಹಾಗೂ ಕ್ರೀಡಾ ಮತ್ತು ಯುವಜನ ಸಬಲೀಕರಣ
- ಪ್ರಿಯಾಂಕ್ ಖರ್ಗೆ: ಗೃಹ, ಐಟಿ, ಬಿಟಿ
- ಕೆ.ಜೆ.ಜಾರ್ಜ್: ಇಂಧನ, ಪ್ರವಾಸೋದ್ಯಮ
- ಎಂ.ಬಿ ಪಾಟೀಲ್: ಬೃಹತ್ ಮಧ್ಯಮ ಕೈಗಾರಿಕೆ
- ಸತೀಶ್ ಜಾರಕಿಹೊಳಿ: ಲೋಕೋಪಯೋಗಿ
- ಕೃಷ್ಣಬೈರೇಗೌಡ: ಬೆಂಗಳೂರು ನಗರಾಭಿವೃದ್ಧಿ
- ರಾಮಲಿಂಗಾರೆಡ್ಡಿ: ಜಲಸಂಪನ್ಮೂಲ
- ಕೆ.ಎಚ್.ಮುನಿಯಪ್ಪ: ಆಹಾರ ಮತ್ತು ನಾಗರಿಕ ಸರಬರಾಜು
- ಬೈರತಿ ಸುರೇಶ್: ಸಾರಿಗೆ
- ಯು.ಟಿ ಖಾದರ್: ಆರೋಗ್ಯ
- ಡಾ.ಯತೀಂದ್ರ ಸಿದ್ದರಾಮಯ್ಯ: ನಗರಾಭಿವೃದ್ಧಿ
- ಶರಣಪ್ರಕಾಶ ಪಾಟೀಲ್: ವೈದ್ಯಕೀಯ ಶಿಕ್ಷಣ
- ಈಶ್ವರ ಖಂಡ್ರೆ: ಗ್ರಾಮೀಣಾಭಿವೃದ್ಧಿ

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅಭಿಮತ

ಮಹಿಳಾ ಆರ್ಥಿಕ ಸಬಲೀಕರಣ ಗುರಿ

• **ಯಾದಗಿರಿ:** ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರ ಹತ್ತು ಹಲವು ವಿಶೇಷ ಯೋಜನೆ ಜಾರಿಗೆ ತರುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಗುರುವಾರ ಗುರಮಠಕಲ್ ತಾಲೂಕಿನ ಬದ್ದೆಪಲ್ಲಿ ಗ್ರಾಮದಲ್ಲಿ ನಬಾರ್ಡ್ ಬ್ಯಾಂಕ್ ಸಹಯೋಗದಲ್ಲಿ ನಿರ್ಮಿಸಿದ ಕೃಷಿ ಸಂಸ್ಕರಣೆಗಾಗಿ ರೈತರ ತರಬೇತಿ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರ ಉದ್ಘಾಟಿಸಿ ಮಾತನಾಡಿ, ಯಾದಗಿರಿ ಆಡಳಿತದಲ್ಲಿ ಸಣ್ಣ ಮತ್ತು ಹೊಸ ಜಿಲ್ಲೆಯಾದರೂ ಇದಕ್ಕೆ ತನ್ನದೆಯಾದ ಇತಿಹಾಸವಿದೆ. ಆರ್ಥಿಕವಾಗಿ ಹಿಂದುಳಿದಿರುವುದರಿಂದ ಕೇಂದ್ರ ಸರ್ಕಾರ ನೀತಿ ಆಯೋಗದಲ್ಲಿ ಮಹತ್ವಾಕಾಂಕ್ಷೆ ಜಿಲ್ಲೆ ಎಂದು ಘೋಷಿಸಿ, ಪ್ರತ್ಯೇಕ ಯೋಜನೆ ಜಾರಿಗೊಳಿಸುತ್ತಿದೆ ಎಂದರು.

ಪುಟ ೪



ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆ ಮಾವಿನ ಹಣ್ಣಿಗೆ ಹೆಸರಾಗಿದೆ. ಬದ್ದೆಪಲ್ಲಿಯಲ್ಲಿಯ ಶೇಂಗಾ ಸಹ ಇದೇ ರೀತಿ ಬ್ರ್ಯಾಂಡ್ ಆಗಬೇಕು ಎಂಬ ಆಶಯ ನನ್ನದು.
■ **ನಿರ್ಮಲಾ ಸೀತಾರಾಮನ್**, ಕೇಂದ್ರ ಹಣಕಾಸು ಸಚಿವೆ

ವೆನೆಜುವೆಲಾ ಹಂಗಾಮಿ ಅಧ್ಯಕ್ಷೆ ಡೆಲ್ಸಿ ಜತೆ ಮೋದಿ ಮಾತುಕತೆ

ಇಂಧನ ಪಾಲುದಾರಿಕೆಗೆ ಮತ್ತಷ್ಟು ಬಲ

• **ಹೊಸದಿಲ್ಲಿ:** ಭಾರತ ಮತ್ತು ವೆನೆಜುವೆಲಾ ಗುರುವಾರ ದೀರ್ಘಾವಧಿಯ ಇಂಧನ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸಲು ಪ್ರತಿಜ್ಞೆ ಮಾಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರೊಂದಿಗೆ, ತೈಲ ಮತ್ತು ಅನಿಲ ಕ್ಷೇತ್ರಗಳಲ್ಲದೆ ನಿರ್ಣಾಯಕ ಖನಿಜಗಳು, ಔಷಧಗಳು, ಕೃಷಿ ಮತ್ತು ಆಟೋಮೊಬೈಲ್‌ಗಳು ಸೇರಿದಂತೆ ಆರ್ಥಿಕ ಸಂಬಂಧಗಳನ್ನು ಹೆಚ್ಚಿಸುವ ಬಗ್ಗೆ ವ್ಯಾಪಕ ಮಾತುಕತೆ ನಡೆಸಿದ್ದಾರೆ.

ರಾಜಧಾನಿಯ ಪ್ರಸಿದ್ಧ ಹೈದರಾಬಾದ್ ಹೌಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರೊಂದಿಗೆ ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ಸಭೆಯಲ್ಲಿ ಉಭಯ ದೇಶಗಳ ಕಾರ್ಯತಂತ್ರದ ಸಂಬಂಧಗಳನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಕುರಿತು ಸುದೀರ್ಘ ಸಮಾಲೋಚನೆ ನಡೆಸಲಾಯಿತು.

ಪುಟ ೪



ವಿವಿಧ ಕ್ಷೇತ್ರಗಳಲ್ಲಿ ಹೊಸ ಸಹಕಾರ

ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ಮಾತನಾಡಿ, ಉಭಯ ನಾಯಕರು ಇಂಧನ, ವ್ಯಾಪಾರ, ಹೂಡಿಕೆ, ಆರೋಗ್ಯ, ಆಟೋಮೊಬೈಲ್ ಸೇರಿ ವಿವಿಧ ಕ್ಷೇತ್ರಗಳಲ್ಲಿ ಹೊಸ ಸಹಕಾರ ಸಾಧ್ಯತೆ ಬಗ್ಗೆ ಚರ್ಚಿಸಿದರು.

ಪುಟ ೪

ಸಾಲದ ಸುಳಿಯಲ್ಲಿ ಕೇರಳ

- ಭಾರೀ ಸಾಲದ ಹೊರೆ ಬಿಟ್ಟುಹೋದ ಕಮ್ಯುನಿಸ್ಟ್ ಸರ್ಕಾರ
- ಜಿಎಸ್‌ಡಿಪಿ ಅನುಪಾತ, ತೆರಿಗೆ ಸಂಗ್ರಹದಲ್ಲಿ ಕುಸಿತ

• **ತಿರುವನಂತಪುರಂ:** ಕೇರಳ ಹಣಕಾಸು ಪರಿಸ್ಥಿತಿ ಕುರಿತಂತೆ ಮುಖ್ಯಮಂತ್ರಿ ವಿ.ಡಿ.ಸತೀಶನ್ ನೇತೃತ್ವದ ಯುಡಿಎಫ್ ಸರಕಾರ ಹೊರತಂದಿರುವ ಶ್ವೇತಪತ್ರದಲ್ಲಿ, ಹಿಂದಿನ ಕಮ್ಯುನಿಸ್ಟ್ ಸರಕಾರ 5.07 ಲಕ್ಷ ಕೋಟಿ ರೂ.ಗಳ ಭಾರೀ ಸಾಲದ ಹೊರೆಯನ್ನು ಬಿಟ್ಟುಹೋಗಿರುವುದಾಗಿ ಹೇಳಲಾಗಿದೆ. ಇದೇ ವೇಳೆ, ಕೇರಳವು ಜಿಎಸ್‌ಡಿಪಿ ಅನುಪಾತ ಮತ್ತು ತೆರಿಗೆ ಸಂಗ್ರಹದಲ್ಲಿ ಇತರ ಸಮಾನ ನೆಲೆಯ ರಾಜ್ಯಗಳಿಗಿಂತ ಹಿಂದೆ ಬಿದ್ದಿದ್ದು, ರಾಜ್ಯದ ಆರ್ಥಿಕತೆಯ ಗಾತ್ರಕ್ಕೆ ಹೋಲಿಸಿದರೆ ಅದರ ಆದಾಯ ಉತ್ಪಾದನಾ ಸಾಮರ್ಥ್ಯದಲ್ಲಿ ದುರ್ಬಲತೆ ಇದ್ದು, ಗಂಭೀರ ಸವಾಲನ್ನು ಎದುರಿಸುತ್ತಿರುವ ರಾಜ್ಯ ಎಂದು ಇದರಲ್ಲಿ ತಿಳಿಸಲಾಗಿದೆ.

ಪುಟ ೪

ಪಕ್ಷಕ್ಕೆ ಬಲ ತುಂಬುವವರು ನನ್ನ ಜತೆ ಬನ್ನಿ

• **ಬೆಂಗಳೂರು:** ಅಧಿಕಾರ, ಸಚಿವ ಸ್ಥಾನ, ಸ್ಥಾನಮಾನ ಬೇಕು ಎನ್ನುವವರು ಡಿ.ಕೆ. ಶಿವಕುಮಾರ್ ಜತೆ ಹೋಗಿ, ಪಕ್ಷ, ಹೋರಾಟ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಕೈ ಬಲಪಡಿಸುವವರು ನನ್ನ ಜತೆ ಬನ್ನಿ ಎಂದು ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು.



ಸಂಘಟನೆ, ಸರ್ಕಾರವನ್ನು ಹಂಚಿಕೊಂಡು ನಾವು ಮುಂದೆ ಹೋಗೋಣವೆಂದು ಕಾರ್ಯಕರ್ತರಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ ಎಂದರು.

ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,80,000 (2,80,000) ಅಪರಂಜಿ ಚಿನ್ನ: 1,56,110 (1,56,220) ಆಭರಣ ಚಿನ್ನ: 1,43,100 (1,43,200) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ. (ಆವರಣದಲ್ಲಿ ಹಿಂದಿನ ದಿನದ ದರ)	
ಷೇರು ಸೂಚ್ಯಂಕ	ಬಿಎಸ್‌ಇ 74,360 (13↑) ಎನ್‌ಎಸ್‌ಇ 23,416 (10↑)	$1 = ₹95.27

ಕಿರುಸುದ್ದಿ

ರಕ್ತದಾನಿ ದಿನ ಆಚರಿಸಿ



◆ **ಧಾರವಾಡ:** ಜಿಲ್ಲೆಯ ಶಾಲಾ-ಕಾಲೇಜಿನಲ್ಲಿ ಜೂ.14ರಂದು ವಿಶ್ವ ರಕ್ತದಾನಿಗಳ ದಿನ ಆಚರಿಸಲು ಆಗ್ರಹಿಸಿ ಹುಬ್ಬಳ್ಳಿ ಸ್ವಾಮಿ ವಿವೇಕಾನಂದ ರಕ್ತದಾನ ಫೌಂಡೇಶನ್ ಜಿಲ್ಲಾಧಿಕಾರಿಗೆ ಗುರುವಾರ ಮನವಿ ಸಲ್ಲಿಸಿದೆ. ಸಮಾಜ ಸೇವೆಯಲ್ಲಿ ರಕ್ತದಾನ ಸರ್ವಶ್ರೇಷ್ಠ ದಾನ. ಹೀಗಾಗಿ ರಕ್ತದಾನದ ಕುರಿತು ಜಾಗೃತಿ ಮೂಡಿಸಲು ಪ್ರತಿವರ್ಷವೂ ಜೂ.14ರಂದು ವಿಶ್ವ ರಕ್ತದಾನಿಗಳ ದಿನ ಆಚರಿಸಲಾಗುತ್ತಿದೆ. ಮಕ್ಕಳಲ್ಲಿ ಸಾಮಾಜಿಕ ಜವಾಬ್ದಾರಿ ಬೆಳೆಸುವಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದಾಗಿದೆ. ಈ ಕಾರಣಕ್ಕೆ ಜೂ.14ರಂದು ಜಿಲ್ಲೆಯ ಶಾಲಾ-ಕಾಲೇಜಿನಲ್ಲಿ ವಿಶ್ವ ರಕ್ತದಾನಿ ದಿನ ಆಚರಿಸಲು ಆದೇಶ ಹೊರಡಿಸಲು ಆಗ್ರಹಿಸಿದೆ. ವಿವಕುಮಾರ ರಟ್ಟಿಹಳ್ಳಿ, ವಿದ್ಯಾನಂದ ಸ್ಥಾವರಮಠ, ಸಂದೀಪ ಇದ್ದರು.

ಸಂಗೀತ ಪರಂಪರೆ ಉಳಿಸಿ



◆ **ಧಾರವಾಡ:** ಸಂಗೀತದ ಮಾಧುರ್ಯ ಸವಿಯುವ ಜೊತೆಗೆ ಅದರ ಆಧ್ಯಾತ್ಮಿಕ ಭಾವವನ್ನೂ ಅರಿಯಬೇಕು ಎಂದು ಪದ್ಮಶ್ರೀ ಪಂ.ವೆಂಕಟೇಶಕುಮಾರ್ ಹೇಳಿದರು. ನಗರದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ನಡೆದ ಸಂಗೀತ ಸಮ್ಮೇಳನ ಹಾಗೂ ನಾದಲಹರಿ ಸಂಗೀತ ಸಾಂಸ್ಕೃತಿಕ ಟ್ರಸ್ಟ್ ಉದ್ಘಾಟನಾ ಕಾಯಕ್ರಮದಲ್ಲಿ ಮಾತನಾಡಿದರು. ವ್ಯಕ್ತಿಯಿಲ್ಲಿ ಶ್ರದ್ಧೆ ಇದ್ದಾಗ ಮಾತ್ರವೇ ಸಂಗೀತ ಒಲಿಯಲಿದೆ. ನಿತ್ಯವೂ ಅಭ್ಯಾಸ ಮಾಡುವುದು ಅನಿವಾರ್ಯ. ಸಂಗೀತ ಪರಂಪರೆ ಬೆಳೆಸುವಲ್ಲಿ ಸಂಘಟನೆ ಅಗತ್ಯ ಎಂದರು. ಉದ್ಘಾಟಿಸಿದ ಕವಿವಿ ಕುಲಪತಿ ಡಾ.ಎ.ಎಂ.ಖಾನ್ ಮಾತನಾಡಿ, ಸಂಗೀತ ಭಾರತ ಸಂಸ್ಕೃತಿ ದರ್ಶನ ಮಾಡಿಸಲಿದೆ. ನಾದಲಹರಿ ಸಂಸ್ಥೆ ಕಲಾವಿದರಿಗೆ ಸಹಕರಿಸಲಿ ಎಂದರು. ಸಾನ್ನಿಧ್ಯ ವಹಿಸಿದ್ದ ಮನ್ಸೂರಿನ ರೇವಣಸಿದ್ಧೇಶ್ವರ ಮಠದ ಬಸವರಾಜ ದೇವರು, ಸಂಗೀತ ಔಷಧಿಯಾಗಿದೆ. ಇದರಿಂದ ಕೆಲ ರೋಗಗಳು ಗುಣಪಡಿಸಬಹುದಾಗಿದೆ ಎಂದರು. ಕವಿವಿ ಪ್ರಭಾರ ಕುಲಸಚಿವ ಪ್ರೊ. ಮೃತ್ಯುಂಜಯ ಅಗಡಿ ಅಧ್ಯಕ್ಷತೆ ವಹಿಸಿದ್ದರು. ಡಾ. ವಿ.ಎಲ್.ಪಾಟೀಲ, ಡಾ.ಮಹೇಂದ್ರ ಹರಿಹರ, ಡಾ.ಭಾರತಿ ಗಾಣಿಗೇರ ಸೇರಿದಂತೆ ಇತರರಿದ್ದರು. ಪುಣೆಯ ಕಿರಾಣಾ ಘರಾಣೆ ಖ್ಯಾತಿ ಕಲಾವಿದ ಪಂ.ಸುಧಾಕರ ಚವ್ಹಾಣ, ಧಾರವಾಡದ ಕಲಾವಿದ ಪಂ. ಸೋಮನಾಥ ಮರಡೂರ ಅವರಿಂದ ಸಂಗೀತ ಕಛೇರಿ ಜರುಗಿತು.

ಹಿಮೋಫಿಲಿಯಾ ದಿನಾಚರಣೆ



◆ **ಹುಬ್ಬಳ್ಳಿ:** ಹಿಮೋಫಿಲಿಯಾ ಅಥವಾ ಕುಸುಮ ರೋಗವು ರಕ್ತ ಹೆಪ್ಪುಗಟ್ಟುವಿಕೆ ಪ್ರಕ್ರಿಯೆಯಲ್ಲಿ ವ್ಯತ್ಯಾಸವಾಗುವ ರೋಗವಾಗಿದೆ. ಅನುವಂಶಿಕವಾಗಿಯೂ ಬರಬಹುದಾದ ಕಾಯಿಲೆ ಇದಾಗಿದ್ದು, ಮಹಿಳೆಯರಿಗಿಂತ ಪುರುಷರಲ್ಲೇ ಈ ರೋಗ ಹೆಚ್ಚು ಕಾಣಿಸಿಕೊಳ್ಳುತ್ತದೆ ಎಂದು ಖ್ಯಾತ ನರರೋಗ ತಜ್ಞ ಹಾಗೂ ಬಾಲಾಜಿ ಆಸ್ಪತ್ರೆ ಚೇರ್ಮನ್ ಡಾ. ಕ್ರಾಂತಿಕಿರಣ್ ತಿಳಿಸಿದರು. ಹುಬ್ಬಳ್ಳಿ-ಧಾರವಾಡ ಹಿಮೋಫಿಲಿಯಾ ಸೊಸೈಟಿ ಮತ್ತು ಹಿಮೋಫಿಲಿಯಾ ಫೆಡರೇಶನ್ ಇಂಡಿಯಾ ಸಹಯೋಗದಲ್ಲಿ ಬಾಲಾಜಿ ಆಸ್ಪತ್ರೆ, ಕರ್ನಾಟಕ ಕ್ಯಾನ್ಸರ್ ಥೆರಪಿ ಮತ್ತು ಸಂಶೋಧನಾ ಕೇಂದ್ರ ಸಹಯೋಗದಲ್ಲಿ ಬಾಲಾಜಿ ಆಸ್ಪತ್ರೆ ಸಭಾಂಗಣದಲ್ಲಿ ಇತ್ತೀಚಿಗೆ ಹಮ್ಮಿಕೊಂಡಿದ್ದ ಹಿಮೋಫಿಲಿಯಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಿಮೋಫಿಲಿಯಾದಲ್ಲಿ ಎ,ಬಿ,ಸಿ ಎಂಬ 3 ವಿಧಗಳಿದ್ದು, ತಾಯಿಯಿಂದ ಮಕ್ಕಳಿಗೆ ಅನುವಂಶಿಕವಾಗಿಯೂ ಬರಬಹುದಾದ ಕಾಯಿಲೆಯಾಗಿದೆ. ಗಂಟಲು, ಕೀಲು, ಮೂಗು, ವಸಡು, ಮಲ, ಮೂತ್ರ, ಮಿದುಳು, ಸ್ನಾಯು ಮತ್ತು ಮಾಂಸ-ಖಂಡಗಳಲ್ಲಿ ರಕ್ತಸ್ರಾವ ಇದರ ಪ್ರಮುಖ ಲಕ್ಷಣಗಳಾಗಿವೆ. ಇವುಗಳಲ್ಲಿ ಮಿದುಳಿನ ರಕ್ತಸ್ರಾವ ಅತ್ಯಂತ ಮಾರಣಾಂತಿಕವಾಗಿದ್ದು, ರೋಗ ಲಕ್ಷಣಗಳು ಕಂಡು ಬಂದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯಬೇಕು ಎಂದರು. ಕರ್ನಾಟಕ ಕ್ಯಾನ್ಸರ್ ಆಸ್ಪತ್ರೆಯ ಡಾ. ಬಿ.ಆರ್. ಪಾಟೀಲ್ ಮಾತನಾಡಿ, ರಕ್ತ ಹೆಪ್ಪುಗಟ್ಟುವ ಪ್ರೋಟಿನ್‌ಗಳ ಕೊರತೆಯಿಂದ ಉಂಟಾಗುವ ಈ ಕಾಯಿಲೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ಅವರಿಗೆ ಉತ್ತಮ ಚಿಕಿತ್ಸೆ ದೊರಕುವಂತೆ ಮಾಡಿ ಎಂದರು. ವೈದ್ಯರಾದ ಡಾ. ಮಮತಾ ಪಾಟೀಲ್, ಡಾ. ಕವಿತಾ ಕೋರೆ, ಡಾ. ಮಹಾಂತೇಶ್ ವೀರಾಪುರ, ಡಾ. ಉಮೇಶ್ ಹಳ್ಳಿಕೇರಿ, ಡಾ. ಅರ್ಪಿತಾ ನಾಡಗೌಡ, ಡಾ. ಆದರ್ಶ, ಡಾ. ಶೀತಲ್ ಅಂಗಡಿ, ಉದಯ ಕುಮಾರ ಗಜಪತಿ, ರಾಜು ಕುಂದನಹಳ್ಳಿ, ಪ್ರತೀಕ್ ಉಪಸ್ಥಿತರಿದ್ದರು.



ಹುಬ್ಬಳ್ಳಿ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ನೂತನವಾಗಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ಅವರಿಗೆ ಶಾಸಕ ಪ್ರಸಾದ ಅಬ್ಬಯ್ಯ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು. ಮುಖಂಡ ಅನ್ವರ ಮುಧೋಳ, ರಾಜಶೇಖರ್ ಮೆಣಸಿನಕಾಯಿ, ಮಜರ್ ಖಾನ ಶಫಿ ಮುದ್ದೆಬಿಹಾಳ್, ಸುರೇಶ ಸವಣೂರ, ಶಾಂತವ್ವ ಗುಜ್ಜಳ್, ರೇಣುಕಾ ಕಳ್ಳಿಮನಿ ಇದ್ದರು.

ಶ್ರೀಗಳ ಅನುಷ್ಠಾನ ಸಮಾರೋಪ ನಾಳೆ

◆ **ನವಲಗುಂದ:** ಸ್ಥಳೀಯ ಪಂಚಗ್ರಹ ಹಿರೇಮಠದ ನೂತನ ಪೀಠಾಧಿಕಾರಿಗಳಾಗಿ ಪಟ್ಟಾಧಿಕಾರ ವಹಿಸಿಕೊಂಡ ಇಮ್ಮಡಿ ಸಿದ್ದೇಶ್ವರ ಶಿವಾಚಾರ್ಯರು ಪಂಚ ಪೀಠಾಧೀಶರ ಸೂಚನೆಯಂತೆ ಮೇ 17 ರಿಂದ ನಡೆಸುತ್ತಿರುವ ಅನುಷ್ಠಾನ ಕಾರ್ಯಕ್ರಮವು ಜೂ.6 ರಂದು ಸಂಪನ್ನಗೊಳ್ಳಲಿದೆ.

ಇದರ ಅಂಗವಾಗಿ ಜೂ.6 ರಂದು ಬೆಳಗ್ಗೆ 11ಕ್ಕೆ ಶ್ರೀಗಳ ಅನುಷ್ಠಾನ ಸಮಾರೋಪ ಹಾಗೂ ಅಭಿನಂದನಾ ಸಮಾರಂಭವನ್ನು ಶ್ರೀಮಠದ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದ್ದು, ಅಂದು ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಶಿರಹಟ್ಟಿ ಭಾವೈಕ್ಯ ಸಂಸ್ಥಾನ ಮಠದ ಫಕೀರಸಿದ್ಧರಾಮ ಸ್ವಾಮೀಜಿ ವಹಿಸಲಿದ್ದು, ಗವಿಮಠದ ಬಸವಲಿಂಗ ಸ್ವಾಮೀಜಿ, ನರಗುಂದ ಹಿರೇಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಇಮ್ಮಡಿ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಪಾಲ್ಗೊಳ್ಳಲಿದ್ದಾರೆ. ಪಂಚಗ್ರಹ ಹಿರೇಮಠದ ಹಿರಿಯ ಶ್ರೀಗಳಾದ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ. ಶಾಸಕ ಹಾಗೂ ಪಟ್ಟಾಧಿಕಾರ ಮಹೋತ್ಸವ ಸ್ವಾಗತ ಸಮಿತಿ ಅಧ್ಯಕ್ಷ ಎನ್.ಎಚ್.ಕೋನರಡ್ಡಿ, ಮಾಜಿ ಸಚಿವರಾದ ಶಂಕರ ಪಾಟೀಲ ಮುನೇನಕೊಪ್ಪ, ಕೆ.ಎನ್.ಗಡ್ಡಿ, ವಿನೋದ ಅಸೂಟಿ, ದೇವರಾಜ ದಾಡಿಬಾವಿ ಸೇರಿದಂತೆ ಅನೇಕ ಗಣ್ಯರು ಹಾಗೂ ಪಟ್ಟಾಧಿಕಾರ ಮಹೋತ್ಸವ ಸಮಿತಿಯ ಎಲ್ಲ ಸದಸ್ಯರು ಉಪಸ್ಥಿತರಿರುವರು ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಹುಬ್ಬಳ್ಳಿ: ಶಾಸಕ ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸಂಪುಟದಲ್ಲಿ ಸೇರಿಸಿಕೊಳ್ಳಬೇಕು ಎಂದು ಅವರ ಬೆಂಬಲಿಗರು ಹಾಗೂ ಕಾಂಗ್ರೆಸ್ ಮುಖಂಡರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

21ನೇ ದಿನ ಮುಂದುವರಿದ ಸತ್ಯಾಗ್ರಹ | ಸಾಹಿತ್ಯ ವಲಯ ಬೆಂಬಲ

ಅಧಿಸೂಚನೆ ಹೊರಡಿಸಲು ಆಗ್ರಹ

◆ **ಧಾರವಾಡ:** ಸ್ವಾಭಿಮಾನಿ ಹೋರಾಟ ಸಮಿತಿ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆಗೆ ಕೈಗೊಂಡ ಸತ್ಯಪ್ರತಿಪಾದನೆ ಸತ್ಯಾಗ್ರಹ 21ನೇ ದಿನಕ್ಕೆ ಕಾಲಿಟ್ಟಿದ್ದು, ಗುರುವಾರ ಜಿಲ್ಲಾ ಸಾಹಿತ್ಯ ವಲಯ ಹಾಗೂ ಕಲಾವಿದರ ಸಂಘಟನೆ ಬೆಂಬಲ ಸೂಚಿಸಿದೆ.

ಹಿರಿಯ ಸಾಹಿತಿ ಡಾ.ಸಿದ್ದಲಿಂಗ ಪಟ್ಟಣಶೆಟ್ಟಿ, ಧಾರವಾಡ ಜಿಲ್ಲಾ ಕೇಂದ್ರವಾದರೂ ಅಭಿವೃದ್ಧಿ ಹಾಗೂ ಅನುದಾನ ಹಂಚಿಕೆಯಲ್ಲಿ ರಾಜಕಾರಣಿಗಳ ಇಚ್ಛಾಶಕ್ತಿ ಕೊರತೆ ಕಾರಣದಿಂದಲೇ ಹುಬ್ಬಳ್ಳಿಗೆ ದೊರೆತ ಪ್ರಾಧ್ಯಾನ್ಯತೆ ಧಾರವಾಡಕ್ಕೆ ಲಭಿಸಿಲ್ಲ ಎಂದು ದೂರಿದರು.

ಸಾರ್ವಜನಿಕರ ಸಂಕಷ್ಟ ಅರಿತು ಅಭಿವೃದ್ಧಿ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ಬೇಡಿಕೆ ನ್ಯಾಯಯುತವಾಗಿದೆ. ಇದಕ್ಕೆ ತಮ್ಮ ಬೆಂಬಲವೂ ಇದೆ ಎಂದರು.

ಲೇಖಕಿ ಡಾ.ಹೇಮಾ ಪಟ್ಟಣಶೆಟ್ಟಿ ಮಾತನಾಡಿ, ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ವಿಷಯ ಭಾವನಾತ್ಮಕವಾಗಿದೆ. ಈ ವಿಷಯದಲ್ಲಿ ಯಾರೂ ರಾಜಕಾರಣ ಮಾಡಬಾರದು. ಹೀಗಾಗಿ ತಕ್ಷಣವೇ ಸರ್ಕಾರ ಅಧಿಸೂಚನೆ ಹೊರಡಿಸಲು ಆಗ್ರಹ ಮಾಡಿದರು.

ಬಿ.ಡಿ.ಹಿರೇಮಠ, ರವಿ ಕುಲಕರ್ಣಿ, ವಿಠ್ಠಲ ಕಮ್ಮಾರ, ವಿಶ್ವನಾಥ ರಾಮದುರ್ಗ, ಈರಪ್ಪ ತುರಮರಿ, ಗೋಪಾಲ ಉಣಕಲ್, ಬಿ.ಐ.ಈಳಗೇರ, ಆಶಾ ಸೈಯದ್, ಗುರುರಾಜ ಹುಣಸಿಮರದ, ಆನಂದ ಯಾವಗಲ್, ಸುರೇಶ ಬೇದರೆ ಅನೇಕರು ಇದ್ದರು.



ಉಪವಾಸ ಧರಣಿ

ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಅಧಿಸೂಚನೆ ಹೊರಡಿಸಲು ಕೈಗೊಂಡ ಉಪವಾಸ ಸತ್ಯಾಗ್ರಹ ಮುಂದುವರೆದಿದ್ದು, ಗುರುವಾರ ಗುರುರಾಜ ಕಟ್ಟೆನ್ನವರ, ನೀಲಕುಮಾರ್ ಗೋರವಿ, ಶ್ರೀಧರ ಶೇಟ್, ರವಿ ಭಾಡಗೆ, ಮಾರುತಿ ಜಲಗೇರಾ, ಲಕ್ಷ್ಮಣ ತೋಚೊಜಿ, ಮೋಹನ ಗೌಳಿ, ಮಲ್ಲೇಶ ಹಡಪದ, ಈರಣ್ಣ ಬೆಳ್ಳಿಕಟ್ಟಿ ಉಪವಾಸ ಧರಣಿ ನಡೆಸಿದರು.

- **ಧಾರವಾಡದ ನಾಗರಿಕರು ಸಣ್ಣಪುಟ್ಟ ಕೆಲಸಗಳಿಗೂ, ನಿತ್ಯದ ದುಡಿಮೆ ಬಿಟ್ಟು ದೂರದ ಹುಬ್ಬಳ್ಳಿ ಕಚೇರಿಗೆ ಹೋಗಬೇಕಾದ ಸ್ಥಿತಿ**
- **ಆ ದಿನ ಕೆಲಸವಾಗದಿದ್ದರೆ ಮರುದಿನ ಮತ್ತೆ ಹುಬ್ಬಳ್ಳಿಗೇ ಹೋಗುವ ಅನಿವಾರ್ಯತೆ**
- **ಧಾರವಾಡ ಸಾಹಿತಿಗಳ ತವರೂರು ಎಂಬುದು ಹೆಸರಿಗೆ ಮಾತ್ರವೇ. ಆದರೆ ಇಲ್ಲಿನ ಸಾಹಿತಿಗಳಿಗೆ ಸಿಗಬೇಕಾದ ಸೌಕರ್ಯಗಳು, ಸ್ಥಾನಮಾನ ನೀಡುವಲ್ಲಿ ಮಲತಾಯಿ ಧೋರಣೆ ಮಾಡುವುದು ನ್ಯಾಯವೇ? ಇದು ಒಳ್ಳೆಯ ನಡೆಯೂ ಅಲ್ಲ ಎಂದು ಧರಣಿ ನಿರತರ ಆರೋಪ**

ದೇವದಾಸಿ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆಗ್ರಹ

◆ **ಧಾರವಾಡ:** ದೇವದಾಸಿ ಅಭಿವೃದ್ಧಿ ನಿಗಮ ಸ್ಥಾಪನೆ, ದೇವದಾಸಿ ಮಹಿಳೆಯರಿಗೆ ಹೆಚ್ಚಿಸಿದ ಮಾಶಾಸನ ಜಾರಿಗೊಳಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದಲಿತ ವಿಮೋಚನಾ ಸಮಿತಿ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಈ ನಾಡಿನ ದೇವದಾಸಿ ಮಹಿಳೆಯರ ಕುರಿತು ರಾಜ್ಯ ಸರ್ಕಾರ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ. ಇದನ್ನು ದಲಿತ ವಿಮೋಚನಾ ಸಮಿತಿ ಸಹಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಮಾಜಿ ದೇವದಾಸಿ ಮಹಿಳೆಯರು ಸರ್ಕಾರಕ್ಕೆ ದಯೆ ಹಾಗೂ ಭಿಕ್ಷೆ ಕೇಳುತ್ತಿಲ್ಲ. ಸಂವಿಧಾನಿಕ ಹಕ್ಕು ಕೇಳುತ್ತಿದ್ದಾರೆ. ಈ ಹಕ್ಕು ನಿರ್ಲಕ್ಷಿಸಿದರೆ ಅದು ಆಡಳಿತದ ವೈಫಲ್ಯ ಮಾತ್ರವಲ್ಲ, ಸಾಮಾಜಿಕ ಅನ್ಯಾಯವಾಗಿದೆ ಎಂದು ಆರೋಪವೂ ಮಾಡಿದೆ.

ಮಾಜಿ ದೇವದಾಸಿಯರಿಗೆ ಮಾಸಾಶನ ರೂ.5 ಸಾವಿರಕ್ಕೆ ಹೆಚ್ಚಿಸಲು ಒತ್ತಾಯಿಸಿ ಹಿಂದೆ ಹೋರಾಟ ಮಾಡಿತ್ತು. ಇದರ ಫಲದಿಂದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ರೂ.2 ಸಾವಿರದಿಂದ ರೂ.5 ಸಾವಿರಕ್ಕೆ ಮಾಶಾಸನ ಹೆಚ್ಚಿಸಿದ್ದು, ಜಾರಿಗೆ ಬಂದಿಲ್ಲ ಎಂದು ದೂರಿದೆ.

ಸರ್ಕಾರಕ್ಕೆ ತಮ್ಮ ಮನವಿ ತಲುಪಿದ ತಕ್ಷಣವೇ ತಮ್ಮ ನ್ಯಾಯಯುತ ಬೇಡಿಕೆ ಈಡೇರಿಸಬೇಕು. ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟವನ್ನು ರೂಪಿಸುವುದಾಗಿ ಜಿಲ್ಲಾಧಿಕಾರಿ ಸ್ನೇಹಲ್ ಅವರಿಗೆ ನೀಡಿರುವ ಮನವಿಯಲ್ಲಿ ಎಚ್ಚರಿಸಿದೆ.





ಅಳ್ನಾವರ: ತಾಲೂಕಿನಲ್ಲಿ ಗುರುವಾರ ತಾಲೂಕು ಆಡಳಿತ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಜನ್ಮ ದಿನವನ್ನು ಆಚರಿಸಲಾಯಿತು. ಪ.ಪಂ ಅಧಿಕಾರಿ ಮಹಾಂತೇಶ ಬೆಂತೂರ, ವಿನಾಯಕ ಮಾಯಣ್ಣವರ, ಪ್ರವೀಣ ಪವಾರ, ಕಸಾಪ ತಾಲೂಕಾಧ್ಯಕ್ಷ ಗುರುರಾಜ ಎಸ್., ಸುರೇಂದ್ರ ಕಡಕೋಳ, ಕಿರಣಕುಮಾರ ಗೇನಪ್ಪನವರ, ಸೋನು ಮೀರಾ ಇತರರಿದ್ದರು.

ಶಾಲಾ ಪ್ರಾರಂಭೋತ್ಸವ: ವಿದ್ಯಾರ್ಥಿಗಳಿಗೆ ಸ್ವಾಗತ

◆ **ಕುಂದಗೋಳ:** ತಾಲೂಕಿನ ಸಂಶಿ ಗ್ರಾಮದ ಸರ್ಕಾರಿ ನಂ.2 ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹೊಸ ಶೈಕ್ಷಣಿಕ ವರ್ಷದ ಅಂಗವಾಗಿ ಶಾಲಾ ಪ್ರಾರಂಭೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳಿಗೆ ಪುಷ್ಪ, ಸಿಹಿ ನೀಡಿ ಹಾಗೂ ಶುಭ ಹಾರೈಸುವ ಮೂಲಕ ಆತ್ಮೀಯವಾಗಿ ಸ್ವಾಗತಿಸಲಾಯಿತು.

ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷ ಶಿವಾನಂದ ಹೊಸಮನಿ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರಗಳನ್ನು ಬೆಳೆಸಿಕೊಂಡು ಜೀವನದಲ್ಲಿ ಸಾಧನೆ ಮಾಡಬೇಕು ಎಂದರು.

ತಾಲೂಕು ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಲೋಕೇಶಸರಾವರಿ ಮಾತನಾಡಿ, ಶಾಲೆಯ ಮೊದಲ ದಿನವೇ ಮಕ್ಕಳಲ್ಲಿ ಉತ್ಸಾಹ ಮತ್ತು ಆತ್ಮವಿಶ್ವಾಸ ತುಂಬುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಶಾಲೆಯ ಮುಖ್ಯ ಶಿಕ್ಷಕ ಎ.ಬಿ. ಗುರಹಟ್ಟಿ ಅವರು ವಿದ್ಯಾರ್ಥಿಗಳಿಗೆ ಹೊಸ ಶೈಕ್ಷಣಿಕ ವರ್ಷದ ಶುಭಾಶಯಗಳನ್ನು ತಿಳಿಸಿ, ಶಾಲೆಯಲ್ಲಿನ ಶೈಕ್ಷಣಿಕ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಶಿವಾನಂದ ಕುಂದಗೋಳ, ಶಾಲೆಯ ಶಿಕ್ಷಕ-ಶಿಕ್ಷಕಿಯರು, ಪಾಲಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಮಹಿಳೆಯರಲ್ಲಿ ಆತ್ಮವಿಶ್ವಾಸ, ಆರ್ಥಿಕ ಸ್ವಾವಲಂಬನೆಗೆ ಕೌಶಲ್ಯ ಅಗತ್ಯ

◆ **ಧಾರವಾಡ:** ಮಹಿಳೆಯರಲ್ಲಿ ಆತ್ಮವಿಶ್ವಾಸ, ಆರ್ಥಿಕ ಸ್ವಾವಲಂಬನೆ, ನಾಯಕತ್ವದ ಗುಣಗಳು ಬೆಳೆಸುವಲ್ಲಿ ಕೌಶಲ್ಯ ತರಬೇತಿಗಳು ಪ್ರಮುಖ ಪಾತ್ರ ನಿರ್ವಹಿಸಲಿವೆ ಎಂದು ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಜನತಾ ಶಿಕ್ಷಣ ಸಮಿತಿಯ ಉತ್ಸವ ಸಭಾಂಗಣದಲ್ಲಿ ಕೌಶಲ್ಯ ಐಟಿಐ ಕಾಲೇಜು ಆಯೋಜಿಸಿದ್ದ 15 ದಿನಗಳ ಉಚಿತ ಹೊಲಿಗೆ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಹಿಳೆಯರಿಗೆ ಪ್ರಮಾಣಪತ್ರ ವಿತರಿಸಿ ಅವರು ಮಾತನಾಡಿದರು.



ಮನೆಯಲ್ಲಿ ಶಾಂತಿ ನೆಲೆಸಲು ಮಹಿಳೆ ಸದೃಢತೆ ಹಾಗೂ ಆರ್ಥಿಕ ಸ್ವಾವಲಂಬನೆ ಸಾಧಿಸಬೇಕು. ಈ ನಿಟ್ಟಿನಲ್ಲಿ ಮಹಿಳೆಯರು ಶಿಕ್ಷಣ, ಉದ್ಯೋಗಕ್ಕೆ ಹೆಚ್ಚಿ ಆದ್ಯತೆ ನೀಡಬೇಕು. ಸಮಾಜ ಸೇವೆಯ ಮೂಲಕ ಮುಖ್ಯ ವಾಹಿನಿಗೆ ಬರುವಂತೆ ಹೇಳಿದರು.

ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿದ ರಾಜರ್ಷಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರು, ಕೌಶಲ್ಯ ಐಟಿಐ ಸಂಸ್ಥೆ ಪ್ರಾರಂಭಿಸುವ ಮೂಲಕ ಅನೇಕ ಮಹಿಳೆಯರ ಬಾಳಿಗೆ ಬೆಳಕಾಗಿದ್ದಾರೆ. ಮಹಿಳೆಯರು ಈ ಸಂಸ್ಥೆ ಸದ್ಬಳಸಿಕೊಳ್ಳಬೇಕು ಎಂದರು.

ಸಂಸ್ಥೆ ಆಡಳಿತಾಧಿಕಾರಿ ಅರಿಹಂತ ಪ್ರಸಾದ ಮಾತನಾಡಿ, ಆಧುನಿಕ ಯುಗದಲ್ಲಿ ಮಹಿಳೆಯರಿಗೆ ಮನೆಯಲ್ಲಿ ಕುಳಿತು ಹಣ ಗಳಿಸಲು ಕೌಶಲ್ಯ ತರಬೇತಿ ಬಹಳ ಉಪಯುಕ್ತ. ಈ ಸ್ವ-ಉದ್ಯೋಗ ತರಬೇತಿ ಸೌಲಭ್ಯದಿಂದ ಪ್ರಗತಿ ಹೊಂದಲು ಹೇಳಿದರು.

ಇದೇ ವೇಳೆ ತರಬೇತಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಪ್ರಾಚಾರ್ಯರಾದ ಮಹಾವೀರ ಉಪಾಧ್ಯೆ, ರಾಹುಲ್ ಉಪಾಧ್ಯೆ, ಅಶ್ವಿನಿ ದೇಸಾಯಿ, ಜಿನ್ನಪ್ಪ ಕುಂದಗೋಳ, ಮಂಜುನಾಥ ಚಟ್ಟೇರ ಸೇರಿ ಅನೇಕರು ಪಾಲ್ಗೊಂಡಿದ್ದರು.

ಜೂನ್ 7ರಂದು ರನ್ ಫಾರ್ ನೇಚರ್ 4.0 ಜಾಗೃತಿ ಓಟ: ಚನ್ನು ಹೊಸಮನಿ

◆ **ಹುಬ್ಬಳ್ಳಿ:** ನಗರದ ಗ್ರೀನ್ ಕರ್ನಾಟಕ ಅಸೋಸಿಯೇಶನ್, ವಿ ಕೇರ್ ಫೌಂಡೇಶನ್, ವಸುಂದರ ಫೌಂಡೇಶನ್ ಸಹಯೋಗದಲ್ಲಿ ವತಿಯಿಂದ ರನ್ ಫಾರ್ ನೇಚರ್ 4.0 ಪರಿಸರ ಸಂರಕ್ಷಣಾ ಜಾಗೃತಿ ಓಟ ಹಾಗೂ ಸಮಾರಂಭ ಜೂ.7 ರಂದು ತೋಳನಕೇರಿ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಸೋಸಿಯೇಶನ್ ಅಧ್ಯಕ್ಷ ಚನ್ನು ಹೊಸಮನಿ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಓಟದಲ್ಲಿ 2 ಸಾವಿರ ಕ್ಕೂ ಹೆಚ್ಚು ಪರಿಸರ ಸ್ನೇಹಿ ವಿದ್ಯಾರ್ಥಿಗಳು ಹಾಗೂ ನಾಗರಿಕರು ಭಾಗವಹಿಸಲಿದ್ದಾರೆ. 30 ಕಾಲೇಜ್ ಹಾಗೂ 15 ಶಾಲೆಗೆ ಭೇಟಿ ನೀಡಿ ಭಾಗವಹಿಸಲು ಮನವಿ ಮಾಡಲಾಗಿದೆ. ಜಾಗೃತಿ ಓಟವು ಅಥ್ಲೆಟಿಕ್ ಗಳಿಗೆ ತಮ್ಮ ತಾವು ಸವಾಲು ಮಾಡಿಕೊಳ್ಳುವುದರ ಜೊತೆಗೆ ಪ್ರಕೃತಿ ರಕ್ಷಿಸುವ, ಬೆಳೆಸುವ ಉದ್ದೇಶವಾಗಿದೆ ಎಂದರು. ಜೂ.7 ರಂದು ಬೆಳಗ್ಗೆ 6 ಗಂಟೆಗೆ 5 ಕೆ ಹಾಗೂ 3 ಕೆ ರನ್ ಓಟ ಆಯೋಜಿಸಲಾಗಿದೆ. ಇದಾದ ಬಳಿಕ 2 ಸಾವಿರ ಸಸಿಗಳ ವಿತರಿಸಲಾಗುವುದು. 10 ಸಾವಿರ ಸಸಿಗಳ ನೀಡುವ ಗುರಿಯಿದ್ದು, ಇನ್ನೂ 8 ಸಾವಿರ ಸಸಿಗಳನ್ನು ಅಗಸ್ಟ್ ತಿಂಗಳೊಳಗೆ ವಿತರಿಸಲಾಗುವುದು ಎಂದು ತಿಳಿಸಿದರು. ಸಮಾರಂಭ ಸಾನ್ನಿಧ್ಯ ವಾಲಿ ಗುರುಗಳು, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಶಾಸಕರಾದ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಎಸ್.ಸಿ. ಶೆಟ್ಟರ, ಪುರುಷೋತ್ತಮ ನಾರಾಯಣ ಗಾಡಗಿಲ್ಲ ಭಾಗವಹಿಸುವರು ಎಂದರು.

ವಿ ಕೇರ್ ಫೌಂಡೇಶನ್ ಅಧ್ಯಕ್ಷ ಗಂಗಾಧರ ಗುಜಮಾಗಡಿ, ವಸುಂಧರಾ ಫೌಂಡೇಶನ್ ಅಧ್ಯಕ್ಷ ಮೇಘರಾಜ ಕೆರೂರ, ರಾಜು ಗೊಂಬಿ ಇದ್ದರು.



ಅನಾಹುತ ತಡೆ, ಜಾಗೃತಿಗೆ ಅಣಕು ಪ್ರದರ್ಶನ

◆ **ಹುಬ್ಬಳ್ಳಿ:** ಮುಂಗಾರು ಮಳೆಯಿಂದ ಜಿಲ್ಲೆ ಬೆಣ್ಣೆ ಹಳ್ಳ ಪ್ರವಾಹದಿಂದ ಆಗುವ ಅನಾಹುತ ತಪ್ಪಿಸಲು, ಪ್ರವಾಹದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಯಾವುದೇ ರೀತಿಯ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಮಾಡಿರುವ ಸಿದ್ಧತಾ ಕಾರ್ಯಗಳನ್ನು ಇಲ್ಲಿಯ ಉಣಕಲ್ ಕರೆಯಲ್ಲಿ ಗುರುವಾರ ಅಣಕು ಪ್ರದರ್ಶನ ತೋರಿಸಲಾಯಿತು.

ಧಾರವಾಡ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಅಗ್ನಿಶಾಮಕ ದಳ ಮತ್ತು ತುರ್ತು ಸೇವೆಗಳು ಸಹಯೋಗದಲ್ಲಿ ಅಣಕು ಪ್ರದರ್ಶನ ನಡೆಯಿತು. ಧಾರವಾಡ, ಹುಬ್ಬಳ್ಳಿ, ಅಮರಗೋಳ, ಕುಂದಗೋಳ, ಬೇಲೂರು ಕೈಗಾರಿಕಾ ಪ್ರದೇಶದ ಅಗ್ನಿಶಾಮಕ ದಳದ ಸಿಬ್ಬಂದಿ ನೀರಿನಲ್ಲಿ ಮುಳುಗುತ್ತಿದ್ದ ವ್ಯಕ್ತಿಯನ್ನು ರಕ್ಷಣೆ ಮಾಡುವ ಅಣಕು ಪ್ರದರ್ಶನವನ್ನು ಪ್ರದರ್ಶಿಸಿದರು. ಧಾರವಾಡ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷೆ ಹಾಗೂ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಮಾತನಾಡಿ, ಧಾರವಾಡ ಜಿಲ್ಲೆಯಲ್ಲಿ ಬೆಣ್ಣೆಹಳ್ಳ ಹಾಗೂ ತುಪ್ಪರಿಹಳ್ಳಗಳು ದೊಡ್ಡ ಪ್ರಮಾಣದಲ್ಲಿ ಹರಿಯುತ್ತವೆ. ಇದರಿಂದ 56 ಗ್ರಾಮಗಳು ಪ್ರವಾಹ ಉಂಟಾಗುತ್ತವೆ. ಹು-ಧಾ ಮಹಾನಗರದ ಕೆಲವೊಂದು ತಗ್ಗು ಪ್ರದೇಶಗಳಲ್ಲಿ ನೆರೆ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಪ್ರವಾಹದ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು ಅವಶ್ಯವಿದೆ ಎಂದು ತಿಳಿಸಿದರು.

ಪ್ರವಾಹ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಯಲ್ಲಿ ರಕ್ಷಣಾ ತಂಡಗಳು ಮತ್ತು 4 ಬೋಟ್‌ಗಳು, 50 ಲೈಫ್ ಜಾಕೆಟ್, 60 ಲೈಫ್ ಬಾಯ್, 150 ರೇನ್ ಕೋಟ್ ಗಳ ರಕ್ಷಣಾ ಸಾಮಗ್ರಿಗಳನ್ನು ಸಿದ್ಧತೆ ಮಾಡಿಕೊಳ್ಳಲಾಗಿದೆ. ಪ್ರವಾಹದ ಸಂದರ್ಭದಲ್ಲಿ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

■ ವೆಂಕಟೇಶ ಬುಳ್ಳ, ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತ

56 ಗ್ರಾಮದ ಸುಮಾರು 8 ಸಾವಿರಕ್ಕೂ ಅಧಿಕ ಜನರು ಹಾಗೂ 3 ಸಾವಿರಕ್ಕೂ ಹೆಚ್ಚು ಜಾನುವಾರುಗಳು ಪ್ರವಾಹಕ್ಕೆ ಒಳಗಾಗಬಹುದು. 71 ಕಾಳಜಿ ಕೇಂದ್ರಗಳು ಮತ್ತು 6 ಗೋ ಶಾಲೆಗಳನ್ನು ತೆರೆಯಲು ಸ್ಥಳಗಳನ್ನು ಗುರುತಿಸಲಾಗಿದೆ. 35 ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಪಂಚಾಯತ ವಿಪತ್ತು ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿದೆ ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ, ಡಿಸಿಪಿ ಶೃತಿ ಎನ್., ಉಪವಿಭಾಗಾಧಿಕಾರಿ ಶಾಲಂ ಹುಸೇನ್, ಡಿಎಚ್‌ಒ ಡಾ. ಪರಶುರಾಮ, ಜಿಲ್ಲಾ ಅಗ್ನಿಶಾಮಕ ದಳ ಅಧಿಕಾರಿ ಬಸವರಾಜ ಜಿ.ಕೆ., ತಹಶೀಲ್ದಾರ ಮಹೇಶ ಭಗವಂತ ಗಸ್ತೆ, ತಾಲ್ಲೂಕು ಸಿಇಒ ಡಾ.ರಾಮಚಂದ್ರ ಹೊಸಮನಿ ಇದ್ದರು.



ಕೆರೆಯಲ್ಲಿ ಮೂರು ವಿದ್ಯಾರ್ಥಿಗಳು ಮುಳುಗಿ ಸಾವು

ನೀರು ಇರುವ ಜಾಗಗಳಿಗೆ ಮಕ್ಕಳು ತೆರಳಬಾರದು. ಈಗಾಗಲೇ ಜಿಲ್ಲೆಯಲ್ಲಿ ಕಳೆದ 15 ದಿನಗಳಲ್ಲಿ 3 ವಿದ್ಯಾರ್ಥಿಗಳು ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಶಾಲಾ ಮಕ್ಕಳು ನೀರಿನಿಂದ ದೂರವಿರಬೇಕು. ಮಕ್ಕಳು ನೀರು ಇರುವಂತಹ ಪ್ರದೇಶಗಳಿಗೆ ತೆರಳುವ ಮುನ್ನ ಪಾಲಕರು ಪೋಷಕರ ಅನುಮತಿಯನ್ನು ಪಡೆದುಕೊಳ್ಳಬೇಕು. ಅಲ್ಲದೇ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ ಎಂದು ಜಿಲ್ಲಾಧಿಕಾರ ಸ್ನೇಹಲ್ ಆರ್. ತಿಳಿಸಿದರು.



ಡಾ. ರಮೇಶ ಮಹಾದೇವಪ್ಪನವರ ಜನ್ಮದಿನಾಚರಣೆ: ರಕ್ತದಾನ

◆ **ಹುಬ್ಬಳ್ಳಿ:** ಸಮಾಜ ಸೇವಕ ಡಾ. ರಮೇಶ ಮಹದೇವಪ್ಪನವರ ಅವರ ಗೆಳಯರ ಬಳಗ ವತಿಯಿಂದ ಡಾ. ರಮೇಶ ಮಹಾದೇವಪ್ಪನವರ ಜನ್ಮದಿನವನ್ನು ಹಲವು ಸಾಮಾಜಿಕ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಬೆಳಗ್ಗೆ ವೆಂಕಟೇಶ ಕಾಲೋನಿಯ ಬನ್ನಿ ಮಹಾಕಾಳಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.



ಸಸಿ ನೆಡುವ ವನಮಹೋತ್ಸವ ಕಾರ್ಯಕ್ರಮ ನಡೆಸಲಾಯಿತು. ಪಾಲಿಕೆಯ ಚಿಟಗುಪ್ಪಿ ಆಸ್ಪತ್ರೆಯಲ್ಲಿನ ಬಡ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ವಿದ್ಯಾನಗರ ಪ್ರೇಮ ಬಿಂದು ರಕ್ತನಿಧಿ ಕೇಂದ್ರದಲ್ಲಿ ರಕ್ತದಾನ ಶಿಬಿರದಲ್ಲಿ 40ಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು. ಸಂಗೊಳ್ಳಿ ರಾಯಣ್ಣ ವೃತ್ತ ಸುತ್ತಮುತ್ತಲಿನ ಪ್ರದೇಶದ ಬೀದಿ ಬದಿ ವ್ಯಾಪಾರಿಗಳಿಗೆ ಛತ್ರಿ, ಶ್ರೀ ಸಿದ್ಧಾರೂಢ ಮಠ ಹಾಗೂ ಹಜರತ್ ಸೈಯದ್ ಫತೇಹ್ ಶಾ ದರ್ಗಾ ಸುತ್ತಮುತ್ತಲಿನ ಬಡ ಜನರಿಗೆ ಅಗತ್ಯ ವಸ್ತುಗಳನ್ನು, ಸರ್ಕಾರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಪುಸ್ತಕ ಹಾಗೂ ಶೈಕ್ಷಣಿಕ ಸಾಮಗ್ರಿಗಳನ್ನು, ಹುಬ್ಬಳ್ಳಿ ರೈಲ್ವೆ ನಿಲ್ದಾಣ ಮತ್ತು ಬಸ್ ನಿಲ್ದಾಣ ಪ್ರದೇಶದಲ್ಲಿರುವ ನಿರ್ಗತಿಕರಿಗೆ ಬೆಡ್‌ಶೀಟ್‌ಗಳನ್ನು ವಿತರಿಸಲಾಯಿತು. ಇಂದಿರಾ ಗಾಜಿನ ಮನೆಯಲ್ಲಿ ಪೌರಕಾರ್ಮಿಕರನ್ನು ಸನ್ಮಾನಿಸಿ ಉಡುಗೊರೆಗಳನ್ನು ನೀಡಲಾಯಿತು. ಉಣಕಲ್‌ನ ಮಂದಬುದ್ಧಿ ಮಕ್ಕಳ ಶಾಲೆ ಹಾಗೂ ಅನಾಥಾಶ್ರಮದಲ್ಲಿ ಆಹಾರ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಇದೇ ವೇಳೆ ಕೇಶ್ವಾಪುರದಲ್ಲಿರುವ ಮಿಷನರೀಸ್ ಆಫ್ ಚಾರಿಟಿ ಸಂಸ್ಥೆಗೆ ಭೇಟಿ ನೀಡಿ ಅಲ್ಲಿನ ನಿವಾಸಿಗಳಿಗೆ ಅಗತ್ಯ ವಸ್ತುಗಳನ್ನು ವಿತರಿಸಲಾಯಿತು. ವೃದ್ಧಾಶ್ರಮದ ಹಿರಿಯ ನಾಗರಿಕರಿಗೂ ಹಣ್ಣು ಹಂಪಲು ವಿತರಿಸಿ ಅವರೊಂದಿಗೆ ಸಮಯ ಕಳೆಯಲಾಯಿತು. ಪತ್ನಿ ಗೀತಾ ರಮೇಶ್ ಮಹಾದೇವಪ್ಪನವರ, ಮುಖಂಡ ಅಶೋಕ ವಾಲ್ಮೀಕಿ, ರಾಜು ಕಾಳೆ, ಕಾಶೀಂ ಕೂಡಲಗಿ, ರಾಜೇಶ್ ಮಹಾದೇವಪ್ಪನವರ, ಮಹ್ಮದ್ ನದಾಫ್, ಮಂಜು ಉಪ್ಪಾರ, ಕಲ್ಲಪ್ಪ ಬರಮಗೌಡ್ರ, ವೆಂಕಟೇಶ, ಶಕೀಲ್ ವಲಿ ಅಹ್ಮದ್, ರವಿಚಂದ್ರ ದೊಡ್ಡಿಹಾಳ, ಆನಂದಕಾಳೆ, ಬಸವರಾಜ ಮ್ಯಾಗೇಡಿ, ಕೆಂಚಪ್ಪ ನಡುವಿನಮನಿ, ಶ್ರೀನಿವಾಸ ವಾಲಿಕಾರ, ಶಿವಾನಂದ ಇದ್ದರು.

ಕಿರುಸುದ್ದಿ

ಸಾಲಬಾಧೆ : ಯುವ ರೈತ ಆತ್ಮಹತ್ಯೆ

ಹಾವೇರಿ: ಜಿಲ್ಲೆಯ ಬ್ಯಾಡಗಿ ತಾಲೂಕು ಬುಡಪನಹಳ್ಳಿ ಗ್ರಾಮದಲ್ಲಿ ಸಾಲಬಾಧೆ ತಾಳಲಾರದೆ ರೈತರೊಬ್ಬರು ನೇಣಿಗೆ ಶರಣಾಗಿರುವ ಘಟನೆ ನಡೆದಿದೆ. ಪ್ರಕಾಶ ಕರಿಯಪ್ಪ ಕರೂರ (37) ಮೃತಪಟ್ಟ ರೈತರಾಗಿದ್ದಾರೆ. ಮೃತರ ಹೆಸರಿನಲ್ಲಿ 4ಎಕರೆಗೂ ಹೆಚ್ಚು ಜಮೀನು ಇದ್ದು, ಕೃಷಿ ಚಟುವಟಿಕೆಗಳಿಗಾಗಿ ತನ್ನ ಹಾಗೂ ತನ್ನ ಹೆಂಡತಿ ಹೆಸರಿನಲ್ಲಿ ಹಲವಾರು ಕಡೆಗಳಲ್ಲಿ ಎರಡೂವರೆ ಲಕ್ಷಕ್ಕೂ ಹೆಚ್ಚು ಸಾಲವನ್ನು ಮಾಡಿಕೊಂಡಿದ್ದಾರೆ. ಕಳೆದ ಆರು ತಿಂಗಳಲ್ಲಿ ಬೆಳೆದಿದ್ದ ತರಕಾರಿ, ಗೋವಿನಜೋಳ ಬೆಳೆ ಕೈಹಿಡಿಯಲಿಲ್ಲ. ಒಂದೂವರೆ ವರ್ಷಗಳಿಂದ ಅತಿವೃಷ್ಟಿ, ಅನಾವೃಷ್ಟಿಯಾಗಿದ್ದು, ಬೆಳೆಗಳು ಸರಿಯಾಗಿ ಬಾರದ ಹಿನ್ನೆಲೆ ಮಾಡಿದ ಸಾಲವನ್ನು ಹೇಗೆ ತೀರಿಸಬೇಕೆಂಬ ಚಿಂತೆಗೀಡಾಗಿದ್ದನು. ಇದೇ ಕಾರಣದಿಂದಾಗಿ ಮನೆಯಲ್ಲಿ ಯಾರೂ ಇಲ್ಲದೇ ಇದ್ದಾಗ ವಾಸದ ಮನೆಯ ರೂಮಿನಲ್ಲಿ ಕಬ್ಬಿಣದ ಆಂಗ್ಲರ್ ಪಟ್ಟಿಗೆ ನೇಣು ಹಾಕಿಕೊಂಡು ಸಾವನ್ನಪ್ಪಿದ್ದಾರೆ ಎಂದು ಮೃತರ ಪತ್ನಿ ನಾಗಮ್ಮ ಕರೂರ ಪೊಲೀಸರಿಗೆ ಸಲ್ಲಿಸಿದ ದೂರಿನಲ್ಲಿ ತಿಳಿಸಿದ್ದಾರೆ. ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೈಂಗಿಕ ಕಿರುಕುಳ : ಮಹಿಳೆ ಆತ್ಮಹತ್ಯೆ

ಹಾವೇರಿ: ಲೈಂಗಿಕ ಕಿರುಕುಳದಿಂದ ಬೇಸತ್ತ ಮಹಿಳೆಯೊಬ್ಬರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಹಾನಗಲ್ ತಾಲೂಕು ಶಿಂಗಾಪುರ ಪ್ಲಾಟ್‌ನಲ್ಲಿ ನಡೆದಿದೆ. ಶಿಂಗಾಪುರ ಪ್ಲಾಟ್ ಗ್ರಾಮದ ಸುಮಾ ಕೋಂ.ಶಿವಾನಂದ ಕಾಲ್ವೇಯಲ್ಲಾಪುರ (29) ಮೃತ ಮಹಿಳೆ. ಹಾನಗಲ್ ತಾಲೂಕು ಮಲಗುಂದ ಗ್ರಾಮದ ವಿನಾಯಕ ಮಲ್ಲಪ್ಪ ಇಡಗೋಡ ಎಂಬಾತನ ವಿರುದ್ಧ ಮೃತ ಮಹಿಳೆಯ ತಾಯಿ ನಾಗಮ್ಮ ಕೋಗಲ್ ದೂರನ್ನು ದಾಖಲಿಸಿದ್ದಾರೆ. ಆರೋಪಿ ವಿನಾಯಕ ಕಳೆದ ಹಲವು ದಿನಗಳಿಂದ ಮೃತ ಮಹಿಳೆಗೆ ಲೈಂಗಿಕ ಕಿರುಕುಳ ನೀಡುತ್ತಾ ಬಂದಿದ್ದು, ಆರೋಪಿಗೆ ಎಷ್ಟು ಬುದ್ಧಿವಾದ ಹೇಳಿದರೂ ಕೇಳಿರಲಿಲ್ಲ. ಮಹಿಳೆ ಮನೆಯ ಬಳಿ ಕೆಲಸ ಮಾಡುತ್ತಿದ್ದಾಗ ಏಕಾಏಕಿ ಬಂದ ಆರೋಪಿ ಮಹಿಳೆಯನ್ನು ಪುಸಲಾಯಿಸಲು ಪ್ರಯತ್ನಿಸಿದ್ದಾನೆ. ಆಗ ಮಹಿಳೆ ಒಪ್ಪದ ಕಾರಣ ಆಕೆಯ ಬಳಿ ಇದ್ದ ಮೊಬೈಲ್ ಕಿತ್ತುಕೊಂಡು ಓಡಿಹೋಗಿದ್ದಾನೆ. ಇದನ್ನೆ ಮನಸ್ಸಿಗೆ ಹಚ್ಚಿಕೊಂಡ ಮಹಿಳೆ ಕಿರುಕುಳ ತಾಳಲಾರದೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಕುರಿತು ಆಡೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಕ್ಕಜೋಗಿಹಳ್ಳಿಯಲ್ಲಿ ಹಸಿರು ಕ್ರಾಂತಿ | ಇಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಚಾಲನೆ

ರಾಜ್ಯದ ಮೊದಲ ಮಿಯಾವಾಕಿ ಮಾದರಿ ಕಿರು ಅರಣ್ಯ ನಿರ್ಮಾಣ

▸ ಲಿಂಬ್ಯಾ ನಾಯ್ಕ್ ಜಿ

ದಿಗಂತ ವಿಶೇಷ

ಕೂಡ್ಲಿಗಿ: ಒಂದು ಕಾಲದಲ್ಲಿ ಇಂದಿರಾಗಾಂಧಿ ಸೇರಿದಂತೆ ಅನೇಕ ಗಣ್ಯಾತಿಗಣ್ಯರು ಭೇಟಿ ನೀಡಿ, ಗೃಹ ಕೈಗಾರಿಕೆಗಳ ಮೂಲಕ ಇಡೀ ರಾಜ್ಯದಲ್ಲೇ ಮಾದರಿ ಗ್ರಾಮವೆಂದು ಹೆಸರುವಾಸಿಯಾಗಿದ್ದ ಕೂಡ್ಲಿಗಿ ತಾಲೂಕಿನ ಚಿಕ್ಕಜೋಗಿಹಳ್ಳಿ ಗ್ರಾಮಕ್ಕೆ ಈಗ ಮತ್ತೆ ಹಳೆಯ ವೈಭವ ಮರಳುತ್ತಿದೆ.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಕೇಂದ್ರ ಸರ್ಕಾರದ ''ಏಕ್ ಪೇಡ್ ಮಾ ಕೆ ನಾಮ್'' ಅಭಿಯಾನದಡಿ ಗ್ರಾಮದಲ್ಲಿ ಜಪಾನ್ ಮಾದರಿಯ ಮಿಯಾವಾಕಿ ಕಿರು ಅರಣ್ಯ ಕೃಷಿ ಯೋಜನೆಗೆ ಚಾಲನೆ ನೀಡಲಾಗುತ್ತಿದ್ದು, ಗ್ರಾಮವು ಹಸಿರು ಕ್ರಾಂತಿಯ ಮೂಲಕ ಮತ್ತೊಮ್ಮೆ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಜ್ಜಾಗಿದೆ.

ಕೇಂದ್ರ ಸಚಿವರಿಂದ ಸಸಿ ನೆಡುವ ಕಾರ್ಯಕ್ರಮ: ಕೇಂದ್ರ ಹಣಕಾಸು ಮತ್ತು ಸಾಂಸ್ಥಿಕ ವ್ಯವಹಾರಗಳ ಸಚಿವರಾದ ನಿರ್ಮಲಾ ಸೀತಾರಾಮನ್‌ಅವರು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಚಿಕ್ಕಜೋಗಿಹಳ್ಳಿಯಲ್ಲಿ ಒಂದು ಲಕ್ಷ ಸಸಿಗಳನ್ನು ನೆಡುವ ಗುರಿ ಹೊಂದಿರುವ ಈ ಬೃಹತ್ ಜಪಾನ್ ಮಾದರಿ ಮಿಯಾವಾಕಿ ಅರಣ್ಯ ಕೃಷಿ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ.

ತೋಟಗಾರಿಕೆ ಇಲಾಖೆಯ ವತಿಯಿಂದ ಈಗಾಗಲೇ ಒಂಬತ್ತು ಜಾತಿಯ ವಿವಿಧ ಹಣ್ಣಿನ ಗಿಡಗಳನ್ನು ಸಂಗ್ರಹಿಸಲಾಗಿದ್ದು, ಶಾಲಾ ಮಕ್ಕಳೊಂದಿಗೆ ಸೇರಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪೂರ್ವಸಿದ್ಧತೆ: ಕೇಂದ್ರ ಸಚಿವರ ಭೇಟಿಯ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಕೂಡ್ಲಿಗಿ ಶಾಸಕರಾದ ಡಾ. ಶ್ರೀನಿವಾಸ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಸೇರಿದಂತೆ ಹಿರಿಯ ಅಧಿಕಾರಿಗಳ ತಂಡ ಬುಧವಾರ ಚಿಕ್ಕಜೋಗಿಹಳ್ಳಿಗೆ ಭೇಟಿ ನೀಡಿ ವೇದಿಕೆ, ಭದ್ರತೆ, ವಾಹನ ಪಾರ್ಕಿಂಗ್ ಮತ್ತು ಸಾರ್ವಜನಿಕ ಗ್ಯಾಲರಿಗಳ ವ್ಯವಸ್ಥೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದಾರೆ.



“ ಕಡಿಮೆ ಜಾಗದಲ್ಲಿ, ಕಡಿಮೆ ಸಮಯದಲ್ಲಿ ಮತ್ತು ಕಡಿಮೆ ಖರ್ಚಿನಲ್ಲಿ ಒಂದು ಸುಂದರವಾದ, ನೈಸರ್ಗಿಕ ಕಾಡನ್ನು ಸೃಷ್ಟಿಸಿ ಪರಿಸರ ಸಮತೋಲನ ಕಾಯ್ದುಕೊಳ್ಳಲು 'ಮಿಯಾವಾಕಿ' ಅತ್ಯುತ್ತಮ ತಂತ್ರಜ್ಞಾನವಾಗಿದೆ. ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ನಮ್ಮ ಕ್ಷೇತ್ರದ ಚಿಕ್ಕಜೋಗಹಳ್ಳಿ ಗ್ರಾಮವನ್ನು ಆಯ್ಕೆ ಮಾಡಿಕೊಂಡಿರುವುದು ಸಂತಸ ತಂದಿದೆ.

■ ಎನ್. ಟಿ. ಶ್ರೀನಿವಾಸ್, ಶಾಸಕ

- ಜಪಾನ್‌ನ ಸಸ್ಯವಿಜ್ಞಾನಿ ಡಾ. ಅಕಿರಾ ಮಿಯಾವಾಕಿ ಅವರು ಆವಿಷ್ಕರಿಸಿದ ''ಮಿಯಾವಾಕಿ ಅರಣ್ಯ ಕೃಷಿ ಪದ್ಧತಿ
- ಸಾಂಪ್ರದಾಯಿಕ ಕಾಡುಗಳಿಗೆ ಹೋಲಿಸಿದರೆ ಮಿಯಾವಾಕಿ ಕಾಡುಗಳು 10 ಪಟ್ಟು ವೇಗವಾಗಿ ಬೆಳೆಯುತ್ತವೆ.
- ಸಾಮಾನ್ಯ ಕಾಡುಗಳಿಗಿಂತ 30 ಪಟ್ಟು ಹೆಚ್ಚು ದಟ್ಟವಾಗಿರುತ್ತವೆ.
- ಸಣ್ಣ ಜಾಗದಲ್ಲೂ (ಕನಿಷ್ಠ 100 ಚದರ ಅಡಿ) ಈ ಕಿರು ಅರಣ್ಯವನ್ನು ನಿರ್ಮಿಸಬಹುದು.
- 3 ವರ್ಷಗಳ ನಂತರ ನಿರ್ವಹಣೆಯ ಅಗತ್ಯವಿಲ್ಲ.
- ಪರಿಸರ ಮಾಲಿನ್ಯ ನಿಯಂತ್ರಣ

ಜಿಲ್ಲಾ ಆಸ್ಪತ್ರೆ ಬಳಿ ಸಸಿ ನೆಡುವ ಕಾರ್ಯಕ್ರಮ

ವಿಜಯನಗರ: ಜಿಲ್ಲಾಡಳಿತ, ಅರಣ್ಯ ಇಲಾಖೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಿಎಸ್‌ಆರ್ ನಿಧಿಯಡಿ ಜೂ.5ರಂದು ಬೆಳಗ್ಗೆ 9ಕ್ಕೆ 250 ಹಾಸಿಗೆಗಳ ಆಸ್ಪತ್ರೆ ರಸ್ತೆಯಲ್ಲಿ ಸುಮಾರು 37.74 ಲಕ್ಷ ವೆಚ್ಚದಲ್ಲಿ ಸಸಿ ನೆಡುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರು ನಿರ್ಮಲಾ ಸೀತಾರಾಮನ್ ಸಸಿ ನೆಡುವ ಮೂಲಕ ಚಾಲನೆ ನೀಡುವರು. ಶಾಸಕರಾದ ಎಚ್.ಆರ್. ಗವಿಯಪ್ಪ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಈ. ತುಕಾರಾಮ್, ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ಕೆ. ನೇಮಿರಾವ್ ನಾಯ್ಕ್, ಡಾ.ಎನ್.ಟಿ.ಶ್ರೀನಿವಾಸ್, ಲತಾ ಮಲ್ಲಿಕಾರ್ಜುನ್, ಕೃಷ್ಣ ನಾಯಕ್ ಸೇರಿದಂತೆ ವಿಧಾನ ಪರಿಷತ್ ಸದಸ್ಯರು, ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎನ್.ಎಫ್. ಇಮಾಮ್ ನಿಯಾಜಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಶಿವಮೂರ್ತಿ, ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಜಿ. ಪಂ. ಸಿಇಓ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ, ಅರಣ್ಯ ಇಲಾಖೆ ಉಪಸಂರಕ್ಷಣಾಧಿಕಾರಿ ಅನುಪಮಾ ಭಾಗವಹಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸ್ಟಾರ್ಟ್‌ಅಪ್ ಕಾನ್‌ಕ್ಲೇವ್ ನಾಳೆ



ಹುಬ್ಬಳ್ಳಿ: ಗ್ಲೋಬಲ್ ಚೇಂಬರ್ ಆಫ್ ಸಾರಸ್ವತ ಎಂಟ್ರಪ್ರಿನರ್ಸ್ (ಜಿಸಿಎಸ್‌ಇ) ಹಾಗೂ ಗೌಡ ಸಾರಸ್ವತ ಬ್ರಾಹ್ಮಣಸಮಾಜದಸಹಯೋಗದಲ್ಲಿ ಎಂಎಸ್‌ಎಂಇ ಹಾಗೂ ಸ್ಟಾರ್ಟ್‌ಅಪ್ ಕಾನಕ್ಲೇವ್ ಜೂ. 6 ರಂದು ಬೆಳಿಗ್ಗೆ 9.30 ಗಂಟೆಗೆ ಜೆ.ಸಿ. ನಗರದ ಜಿಎಸ್‌ಬಿ ಸಮಾಜದ ಆರ್ .ಪಿ.ಕೆ.ಹಾಲ್‌ನಲ್ಲಿಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಸದಸ್ಯ ಮಹೇಶ ಮಾನಗೆ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಎಂಎಸ್ ಎಂಮಿ ಹಾಗೂ ನವೋದ್ಯಮ ಉತ್ತೇಜಿಸುತ್ತಿದ್ದು, ಸರ್ಕಾರ ಸೌಲಭ್ಯಗಳು ಹಾಗೂ ನವೋದ್ಯಮ ಪ್ರೋತ್ಸಾಹಿಸುವ ಈ ಬಗ್ಗೆ ಸಮಾಜದ ಯುವಕರು ಹಾಗೂ ಉದ್ಯಮಿಗಳಿಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಈ ಕುರಿತು ಕೆಲವು ಗೋಷ್ಠಿಗಳು ನಡೆಯುತ್ತಿದ್ದು, ಬ್ರ್ಯಾಂಡಿಂಗ್ ಮಾರ್ಕೆಟಿಂಗ್ ವಿಷಯದ ಬಗ್ಗೆ ಗಣೇಶ ಶನಯ, ವ್ಯವಹಾರದಲ್ಲಿ ಕೃತಕ್ ಬುದ್ಧಿ ಮತ್ತೆ(ಎಐ), ಸಾಂಪ್ರದಾಯಿಕ ಎಂಎಸ್ ಎಂ ಇ ಯಿಂದ ಆಧುನಿಕ ನವೋದ್ಯಮ ಕಡೆ- ಪುನರ್ ರಚನೆ ಹಾಗೂ ಪರಿವರ್ತನೆ ಸುಹಾಸ ಪ್ರಭು, ಎಂಎಸ್‌ಎಂಇ ಟೌನಹಾಲ್ ಸಂಕೇಶ ನಾಯಕ, ಉದ್ಯಮ ಶೀಲತೆ ಅಗತ್ಯ ಕೌಶಲ್ಯ ಅಭಿವೃದ್ಧಿ ಅರವಿಂದ ಮಾಳಿಗೇರ ಹಾಗೂ ಕುಟುಂಬ ಉದ್ಯಮಗಳನ್ನು ಕಾರ್ಪೋರೇಟ್ ರೂಪಕ್ಕೆ ಪರಿವರ್ತನೆ ಉಲ್ಲಾಸ ಕಾಮತ್ ನಡೆಸಿಕೊಡಲಿದ್ದಾರೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ವೈದ್ಯರಾದ ರಾಜನ್ ದೇಶಪಾಂಡೆ ಭಾಗವಹಿಸಲಿದ್ದಾರೆ. ಶಿರಸಿ, ಯಲ್ಲಾಪುರ, ಗೋವಾ, ಹಳಿಯಾಳ, ದಾಂಡೇಲಿಯಿಂದ 300 ಜನ ಭಾಗವಹಿಸಲಿದ್ದಾರೆ ಎಂದು ಹೇಳಿದರು. ರಮೇಶ ನಾಯಕ, ಪ್ರಮೋದ ಕಾಮತ, ಸದಾನಂದ ಕಾಮತ್ ಇದ್ದರು.

ಆರೋಗ್ಯ ತಪಾಸಣಾಧಿಕಾರಿ ಕಣ್ಮರೆ

ಹಾವೇರಿ: ವಾಕಿಂಗ್ ಮಾಡಲು ಹೋಗಿದ್ದ ಹೆಲ್ತ್ ಇನ್ಸ್‌ಪೆಕ್ಟರ್‌ರೊಬ್ಬರು ಕಾಣೆಯಾಗಿರುವ ಘಟನೆ ರಾಣೆಬೆನ್ನೂರು ನಗರದಲ್ಲಿ ನಡೆದಿದೆ. ಪುಟ್ಟಪ್ಪ ಖಂಡೆಪ್ಪ ಕಬ್ಬೂರ (39) ಕಾಣೆಯಾದ ವ್ಯಕ್ತಿಯಾಗಿದ್ದಾರೆ. ವಾಕಿಂಗ್ ಅಂತ ಹೊರಗಡೆ ಹೋದವರು ವಾಪಾಸ್ ಬಾರದೆ ಕಾಣೆಯಾಗಿದ್ದಾರೆ. ಕಾಣೆಯಾದ ವ್ಯಕ್ತಿ ಹಸಿರು ಬಣ್ಣದ ಟಿ-ಶರ್ಟ್, ನೀಲಿ ಬಣ್ಣದ ಚೆಕ್ಸ್ ಪಂಚೆ ಧರಿಸಿದ್ದಾರೆ. 5.1 ಅಡಿ ಎತ್ತರ ಇದ್ದು, ದುಂಡು ಮುಖ, ಸಾಧಾರಣ ಮೈಕಟ್ಟು ಹೊಂದಿದ್ದಾರೆ. ಸಾದಗಪ್ಪು ಮೈಬಣ್ಣ ಹೊಂದಿರುವ ಇವರು ಕನ್ನಡ, ಲಂಬಾಣಿ, ಹಿಂದಿ, ಇಂಗ್ಲೀಷ್ ಭಾಷೆಯನ್ನು ಮಾತನಾಡುತ್ತಾರೆ ಎಂದು ಸಹೋದರ ಕುಮಾರ ಕಬ್ಬೂರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಾಣೇಬೆನ್ನೂರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನ್ಯೆ ಸಿಗಲಿಲ್ಲವೆಂದು ಯುವಕ ಆತ್ಮಹತ್ಯೆ

ಹಾವೇರಿ: ಕನ್ಯೆ ಸಿಗದಿದ್ದಕ್ಕೆ ಮನಸ್ಸಿಗೆ ಬೇಜಾರ ಮಾಡಿಕೊಂಡಿದ್ದ ಯುವಕನೊಬ್ಬ ಮನೆಯಲ್ಲಿ ಆತ್ಮಹತ್ಯೆಗೆ ಶರಣಾದ ಘಟನೆ ಜಿಲ್ಲೆಯ ಶಿಗ್ಗಾವಿ ಪಟ್ಟಣದ ಮ್ಯಾಗೇರಿ ಓಣಿಯಲ್ಲಿ ನಡೆದಿದೆ. ಮ್ಯಾಗೇರಿ ಓಣಿ ನಿವಾಸಿ ಮನೋಜ ಬಸವರಾಜ ಹಡಪದ (27) ಮೃತಪಟ್ಟ ಯುವಕ. ಈತ ಕಟಿಂಗ್ ಶಾಪ್ ಕೆಲಸ ಮಾಡಿಕೊಂಡಿದ್ದರು. ಕಳೆದ ಹಲವು ದಿನಗಳಿಂದ ವಿವಿಧ ಕಡೆ ಕನ್ಯೆ ಹುಡುಕಿದರೂ ಸಹಿತ ಹುಡುಗಿ ಸಿಗದ ಕಾರಣ ಜೂ.3ರ ನಸುಕಿನಜಾವ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಮೃತನ ತಾಯಿ ಅಂಗನವಾಡಿ ಸಹಾಯಕಿ ನಿರ್ಮಲಾ ಹಡಪದ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೌರ ಮೇಲ್ಛಾವಣಿ ಶೇ.80 ಪ್ರಗತಿ: ಸಚಿವ ಜೋಶಿ



•**ಹೊಸದಿಲ್ಲಿ:** ಸರ್ಕಾರಿ ಕಟ್ಟಡಗಳ ಮೇಲೆ ಸೌರ ಮೇಲ್ಛಾವಣಿಅಳವಡಿಕೆಯಲ್ಲಿಶೇ.80ರಷ್ಟುಪ್ರಗತಿಸಾಧಿಸಲಾಗಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಹೊಸದಿಲ್ಲಿಯಲ್ಲಿ ಗುರುವಾರ ನಡೆದ ವಿವಿಧ ಸಚಿವಾಲಯ ಮತ್ತು ಸಂಸ್ಥೆಗಳ ಅಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಸಚಿವರು, ಸರ್ಕಾರಿ ಕಟ್ಟಡಗಳ ಸೌರ ಮೇಲ್ಛಾವಣಿಯಿಂದ 855 ಮೆಗಾವ್ಯಾಟ್ ಸೌರ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಸಾಧಿಸಲಾಗಿದೆ ಎಂದು ತಿಳಿಸಿದರು. ಸರ್ಕಾರಿ ಕಟ್ಟಡಗಳ ಮೇಲ್ಛಾವಣಿ ಸೌರಶಕ್ತಿ ಅಳವಡಿಕೆ ಪ್ರಗತಿ ಪರಿಶೀಲಿಸಿ, ಶೇ.80ರಷ್ಟು ಸೌರ ಅಳವಡಿಕೆ ಗುರಿ ಸಾಧಿಸಲಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

53,874ಸರ್ಕಾರಿಕಟ್ಟಡಗಳಲ್ಲಿಸೌರಮೇಲ್ಛಾವಣಿ: ಈವರೆಗೆ 53,874 ಸರ್ಕಾರಿ ಕಟ್ಟಡಗಳನ್ನು ಸೌರಶಕ್ತಿ ಚಾಲಿತಗೊಳಿಸಲಾಗಿದೆ. ಒಟ್ಟು 855 ಮೆಗಾವ್ಯಾಟ್ ಸಾಮರ್ಥ್ಯವಿದೆ. ಈ ಯೋಜನೆ ಅನುಷ್ಠಾನವನ್ನು ಮತ್ತಷ್ಟು ತ್ವರಿತಗೊಳಿಸಲು ಸಚಿವಾಲಯ ಮತ್ತು ಇಲಾಖೆ ನೋಡಲ್ ಅಧಿಕಾರಿಯನ್ನು ನೇಮಿಸುವಂತೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು.


ಸೌರಶಕ್ತಿಯಲ್ಲಿ ಪಾರದರ್ಶಕ ಮತ್ತು ಏಕೀಕೃತ ಮೌಲ್ಯಮಾಪನಕ್ಕಾಗಿ ಡೇಟಾವನ್ನು ಸಮನ್ವಯಗೊಳಿಸುವ ಅಗತ್ಯವಿದೆ. ಸಂಸ್ಥೆಗಳ ನಡುವೆ ನಿಕಟ ಸಮನ್ವಯತೆ ಸಾಧಿಸಿದ್ದು, ಎಲ್ಲಾ ಪಾಲುದಾರರು ಸೌರ ಅನುಷ್ಠಾನವನ್ನು ತ್ವರಿತಗೊಳಿಸುವಂತೆ ನಿರ್ದೇಶಿಸಲಾಗಿದೆ ಎಂದು ತಿಳಿಸಿದರು.

ಸೌರಶಕ್ತಿ ಉತ್ಪಾದನೆಯಲ್ಲಿ ಅಮೆರಿಕ ಹಿಂದಿಕ್ಕಿದ ಭಾರತ: ಜೋಶಿ ಪ್ರಶಂಸೆ

ಸೌರಶಕ್ತಿ ಉತ್ಪಾದನೆಯಲ್ಲಿ ಭಾರತ 2025ರಲ್ಲಿಯೇ ಅಮೇರಿಕಾವನ್ನು ಹಿಂದಿಕ್ಕಿ ವಿಶ್ವದಲ್ಲೇ ಎರಡನೇ ಸ್ಥಾನದಲ್ಲಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ದಿಲ್ಲಿಯಲ್ಲಿ ಮಾತನಾಡಿದ ಅವರು, ಮನೆ ಮೇಲ್ಛಾವಣಿ ಘಟಕ, ಕೃಷಿ ಪಂಪ್ ಸೌರೀಕರಣದಿಂದ ಹಿಡಿದು ಬೃಹತ್ ಸೌರ ಪಾರ್ಕ್ ಗಳ ಸ್ಥಾಪನೆವರೆಗೂ ಭಾರತ ಮುಂಚೂಣಿಯಲ್ಲಿದ್ದು, ವಿಶ್ವದ 2ನೇ ಅತಿ ದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದರು. 2025ರ ಸೌರಶಕ್ತಿ ಸಾಮರ್ಥ್ಯಗಳಲ್ಲಿ ಭಾರತ ಎರಡನೇ ಸ್ಥಾನದಲ್ಲಿದ್ದ ಅಮೆರಿಕವನ್ನು ಮೀರಿಸಿದ್ದು, ವಾರ್ಷಿಕ ಸೇರ್ಪಡೆಯಲ್ಲಿ ಸೌರ ಶಕ್ತಿ ಮಾರುಕಟ್ಟೆಯನ್ನು ವಿಸ್ತರಿಸಲಾಗಿದೆ. 2025ರಲ್ಲಿ ಭಾರತ 37 ಗಿಗಾ ವ್ಯಾಟ್‌ಗಿಂತ ಹೆಚ್ಚಿನ ಸೌರಶಕ್ತಿ ಸೇರ್ಪಡೆಯನ್ನು ದಾಖಲಿಸಿದ್ದು, ಇದು ಅಮೆರಿಕದ 34 ಗಿಗಾ ವ್ಯಾಟ್‌ಗಿಂತ ಅಧಿಕ ಸಾಮರ್ಥ್ಯವನ್ನು ದಾಖಲಿಸಿದೆ ಎಂದು ಜೋಶಿ ಹೇಳಿದ್ದಾರೆ.

ವಿದ್ಯುತ್ ಬೇಡಿಕೆಯ ಶೇ.51.5ರಷ್ಟು ನವೀಕರಿಸಬಹುದಾದ ಇಂಧನದಿಂದ ಪೂರೈಕೆ: ಜುಲೈ 2025ರಲ್ಲಿ ಭಾರತ ವಿದ್ಯುತ್ ಉತ್ಪಾದನೆಯಲ್ಲಿ ಇದುವರೆಗಿನ ಅತ್ಯಧಿಕ ನವೀಕರಿಸಬಹುದಾದ ಪಾಲನ್ನು ತಲುಪಿದೆ. ನವೀಕರಿಸಬಹುದಾದ ಇಂಧನ ಮೂಲಗಳು ದೇಶದ ಒಟ್ಟು ವಿದ್ಯುತ್ ಬೇಡಿಕೆಯ 203 ಗಿಗಾ ನಲ್ಲಿ ಶೇ.51.5ರಷ್ಟು ಪೂರೈಸುತ್ತಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಮಾಹಿತಿ ನೀಡಿದ್ದಾರೆ.

ರಾಮಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಹಿಂದೂ ಎಂಬುದು ರಾಷ್ಟ್ರೀಯತೆಯ ಹೆಸರೇ ಹೊರತು ಯಾವುದೇ ಜಾತಿ ಸೂಚಕವಲ್ಲ
– ಮಂಗಳೂರು ವಿಭಾಗ ಪ್ರಚಾರಕ್ ಸೂರಜ್
– ಗೊತ್ತಿದ್ದೂ ಗೊತ್ತಿಲ್ಲದಂತೆ ನಟಿಸುವ ಜಾತ್ಯಾತೀತ ಜಾತಿಯುವರಿಗೆ ಇದನ್ನು ಹೇಳಿ ಪ್ರಯೋಜನವಿಲ್ಲ. ನಿದ್ದೆ ಬಂದವರನ್ನು ಎಬ್ಬಿಸಬಹುದು, ನಿದ್ದೆ ಬಂದಂತೆ ನಟಿಸುವವರನ್ನು ಎಚ್ಚರಿಸಲು ಸಾಧ್ಯವಿಲ್ಲ!

ದಿನ ಭವಿಷ್ಯ

ಮೇಷ ಸಂಗಾತಿ ಜತೆ ಮುನಿಸು ನಿವಾರಿಸಿ. ಪರಸ್ಪರ ಅರಿತುಕೊಳ್ಳಿ. ಅಲ್ಲಿಗೆ ಎಲ್ಲ ಸಂಘರ್ಷ ಮುಕ್ತಾಯ. ವೃತ್ತಿಯ ಒತ್ತಡ ನಿವಾರಣೆ.

ವೃಷಭ ಎಲ್ಲೆಡೆ ನಿಯಮ ಪಾಲಿಸಿ. ಗ್ರಹಗತಿ ಪೂರಕವಾಗಿಲ್ಲದ ಕಾರಣ ಸಮಸ್ಯೆಗೆ ಸಿಲುಕುವಿರಿ. ಜಗಳ, ವಾಗ್ವಾದ ನಡೆದೀತು. ಧನವ್ಯಯ.

ಮಿಥುನ ಕ್ಲಿಷ್ಟಕರ ಪರಿಸ್ಥಿತಿ ಎದುರಿಸುವಿರಿ. ಸೂಕ್ತ ಯೋಜನೆಯೊಂದಿಗೆ ಹೆಜ್ಜೆಯಿಡಿ. ಇಲ್ಲವಾದರೆ ಬಿಕ್ಕಟ್ಟು ಹೆಚ್ಚಳ. ಅಧಿಕ ಖರ್ಚು ಚಿಂತೆಗೆ ಕಾರಣ.

ಕಟಕ ಕೆಲಸ ಪೂರೈಸಲು ಕಠಿಣ ಪರಿಶ್ರಮ ಅಗತ್ಯ. ಮನೆಯವರ ಭಾವನೆ ಅರಿತು ವ್ಯವಹರಿಸಿ. ನಿಮ್ಮದೇ ಅಭಿಪ್ರಾಯ ಹೇರಲು ಹೋಗದಿರಿ.

ಸಿಂಹ ಸಮಸ್ಯೆ ಉಂಟಾದರೆ ಸಂಗಾತಿಯನ್ನು ದೂರದಿರಿ. ವೃತ್ತಿಯ ಸವಾಲು ಭಾವಿಸಿದಷ್ಟು ಕಠಿಣವೆನಿಸದು. ಖರ್ಚು ನಿಯಂತ್ರಣ, ಸಮಾಧಾನ.

ಕನ್ಯಾ ವೃತ್ತಿಯಲ್ಲಿ ಬಿಕ್ಕಟ್ಟು, ಅದಕ್ಕೆ ಇತರರನ್ನು ದೂರಬೇಡಿ. ನಿಮ್ಮದೇ ಲೋಪ ಇರಬಹುದು. ಮನೆಯಲ್ಲಿ ಉದ್ವಿಗ್ನತೆ. ಸಮಾಧಾನದಿಂದ ವರ್ತಿಸಿ.

ತುಲಾ ಪರಸ್ಪರ ಗೌರವ ನೀಡುವುದರಿಂದ ಸಂಬಂಧ ಹಾಳಾಗದಂತೆ ನೋಡಿಕೊಳ್ಳಬಹುದು. ಎಲ್ಲರ ಜತೆ ವ್ಯವಹಾರದಲ್ಲಿ ಇದನ್ನು ನೆನಪಿಡಿ.

ವೃಶ್ಚಿಕ ಮನೆಯಲ್ಲಿ ಶಾಂತಿ, ಸಮಾಧಾನ. ಹೊಸ ಆರ್ಥಿಕ ಯೋಜನೆಗೆ ಈಗಲೇ ಕೈ ಹಾಕಬೇಡಿ. ಸ್ವಂತ ಉದ್ಯಮಿಗಳಿಗೆ ಉತ್ತಮ ವ್ಯವಹಾರ.

ಧನು ಎಲ್ಲರ ಮೇಲೆ ಅಸಹನೆ ಕಾರುವುದನ್ನು ನಿಲ್ಲಿಸಿ. ಸಮಸ್ಯೆ ಏನೆಂದು ಸರಿಯಾಗಿ ಪರಾಮರ್ಶಿಸಿ. ಸಂಗಾತಿ ಜತೆಗೆ ವಿನಯದ ವರ್ತನೆಯಿರಲಿ.

ಮಕರ ಹೊಟ್ಟೆ ಕೆಡುವ ಸಂಭವ. ಹಿತಮಿತ ಆಹಾರ ಸೇವಿಸಿ. ಹಣದ ವಿಷಯದಲ್ಲಿ ರಿಸ್ಕ್ ತೆಗೆದುಕೊಳ್ಳದಿರಿ. ಯೋಚಿಸಿ ವ್ಯಯಿಸಿ.

ಕುಂಭ ಬದಲಾವಣೆ ಜಗದ ನಿಯಮ. ಅದಕ್ಕೆ ಒಗ್ಗಿಕೊಳ್ಳಿ. ಕ್ಷುಲ್ಲಕ ಸಂಘರ್ಷದಲ್ಲಿ ತೊಡಗದಿರಿ. ಕೌಟುಂಬಿಕ ಒತ್ತಡ ನಿವಾರಣೆ.

ಮೀನ ಮನೆಯವರ ಕಾಳಜಿಯ ಪರಿಚಯ ನಿಮಗೆ ಆಗಲಿದೆ. ಸಂಗಾತಿ ಜತೆಗಿನ ಭಿನ್ನಮತ ಉದ್ವಿಗ್ನತೆ ಸೃಷ್ಟಿಸೀತು. ಸಹನೆಯಿಂದ ವರ್ತಿಸಿ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 4,0,5,1

ಆರ್‌ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗವತ್ ಅಭಿಪ್ರಾಯ

ವಿಶ್ವಕ್ಕೆ ಭಾರತದ ಚಿಂತನೆ ಪರಿಹಾರ

•**ನಾಗ್ಪುರ:** ವ್ಯಕ್ತಿಯ ಹಿತಾಸಕ್ತಿ, ಸಮಾಜದ ಕಲ್ಯಾಣ ಹಾಗೂ ಪರಿಸರ ಸಂರಕ್ಷಣೆಯ ನಡುವೆ ಸಮತೋಲನ ಸಾಧಿಸಿ ಸಮಗ್ರ ಅಭಿವೃದ್ಧಿ ಸಾಧಿಸುವ ಮಾರ್ಗಸೂಚಿ ತತ್ವವನ್ನು ವಿಶ್ವ ಇನ್ನೂ ಕಂಡುಕೊಂಡಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರು ಹೇಳಿದ್ದಾರೆ.

ನಾಗ್ಪುರ ದಲ್ಲಿ ನಡೆದ ಆರ್‌ಎಸ್‌ಎಸ್ ಸ್ವಯಂಸೇವಕರ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಮಾನವನ ದೇಹ, ಮನಸ್ಸು ಮತ್ತು ಬುದ್ಧಿಯ ಬೆಳವಣಿಗೆಯನ್ನು ಪ್ರತ್ಯೇಕವಾಗಿ ಅರ್ಥಮಾಡಿಕೊಂಡಿರುವ ಜಗತ್ತು, ಈ ಮೂರರ ಸಮಗ್ರ ಪ್ರಗತಿಗೆ ಬೇಕಾದ ಮಾರ್ಗವನ್ನು ಇನ್ನೂ ಕಂಡುಕೊಂಡಿಲ್ಲ ಎಂದು ಅಭಿಪ್ರಾಯಪಟ್ಟರು.

ಜಗತ್ತು ಗೊಂದಲದಲ್ಲಿದೆ: ಇಂದಿನ ಜಾಗತಿಕ ಪರಿಸ್ಥಿತಿಯನ್ನು ಉಲ್ಲೇಖಿಸಿದ ಭಾಗವತ್, ಒಂದು ದೇಶದಲ್ಲಿ ನಡೆಯುವ ಸಂಘರ್ಷದ ಪರಿಣಾಮಗಳು ವಿಶ್ವದಾದ್ಯಂತ ಕಂಡುಬರುತ್ತಿವೆ ಎಂದರು. ಇರಾನ್ ಮತ್ತು ಅಮೆರಿಕ ನಡುವಿನ ಸಂಘರ್ಷ ನಡೆಯುತ್ತಿದೆ. ಆದರೆ ಅದರ ಪರಿಣಾಮವಾಗಿ ಭಾರತದಲ್ಲಿ ತೈಲದ ಬೆಲೆ ಏರುತ್ತಿದೆ. ಜಗತ್ತು ಪರಸ್ಪರ ಅವಲಂಬಿತವಾಗಿದೆ ಎಂದು ಹೇಳಿದರು.



ಭಾರತದ ಕಾಲ ಬಂದಿದೆ: ಸುಖ, ಶಾಂತಿ ಮತ್ತು ಪರಿಸರ ಸಂರಕ್ಷಣೆಯನ್ನು ಒಂದೇ ಸಮಯದಲ್ಲಿ ಖಾತ್ರಿಪಡಿಸುವ ತತ್ವದ ಕೊರತೆ ವಿಶ್ವದಲ್ಲಿದೆ. ಭಾರತೀಯ ಪರಂಪರೆ ಮತ್ತು ಜ್ಞಾನ ವ್ಯವಸ್ಥೆಗಳಲ್ಲಿ ಇಂತಹ ಪರಿಹಾರಗಳ ಸುಳಿವುಗಳಿದ್ದರೂ ಅವುಗಳನ್ನು ಕಾರ್ಯರೂಪಕ್ಕೆ ತರುವುದು ಸವಾಲಿನ ಕೆಲಸವಾಗಿದೆ ಎಂದು ಭಾಗವತ್ ಅಭಿಪ್ರಾಯಪಟ್ಟರು. ವಿಶ್ವವು ಸಂಘರ್ಷ ಮತ್ತು ಸ್ವಾರ್ಥಾಧಾರಿತ ಅಭಿವೃದ್ಧಿ ಮಾದರಿಗಳಿಗೆ ಪರ್ಯಾಯವನ್ನು ಹುಡುಕುತ್ತಿರುವ ಈ ಸಂದರ್ಭದಲ್ಲಿ ಭಾರತದ ಕಾಲ ಬಂದಿದೆ ಎಂದು ಹೇಳಿದರು.

ಸಂಘದ ಶಕ್ತಿ ಸೇವಾ ಮನೋಭಾವ

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕೈಗಾರಿಕೋದ್ಯಮಿ ಕುಮಾರ ಮಂಗಲಂ ಬಿರ್ಲಾ ಅವರು, ಆರ್‌ಎಸ್‌ಎಸ್ ನೂರು ವರ್ಷಗಳಿಂದ ಸಮಾಜ ಮತ್ತು ರಾಷ್ಟ್ರದ ಹಿತಕ್ಕಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಶ್ಲಾಘಿಸಿದರು. ಸವಾಲಿನ ಸಂದರ್ಭಗಳಲ್ಲಿಯೂ ಸಂಘವು ಸಮಾಜ ಮತ್ತು ರಾಷ್ಟ್ರದ ಜೊತೆ ದೃಢವಾಗಿ ನಿಂತಿದೆ. ಸೇವೆಯು ಉದ್ದೇಶಪೂರ್ವಕವಾಗಿ ಬೆಳೆಯಬೇಕು ಮತ್ತು ರಾಷ್ಟ್ರ ನಿರ್ಮಾಣ ಹಾಗೂ ವ್ಯಕ್ತಿತ್ವ ನಿರ್ಮಾಣವು ಜೀವಮಾನದ ಬದ್ಧತೆಯಾಗಿರಬೇಕು ಎಂಬ ನಂಬಿಕೆಯೇ ಸಂಘದ ಶಾಶ್ವತ ಶಕ್ತಿ ಎಂದು ಹೇಳಿದರು.

ಪಾರದರ್ಶಕ ಆಡಳಿತ

ಪುಟ ೧➔**ಮತದಾರರ ಹಕ್ಕು ಕಾಪಾಡಲು ಸೂಚನೆ:** ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕುರಿತು ಮಾತನಾಡಿದ ಸಿಎಂ, ಯಾರೂ ಮತದಾನದ ಹಕ್ಕು ಕಳೆದುಕೊಳ್ಳದಂತೆ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಅಗತ್ಯವಿರುವ ವಸತಿ ಪ್ರಮಾಣಪತ್ರ ಸೇರಿದಂತೆ ದಾಖಲೆಗಳನ್ನು ಪಡೆಯಲು ಸ್ಥಳೀಯ ಸಂಸ್ಥೆಗಳು ಜನರಿಗೆ ನೆರವಾಗಬೇಕು ಎಂದರು.

ಸಿಎಸ್‌ಆರ್ ನಿಧಿ ಬಳಕೆಗೆ ಕಟ್ಟುನಿಟ್ಟಿನ ನಿಗಾ: ರಾಜ್ಯದಲ್ಲಿ ವಾರ್ಷಿಕವಾಗಿ ಸುಮಾರು 8,000 ಕೋಟಿ ರೂ. ಸಿಎಸ್‌ಆರ್ ನಿಧಿ ಖರ್ಚಾಗಬೇಕಿದೆ. ಈ ಹಣವನ್ನು ಸರಿಯಾಗಿ ಬಳಸಲಾಗುತ್ತಿದೆಯೇ ಎಂಬುದನ್ನು ಜಿಲ್ಲಾಡಳಿತ ಪರಿಶೀಲಿಸಬೇಕು ಎಂದು ಸಿಎಂ ಹೇಳಿದರು. ಇತ್ತೀಚೆಗೆ ಸಚಿವ ಸಂಪುಟ ಹೊಸ ಸಿಎಸ್‌ಆರ್ ನೀತಿಗೆ ಅನುಮೋದನೆ ನೀಡಿದ್ದು, ಶೀಘ್ರದಲ್ಲೇ ಮಾರ್ಗಸೂಚಿಗಳನ್ನು ಪ್ರಕಟಿಸಲಾಗುವುದು. ಸರ್ಕಾರಿ ಶಾಲೆಗಳ ಅಭಿವೃದ್ಧಿ ಮತ್ತು ಶಿಕ್ಷಣ ಮೂಲಸೌಕರ್ಯ ಸುಧಾರಣೆಗೆ ಕಂಪನಿಗಳ ನೆರವು ಪಡೆಯುವ ಉದ್ದೇಶವಿದೆ ಎಂದು ಅವರು ಹೇಳಿದರು. ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ್, ಸಚಿವ ರಾಮಲಿಂಗಾರೆಡ್ಡಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಾಗೂ ಡಿಜಿಪಿ ಎಂ.ಎ. ಸಲೀಂ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

56 ಸಾವಿರ ಹುದ್ದೆ ಭರ್ತಿಗೆ ಸಮಯ ನಿಗದಿ

ಪುಟ ೧➔ಖಾಸಗಿ ಉದ್ಯೋಗ ವಿನಿಮಯ ಕೇಂದ್ರವನ್ನೂ ಸ್ಥಾಪಿಸಲಾಗುವುದು. ಎಲ್ಲಾ ಖಾಸಗಿ, ಉದ್ಯೋಗದಾತರು ಮತ್ತು ಉದ್ಯೋಗಿಗಳಿಗೆ ಅನುಕೂಲವಾಗುವಂತೆ, ಯುವಕರಿಗೆ ಕೆಲಸ ಸಿಗುವಂತೆ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ಗ್ಯಾರಂಟಿ ಪರಿಷ್ಕರಣೆ ಇಲ್ಲ: ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಮಾಡುತ್ತಿಲ್ಲ. ಫಲಾನುಭವಿಗಳ ಮೊಬೈಲ್ ಸಂಖ್ಯೆ, ವಿವರಗಳಲ್ಲಿ ವ್ಯತ್ಯಾಸವಿದೆ. ಗೃಹಜ್ಯೋತಿ ಯೋಜನೆಯಲ್ಲಿ ಮನೆಗೆ 200ಯೂನಿಟ್ ವಿದ್ಯುತ್ ಉಚಿತ ಎಂದು ಪಡೆದು, ಅದನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಈ ಯೋಜನೆಯಲ್ಲಿ 1.64 ಕೋಟಿ ಫಲಾನುಭವಿಗಳಿದ್ದು, ಯಾರು ಅರ್ಹರಿದ್ದಾರೋ ಅವರು ಉಚಿತ ವಿದ್ಯುತ್ ಪಡೆದರೆ ನಮ್ಮ ಅಭ್ಯಂತರವಿಲ್ಲ. ಇವರಲ್ಲಿ ನಮ್ಮ ರಾಜ್ಯದವರು ಇದ್ದಾರೋ, ಬೇರೆ ರಾಜ್ಯದವರು ಇದ್ದಾರೋ ಎಂಬ ಮಾಹಿತಿ ಸರ್ಕಾರಕ್ಕೆ ಇರಬೇಕಲ್ಲವೇ, ಆ ಮಾಹಿತಿ ಪಡೆಯುತ್ತಿದ್ದೇವೆ. ಮೃತರ ಹೆಸರಿನಲ್ಲಿ ಗೃಹಲಕ್ಷ್ಮೀ ಹಣ ಪಡೆಯಲಾಗಿದೆ. ಇದರಿಂದ 120 ಕೋಟಿ ವ್ಯತ್ಯಾಸವಾಗಿದೆ. ಇದಕ್ಕೆ ನಿಖರ ಮಾಹಿತಿ ಇರಬೇಕಲ್ಲವೇ ಎಂದರು.

> ಖಾತೆ ಹಂಚಿಕೆಯ ಬಗ್ಗೆ ನನ್ನ ಬಳಿ ಬಂದು ಯಾರು ಚರ್ಚೆ ಮಾಡಿಲ್ಲ. ಖಾತೆ ಹಂಚಿಕೆ ವಿಚಾರವಾಗಿ ಪಕ್ಷ ತೀರ್ಮಾನ ಮಾಡಲಿದೆ. ಪಕ್ಷ ನನ್ನನ್ನು ಮುಖ್ಯಮಂತ್ರಿ ಮಾಡಿದೆ. ನಾನು ಯಾವ ಕೆಲಸ ಮಾಡಬೇಕು ಎಂದು ಹೇಳಿದೆ. ನಾನು ಆ ಕೆಲಸ ಮಾಡುತ್ತೇನೆ. ಪಕ್ಷ ಯಾರಿಗೆ ಯಾವ ಕೆಲಸ ಹೇಳಿದೆಯೋ ಆ ಕೆಲಸ ಮಾಡುತ್ತಾರೆ.
> ■ ಡಿ.ಕೆ. ಶಿವಕುಮಾರ್, ಸಿಎಂ

ಸಿಎಂ ಬಳಿಯೇ ಹಣಕಾಸು ಇಲಾಖೆ

ಪುಟ ೧➔ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರಿಗೆ ಕಂದಾಯ ಹಾಗೂ ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆ ನೀಡಲಾಗಿದ್ದು, ಪ್ರಿಯಾಂಕ್ ಖರ್ಗೆ ಅವರಿಗೆ ಗೃಹ ಇಲಾಖೆಯ ಜತೆಗೆ ಈ ಹಿಂದೆ ನಿರ್ವಹಿಸುತ್ತಿದ್ದ ಐಟಿ-ಬಿಟಿ ಇಲಾಖೆ ನೀಡಲಾಗಿದೆ. ಕೆ.ಜೆ.ಜಾರ್ಜ್‌ಗೆ ಇಂಧನ ಇಲಾಖೆ ಜತೆಗೆ ಪ್ರವಾಸೋದ್ಯಮ ಇಲಾಖೆ, ಕೃಷ್ಣ ಬೈರೇಗೌಡಗೆ ಬೆಂಗಳೂರು ನಗರಾಭಿವೃದ್ಧಿ(ಜಿಬಿಎ), ಈಶ್ವರ ಖಂಡ್ರೆಗೆ ಗ್ರಾಮೀಣಾಭಿವೃದ್ಧಿ, ಯು.ಟಿ. ಖಾದರ್‌ಗೆ ಆರೋಗ್ಯ ಇಲಾಖೆ ನೀಡಲಾಗಿದ್ದು, ಉಳಿದ ಸಚಿವರಿಗೆ ಈ ಹಿಂದೆ ನಿರ್ವಹಿಸಿದ ಖಾತೆಗಳನ್ನು ವಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ರಾಜ್ಯಪಾಲರು ಅಂಕಿತದ ನಂತರಯಾರಿಗೆ ಯಾವ ಖಾತೆ ಸಿಗಲಿದೆ ಎಂದು ಸ್ಪಷ್ಟನೆ ಸಿಗಲಿದೆ.

ರಾಜ್ಯಸಭೆಗೆ ಕೈ ಅಭ್ಯರ್ಥಿ ಪ್ರಕಟ

ಪುಟ ೧➔ಕಾಂಗ್ರೆಸ್ ಶಾಸಕರ ಸಂಖ್ಯಾಬಲದ ಮೇಲೆ ಮೂವರನ್ನು ರಾಜ್ಯಸಭೆಗೆ ಕಳುಹಿಸಬಹುದಾಗಿದ್ದು, ಮೂರು ಸ್ಥಾನಗಳ ಪೈಕಿ ಎರಡು ರಾಜ್ಯದವರಿಗೆ ಸಿಕ್ಕರೆ, ಒಂದು ಸ್ಥಾನ ದಿಲ್ಲಿಯ ಪವನ್ ಖೇರಾಗೆ ಕಾಂಗ್ರೆಸ್ ಹೈಕಮಾಂಡ್ ನೀಡಿದೆ. ಕಳೆದ ಬಾರಿ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ಸೆಂಟ್ರಲ್ ಕ್ಷೇತ್ರದಿಂದ ಪರಾಭವಗೊಂಡಿದ್ದ ಮನ್ಸೂರ್ ಅಲಿ ಖಾನ್‌ಗೆ ರಾಜ್ಯಸಭೆಗೆ ಅವಕಾಶ ನೀಡಲಾಗಿದೆ.

ಪರಿಷತ್‌ಗೆ 5ನೇ ಅಭ್ಯರ್ಥಿ ಕಣಕ್ಕೆ: ಸಿಎಂ ಘೋಷಣೆ

ಶುಕ್ರವಾರ(ಜೂ.5)ರಂದು ವಿಧಾನ ಪರಿಷತ್ ಚುನಾವಣೆಗೆ ನಮ್ಮ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲಿದ್ದು, ನಾವು ಐವರು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುತ್ತಿದ್ದು, ಈಗಾಗಲೇ ನಾಲ್ವರು ಅಭ್ಯರ್ಥಿಗಳನ್ನು ಘೋಷಿಸಿದ್ದು, ಐದನೇ ಅಭ್ಯರ್ಥಿ ನಾಳೆ ಪ್ರಕಟಿಸಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಗುರುವಾರ ವಿಧಾನಸೌಧದ ಆವರಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸುತ್ತಿದ್ದಾರೆ. ಈ ನಾಮಪತ್ರ ಸಲ್ಲಿಕೆ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ಅವರು ಆಗಮಿಸುತ್ತಿದ್ದಾರೆ. ನಾಳೆ ಖರ್ಗೆ ಅವರ ನಾಮಪತ್ರ ಸಲ್ಲಿಕೆ ನಂತರ ಇತರೆ ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಹೊರ ರಾಜ್ಯದವರಿಗಿಲ್ಲ ಉಚಿತ ಬಸ್ ಪಾಸ್

ನಾವು ನಮ್ಮ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುತ್ತಿದ್ದು, ಹೊರಗಿನವರಿಗೆ ಹೇಗೆ ಉಚಿತ ಬಸ್ ಪಾಸ್ ನೀಡಲು ಸಾಧ್ಯ? ನಮ್ಮ ಯೋಜನೆಗಳು ಕೇವಲ ಕನ್ನಡಿಗರಿಗೆ ಮಾತ್ರ. ಬೇರೆ ರಾಜ್ಯದವರಿಗೆ ನೀಡಲು ಆಗುವುದಿಲ್ಲ. ನೀವು ಕೇವಲ ಮಹಿಳೆಯರಿಗೆ ಮಾತ್ರ ಉಚಿತ ಬಸ್ ಪ್ರಯಾಣ ಕಲ್ಪಿಸಿದ್ದೀರಿ ಎಂದು ಬಾಲಕ ವಿದ್ಯಾರ್ಥಿಗಳು ಪ್ರಶ್ನೆ ಮಾಡುತ್ತಿದ್ದರು. ಈಗ ಒಂದನೇ ತರಗತಿಯಿಂದ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಉಚಿತ ಪಾಸ್ ನೀಡಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಪಕ್ಷಕ್ಕೆ ಬಲ ತುಂಬುವವರು ನನ್ನ ಜತೆ ಬನ್ನಿ

ಪುಟ ೧➔ಅಧಿಕಾರ ಬೇಕಿರುವವರು ಶಿವಕುಮಾರ್ ಜತೆಗೆ ಹೋಗಿ ಎಂಬ ತಮ್ಮ ಹೇಳಿಕೆಯ ಬಗ್ಗೆ ಸ್ಪಷ್ಟನೆ ನೀಡಿದ ಅವರು, ಕೆಲವರು ಅಧಿಕಾರ ಕೊಡಿಸುವಂತೆ ನನಗೆ ಅರ್ಜಿ ಕೊಟ್ಟಿದ್ದಾರೆ. ಅಧಿಕಾರ ಕೊಡುವುದು ನನ್ನ ಕೆಲಸವಲ್ಲ, ನಮ್ಮದು ಪಕ್ಷದ ಕೆಲಸವಷ್ಟೇ, ಬೇರೇನೂ ಇಲ್ಲ. ಹೀಗಾಗಿ, ಅಧಿಕಾರ ಬೇಕಾದವರು ಶಿವಕುಮಾರ್ ಬಳಿಗೆ ಹೋಗಿ ಅಂದಿದ್ದೇನೆ ಎಂದರು.

ನಮ್ಮ ಹಿರಿಯರ ಆದರ್ಶ ಪಾಲಿಸಿಕೊಂಡು ಜವಾಬ್ದಾರಿ ನಿರ್ವಹಿಸುತ್ತೇನೆ. ಈ ದೇಶ ಕವಲು ದಾರಿಯಲ್ಲಿದೆ. ನಾನು ಹಿಂದುಳಿದ ವರ್ಗದವನೊ, ಮುಂದುವರಿದ ವರ್ಗಕ್ಕೆ ಸೇರಿದವನೊ ಎನ್ನವುದು ಮುಖ್ಯವಲ್ಲ. ನಾನು ಮುಂದುವರಿದವರಿಗಿಂತ ಮುಂದುವರಿದವನು. 2028ಕ್ಕೆ ನಾನು ಮುಖ್ಯಮಂತ್ರಿ ಅಭ್ಯರ್ಥಿ ಎನ್ನುವುದು ವಾಟ್ಸ್ಆ್ಯಪ್ ವಿಶ್ವವಿದ್ಯಾಲಯದ ಅಪಪ್ರಚಾರ. ನನಗೆ ಪಕ್ಷ ಕಟ್ಟುವ ಜವಾಬ್ದಾರಿ ಇದೆ ಎಂದರು.

ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್), ಪೌರತ್ವ(ತಿದ್ದುಪಡಿ) ಕಾಯ್ದೆ(ಸಿಎಎ) ವಿರುದ್ಧ ಹೋರಾಡುವ ಹೊಣೆ ಇದೆ. ಅಧಿಕಾರ ನನಗೆ ಮುಖ್ಯ ಅಲ್ಲ, ನಾವು ಬೀದಿಗಿಳಿದು ಹೋರಾಟ ಮಾಡಬೇಕು. ಗುಜರಾತ್ ಮಾದರಿ ನಮಗೆ ಬೇಕಿಲ್ಲ, ಕರ್ನಾಟಕ ಮಾದರಿ ಬಗ್ಗೆ ಹೆಮ್ಮೆ ಇದೆ. ಇದರಲ್ಲಿ ಯಾವುದೇ ಬಣ್ಣ ಇಲ್ಲ. ಸರ್ಕಾರ ಮತ್ತು ಪಕ್ಷದಲ್ಲಿ ಸಮನ್ವಯತೆಯಿಂದ ಕೆಲಸ ಮಾಡಿಕೊಂಡು ಹೋಗುತ್ತೇವೆ ಎಂದು ಹರಿಪ್ರಸಾದ್ ತಿಳಿಸಿದರು.

> ಸೋನಿಯಾ ಗಾಂಧಿ ಅವರ ಆಶೀರ್ವಾದ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆಯವರು, ವರಿಷ್ಠ ನಾಯಕರು ನನ್ನನ್ನು ಆಯ್ಕೆ ಮಾಡಿದ್ದಾರೆ. ವಿದ್ಯಾರ್ಥಿ ದೆಸೆಯಿಂದ ಪಕ್ಷದಲ್ಲಿ ತೊಡಗಿಸಿಕೊಂಡಿದ್ದೇನೆ. ಅಧಿಕಾರಕ್ಕೆ ಇರುವವನಲ್ಲ, ನಾನು ಕಾಂಗ್ರೆಸ್ ಸಿಪಾಯಿ.
> ■ ಬಿ.ಕೆ.ಹರಿಪ್ರಸಾದ್, ಕೆಪಿಸಿಸಿ ನೂತನ ಅಧ್ಯಕ್ಷ



ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕುಮಾರಪಾರ್ಕ್‌ನ ಸರ್ಕಾರಿ ಅತಿಥಿ ಗೃಹದಲ್ಲಿ ಗುರುವಾರ ಭೇಟಿ ಮಾಡಿ ಅಭಿನಂದಿಸಿದರು.

ಮಹಿಳಾ ಆರ್ಥಿಕ ಸಬಲೀಕರಣ ಗುರಿ

ಪುಟ ೧➔ಜಿಲ್ಲೆಯಲ್ಲಿ ಪ್ರತಿವರ್ಷ 22 ಸಾವಿರ ಮೆಟ್ರಿಕ್ ಟನ್ ಶೇಂಗಾ ಉತ್ಪಾದನೆ ಮಾಡಲಾಗುತ್ತಿದೆ. ಇಲ್ಲಿ ಬೆಳೆಯಲಾಗುವ ಶೇಂಗಾವನ್ನು ರಾಷ್ಟ್ರ ಮಟ್ಟದಲ್ಲಿ ಬ್ರ್ಯಾಂಡ್ ಮಾಡಲು ಅಮೇಜಾನ್, ಫ್ಲಿಪ್‌ಕಾರ್ಟ್‌ನಂಥ ಡಿಜಿಟಲ್ ಪ್ಲಾಟ್‌ಫಾರ್ಮ್ ರಚಿಸಲು ನಾವು ಪ್ರಯತ್ನಿಸುತ್ತೇವೆ. ಅದರಂತೆ ಸ್ಥಳೀಯರ ಸಹಕಾರ ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.

ಯಾದಗಿರಿಯಲ್ಲಿ ಗಣನೀಯ ಪ್ರಮಾಣದಲ್ಲಿ ಕಡಲೆಕಾಯಿ ಕೃಷಿ ಮತ್ತು ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದೊಂದಿಗೆ ಅನುಕೂಲಕರ ಸಂಪರ್ಕ ಇರುವುದರಿಂದ ಈ ಉಪಕ್ರಮಕ್ಕೆ ಯಾದಗಿರಿಯನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸೌಲಭ್ಯವು ವಾರ್ಷಿಕ 648 ಮೆಟ್ರಿಕ್ ಟನ್ ಸಂಸ್ಕರಣಾ ಸಾಮರ್ಥ್ಯವನ್ನು ಹೊಂದಿದೆ ಮತ್ತು ಸ್ವಚ್ಛಗೊಳಿಸಿದ ಕಡಲೆಕಾಯಿ, ಹುರಿದ ಮತ್ತು ಉಪ್ಪುಸಹಿತ ಕಡಲೆಕಾಯಿ, ಕಡಲೆಕಾಯಿ ಬೆಣ್ಣೆ, ಕಡಲೆಕಾಯಿ ಎಣ್ಣೆ ಮತ್ತು ಎಣ್ಣೆ ತೆಗೆದ ಕೇಕ್ ಸೇರಿದಂತೆ ಹಲವಾರು ಉತ್ಪನ್ನಗಳನ್ನು ತಯಾರಿಸಲು ಸಜ್ಜಾಗಿದೆ.

ಕಚ್ಚಾ ವಸ್ತುಗಳ ಖರೀದಿಯನ್ನು ಎಪಿಎಂಸಿಗಳ ಮೂಲಕ ಮತ್ತು ರೈತರಿಂದ ನೇರ ಮೂಲದಿಂದ, ವಿಶೇಷವಾಗಿ ಖಾರಿಫ್ ಋತುವಿನಲ್ಲಿ ಕೈಗೊಳ್ಳಲಾಗುತ್ತದೆ. ಕೃಷಿ ಸಂಸ್ಕರಣಾ ವಲಯದಲ್ಲಿ ಮಹಿಳಾ ನೇತೃತ್ವದ ಉದ್ಯಮ ಅಭಿವೃದ್ಧಿಯ ಬಲವಾದ ಉದಾಹರಣೆಯಾಗಿಯೂ ಈ ಯೋಜನೆಯು ಎದ್ದು ಕಾಣುತ್ತದೆ ಎಂದರು. ಕೇಂದ್ರ ಹಣಕಾಸು ಇಲಾಖೆ ಕಾರ್ಯದರ್ಶಿ ಸಂಜಯ್ ಲೋಹಿಯಾ, ನಬಾರ್ಡ್ ಚೇರ್ಮನ್ ಡಾ.ಶಾಜಿ ಕೃಷ್ಣನ್, ಶಾಸಕ ಶರಣಗೌಡ ಕಂದಕೂರ, ಎಂಎಲ್ಸಿ ಬಿ.ಜಿ.ಪಾಟೀಲ, ಜಿಲ್ಲಾಧಿಕಾರಿ ರಾಹುಲ್ ಪಂಡ್ವೆ, ಜಿಪಂ ಸಿಇಒ ಲವೀಶ್ ಒರಡಿಯಾ ಇದ್ದರು.

ಇಂಧನ ಪಾಲುದಾರಿಕೆಗೆ ಮತ್ತಷ್ಟು ಬಲ

ಪುಟ ೧➔**ಇಂಧನ ಭದ್ರತೆಗೆ ಭಾರತದ ಆದ್ಯತೆ:** ಪ್ರಸ್ತುತ ಪಶ್ಚಿಮ ಏಷ್ಯಾ ಸಂಘರ್ಷ ಹಾಗೂ ಜಾಗತಿಕ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ, ಕೇಂದ್ರದ ನರೇಂದ್ರ ಮೋದಿ ಸರ್ಕಾರವು ತನ್ನ ಕಚ್ಚಾತೈಲ ಆಮದನ್ನು ವೈವಿಧ್ಯಗೊಳಿಸಲು ವಿಶೇಷ ಗಮನ ಹರಿಸಿದ್ದು, ಹೆಜ್ಜೆ ಇಟ್ಟಿದೆ. ಈ ನಿಟ್ಟಿನಲ್ಲಿ ಇಂಧನ ವಲಯದ ಸಹಕಾರವೇ

ಈ ಸಭೆಯ ಪ್ರಮುಖ ಜಾಗತಿಕ ಆದ್ಯತೆಯಾಗಿತ್ತು. ಏಪ್ರಿಲ್‌ನಿಂದಲೇ ಈ ದಕ್ಷಿಣ ಅಮೆರಿಕನ್ ದೇಶದಿಂದ ಭಾರತವು ದೊಡ್ಡ ಪ್ರಮಾಣದಲ್ಲಿ ತೈಲ ಖರೀದಿ ಆರಂಭಿಸಿದ್ದು, ಇಷ್ಟರಲ್ಲೇ ವೆನಿಜುವೆಲಾವು ಭಾರತಕ್ಕೆ 3ನೇ ಅತಿದೊಡ್ಡ ತೈಲ ಪೂರೈಕೆದಾರನಾಗಿ ಹೊರಹೊಮ್ಮಿದೆ. ಕೇವಲ ತೈಲ ಮತ್ತು ಅನಿಲ ಕ್ಷೇತ್ರ ಮಾತ್ರವಲ್ಲದೆ, ಆರೋಗ್ಯ, ಫಾರ್ಮಾಸ್ಯುಟಿಕಲ್ಸ್ (ಔಷಧ ವಲಯ), ಸಾರಿಗೆ ಹಾಗೂ ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿಯೂ ಪರಸ್ಪರ ಸಹಭಾಗಿತ್ವವನ್ನು ವಿಸ್ತರಿಸಲು ಉಭಯ ನಾಯಕರು ಸಮ್ಮತಿ ಸೂಚಿಸಿದರು.

ರೊಡ್ರಿಗಸ್ ಭಾರತ ಪ್ರವಾಸ: ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರು ಪ್ರಸ್ತುತ ಭಾರತಕ್ಕೆ 5 ದಿನಗಳ ಅಧಿಕೃತ ಪ್ರವಾಸ ಕೈಗೊಂಡಿ ದ್ದಾರೆ. ಅವರೊಂದಿಗೆ ವೆನೆಜುವೆಲಾದ ವಿದೇಶಾಂಗ, ಆರ್ಥಿಕತೆ, ತಂತ್ರಜ್ಞಾನ ಸಚಿವರನ್ನೊಳಗೊಂಡ ಉನ್ನತ ಮಟ್ಟದ ಪ್ರಮುಖ ನಿಯೋಗವೂ ಆಗಮಿಸಿದೆ. ಭಾರತ ಮತ್ತು ವೆನೆಜುವೆಲಾ ನಡುವಿನ ದ್ವಿಪಕ್ಷೀಯ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧವನ್ನು ಮುಂದಿನ ದಿನಗಳಲ್ಲಿ ಶರವೇಗದಲ್ಲಿ ಬೆಳವಣಿಗೆಯತ್ತ ಕೊಂಡೊಯ್ಯಲು ಈ ಸಭೆಯು ಒಂದು ಪ್ರಮುಖ ಮೈಲಿಗಲ್ಲಾಗಲಿದೆ ಎಂದು ವಿದೇಶಾಂಗ ಸಚಿವಾಲಯ ವಿಶ್ವಾಸ ವ್ಯಕ್ತಪಡಿಸಿದೆ.

ವಿವಿಧ ಕ್ಷೇತ್ರಗಳಲ್ಲಿ ಹೊಸ ಸಹಕಾರ

ಪುಟ ೧➔ದ್ವಿಪಕ್ಷೀಯ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗೆಗೂ ಚರ್ಚೆಗಳು ನಡೆದವು. ಗ್ಲೋಬಲ್ ಸೌತ್ ಹಿತಾಸಕ್ತಿಯನ್ನು ಮುಂದುವರಿಸುವ ಮತ್ತು ದ್ವಿಪಕ್ಷೀಯ ಪಾಲುದಾರಿಕೆಯನ್ನು ಇನ್ನಷ್ಟು ಗಾಢಗೊಳಿಸಲು ಒತ್ತು ನೀಡಲಾಯಿತು ಎಂದರು.

ಸಾಲದ ಸುಳಿಯಲ್ಲಿ ಕೇರಳ

ಪುಟ ೧➔ಈ ವರದಿಯಲ್ಲಿ ಕೇರಳ ಮತ್ತು ಅದರ ಸಮಾನ ನೆಲೆಯ ಇತರ 18 ರಾಜ್ಯಗಳೊಂದಿಗೆ ತುಲನೆ ಮಾಡಿ ಆರ್ಥಿಕ ಸ್ಥಿತಿಗತಿಯನ್ನು ವಿವರಿಸಲಾಗಿದೆ. ದಶಕದಿಂದ ಕೇರಳ ತನ್ನ ತೆರಿಗೆ ನೆಲೆಗಳಲ್ಲಿ ಸ್ವರೂಪಾತ್ಮಕ ಸವೆತ ಕಾಣುತ್ತಿದೆ. ಈ ಕಾರಣದಿಂದಾಗಿ ರಾಜ್ಯವು ಸಾಲಗಳ ಮೇಲೆಯೇ ಹೆಚ್ಚು ಹೆಚ್ಚು ಅವಲಂಬಿತವಾಗುವಂತೆ ಮಾಡಿದೆ. ಮಾತ್ರವಲ್ಲದೆ ಜಿಎಸ್‌ಟಿ ಪರಿಹಾರ, ಆದಾಯ ಕೊರತೆ ಅನುದಾನಗಳಂತಹ ಕೇಂದ್ರೀಯ ಬೆಂಬಲದ ಕಾರ್ಯವಿಧಾನಗಳನ್ನು ಹಿಂಪಡೆಯುವಂತೆ ಮಾಡುವ ಸಾಧ್ಯತೆಯನ್ನು ಹೆಚ್ಚಿಸಿದೆ ಎಂದೂ ಎಚ್ಚರಿಸಿದೆ. ಈ ಹಿಂದಿನ ಪಿಣರಾಯಿ ವಿಜಯನ್ ನೇತೃತ್ವದ ಎಡರಂಗ ಸರ್ಕಾರವು ತನ್ನ ಆಡಳಿತದಲ್ಲಿ ಕೇರಳ ಭಾರೀ ಪ್ರಗತಿ ಹೊಂದಿದೆ ಎಂದು ಹೇಳಿಕೊಂಡಿತ್ತು. ಅಲ್ಲದೆ ಕೇಂದ್ರವು ರಾಜ್ಯಕ್ಕೆ ನೀಡಬೇಕಾದ ಪಾಲನ್ನು ನೀಡದೆ ತಾರತಮ್ಯ ಮಾಡುತ್ತಿದೆ ಎಂದು ರಾಜಕೀಯ ನೆಲೆಯಲ್ಲಿ ಆರೋಪಿಸಿ ಕೇಂದ್ರದೊಂದಿಗೆ ಸಂಘರ್ಷಕ್ಕಿಳಿಯುವ ಮೂಲಕ ತನ್ನ ತಪ್ಪು ಆರ್ಥಿಕ ನೀತಿಯ ವೈಫಲ್ಯಗಳನ್ನು ಮರೆಮಾಚಲು ಯತ್ನಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕೇರಳದ ಹಣಕಾಸು ಸ್ಥಿತಿ ದುರ್ಬಲವಾಗಿದೆ. ಒಟ್ಟು ರಾಜ್ಯ ಆಂತರಿಕ ಉತ್ಪನ್ನ(ಜಿಎಸ್‌ಡಿಪಿ)ನೆಲೆಯಲ್ಲಿಆದಾಯಸಂಗ್ರಹದಲ್ಲಿಕುಸಿತವಾಗುತ್ತಾ ಬಂದಿದೆ. 2015-16ರಲ್ಲಿ ಕೇರಳದ ಆದಾಯವು ಜಿಎಸ್‌ಡಿಪಿಯ ಶೇ.12.28ರಷ್ಟಿತ್ತು. ಆದರೆ 2025-26ರಲ್ಲಿ ಇದು ಶೇ.10.68ಕ್ಕೆ ಇಳಿಕೆಯಾಗಿರುವುದನ್ನು ಶ್ವೇತಪತ್ರದಲ್ಲಿ ಎತ್ತಿತೋರಲಾಗಿದೆ. ಆದರೆ ಇದೇ ವೇಳೆ ಇತರ ರಾಜ್ಯಗಳಲ್ಲಿನ ಪರಿಸ್ಥಿತಿ ತದ್ವಿರುದ್ಧವಾಗಿದೆ. ಇದೇ ಅವಧಿಯಲ್ಲಿ ಇತರ 18 ಪ್ರಮುಖ ರಾಜ್ಯಗಳಲ್ಲಿನ ಸರಾಸರಿ ಆದಾಯ ಸಂಗ್ರಹವು ಜಿಎಸ್‌ಡಿಪಿಯ ಶೇ.13.46ರಿಂದ ಶೇ.13.90ಕ್ಕೇರಿದೆ ಎಂದು ಅದು ಬೊಟ್ಟು ಮಾಡಿದೆ. 2015-16ರಲ್ಲಿ ಕೇರಳದ ಸ್ವಂತ ಆದಾಯವು ಜಿಎಸ್‌ಡಿಪಿಯ ಶೇ.8.44ರಷ್ಟಿದ್ದು, ಇದು ಇತರ ಪ್ರಮುಖ ರಾಜ್ಯ(ಶೇ.7.48)ಗಳಿಗಿಂತ ಹೆಚ್ಚಿತ್ತು. ಇದೀಗ 2025-26ರಲ್ಲಿ ಇದು ಶೇ.7.75ಕ್ಕೆ ಇಳಿಕೆಯಾಗಿದೆ. ಇದೇ ವೇಳೆ ಇತರ ಪ್ರಮುಖ ರಾಜ್ಯಗಳ ಆದಾಯವು ಶೇ.8.19ಕ್ಕೇರಿದೆ. ಹಾಗೆಯೇ ರಾಜ್ಯದ ಸ್ವಂತ ತೆರಿಗೆ ಆದಾಯವೂ ಶೇ.6.94ರಿಂದ ಶೇ.6.41ಕ್ಕೆ ಇಳಿಕೆಯಾಗಿದೆ. ಇತರ ರಾಜ್ಯಗಳದು ಶೇ.6.35ಇದ್ದುದು ಈಗ ಶೇ.7ಕ್ಕೇರಿಕೆಯಾಗಿದೆ.

ಕೇರಳದ ವಾರ್ಷಿಕ ಸ್ವಂತ ತೆರಿಗೆ ಆದಾಯ ಬೆಳವಣಿಗೆ ಶೇ.8.4 ರಲ್ಲಿ ನಿಂತಿದ್ದರೆ, ಇತರಪ್ರಮುಖರಾಜ್ಯಗಳು ಶೇ.13.1ರಬೆಳವಣಿಗೆಯೊಂದಿಗೆ ದಾಪುಗಾಲಿಕ್ಕಿವೆ. ಎಸ್‌ಜಿಎಸ್‌ಟಿ ಸಂಗ್ರಹ ಬೆಳವಣಿಗೆಯು ಕೇವಲ ಶೇ.8.63ರಷ್ಟಿದ್ದರೆ, ಇತರ ರಾಜ್ಯಗಳ ಬೆಳವಣಿಗೆ ದರ ರಾಜ್ಯದ ಸ್ವಂತ ತೆರಿಗೆ ಆದಾಯ ಬೆಳವಣಿಗೆಯು ತಮಿಳ್ನಾಡು, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ, ಪಶ್ಚಿಮಬಂಗಾಲ, ಪಂಜಾಬ್, ಹರ್ಯಾಣಗಳಿಗೆ ಹೋಲಿಸಿದರೆ ಅತ್ಯಂತ ಕುಂಠಿತ ಬೆಳವಣಿಗೆಯನ್ನು ತೋರಿಸುತ್ತದೆ. ಈ ಅಂಕಿ-ಅಂಶಗಳು ಕೇರಳವು ಆದಾಯ ಸಂಗ್ರಹದಲ್ಲಿ ಇತರ ರಾಜ್ಯಗಳಿಗಿಂತ ಹಿಂದೆ ಬಿದ್ದಿದೆ ಎಂಬುದನ್ನು ತೋರಿಸುತ್ತಿವೆ ಎಂದು ಶ್ವೇತಪತ್ರ ತಿಳಿಸಿದೆ. ಕೇರಳವುಬಳಕೆ ಚಾಲಿತಆರ್ಥಿಕತೆಯನ್ನು ಹೊಂದಿದ್ದು, ಪ್ರತಿಕುಟುಂಬದ ವೆಚ್ಚ ಸಾಮರ್ಥ್ಯ ಅಧಿಕವಾಗಿರುವುದರಿಂದ 2017ರಲ್ಲಿ ಜಿಎಸ್‌ಟಿ ವ್ಯವಸ್ಥೆ ಜಾರಿಯಾದಾಗ ಕೇರಳವು ಈ ಯೋಜನೆಯ ಪ್ರಮುಖ ಫಲಾನುಭವಿ ರಾಜ್ಯವಾಗಿ ಮೂಡಿಬರಲಿದೆ ಎಂದು ನೀತಿ ನಿರೂಪಕರು ನಿರೀಕ್ಷಿಸಿದ್ದರು. ಆದರೆ ಕೇರಳ ಮಾತ್ರ ಸತತವಾಗಿ ಕಳಪೆ ಪ್ರದರ್ಶನ ನೀಡಿರುವುದನ್ನು ಶ್ವೇತಪತ್ರ ಕಂಡುಕೊಂಡಿದೆ.

ಭಾರೀ ಸಾಲದ ಹೊರೆ: ಹಿಂದಿನ ಎಲ್‌ಡಿಎಫ್ ಸರಕಾರದಿಂದ ಈಗಿನ ಸರಕಾರಕ್ಕೆ 48,733 ಕೋಟಿ ರೂ.ಗಳ ಸಾಲದ ಹೊರೆ ಬಂದಿದೆ. ಇದರಲ್ಲಿ ಸರಕಾರಿ ನೌಕರರಿಗೆ ನೀಡಬೇಕಾದ ತುಟ್ಟಿಭತ್ಯೆಯೇ 21,670 ರೂ. ಗಳಷ್ಟಿದ್ದರೆ, ಪಿಂಚಣಿದಾರರಿಗೆ ಬಾಕಿ ಇರುವ ತುಟ್ಟಿ ಪರಿಹಾರ (ಡಿಆರ್) 14,387 ಕೋಟಿ ರೂ.ಗಳ ಬಾಕಿಯಿದೆ. ಬ್ಯಾಂಕ್‌ಗಳು ಮತ್ತು ಗುತ್ತಿಗೆದಾರರಿಗೆ ಇರುವ ಬಾಕಿ 3,431 ಕೋಟಿ ರೂ.ಗಳಾಗಿದ್ದರೆ ಮುಂದೂಡಲ್ಪಟ್ಟ ಪಾವತಿ ಬಾಕಿ ಸೇರಿದಂತೆ 48,700 ಕೋಟಿ ರೂ.ಗಳಿಗೂ ಅಧಿಕವಿದೆ ಎನ್ನುತ್ತದೆ ಶ್ವೇತಪತ್ರ.

ಕೇಂದ್ರದ ನೆರವಿನಿಂದ ತಾತ್ಕಾಲಿಕ ಸುಧಾರಣೆ

ಮಾಜಿ ಸಂಪುಟ ಕಾರ್ಯದರ್ಶಿ ಡಾ.ಕೆ.ಎಂ.ಚಂದ್ರಶೇಖರ್ ನೇತೃತ್ವದ ವಿಶೇಷ ಸಮಿತಿಯು ಸಿದ್ಧಪಡಿಸಿದ ಈ ಶ್ವೇತಪತ್ರವು, 2020-21 ಮತ್ತು 2022-23ರ ನಡುವೆ ಕೇರಳವು ತಾತ್ಕಾಲಿಕ ಆರ್ಥಿಕ ಸುಧಾರಣೆ ಕಂಡಿರುವುದು ಕೇಂದ್ರ ಸರಕಾರದಿಂದ ಲಭಿಸಿದ ವಿಶೇಷ ಹಣಕಾಸು ಬೆಂಬಲಿದಿಂದಲೇ ಹೊರತು ರಾಜ್ಯ ಸರಕಾರದ ನಿರ್ವಹಣೆಯಿಂದಲ್ಲ ಎಂಬುದನ್ನು ಒತ್ತಿ ಹೇಳಿದೆ. ಈ ಅವಧಿಯಲ್ಲಿ ಕೇಂದ್ರ ಸರಕಾರದಿಂದ ಕೇರಳಕ್ಕೆ 77,201 ಕೋಟಿ ರೂ.ಲಭಿಸಿದೆ. ಇದರಲ್ಲಿ, 48,388 ಕೋಟಿ ರೂ.ಗಳ ಆದಾಯ ಕೊರತೆ ಅನುದಾನ ಮತ್ತು 28,813 ಕೋಟಿ ರೂ.ಗಳ ಜಿಎಸ್‌ಟಿ ಪರಿಹಾರ ಅನುದಾನ ಸೇರಿದೆ.

ನೂತನ ಸಿಎಂ ಹಣಕಾಸು ಸ್ಥಿತಿಗತಿ ಶ್ವೇತಪತ್ರ ಮಂಡಿಸಲಿ: ಅಶೋಕ

ಬೆಂಗಳೂರು: ಕೇರಳಂನ ನೂತನ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ತಮ್ಮ ರಾಜ್ಯದ ಆರ್ಥಿಕ ಸ್ಥಿತಿ- ಗತಿಯ ನೈಜ ಚಿತ್ರಣವನ್ನು ಜನರ ಮುಂದಿಡುವ ಉದ್ದೇಶದಿಂದ ಹಣಕಾಸು ಶ್ವೇತಪತ್ರ ಮಂಡಿಸಿರುವುದು ಸ್ವಾಗತಾರ್ಹ. ಅದೇ



ಮಾದರಿಯಲ್ಲಿ ಕರ್ನಾಟಕದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ರಾಜ್ಯದ ಹಣಕಾಸಿನ ಸ್ಥಿತಿಗತಿಯ ಕುರಿತು ಶ್ವೇತಪತ್ರ ಮಂಡಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆಗ್ರಹಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕಕ್ಕೆ ಬಿಟ್ಟುಹೋಗಿರುವ ಆರ್ಥಿಕ ಬಳುವಳಿ ಏನು ಎಂಬುದನ್ನು ತಿಳಿದುಕೊಳ್ಳುವ ಹಕ್ಕು ರಾಜ್ಯದ ಜನರಿಗಿದೆ ಎಂದಿದ್ದಾರೆ. ರಾಜ್ಯದ ಸಾಲ ಎಷ್ಟು ಹೆಚ್ಚಾಗಿದೆ? ಸರ್ಕಾರದ ಖಜಾನೆಯ ನಿಜವಾದ ಸ್ಥಿತಿಗತಿ ಏನು? ಅವೈಜ್ಞಾನಿಕ ಯೋಜನೆಗಳು, ಮತಬ್ಯಾಂಕ್ ರಾಜಕಾರಣ ಮತ್ತು ದುಂದುವೆಚ್ಚಗಳಿಂದ ರಾಜ್ಯದ ಆರ್ಥಿಕತೆಗೆ ಎಷ್ಟು ಹಾನಿಯಾಗಿದೆ? ಮುಂದಿನ ಪೀಳಿಗೆಯ ಹೆಗಲ ಮೇಲೆ ಎಷ್ಟು ಸಾಲದ ಹೊರೆ ಹಾಕಲಾಗಿದೆ ಎಂದು ತಿಳಿಯಬೇಕಿದೆ.

ಮುಚ್ಚಿಡಲು, ಮರೆಮಾಚಲು ಏನೂ ಇಲ್ಲವಾದರೆ ಕಾಂಗ್ರೆಸ್ ಸರ್ಕಾರ ತಕ್ಷಣವೇ ವಿಧಾನಸಭೆಯಲ್ಲಿ ಹಣಕಾಸು ಶ್ವೇತಪತ್ರ ಮಂಡಿಸಬೇಕು. ಸತ್ಯವನ್ನು ಹೊರಗೆ ಬರಲು ಬಿಡಬೇಕು. ಕರ್ನಾಟಕಕ್ಕೆ ಪಾರದರ್ಶಕತೆ ಬೇಕು. ಕನ್ನಡಿಗರಿಗೆ ಉತ್ತರದಾಯಿತ್ವ ಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಸಿದ್ದರಾಮಯ್ಯ ಸರ್ಕಾರ ರಾಜ್ಯಕ್ಕೆ ಬಿಟ್ಟುಹೋಗಿರುವ ನಿಜವಾದ ಸಾಕ್ಷಿಗುಡ್ಡೆ ಏನು ಎಂಬುದು ಜನರಿಗೆ ತಿಳಿಯಬೇಕು ಎಂದು ಅಶೋಕ ಒತ್ತಾಯಿಸಿದ್ದಾರೆ.

ಶೃಂಗೇರಿ ಭೇಟಿ



ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು ಶೃಂಗೇರಿ ಶ್ರೀಶಾರದಾ ಪೀಠಕ್ಕೆ ಗುರುವಾರ ಭೇಟಿ ನೀಡಿ, ದೇವಿಗೆ ಪೂಜೆ ಸಲ್ಲಿಸಿ, ಜಗದ್ಗುರುಗಳ ಆಶೀರ್ವಾದ ಪಡೆದರು.

ಅಂತರ ನಿಗಮ ವರ್ಗ ಆದೇಶ ಪ್ರಕಟ

ಬೆಂಗಳೂರು: ಕೆಎಸ್‌ಆರ್‌ಟಿಸಿಯ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ನೌಕರರ ಪತಿ/ಪತ್ನಿ ಶೇ.40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ನೌಕರರ ಹಾಗೂ ತೀವ್ರ ಅನಾರೋಗ್ಯ ಹೊಂದಿದದವರ ಅಂತರ ನಿಗಮ ವರ್ಗಾವಣೆ ಆದೇಶವನ್ನು ಗುರುವಾರ ನಿಗಮದ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ನೌಕರರ ಸಾಲಿನ 2026 ನೇ ಸಾಲಿನ ಅಂತರ ನಿಗಮ ವರ್ಗಾವಣೆ ಪ್ರಕ್ರಿಯೆ ಜ.1ರಿಂದ ಪ್ರಾರಂಭವಾಗಿದ್ದು, ಫೆ.28ರವರೆಗೆ ಆನ್‌ಲೈನ್ ಮೂಲಕ www.ksrtc.org/transferರಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ರ ನೌಕರರು ಪರಸ್ಪರ/ಸಾಮಾನ್ಯ (ಪತಿ-ಪತ್ನಿ/ಶೇ.40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ನೌಕರರು ಹಾಗೂ ತೀವ್ರ ತರಹದ ಅನಾರೋಗ್ಯ ಪ್ರಕರಣಗಳು) ವರ್ಗಾವಣೆ ಆದೇಶವನ್ನು ksrtc.karnataka.gov.in ವೆಬ್‌ಸೈಟ್‌ನಲ್ಲಿ ಗುರುವಾರ ಪ್ರಕಟಿಸಲಾಗಿದೆ. ಪರಸ್ಪರ ವರ್ಗಾವಣೆಗೊಂಡ ನೌಕರರನ್ನು ವರ್ಗಾವಣೆಗೊಂಡ ವಿಭಾಗಕ್ಕೆ ಜೂ.08 ರಂದು ಪ್ರಭಾವಕಾರಿಯಾಗಿ ಬಿಡುಗಡೆಗೊಳಿಸಲಾಗಿದೆ. ಸಾಮಾನ್ಯ ವರ್ಗಾವಣೆಗೊಂಡ ನೌಕರರಿಗೆ ಕೌನ್ಸಿಲಿಂಗ್ ಮೂಲಕ ಕಚೇರಿ/ಘಟಕ ಹಂಚಿಕೆ ಮಾಡಲಾಗುವುದು. ಕೌನ್ಸಿಲಿಂಗ್ www.ksrtc.org/transferರಲ್ಲಿ ಜೂ.11ರಿಂದ 17ರವರೆಗೆ ಆನ್‌ಲೈನ್‌ನಲ್ಲಿ ನಡೆಸಲಾಗುವುದು ಎಂದು ತಿಳಿಸಿದೆ.

ಇಂದು ಖರ್ಗೆ ನಾಮಪತ್ರ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ (ಜೂ.5) ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಲಿದ್ದು, ಈ ಸಂದರ್ಭದಲ್ಲಿ ಲೋಕ ಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾಗಿಯಾಗಲಿದ್ದಾರೆ. ರಾಹುಲ್ ಗಾಂಧಿ ಜತೆಗೆ ಮಧ್ಯಾಹ್ನ 1.30 ಸುಮಾರಿಗೆ ವಿಧಾನಸೌಧಕ್ಕೆ ಆಗಮಿಸಲಿರುವ ಖರ್ಗೆ ಅವರು ಚುನಾವಣಾಧಿಕಾರಿ ಎಂ.ಕೆ. ವಿಶಾಲಕ್ಷಿ ಅವರಿಗೆ ನಾಮಪತ್ರ ಸಲ್ಲಿಸಲಿದ್ದಾರೆ. ಈ ವೇಳೆ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿರಲಿದ್ದಾರೆ.

ಕಿರುಸುದ್ದಿ

ಅಪಘಾತದಲ್ಲಿ ಕುಟುಂಬದ ಮೂವರ ಸಾವು

ಹುಳಿಯಾರು: ಇನ್ನೋವಾ ಮತ್ತು ಓಮ್ನಿ ಕಾರಿನ ನಡುವೆ ಅಪಘಾತವಾಗಿ ಒಂದೇ ಕುಟುಂಬದ ಮೂವರು ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿರುವ ಘಟನೆ ಹುಳಿಯಾರು ಸಮೀಪದ ಕೆಂಕೆರೆ ಗೊಲ್ಲರಹಟ್ಟಿ ಗೇಟ್ ಬಳಿ ಗುರುವಾರ ನಡೆದಿದೆ. ಮೃತರನ್ನು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಕೆಂಗೇರಿಪಾಳ್ಯದ ನಿವಾಸಿಗಳಾದ ಸೌಮ್ಯ (39), ಗಂಗೇಶ್ವರ ರೆಡ್ಡಿ (68) ಹಾಗೂ ಇಂದಿರಮ್ಮ (65) ಎಂದು ಗುರುತಿಸಲಾಗಿದೆ. ಸಾಫ್ಟ್‌ವೇರ್ ಇಂಜಿನಿಯರ್ ರವಿಕುಮಾರ್ ತನ್ನ ಪತ್ನಿ ಸೌಮ್ಯ, ಮಾವ ಗಂಗೇಶ್ವರ ರೆಡ್ಡಿ, ಅತ್ತೆ ಇಂದಿರಮ್ಮ ಅವರನ್ನು ಇನ್ನೋವಾ ಕಾರಿಯಲ್ಲಿ ಕೂರಿಸಿಕೊಂಡು ಮೈಸೂರಿನಿಂದ ಆಂಧ್ರಪ್ರದೇಶಕ್ಕೆ ತೆರಳುತ್ತಿದ್ದರು. ಹುಳಿಯಾರಿನಿಂದ ಪುರದಮಠದ ಕಡೆ ಹೋಗುತ್ತಿದ್ದ ಓಮಿನಿ ಕಾರು ಇದ್ದಕ್ಕಿದ್ದ ಹಾಗೆ ಹುಳಿಯಾರಿಗೆ ವಾಪಸ್ ಆಗಲು ತಿರುಗಿಸಿದ್ದಾರೆ. ಹಿಂಭಾಗದಲ್ಲೇ ವೇಗವಾಗಿ ಬರುತ್ತಿದ್ದ ಇನ್ನೋವಾ ಕಾರು ಓಮ್ನಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಅಪಘಾತದ ತೀವ್ರತೆಗೆ ನಿಯಂತ್ರಣ ತಪ್ಪಿದ ಇನ್ನೋವಾ ಕಾರು ಪಕ್ಕದಲ್ಲಿದ್ದ ವಿದ್ಯುತ್ ಕಂಬಕ್ಕೆ ಬಲವಾಗಿ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಪರಿಣಾಮ ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ಮಕ್ಕಳಾದ ಚರಿತಾ (6) ಮತ್ತು ಚಾರ್ವಿ (10) ಸ್ಥಿತಿ ಚಿಂತಾಜನಕವಾಗಿದ್ದು, ಹೆಚ್ಚಿನ ಚಿಕಿತ್ಸೆಗೆ ಅವರನ್ನು ನಿಮಾನ್ಸ್ ರವಾನಿಸಲಾಗಿದೆ. ವಾಹನ ಚಲಾಯಿಸುತ್ತಿದ್ದ ಕುಟುಂಬದ ಮುಖ್ಯಸ್ಥ ರವಿ ಕುಮಾರ್ ರೆಡ್ಡಿ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಾರಿನೊಳಗೆ ಉಸಿರುಗಟ್ಟಿ ಬಾಲಕ ಸಾವು

ಕಲಬುರಗಿ: ಜಿಲ್ಲೆಯ ಶಹಾಬಾದ್ ತಾಲೂಕಿನ ತೊನಸನಹಳ್ಳಿ (ಎಸ್) ಗ್ರಾಮದಲ್ಲಿ ಕಾರಿನೊಳಗೆ ಸಿಲುಕಿ ಉಸಿರುಗಟ್ಟಿ 3 ವರ್ಷದ ಬಾಲಕ ಮೃತಪಟ್ಟ ಹೃದಯ ವಿದ್ರಾವಕ ಘಟನೆ ನಡೆದಿದೆ. ಮೃತ ಬಾಲಕನನ್ನು ಗ್ರಾಮದ ಕೊಟ್ಟುರೇಶ್ವರ ಮುತ್ಯಾ ಅವರ ಪುತ್ರ ಬಸವಪ್ರಭು (3) ಎಂದು ಗುರುತಿಸ ಲಾಗಿದೆ. ಮಗುವಿನ ಪೋಷಕರು ಶಾಲೆಗೆ ತೆರಳುವ ಸಂದರ್ಭದಲ್ಲಿ



ಕಾರಿನಲ್ಲಿ ಬಂದಿದ್ದು, ಶಾಲೆಯ ಬಳಿ ವಾಹನ ವನ್ನು ನಿಲ್ಲಿಸಿ ತೆರಳಿದ್ದರು. ಈ ವೇಳೆ ಆಟವಾಡುತ್ತಿದ್ದ ಬಸವ ಪ್ರಭು ಕಾರಿನೊಳಗೆ ಹೋಗಿದ್ದಾನೆ. ಮಗುವು ಒಳಗೆ ಪ್ರವೇಶಿಸಿದ ಬಳಿಕ ಕಾರಿನ ಬಾಗಿಲುಗಳು ಲಾಕ್ ಆಗಿದ್ದು, ಹೊರಬರಲು ಸಾಧ್ಯವಾಗಿಲ್ಲ ಎನ್ನಲಾಗಿದೆ. ಬೆಳಗ್ಗೆಯಿಂದಲೇ ಮಗು ಕಾಣಿಸದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ವಿವಿಧೆಡೆ ಹುಡುಕಾಟ ನಡೆಸಿದ್ದಾರೆ. ನಂತರ ಕಾರನ್ನು ತೆರೆದು ಪರಿಶೀಲಿಸಿದಾಗ ಉಸಿರುಗಟ್ಟಿ ಮೃತಪಟ್ಟಿದ್ದಾನೆ ಎಂದು ತಿಳಿದುಬಂದಿದೆ.

ಭೀಮಾತೀರ: ಆರು ಜನ ಸೆರೆ

ವಿಜಯಪುರ: ತೀವ್ರ ಆತಂಕ ಮೂಡಿಸಿದ ಜಿಲ್ಲೆಯ ಭೀಮಾತೀರದ ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ 6 ಜನರ ಬರ್ಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗುರುವಾರ ಪ್ರಮುಖ ಆರೋಪಿ ಸೇರಿ ಮತ್ತೆ 6 ಜನ ಆರೋಪಿಗಳನ್ನು ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ. ಇಲ್ಲಿನ ಅಪ್ಪುಗೌಡ ಲಗಮನಗೌಡ ಉರ್ಫ್ ಲಕ್ಕನಗೌಡ ಪಾಟೀಲ (49), ಶಂಕ್ರೆಪ್ಪ ಮಾದೇವ ಅರಕೇರಿ (33), ಅಪ್ಪಾಸಾಬ ಉರ್ಫ್ ಕಿಶನ್ ಶಂಕರ ಭೋವಿ (56), ಸತ್ಯೆಪ್ಪ ಜಕ್ಕಪ್ಪ ಬಿರಾದಾರ (46), ಸುಲ್ತಾನ ಮಾದೇವ ಬಿರಾದಾರ (24), ಮಹೇಶ ಬೆಳ್ಳೆಣ್ಣಿ ಬಿರಾದಾರ (25) ಬಂಧಿತ ಆರೋಪಿಗಳಾಗಿದ್ದು, ಈಗಾಗಲೇ ಕಳೆದ ಜೂ.1, 2026 ರಂದು 12 ಜನ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರಿಗೆ ಸಿಎಂ ಡಿಕೆಶಿ ಸೂಚನೆ

ಎಸ್‌ಐಆರ್ ಗಮನಿಸಿ

ಬೆಂಗಳೂರು: ಕಾಂಗ್ರೆಸ್ ಕಾರ್ಯಕರ್ತರು ಎಸ್‌ಐಆರ್ ಬಗ್ಗೆ ಗಮನ ಹರಿಸಬೇಕು. ಇದರಿಂದ ಸಮಸ್ಯೆಯಿದೆ. ಬಂಗಾಳ, ಅಸ್ಸಾಂ ಸೇರಿದಂತೆ ಅನೇಕ ಕಡೆ ಏನಾಗಿದೆ ಎಂದು ತಿಳಿದಿದೆ. ಎಲ್ಲರೂ ಸಭೆ ನಡೆಸಿ ಅರಿವು ಮೂಡಿಸಬೇಕು. ಮತ ಇಲ್ಲ ಎಂದರೆ ಗೃಹಲಕ್ಷ್ಮೀ ಸೇರಿದಂತೆ ಸರ್ಕಾರದ ಸೌಲಭ್ಯಗಳು ಸಿಗುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಸಿದರು.

ನಗರದ ಕಾಂಗ್ರೆಸ್ ಕಚೇರಿಯ ಭಾರತ್ ಜೋಡೋ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರನ್ನು ಉದ್ದೇಶಿಸಿ ಮಾತನಾಡಿದರು. ಮೂರು-ನಾಲ್ಕು ವಾರ್ಡ್‌ಗಳನ್ನು ಸೇರಿ ಶಾಸಕರನ್ನು ಒಳಗೊಂಡ ಸಮಿತಿ ಮಾಡಲಾಗುವುದು. ಅವರು ಎಸ್‌ಐಆರ್ ಬಗ್ಗೆ ಸಭೆ ಮಾಡಲಿದ್ದಾರೆ. ನಂತರ ಪಾಲಿಕೆ ಚುನಾವಣೆಗೂ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದಾರೆ. ತಳಮಟ್ಟದಲ್ಲಿ ಕೆಲಸ ಮಾಡಬೇಕು. ಹಿಂದೆ ತಿರುಗಿದರೆ ಟಿಕೆಟ್ ಸಿಗಲ್ಲ. ಜನರ ನಡುವೆ ಕೆಲಸ ಮಾಡಬೇಕು.

ಎಸ್‌ಐಆರ್ ಬಗೆಗಿನ ಸಭೆಗೆ ಬರದ ಕಾರ್ಯದರ್ಶಿಗಳನ್ನು ಎಐಸಿಸಿ ಅವರು ವಜಾ ಮಾಡಿದ್ದಾರೆ. ಇದರ ಬಗ್ಗೆ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಇರಬೇಕು ಎಂದರು. ಕಾಂಗ್ರೆಸ್ ಕಚೇರಿ ನಮಗೆ ದೇವಾಲಯ ಇದ್ದಂತೆ. ನಾನು ಅದಕ್ಕಾಗಿ ಕಚೇರಿಗೆ ಬಂದಿದ್ದೇನೆ. ಮಹಾತ್ಮ ಗಾಂಧಿ ಅವರ ನೆನಪಿನಲ್ಲಿ ನೂರು ಕಚೇರಿಗಳಿಗೆ ಅಡಿಪಾಯ ಹಾಕಲಾಗಿದೆ.

ಹರಿಪ್ರಸಾದ್‌ಗೆ ಅಭಿನಂದನೆ: ಪಕ್ಷದ ನೂತನ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ಅವರು ಚುಕ್ಕಾಣಿ ಹಿಡಿದಿದ್ದಾರೆ. ಅವರು ಪಕ್ಷದ ಹಿರಿಯ ನಾಯಕರು. 5 ಬಾರಿ ರಾಜ್ಯಸಭಾ ಸದಸ್ಯರಾಗಿದ್ದರು. ಈ ಎರಡನೇ ಬಾರಿಗೆ ವಿಧಾನಪರಿಷತ್ ಸದಸ್ಯರಾಗುತ್ತಿದ್ದಾರೆ. ಸಾಮಾನ್ಯ ಕಾರ್ಯಕರ್ತನಿಗೆ 36 ವರ್ಷಗಳ ಕಾಲ ಪಕ್ಷವು ಅಧಿಕಾರ ನೀಡಿದೆ ಎಂದರು.



ಮುಖ್ಯಮಂತ್ರಿ ಆದ ತಕ್ಷಣ ಕಾಂಗ್ರೆಸ್ ಕಚೇರಿ ಬಿಡುವವನಲ್ಲ. ಕಾರ್ಯಕರ್ತರೇ ನನ್ನ ಉಸಿರು. ವಿದ್ಯಾರ್ಥಿ ನಾಯಕನಾಗಿ ರಾಜಕೀಯಕ್ಕೆ ಬಂದವನು. ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷನಾಗಿದ್ದೆ. ಕಾರ್ಯಕರ್ತನಿಗೆ ಒಂದಲ್ಲ ಒಂದು ಅವಕಾಶ ಸಿಗುತ್ತದೆ. ನಾನು ಕುಳಿತಿರುವ ಕುರ್ಚಿ ಈ ರಾಜ್ಯದ ಜನರದ್ದು.
■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಮುಂದಿನ ದಿನಗಳಲ್ಲಿ ರೈತ ಪರ ನಿರ್ಧಾರ

ರೈತರ ಪರವಾಗಿ ಮುಂದಿನ ದಿನಗಳಲ್ಲಿ ಒಂದಷ್ಟು ಉತ್ತಮ ತೀರ್ಮಾನ ಮಾಡುತ್ತೇವೆ. ಹೊಸ ಕೆಲಸಗಳನ್ನು ಮಾಡಲು ಹೊಸ ಅವಕಾಶ ಸಿಕ್ಕಿದೆ. ನಾನು ಹೊಸ ಅವಕಾಶವನ್ನು ಹುಡುಕುವವನು. ಕೊರೋನಾ ಸಮಯದಲ್ಲಿ ಅನೇಕ ಹೋರಾಟಗಳನ್ನು ಮಾಡಿದೆವು. ಯಡಿಯೂರಪ್ಪ ಅವರು ಕೊಡಲು ಆಗಲ್ಲ ಎಂದಿದ್ದನ್ನು ನಾವು ಕೊಟ್ಟೆವು. ರೈತರಿಂದ ತರಕಾರಿ ಖರೀದಿಸಿ ನೀಡಿದೆವು. ಕಾರ್ಮಿಕರ ಪರವಾಗಿ ನಿಂತೆವು ಎಂದರು. ರೇಸ್ ಕೋರ್ಸ್ ರಸ್ತೆ ಬಳಿ ದೊಡ್ಡ ಕಾಂಗ್ರೆಸ್ ಭವನಕ್ಕೆ ಅಡಿಪಾಯ ಹಾಕಬೇಕಿತ್ತು. ಆದರೆ ರಾಹುಲ್ ಗಾಂಧಿ ಅವರು ಬೇರೊಂದು ದಿನ ಮಾಡೋಣ ಎಂದು ಸಲಹೆ ನೀಡಿದರು. ನಾನು ಅಧ್ಯಕ್ಷನಾಗಿದ್ದಾಗಲೇ ಅಡಿಪಾಯ ಹಾಕಬೇಕು ಎಂದು ಇಚ್ಚಿಸಿದ್ದೆ. ಅದಕ್ಕೆ ರಾಹುಲ್ ಗಾಂಧಿ ಅವರು ನಿನ್ನ ಹೆಸರನ್ನೇ ಹಾಕೋಣ ಎಂದು ಹೇಳಿದರು ಎಂದರು.

ಸಿಎಂ ಮುಂದಿದೆ ದೊಡ್ಡ ಸವಾಲು: ವಿಜಯೇಂದ್ರ

ಬೆಂಗಳೂರು: ಎಲ್ಲರನ್ನೂ ಸಂಭಾಳಿಸಿಕೊಂಡು ಸರಿದೂಗಿಸಿಕೊಂಡು ಹೋಗುವ ಸವಾಲಿನಲ್ಲೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಎರಡು ವರ್ಷಗಳನ್ನು ಕಳೆಯುವ ಕೆಲಸ ಆಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ಲೇಷಿಸಿದ್ದಾರೆ.



ಮಾಧ್ಯಮಗಳ ಜತೆ ಗುರುವಾರ ಮಾತನಾಡಿ, ಡಿ.ಕೆ.ಶಿವಕುಮಾರ್ ಸಿಎಂ ಆಯಾಗಿ ಬುಧವಾರ ಪ್ರಮಾಣ ವಚನ ತೆಗೆದುಕೊಂಡಿದ್ದಾರೆ. ಅವರ ಸಚಿವ ಸಂಪುಟದ ಸದಸ್ಯರ ಪಟ್ಟಿ ನೋಡಿದಾಗ ಅದು ಅವರ ಕ್ಯಾಬಿನೆಟ್ ಅಲ್ಲ, ಸಿದ್ದರಾಮಯ್ಯ ಅವರ ಕ್ಯಾಬಿನೆಟ್ ಎಂಬುದು ಎಂಥವರಿಗೂ ಗೊತ್ತಾಗುತ್ತದೆ ಎಂದರು.

ಹಿಂದಿನ ಸಿಎಂ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಕುರ್ಚಿಯಿಂದ ಇಳಿಯುವ ಮೊದಲೇ ಒಂದು ಗೂಗ್ಲಿಯನ್ನೂ ಹಾಕಿ ಹೋಗಿದ್ದಾರೆ. ಹಿಂದುಳಿದ ವರ್ಗಗಳ ವರದಿಯನ್ನು ಸ್ವೀಕರಿಸಿ ಇಂದಿನ ಮುಖ್ಯಮಂತ್ರಿಗಳು ಏನು ಮಾಡುತ್ತಾರೆಂಬ ಸವಾಲನ್ನು ಡಿ.ಕೆ.ಶಿವಕುಮಾರ್ ಅವರ ಮುಂದೆ ಬಿಟ್ಟಿದ್ದಾರೆ. ಕಾಂಗ್ರೆಸ್ಸಿನ 3 ವರ್ಷಗಳ ಆಡಳಿತದಲ್ಲಿ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಮಾಡಲು ಸಾಧ್ಯವಾಗಿಲ್ಲ ಎಂದರು.

ರಾಜ್ಯದ ಮುಖ್ಯಮಂತ್ರಿ ಮುಂದೆ ದೊಡ್ಡ ಸವಾಲುಗಳಿವೆ. ಸವಾಲುಗಳ ನಡುವೆ ಅಭಿವೃದ್ಧಿ ಮಾಡಬೇಕಾದ ಅನಿವಾರ್ಯತೆಯೂ ಇದೆ. ಆಡಳಿತ ಪಕ್ಷದ ಸಚಿವರು, ಶಾಸಕರನ್ನು ಸರಿದೂಗಿಸಿಕೊಂಡು ಹೋಗುವ ಸವಾಲು ಕೂಡ ಡಿ.ಕೆ.ಶಿವಕುಮಾರ್ ಅವರ ಮುಂದಿದೆ. ಇದೆಲ್ಲದರ ನಡುವೆ ಹೇಗೆ ಸರ್ಕಾರ ತೆಗೆದುಕೊಂಡು ಹೋಗುತ್ತಾರೆಂದು ನಾವು ಕೂಡ ನೋಡುತ್ತೇವೆ ಎಂದು ತಿಳಿಸಿದರು.

ಮೇಕೆದಾಟು ಯೋಜನೆ ಕುರಿತ ಪ್ರಶ್ನೆಗೆ ಉತ್ತರ ಕೊಟ್ಟ ಅವರು, ಪ್ರತಿಪಕ್ಷದಲ್ಲಿದ್ದಾಗ ಪಾದಯಾತ್ರೆ ಮಾಡುವುದು ಸುಲಭ. ಇವರ ಸರ್ಕಾರ ಬಂದು 3 ವರ್ಷಗಳಾಗಿವೆ. ಇವರ ಮಿತ್ರ ಪಕ್ಷ ಡಿಎಂಕೆ ಆಡಳಿತದಲ್ಲಿತ್ತು. ಆಗಲೇ ಸಮಸ್ಯೆ ಪರಿಹರಿಸಲು ಸಾಧ್ಯವಾಗಿಲ್ಲ ಎಂದು ಹೇಳಿದರು.

ಪಕ್ಷ ಸಂಘಟನೆ ಬಲಪಡಿಸುತ್ತೇವೆ

ಯಾರು ಎಷ್ಟೇ ಬಲಶಾಲಿಯಾದರೂ ನಾವು ಪ್ರತಿಪಕ್ಷವಾಗಿ ಈ ಸರ್ಕಾರದ ವೈಫಲ್ಯಗಳನ್ನು ಜನರ ಮುಂದೆ ಬಿಚ್ಚಿಡುವ ಕೆಲಸವನ್ನು ಇನ್ನೂ ಹೆಚ್ಚು ಸಮರ್ಥವಾಗಿ ಮಾಡುತ್ತೇವೆ. ಸವಾಲನ್ನು ಮೆಟ್ಟಿ ನಿಲ್ಲುವ ಶಕ್ತಿ ಬಿಜೆಪಿ ಕಾರ್ಯಕರ್ತರಿಗಿದೆ. ಈ ಸರ್ಕಾರ ಎಷ್ಟು ದಿನ ಇರಲಿದೆ ಎಂಬ ದೊಡ್ಡ ಪ್ರಶ್ನೆ ಎಲ್ಲರಲ್ಲೂ ಇದೆ. ಮುಂದೆ ಯಾವಾಗ ವಿಧಾನಸಭೆ ಚುನಾವಣೆ ನಡೆದರೂ ರಾಜ್ಯದಲ್ಲಿ ನಮ್ಮ ಸರ್ಕಾರ ತರುವ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗುತ್ತೇವೆ. ಸಂಘಟನೆ ಬಲಪಡಿಸುತ್ತೇವೆ. ಮುಂದೆ ಬರುವ ಸ್ಥಳೀಯ ಸಂಸ್ಥೆ ಚುನಾವಣೆಯ ಸವಾಲಿದೆ. ಅದು ನಮ್ಮ ಕಾರ್ಯಕರ್ತರ ಚುನಾವಣೆ. ಆ ನಿಟ್ಟಿನಲ್ಲಿ ನಮ್ಮ ಕಾರ್ಯಕರ್ತರಿಗೆ ಶಕ್ತಿ ತುಂಬಲಿದ್ದೇವೆ ಎಂದು ವಿವರಿಸಿದರು.

ನಾಳೆ ಡಾ.ಹೆಡಗೆವಾರ್ ಜೀವನಾಧಾರಿತ ನಾಟಕ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಡಾ.ಕೇಶವ ಬಲಿರಾಮ್ ಹೆಡಗೆವಾರ್



ಅವರ ಜೀವನಾಧಾರಿತ ಹಿಂದಿ ನಾಟಕ ಯುಗ ಪ್ರವರ್ತಕ ಡಾ. ಹೆಡಗೆವಾರ್ ಬೆಂಗಳೂರಿನಲ್ಲಿ ಪ್ರದರ್ಶನಗೊಳ್ಳಲಿದೆ.

ಜೂ. 6ರಂದು ಸಂಜೆ 6 ಗಂಟೆಗೆ ಯಲಹಂಕದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಾಗೂ ಜೂ. 7 ರಂದು ಸಂಜೆ 5 ಗಂಟೆಗೆ ಕಾಡುಬೀಸನಹಳ್ಳಿಯ ಕಾವೇರಪ್ಪ ಲೇಔಟ್‌ನಲ್ಲಿರುವ ನ್ಯೂ ಹೊರೈಜನ್ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಯುಗ ಪ್ರವರ್ತಕ ಡಾ. ಹೆಡಗೆವಾರ್ ಹಿಂದಿನ ನಾಟಕ ಪ್ರದರ್ಶನ ನಡೆಯಲಿದೆ. ಸಂಘಶತಾಬ್ದಿಯ ಹಿನ್ನೆಲೆಯಲ್ಲಿ ಸಂಘಸಂಸ್ಥಾಪಕ ಡಾ.ಹೆಡಗೆವಾರ್ ಅವರ ಜೀವನಾಧಾರಿತ ನಾಟಕ ದೇಶದಾದ್ಯಂತ ಪ್ರದರ್ಶನಗೊಳ್ಳುತ್ತಿದೆ. ಬೆಂಗಳೂರಿನಲ್ಲಿ ಈ ಕಾರ್ಯಕ್ರಮವನ್ನು ರವೀಂದ್ರ ಸಹಸ್ರಬುದ್ಧೆ ಮತ್ತು ಅವರ ನಾದಬ್ರಹ್ಮ ತಂಡವು ಪ್ರಸ್ತುತಪಡಿಸಲಿದೆ. ಹಿರಿಯ ಕಲಾವಿದ ಸತೀಶ್ ಸತೀಶ್ ಕೆ. ಖಾಳೆ ಡಾಕ್ಟರ್ ಜೀ (ಡಾ.ಕೇಶವ ಬಲಿರಾಮ್ ಹೆಡಗೆ ವಾರ್) ಅವರ ಪಾತ್ರ ನಿರ್ವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9945242996 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

ಟಿಬೆಟಿಯನ್ ಸಮುದಾಯಕ್ಕೆ ರಾಜ್ಯದ ಆತಿಥ್ಯ ಶ್ಲಾಘನೆ

ಸಿಎಂ ಡಿಕೆಶಿಗೆ ದಲೈಲಾಮಾ ಅಭಿನಂದನೆ

ಧರ್ಮಶಾಲಾ: ಕರ್ನಾಟಕದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಟಿಬೆಟಿಯನ್ ಧಾರ್ಮಿಕ ಗುರು ದಲೈ ಲಾಮಾ ಅಭಿನಂದನೆ ಸಲ್ಲಿಸಿದ್ದು, ರಾಜ್ಯ ಹಾಗೂ ಇಲ್ಲಿನ ಜನರು ಟಿಬೆಟಿಯನ್ ಸಮುದಾಯಕ್ಕೆ ನೀಡಿರುವ ಆತ್ಮೀಯತೆ ಮತ್ತು ಸಹಕಾರವನ್ನು ಪ್ರಶಂಸಿಸಿದ್ದಾರೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಡಿ.ಕೆ. ಶಿವಕುಮಾರ್ ಅವರಿಗೆ ಬರೆದ ಪತ್ರದಲ್ಲಿ ದಲೈ ಲಾಮಾ ಈ ಶುಭಾಶಯಗಳನ್ನು ತಿಳಿಸಿದ್ದಾರೆ.

ಭಾರತದಲ್ಲಿರುವ ಟಿಬೆಟಿಯನ್ ವಲಸೆ ಸಮುದಾಯದಲ್ಲಿ ಅತಿಹೆಚ್ಚು ಜನರು ಕರ್ನಾಟಕದಲ್ಲೇ ನೆಲೆಸಿದ್ದು, 30 ಸಾವಿರಕ್ಕೂ ಹೆಚ್ಚು ಟಿಬೆಟಿಯನ್ನರು ರಾಜ್ಯವನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿದ್ದಾರೆ ಎಂದು ಅವರು ಉಲ್ಲೇಖಿಸಿದ್ದಾರೆ. ಟಿಬೆಟಿಯನ್ ಸಮುದಾಯಕ್ಕೆ ಕರ್ನಾಟಕ ಸರ್ಕಾರ ಹಾಗೂ ಜನತೆ ನಿರಂತರವಾಗಿ ನೀಡುತ್ತಿರುವ ಸ್ನೇಹ, ಬೆಂಬಲ ಮತ್ತು ಆತಿಥ್ಯಕ್ಕಾಗಿ ನಾವು ಆಳವಾದ ಕೃತಜ್ಞತೆ ಹೊಂದಿದ್ದೇವೆ ಎಂದು ದಲೈ ಲಾಮಾ ಹೇಳಿದ್ದಾರೆ. ಪ್ರಾಚೀನ ಭಾರತೀಯ ಜ್ಞಾನ ಪರಂಪರೆಯಾದ ನಳಂದಾ ಸಂಪ್ರದಾಯವನ್ನು ಆಧರಿ ಸಿದ ನಮ್ಮ ಪ್ರಮುಖ ಶಿಕ್ಷಣ ಹಾಗೂ ಧಾರ್ಮಿಕ ಕೇಂದ್ರಗಳು ಕರ್ನಾಟಕದಲ್ಲಿ ನೆಲೆಸಿರುವುದು ನಮಗೆ ಹೆಮ್ಮೆಯ ಸಂಗತಿ ಎಂದೂ ಅವರು ತಿಳಿಸಿದ್ದಾರೆ.

ಟಿಬೆಟಿಯನ್ ಸಮುದಾಯಕ್ಕೆ ರಾಜ್ಯ ಸರ್ಕಾರ, ಜನರು ನೀಡಿರುವ ಉಷ್ಣತೆ ಹಾಗೂ ಆತಿಥ್ಯಕ್ಕೆ ಹೃತ್ಪೂರ್ವಕ ಧನ್ಯವಾದ ಸಲ್ಲಿಸುವುದಾಗಿ ಹೇಳಿರುವ ದಲೈಲಾಮಾ, ಕರ್ನಾಟಕದ ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ಹಾಗೂ ಸಮಾಜದ ದುರ್ಬಲ ವರ್ಗಗಳ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ಸಿಎಂ ಯಶಸ್ವಿಯಾಗಲಿ ಎಂದು ಹಾರೈಸಿದ್ದಾರೆ.

ಬೆಳಗಾವಿಯಲ್ಲಿ ಮತ್ತೊಂದು ಕಂಪನಿ ಮೇಲೆ ದಾಳಿ

ಬೆಳಗಾವಿ: ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಸಾವಿರಾರು ಕೋಟಿ ರೂಪಾಯಿಗಳ ದೊಡ್ಡ ಹಗರಣದ ತನಿಖೆ ಪ್ರಗತಿಯಲ್ಲಿರುವಾಗಲೇ, ಬೆಳಗಾವಿ ನಗರದಲ್ಲಿ ಮತ್ತೊಂದು ಕಂಪನಿ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ನಗರದ ಭಾಗ್ಯ ನಗರದಲ್ಲಿ ಇರುವ 'ಆದಿತ್ಯರಾಜ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಚೇರಿ ಮೇಲೆ ಎಸಿ ಶ್ರವಣ ನಾಯಕ ನೇತೃತ್ವದಲ್ಲಿ ಬೆಳಗಾವಿ ಸಹಕಾರ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ದಿಢೀರ್ ದಾಳಿ ನಡೆಸಿದ್ದಾರೆ. ಮಹಾರಾಷ್ಟ್ರ ಮೂಲದ ಬಲರಾಮ್ ಮಾನೆ ಎಂಬಾತ ಈ ಆದಿತ್ಯರಾಜ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸೂತ್ರಧಾರನಾಗಿದ್ದು, ರಾಜ್ಯದ ವಿವಿಧೆಡೆ ಒಟ್ಟು 7 ಬ್ರಾಂಚ್‌ಗಳನ್ನು ತೆರೆದು ದಂಧೆ ನಡೆಸುತ್ತಿದ್ದ ಎನ್ನಲಾಗಿದೆ.



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರ ನಿಯೋಗವು ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಬುಧವಾರ ಭೇಟಿ ಮಾಡಿ ಶುಭಾಶಯ ಕೋರಿದರು. ಈ ವೇಳೆ ರಾಜ್ಯ ಸಂಘದ ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರು ಹಾಗೂ ನೌಕರರು ಉಪಸ್ಥಿತರಿದ್ದರು.

ವಿವಾದಾತ್ಮಕ ಹೇಳಿಕೆ: ಮಾಜಿ ಶಾಸಕ ವಿರುದ್ಧ ಎಫ್‌ಐಆರ್

ಕಲಬುರಗಿ: ಜಿಲ್ಲೆಯನ್ನು ಪಾಕಿಸ್ತಾನದಂತೆ ಮಾಡಲು ಪ್ರಸ್ತುತ ಸರ್ಕಾರ ಯತ್ನಿಸುತ್ತಿದೆ ಎಂದು ವಿವಾದಾತ್ಮಕ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ, ಬಿಜೆಪಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ (ಅಪ್ಪುಗೌಡ) ಅವರ ವಿರುದ್ಧ ಇಲ್ಲಿನ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಬುಧವಾರ ಸಂಜೆ ಪ್ರಕರಣ ದಾಖಲಾಗಿದೆ.

ಆಳಂದ ಗಲಭೆ ಪ್ರಕರಣವನ್ನು ಸರ್ಕಾರ ಹಿಂಪಡೆದಿರುವುದನ್ನು ಖಂಡಿಸಿ ಸೋಮವಾರ ಡಿಸಿ ಕಚೇರಿ ಎದುರು ಬಿಜೆಪಿ ವತಿಯಿಂದ ಬೃಹತ್ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿತ್ತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಮ್ಮುಖದಲ್ಲೇ ವೇದಿಕೆಯಲ್ಲಿ ಮಾತನಾಡಿದ ದತ್ತಾತ್ರೇಯ ಪಾಟೀಲ್, ಹಿಂದೆ ಮುಸ್ಲಿಂ ಲೀಗ್ ಶಾಸಕರಾಗಿದ್ದ ಖಮರುಲ್ ಇಸ್ಲಾಂ ಅವರು ಕಲಬುರಗಿಯನ್ನು 'ಛೋಟಾ ಪಾಕಿಸ್ತಾನ' ಮಾಡುವುದಾಗಿ ಹೇಳುತ್ತಿದ್ದರು. ಇಂದಿನ ನಾಯಕರು ಮತ್ತು ಸರ್ಕಾರ ಮತ್ತೊಮ್ಮೆ ಕಲಬುರಗಿಯನ್ನು ಪಾಕಿಸ್ತಾನದ ಮಾದರಿಯಲ್ಲಿ ನಿರ್ಮಿಸಲು ಕೈ ಹಾಕಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಕಾಂಗ್ರೆಸ್ ಮುಖಂಡನಿಂದ ದೂರು

ಮಾಜಿ ಶಾಸಕರ ಈ ವಿವಾದಾತ್ಮಕ ಹೇಳಿಕೆಯ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ವೈರಲ್ ಆಗಿ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಹೇಳಿಕೆಯನ್ನು ಖಂಡಿಸಿ ಕಾಂಗ್ರೆಸ್ ಮುಖಂಡ ಅಜಗರ್ ಹುಸೈನ್ ಅವರು ಲಿಖಿತ ದೂರು ನೀಡಿದರು.

ಎರಡನೇ ಬಾರಿ ಡಿಸಿಎಂ ಹುದ್ದೆ ಅಲಂಕರಿಸಿದ ಕಾಂಗ್ರೆಸ್ ನಾಯಕ | ತುಮಕೂರು ಜಿಲ್ಲೆಗೆ ಹಿರಿಮೆ

ಡಾ.ಜಿ. ಪರಮೇಶ್ವರ್‌ಗೆ ಉಪಮುಖ್ಯಮಂತ್ರಿ ಯೋಗ

ಎಚ್.ಬಿ.ಸುಪ್ರತೀಕ್ ಹಳೇಮನೆ

ತುಮಕೂರು: ಸವ್ಯಸಾಚಿ ಡಾ.ಜಿ.ಪರಮೇಶ್ವರ್ ಅವರು ಎರಡನೇ ಬಾರಿಗೆ ಉಪ ಮುಖ್ಯಮಂತ್ರಿ ಹುದ್ದೆ ಅಲಂಕರಿಸಿ, ನಾಡಿನ ಜನರ ಸೇವೆ ಮಾಡಲು ಸನ್ನದ್ಧರಾಗಿದ್ದಾರೆ. ಜಿಲ್ಲೆಯ ಕೊರಟಗೆರೆ ವಿಧಾನಸಭಾ (ಎಸ್ಸಿ ಮೀಸಲು) ಕ್ಷೇತ್ರವನ್ನು ಪ್ರತಿನಿಧಿಸುವ ಪರಮೇಶ್ವರ್ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಗೃಹ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಈಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಏಕೈಕ ಉಪಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವುದು ಜಿಲ್ಲೆಗೆ ಹಿರಿಮೆ ತಂದಿದೆ.



2010ರಿಂದ 2018ರವರೆಗೆ ಅತಿ ದೀರ್ಘ ಕಾಲ ಕೆಪಿಸಿಸಿ ಅಧ್ಯಕ್ಷರಾಗಿದ್ದ ಹೆಗ್ಗಳಿಕೆ ಹೊಂದಿರುವ ಜಿ.ಪರಮೇಶ್ವರ್ ಅವರು ಎರಡನೇ ಬಾರಿ ಉಪ ಮುಖ್ಯಮಂತ್ರಿ ಆಗಿದ್ದಾರೆ. 1993ರಿಂದಲೂ ವಿವಿಧ ಸರಕಾರಗಳಲ್ಲಿ ಸಚಿವರಾಗಿ ಹಲವು ಖಾತೆಗಳನ್ನು ನಿರ್ವಹಿಸಿರುವ ಅವರು, ಇದೀಗ ಮತ್ತೆ 7ನೇ ಬಾರಿಗೆ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಉಪಮುಖ್ಯಮಂತ್ರಿ ಆಗಿದ್ದಾರೆ.

ಉನ್ನತ ವ್ಯಾಸಂಗ ಪಡೆದಿರುವ ಪರಮೇಶ್ವರ್: ಆಗಸ್ಟ್ 6, 1951ರಂದು ತುಮಕೂರಿನ ಗೊಲ್ಲಹಳ್ಳಿಯಲ್ಲಿ ಮಾಜಿ ಎಂಎಲ್‌ಸಿ ಜಿ.ಎಚ್.ಮರಿಯಪ್ಪ ಹಾಗೂ ಗಂಗಮ್ಮಲ್ಲಮ್ಮ ಅವರ ಮಗನಾಗಿ ಪರಮೇಶ್ವರ್ ಜನಿಸಿದರು. ಗೊಲ್ಲಹಳ್ಳಿಯಲ್ಲೇ ಪ್ರಾಥಮಿಕ ಶಿಕ್ಷಣ ಪೂರೈಸಿದ ಅವರು ತಮ್ಮ ತಂದೆಯೇ ಸ್ಥಾಪಿಸಿದ್ದ ಸಿದ್ಧಾರ್ಥ ಪ್ರೌಢ ಶಾಲೆಯಲ್ಲಿ ಪ್ರೌಢ ಶಿಕ್ಷಣ ಮುಗಿಸಿದರು. ತುಮಕೂರು ಸರಕಾರಿ ಪಿಯು ಕಾಲೇಜಿನಲ್ಲಿ ಪಿಯುಸಿ, ಬೆಂಗಳೂರು ಕೃಷಿ ವಿವಿ ಯಿಂದ ಬಿಎಸ್‌ಸಿ ಹಾಗೂ ಎಂಎಸ್‌ಸಿ ಪದವಿ ಪಡೆದು ಆಸ್ಟ್ರೇಲಿಯಾದ ಅಡಿಲೇಡ್ ವಿವಿಯಿಂದ ಡಾಕ್ಟರೇಟ್ ಪಡೆದುಕೊಂಡಿದ್ದಾರೆ. ಪ್ರಸ್ತುತ ಸಿದ್ಧಾರ್ಥ ಸಂಸ್ಥೆಯ ಕುಲಾಧಿಪತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಆಕಸ್ಮಿಕವಾಗಿ ರಾಜಕೀಯಕ್ಕೆ ಎಂಟ್ರಿ: ಪರಮೇಶ್ವರ್ ಅವರಿಗೆ ರಾಜಕೀಯಕ್ಕೆ ಬರುವ ಯಾವ ಚಿಂತನೆಯೂ ಇರಲಿಲ್ಲ. ಆದರೆ 1989ರಲ್ಲಿ ಆಗಿನ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರು ಪರಮೇಶ್ವರ್ ಅವರನ್ನು ರಾಜಕೀಯಕ್ಕೆ ಬರುವಂತೆ ಆಹ್ವಾನಿಸಿದ್ದರು.

ಸಿದ್ದಗಂಗಾ ಮಠ ಹಾಗೂ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳ ನಡುವೆ ಉತ್ತಮ ಬಾಂಧವ್ಯವಿದೆ. ಮಿತ, ಮೃದು ಭಾಷಿ ಹಾಗೂ ಉತ್ತಮ ಶಿಕ್ಷಣವಂತರಾಗಿರುವ ಪರಮೇಶ್ವರ್ ಅವರು ಉಪಮುಖ್ಯಮಂತ್ರಿ ಆಗಿರುವುದು ನಾಡಿನ ಜನರ ಸೇವೆ ಮಾಡಲು ಉತ್ತಮ ಅವಕಾಶ ದೊರೆತಿದೆ.
■ ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷರು, ಸಿದ್ದಗಂಗಾ ಮಠ

ಸಿದ್ಧಾರ್ಥ ಮೆಡಿಕಲ್ ಕಾಲೇಜು ಉದ್ಘಾಟನೆಗೆ ಬರುವಂತೆ ರಾಜೀವ್ ಗಾಂಧಿ ಅವರಿಗೆ ಆಹ್ವಾನ ನೀಡಲು ತೆರಳಿದ ಸಂದರ್ಭದಲ್ಲಿ ಪರಮೇಶ್ವರ್ ಅವರನ್ನು ರಾಜಕೀಯಕ್ಕೆ ಬರುವಂತೆ ಆಹ್ವಾನಿಸಿದ್ದರು. ರಾಜಕೀಯಕ್ಕೆ ಬರಲು ಒಪ್ಪಿಗೆ ನೀಡಿದ ಬಳಿಕ 1989ರಲ್ಲಿ ಅವರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಜಂಟಿ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿತ್ತು.

ಹೀಗೆ ರಾಜಕಾರಣಕ್ಕೆ ಕಾಲಿಟ್ಟ ಅವರು 1989ರಲ್ಲಿ ಮಧುಗಿರಿ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿ ಗೆಲುವು ಸಾಧಿಸುವ ಮೂಲಕ ಮೊದಲ ಬಾರಿಗೆ ವಿಧಾನಸಭೆಯನ್ನು ಪ್ರವೇಶಿಸಿದರು. 1993ರಲ್ಲಿ ವೀರಪ್ಪ ಮೊಯ್ಲಿ ಸರಕಾರದಲ್ಲಿ ರೇಷ್ಮೆ ಸಚಿವರಾಗಿ ಅವರು ಮೊತ್ತ ಮೊದಲ ಬಾರಿಗೆ ಸಂಪುಟ ಸೇರಿದರು. ಮರು ವರ್ಷವೇ ನಡೆದ ಚುನಾವಣೆಯಲ್ಲಿ ಅಂದರೆ 1994ರಲ್ಲಿ ಮಧುಗಿರಿ ಕ್ಷೇತ್ರದಲ್ಲಿ ಪರಮೇಶ್ವರ್ ಅವರಿಗೆ ಸೋಲಾಯಿತು. ಬಳಿಕ 1999 ಮತ್ತು 2004ರಲ್ಲಿ ಮಧುಗಿರಿಯಲ್ಲಿ ಮತ್ತೆ ಗೆಲುವು ಸಾಧಿಸಿದರು.

1999ರ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಅವರು ಎಸ್.ಎಂ.ಕೃಷ್ಣ ಸರಕಾರದಲ್ಲಿ ಉನ್ನತ ಶಿಕ್ಷಣ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನದ ಸಚಿವರಾಗಿದ್ದರು. ಇದೇ ವೇಳೆ ವೈದ್ಯಕೀಯ ಶಿಕ್ಷಣ ಸಚಿವರಾಗಿಯೂ ಜವಾಬ್ದಾರಿ ನಿಭಾಯಿಸಿದ್ದರು. 2008ರಲ್ಲಿ ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಬಳಿಕ ಕೊರಟಗೆರೆ ಕ್ಷೇತ್ರಕ್ಕೆ ಬಂದ ಪರಮೇಶ್ವರ್ ಇಲ್ಲಿಂದಲೂ ಶಾಸಕರಾಗಿ ಆಯ್ಕೆಯಾದರು. ಈ ನಡುವೆ 2010ರಲ್ಲಿ ಅವರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡರು.

ಪ್ರಸ್ತುತ ತುಮಕೂರು ಜಿಲ್ಲೆಯ ಕೊರಟಗೆರೆ ಕ್ಷೇತ್ರವನ್ನು ಅವರು ಪ್ರತಿನಿಧಿಸುತ್ತಿದ್ದಾರೆ. ಕಾಂಗ್ರೆಸ್ ಹಿರಿಯ ಮುಖಂಡ ಆಗಿರುವ ಪರಮೇಶ್ವರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ನೀಡುವಂತೆ ಹಲವು ವರ್ಷಗಳಿಂದ ಜೋರಾದ ಕೂಗು ಕೇಳಿ ಬರುತ್ತಿದೆ. ಈ ಬಾರಿಯೂ ಮುಖ್ಯಮಂತ್ರಿ ಹುದ್ದೆ ಲಭಿಸುವ ಮಾತುಗಳು ಕೇಳಿ ಬರುತ್ತಿದ್ದರು ಉಪಮುಖ್ಯಮಂತ್ರಿ ಹುದ್ದೆ ಒಲಿದು ಬಂದಿದೆ.

ಸಂಪಾದಕೀಯ

ಯುವಶಕ್ತಿಗೆ ಹೊಸ ದಿಕ್ಕು

ರಾಜ್ಯದ ವಿದ್ಯಾರ್ಥಿಗಳು ಮತ್ತು ಯುವಜನರ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ರಾಜ್ಯ ಸರ್ಕಾರ ಘೋಷಿಸಿರುವ ಹಲವು ಕ್ರಮಗಳು ಸ್ವಾಗತಾರ್ಹ. ಶಿಕ್ಷಣ, ಉದ್ಯೋಗ, ಕೌಶಲಾಭಿವೃದ್ಧಿ ಮತ್ತು ಯುವ ಸಬಲೀಕರಣಕ್ಕೆ ಒತ್ತು ನೀಡಿರುವುದು ಆಡಳಿತದ ಆದ್ಯತೆಯನ್ನು ತೋರಿಸುತ್ತದೆ.

ಎಲ್ಲ ಹಂತದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವ ನಿರ್ಧಾರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಮಹತ್ವದ ಹೆಜ್ಜೆಯಾಗಿದೆ. ಗ್ರಾಮೀಣ ಮತ್ತು



ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳಿಗೆ ಇದು ಹೆಚ್ಚಿನ ನೆರವಾಗಲಿದೆ. ಶಿಕ್ಷಣದ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಶಾಲಾ-ಕಾಲೇಜುಗಳತ್ತ ಹೆಚ್ಚಿನ ಮಕ್ಕಳನ್ನು ಆಕರ್ಷಿಸುವ ಅವಕಾಶವೂ ಸೃಷ್ಟಿಯಾಗಲಿದೆ.

ಉದ್ಯೋಗಕ್ಷೇತ್ರದಲ್ಲಿ ಖಾಸಗಿ ಕಂಪನಿಗಳು ಮತ್ತು ಉದ್ಯೋಗಾಕಾಂಕ್ಷಿಗಳ ನಡುವೆ ನೇರ ಸಂಪರ್ಕ ಕಲ್ಪಿಸುವ ವ್ಯವಸ್ಥೆ ರೂಪಿಸುವ ನಿರ್ಧಾರವೂ ಗಮನಾರ್ಹ. ಕೇವಲ ಉದ್ಯೋಗ ಸೃಷ್ಟಿಯಷ್ಟೇ ಅಲ್ಲ, ಉದ್ಯೋಗಕ್ಕೆ ಅಗತ್ಯವಾದ ಕೌಶಲ ತರಬೇತಿಯನ್ನು ಒದಗಿಸಿ ಯುವಕರನ್ನು ಸಜ್ಜುಗೊಳಿಸುವುದು ಹೆಚ್ಚು ಪರಿಣಾಮಕಾರಿ ಕ್ರಮವಾಗಿದೆ. ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶವೂ ಸ್ಥಳೀಯ ಪ್ರತಿಭೆಗೆ ಬಲ ತುಂಬಲಿದೆ. ಆದರೆ ಇದನ್ನು ಘೋಷಣೆಗಳ ಮಟ್ಟದಲ್ಲೇ ಉಳಿಸದೆ ಕಾರ್ಯರೂಪಕ್ಕೆ ತರುವುದು ಮುಖ್ಯ.

ಪ್ರತಿ ಪಂಚಾಯಿತಿಯಲ್ಲಿ ಯುವಕ ಸಂಘಗಳನ್ನು ರಚಿಸಿ ಕ್ರೀಡೆ, ಸಂಸ್ಕೃತಿ ಹಾಗೂ ನಾಯಕತ್ವ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಯೋಜನೆ ಸಮಾಜಮುಖಿ ಪ್ರಯತ್ನವಾಗಿದೆ. ಯುವಜನರನ್ನು ಸಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸುವ ಮೂಲಕ ಸಾಮಾಜಿಕ ಸಾಮರಸ್ಯಕ್ಕೂ ಇದು ನೆರವಾಗಬಹುದು. ಆದರೆ ಇದು ಪಕ್ಷದ ರಾಜಕೀಯಕ್ಕಾಗಿ ಮಾಡಿರುವ ಯೋಜನೆ ಎಂಬ ಟೀಕೆಗಳೂ ವ್ಯಕ್ತವಾಗಿವೆ. ಈ ಯೋಜನೆ ಮೂಲಕ ಪಕ್ಷವನ್ನು ಸಂಘಟಿಸುವ ಪ್ರಯತ್ನ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ. ಇದರ ಜೊತೆಗೆ ರಸ್ತೆ ಅಭಿವೃದ್ಧಿಗೆ ಅನುದಾನ, ಇ-ಖಾತಾ ಅಭಿಯಾನ ವಿಸ್ತರಣೆ ಹಾಗೂ ನಾಗರಿಕರ ಕೆಲವು ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಕ್ರಮಗಳು ಅಭಿವೃದ್ಧಿಯತ್ತ ಸರ್ಕಾರದ ಗಮನವನ್ನು ಸೂಚಿಸುತ್ತವೆ. ಆದರೆ ಯಾವುದೇ ಯೋಜನೆಯ ಯಶಸ್ಸು ಅದರ ಘೋಷಣೆಯಲ್ಲಿಲ್ಲ, ಅನುಷ್ಠಾನದಲ್ಲಿದೆ. ನಿಗದಿತ ಅವಧಿಯಲ್ಲಿ ಸ್ಪಷ್ಟ ಫಲಿತಾಂಶಗಳು ಕಂಡುಬಂದಾಗ ಮಾತ್ರ ಈ ನಿರ್ಧಾರಗಳ ನಿಜವಾದ ಮೌಲ್ಯ ಜನರಿಗೆ ತಲುಪಲಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಹೊಸದಾಗಿ ಬಂದಿರುವ ಸರ್ಕಾರ ಆರು ಘೋಷಣೆಗಳ ಮೂಲಕ ಜನರ ಮನಸ್ಸು ಗೆಲ್ಲಲು ಹೊರಟಿದೆ. ವಿದ್ಯಾರ್ಥಿಗಳ ಪಾಸ್, ನಿರುದ್ಯೋಗಿಗಳ ಅನುಕೂಲಕ್ಕಾಗಿ ಖಾಸಗಿ ಉದ್ಯೋಗ ವಿನಿಮಯ ಕೇಂದ್ರಗಳು ಯುವಕರಿಗೆ ಅನುಕೂಲ ಮಾಡಿಕೊಡಬಹುದು.

ಟಿಕೆಟ್-ಬಕೆಟ್‌ಗಳ ನಡುವೆ ಹೋರಾಟ ಎಲ್ಲಿದೆ?

ಉಘೇ ವೀರಭೂಮಿಗೆ
• ಸಂತೋಷ್ ತಮ್ಮಯ್ಯ
santoshthammaiah@gmail.com



ಕೆಲವು ತಿಂಗಳುಗಳಿಂದ ಚರ್ಚೆಯಲ್ಲಿದ್ದ ಅಧಿಕಾರ ಹಸ್ತಾಂತರದ ಸಂಗತಿ ಜನಸಾಮಾನ್ಯರಿಗೇನೂ ಅತ್ಯಂತ ಪ್ರಮುಖವಾಗಿರಲಿಲ್ಲ. ಆದರೆ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟಾಗ ಮತ್ತು ಡಿ.ಕೆ. ಶಿವಕುಮಾರ್ ಪದಗ್ರಹಣ ಮಾಡಿದಾಗ ಅದು ಜನಸಾಮಾನ್ಯರ ಮಟ್ಟದಲ್ಲಿ ಪ್ರಮುಖ ಸಂಗತಿಯಾಗಿ ಬದಲಾಗಿತ್ತು. ಯಾಕಿದು ಎನ್ನುವುದಕ್ಕೆ ಅನೇಕರು ಅನೇಕ ಕಾರಣಗಳನ್ನು ನೀಡಬಹುದು. ಆದರೆ ಪ್ರಮುಖ ಕಾರಣ ಇಬ್ಬರೂ ಆಕಸ್ಮಿಕ ಮುಖ್ಯಮಂತ್ರಿಗಳಲ್ಲ ಮತ್ತು ಅದನ್ನು ಸುಲಭವಾಗಿ ಗಳಿಸಿದವರಲ್ಲ ಎಂಬುದು. ಇಬ್ಬರೂ ನಿರಂತರ ಹೋರಾಟಗಳ ಮೂಲಕ ಮುಖ್ಯಮಂತ್ರಿಗಳಾದವರು. ರಾಜಕೀಯ ಮತ್ತು ಸಾಮಾಜಿಕ ಹೋರಾಟಗಳ ಫಲವಾಗಿ ಆ ಸ್ಥಾನಕ್ಕೇರಿದವರು. ರಾಜ್ಯದ ರಾಜಕೀಯ ಇತಿಹಾಸವನ್ನೇ ನೋಡಿದರೆ ಜನ ಎಲ್ಲಾ ಮುಖ್ಯಮಂತ್ರಿಗಳ ಹೆಸರನ್ನೇನೋ ನೆನಪಿನಲ್ಲಿಟ್ಟುಕೊಂಡಿರಬಹುದು, ಆದರೆ ಹೋರಾಟಗಾರ ಮುಖ್ಯಮಂತ್ರಿಗಳಿಗೆ ಮಾತ್ರ ಸ್ಥಾನವನ್ನು ಕೊಟ್ಟಿದ್ದಾರೆ.

ಸ್ವಾತಂತ್ರ್ಯ ಹೋರಾಟ ಮತ್ತು ರಾಜ್ಯದ ಆರಂಭಿಕ ಆಡಳಿತವನ್ನು ಸ್ಥಿರಗೊಳಿಸಿದ ಕಾರಣಕ್ಕಾಗಿ ಕೆ.ಸಿ ರೆಡ್ಡಿ, ಕೆಂಗಲ್ ಹನುಮಂತಯ್ಯನವರನ್ನು, ಏಕೀಕರಣಕ್ಕಾಗಿ ನಿಜಲಿಂಗಪ್ಪನವರನ್ನು, ಪಂಚಾಯತ್ ರಾಜ್ ಹೋರಾಟಕ್ಕಾಗಿ ರಾಮಕೃಷ್ಣ ಹೆಗಡೆಯವರನ್ನು, ಸಾಮಾಜಿಕ ನ್ಯಾಯದ ಹೋರಾಟಕ್ಕಾಗಿ ಬಂಗಾರಪ್ಪನವರನ್ನು, ತುರ್ತುಪರಿಸ್ಥಿತಿ ಮತ್ತು ರೈತ ಹೋರಾಟಕ್ಕಾಗಿ ದೇವೇಗೌಡರನ್ನು, ದೂರದೃಷ್ಟಿ ಮತ್ತು ಮುತ್ಸದ್ದಿತನಕ್ಕಾಗಿ ಎಸ್.ಎಂ ಕೃಷ್ಣನವರನ್ನು, ರೈತ ಹೋರಾಟಕ್ಕಾಗಿ ಯಡಿಯೂರಪ್ಪನವರನ್ನು, ಅಹಿಂದ ಮತ್ತು ಸಾಮಾಜಿಕ ನ್ಯಾಯದ ಹೋರಾಟಕ್ಕಾಗಿ ಸಿದ್ದರಾಮಯ್ಯನವರನ್ನು ರಾಜ್ಯ ಸದಾ ನೆನಪಿನಲ್ಲಿಟ್ಟುಕೊಂಡಿದೆ. ಇವರೆಲ್ಲರೂ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ. ಇನ್ನುಳಿದ ಮುಖ್ಯಮಂತ್ರಿಗಳು ಅಭಿವೃದ್ಧಿ ಮತ್ತು ರಾಜಕಾರಣದ ನಡೆಗಳಲ್ಲಿ ದಿಟ್ಟ ಹೆಜ್ಜೆಗಳನ್ನೇನೂ ಇಟ್ಟಿರಬಹುದು. ಆದರೆ ಅವರಲ್ಲಿ ಬಹುತೇಕರು ಆಕಸ್ಮಿಕವಾಗಿ ಗಾದಿಗೇರಿದವರು. ಪಕ್ಷ ರಾಜಕಾರಣದಲ್ಲಿ ಎಲ್ಲರಿಗೂ ಅವರವರ ಸೈದ್ಧಾಂತಿಕ ಚೌಕಟ್ಟುಗಳಿರುತ್ತವೆ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದ ಸಿದ್ದರಾಮಯ್ಯನವರಿಗೆ ರಾಷ್ಟ್ರೀಯವಾದಿಗಳ ಬಗೆಗೆ ಪೂರ್ವಗ್ರಹಗಳಿದ್ದುದರ ಹೊರತಾಗಿಯೂ ಅವರ ಸಾಮಾಜಿಕ ನ್ಯಾಯದ ಕಾಳಜಿಯನ್ನು ಅಲ್ಲಗಳೆಯಲಂತೂ ಸಾಧ್ಯವಿಲ್ಲ. ಇನ್ನುಳಿದಂತೆ ಬಿಜೆಪಿಯಲ್ಲಿ ಮುಖ್ಯಮಂತ್ರಿಗಳಾಗಿದ್ದವರೆಲ್ಲರೂ ಹಿಂದುತ್ವದ ಹೆಸರಲ್ಲಿ ಅಧಿಕಾರಕ್ಕೆ ಬಂದರೂ ಕೊನೆಯವರೆಗೂ ಅವರು ಪ್ರತಿಪಾದಿಸುತ್ತಿದ್ದ ಹಿಂದುತ್ವ ಯಾವುದು ಎಂದು ಸಮಾಜಕ್ಕೆ ಕೊನೆಯವರೆಗೂ ಅರ್ಥವಾಗಲಿಲ್ಲ! ರಾಜ್ಯದಲ್ಲಿ ಮುಖ್ಯಮಂತ್ರಿಗಳಾದ ಬಹುತೇಕರು ಹಾಳೆ ಕಳೆದುಕೊಂಡು ಅರ್ಧ ದಾರಿಯಲ್ಲೇ ಸರದಿ ತಪ್ಪಿಸಿಕೊಂಡವರೂ ಕಾಣಸಿಗುತ್ತಾರೆ. ಆದರೆ ಜೆಡಿಎಸ್‌ನಲ್ಲಿದ್ದ ಸಿದ್ದರಾಮಯ್ಯನವರು ಕಾಂಗ್ರೆಸಿಗೆ ಬಂದರೂ ಅವರ ವಿಚಾರ ಸ್ಪಷ್ಟತೆ ಕೊನೆಯವರೆಗೂ ಹಾಗೆಯೇ ಇತ್ತು. ಚುನಾವಣೆ ಸ್ಪರ್ಧಿಸಲು ಅಭ್ಯರ್ಥಿಗಳೇ ಸಿಗದ ಕಾಲದಲ್ಲೂ ಯಡಿಯೂರಪ್ಪನವರ ಹಾಳೆಗೆ ಗೆದ್ದಲು ಹಿಡಿಯಲಿಲ್ಲ. ರೈತಪರ ಹೋರಾಟಗಳಿಂದ ಹಿಂದೆ ಸರಿಯಲಿಲ್ಲ. ವಿಚಾರಸ್ಪಷ್ಟತೆಯಲ್ಲಿ ಅವರಿಗೆಂದೂ ಸಂಶಯ ಬಾಧಿಸಲಿಲ್ಲ. ಹಾಗೆಯೇ ಡಿ.ಕೆ. ಶಿವಕುಮಾರ್ ತಮ್ಮ ರಾಜಕೀಯ ಜೀವನದ ಆರಂಭದಿಂದಲೂ ಒಂದೇ ವಿಚಾರಧಾರೆಯನ್ನು ನಂಬಿ ಗೆದ್ದರು, ಸೋತರು, ಟಿಕೇಟ್ ನಿರಾಕರಿಸಿದಾಗ ತಾವೇ ಸ್ಪರ್ಧಿಸಿದರು. ತಮ್ಮ ಮೂಲ ಸ್ವಭಾವ ಮತ್ತು ತಾನು ನಂಬಿದ ರಾಜಕೀಯ ಸಿದ್ಧಾಂತಗಳನ್ನು ಎಂದಿಗೂ ಬಿಡಲಿಲ್ಲ. ಜೊತೆಗೆ ತಾನು ನಂಬಿದ ಜೀವನ ಮೌಲ್ಯಗಳನ್ನೂ ಬಿಡಲಿಲ್ಲ. ಹೇಗೆ ತಮ್ಮ ಯೌವನದ ದಾದಾಗಿರಿಯ ದಿನಗಳನ್ನು ಬಹಿರಂಗವಾಗಿ ಹೇಳಿಕೊಂಡರೋ ಹಾಗೆಯೇ ಸೆಕ್ಯುಲರ್ ಭ್ರಮೆಯಲ್ಲಿರುವ ಪಕ್ಷದೊಳಗಿದ್ದೂ ತಾನೊಬ್ಬ ಹೆಮ್ಮೆಯ ಹಿಂದು ಎಂದೂ ಬಹಿರಂಗವಾಗಿ ಹೇಳಿಕೊಂಡರು. ಅವರ ಬಹುತೇಕ ಹೋರಾಟಗಳು ಪಕ್ಷಕ್ಕಾಗಿ ನಡೆಸಿದ ಹೋರಾಟಗಳೇ ಇರಬಹುದು. ಆದರೆ ಅವರ ಬದ್ಧತೆ-ನಿಷ್ಠೆಯ ಗುಣಗಳು ಪಕ್ಷದಾಚೆಗೂ ಅವರಿಗೆ ಹೋರಾಟಗಾರನ ವ್ಯಕ್ತಿತ್ವವನ್ನು ತಂದುಕೊಟ್ಟವು.

ತನ್ನ ಸಾಮರ್ಥ್ಯದ ನೆಲೆಯಲ್ಲಿ ಹಕ್ಕು ಮತ್ತು ಮೌಲ್ಯಗಳಿಗಾಗಿ ಸಂಘಟಿತ ರೀತಿಯಲ್ಲಿ ತೊಡಗಿಕೊಳ್ಳುವ ರಾಜಕೀಯ ಮತ್ತು ಸಾಮಾಜಿಕ ಕ್ರಿಯೆಗಳಿಂದ ಇವರೆಲ್ಲರೂ ಇಂದು ನೆನಪಿನಲ್ಲುಳಿಯುತ್ತಾರೆ. ಡಿ.ಕೆ. ಶಿವಕುಮಾರ್ ಅವರ ಮೇಕೆದಾಟು ಮತ್ತು ಭಾರತ್ ಜೋಡೊ ಯಾತ್ರೆಯಲ್ಲಿ, ಸಿದ್ದರಾಮಯ್ಯನವರ ಬಳ್ಳಾರಿ ಪಾದಯಾತ್ರೆಯಲ್ಲಿ ಪಕ್ಕಾ ರಾಜಕೀಯ ದ್ವೇಷ-ಪಕ್ಷ ಸಂಘಟನೆಯ ಉದ್ದೇಶಗಳು ರಾಚಬಹುದು. ಆದರೆ ಹಿಂದಿದ್ದ ಛಾತಿ? ಹೇಗೆ ಯಡಿಯೂರಪ್ಪನವರು ಅನೇಕ ದಶಕಗಳ ಕಾಲ ರೈತರ ವಿವಿಧ ಹಕ್ಕುಗಳಿಗಾಗಿ ಹೋರಾಡುತ್ತಾ ಬಂದರೋ ಆ ಕಾರಣದಿಂದಲೇ ಅವರ ಪಕ್ಷ ಬೆಳೆಯಿತು. ಯಾವ ಹೋರಾಟಗಳೂ ಕೇವಲ ಅಸಹನೆಯಿಂದ ಮುನ್ನಡೆಯಲಾರದು. ಸ್ಪಷ್ಟ ಗುರಿ ಮತ್ತು ದಾರಿ ಇದ್ದರಷ್ಟೇ ಅದು ಹೋರಾಟ. ಅದಕ್ಕೆ ಇಂಧನವಾಗಬೇಕಾಗಿರುವುದು ಬದ್ಧತೆ, ಶ್ರಮ ಮತ್ತು ಸಮಾಜ ಪ್ರೀತಿ. ಈ ಮುಖ್ಯಮಂತ್ರಿಗಳಲ್ಲಿ ಅವೆಲ್ಲವೂ ಇತ್ತು. ಕೇವಲ ಅಧಿಕಾರಾಕಾಂಕ್ಷೆಯಿಂದ ನಡೆಯುವುದು ಕೂಡ ಹೋರಾಟವಲ್ಲ. ಹೋರಾಟದ ಫಲಶ್ರುತಿಯಿಂದ ಅಧಿಕಾರ ದಕ್ಕಬಹುದು. ಆದ್ದರಿಂದ ಹೋರಾಟವನ್ನು ಸಂಪೂರ್ಣವಾಗಿ ಅಧಿಕಾರಾಕಾಂಕ್ಷೆಗಾಗಿ ನಡೆಯಲ್ಪಡುವ ಪ್ರಕ್ರಿಯೆ ಎನ್ನಲಾಗದು. ಉದಾಹರಣೆಗೆ ರಷ್ಯಾದಲ್ಲಿ ಪುಟಿನ್ 1999ರಿಂದಲೂ ಆಂತರಿಕ ಮತ್ತು ಬಾಹ್ಯ ಶಕ್ತಿಗಳ ವಿರುದ್ಧ ಹೋರಾಡುತ್ತಾ ಬಂದ. ಆತನ ಮೇಲೂ ರಷ್ಯಾ ಸ್ವಪ್ರತಿಷ್ಠೆಗಾಗಿ ಎಂಬ ಆರೋಪವನ್ನು ಹೊರಿಸಿತ್ತು. ಆದರೆ ಆತನ ಹೋರಾಟದಿಂದ ಮುಂದೆ ಸಮಸ್ತ ಯೂರೋಪು ಅಸ್ಥಿರಗೊಳ್ಳುವಂತಾಯಿತು, ನ್ಯಾಟೋ ಪ್ರಭಾವ ತಗ್ಗಿತು. ಕೊನೆಗೆ ರಷ್ಯಾದ ಶಕ್ತಿಯೇ ಹೆಚ್ಚಿತು. ಚೀನಾದಲ್ಲಿ ಜಿಂಗ್ ಪಿನ್ ಅಧ್ಯಕ್ಷನ ಅಧಿಕಾರ ಮಿತಿಯನ್ನು ವಿಸ್ತರಣೆ ಮಾಡಿದಾಗಲೂ ಇದೇ ರೀತಿಯ ಆರೋಪವನ್ನು ಹೊರಬೇಕಾಯಿತು. ಆದರೆ ಅದರಿಂದಲೇ ಮುಂದೆ ಚೀನಾದಲ್ಲಿ ಆರ್ಥಿಕ ಸುಧಾರಣೆಗಳಾದವು. ರಾಜಕೀಯಶಾಸ್ತ್ರದಲ್ಲಿ ಇಂಥ ಸಂಕೀರ್ಣ ವಿಷಯಗಳ ಬಗೆಗೆ ಮಹಾಮಹಾ ಪ್ರಬಂಧಗಳೇ ಇವೆ. ಆದರೆ ಒಂದೇ ಸಾಲಿನಲ್ಲಿ ಹೋರಾಟವನ್ನು ಹೇಳಬಹುದಾದರೆ, 'ಛಲ ಬಿಡದೆ, ಎದೆಗುಂದದೆ ಸುದೀರ್ಘ ಕಾಲ ಒಂದು ಸಂಗತಿಗಾಗಿ ಮುನ್ನುಗ್ಗುವುದೇ ಹೋರಾಟ'. ಯಾವ ಸಂಗತಿಗಾಗಿ ಯಡಿಯೂರಪ್ಪನವರನ್ನು ಅಷ್ಟ ದಿಕ್ಕುಗಳಿಂದ ತೂರಿ ಬರುವ ಬಾಣಗಳನ್ನೆದುರಿಸಿ ನಿಂತರೋ ಅದೇ ಹೋರಾಟ. ರಾಜಕೀಯ ಏರುಪೇರುಗಳ ನಡುವೆಯೂ ಸಹನೆಯಿಂದ ಕಾದು ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೇರಿದ್ದು ಅದಕ್ಕೆ ತಾಜಾ ಉದಾಹರಣೆ. ಬಹುಶಃ ಕರ್ನಾಟಕದ ಪಾಲಿಗೆ ಕೊನೆಯ ಉದಾಹರಣೆ ಕೂಡ!

If there is no struggle, there is no progress ಎಂಬೊಂದು ಮಾತಿದೆ. ರಾಜಕಾರಣದಲ್ಲಿ ಹೋರಾಟಗಳಿಲ್ಲದಿದ್ದರೆ ಅದು ರಾಜಕಾರಣವೇ ಅಲ್ಲ. ಹೋರಾಟಗಳಿಲ್ಲದಿದ್ದರೆ ಆಡಳಿತದಲ್ಲಿ ಕಾನೂನು ಜಾರಿ ಮಾತ್ರ ನಡೆಯಬಹುದೇ ಹೊರತು ಸಂವಿಧಾನದ ಆಶಯಗಳು ಈಡೇರಲಾರವು. ಹೋರಾಟದ ಅನುಪಸ್ಥಿತಿ ಎಂದರೆ ವ್ಯವಸ್ಥೆಯ ಅಸ್ವಾಭಾವಿಕ ಸ್ಥಿತಿ! ಕರ್ನಾಟಕ ರಾಜಕಾರಣದಲ್ಲಿ ಹೋರಾಟಗಳು ಸತ್ತು ಎಷ್ಟು ವರ್ಷಗಳಾದವು ಎಂಬುದನ್ನೊಮ್ಮೆ ನೆನಪು ಮಾಡಿಕೊಳ್ಳಿ. ಇಂದು ರಾಜ್ಯದ ಎಲ್ಲಾ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳೂ ಹಲ್ಲಿಲ್ಲದ ಹಾವಿನಂತೆ ಕಾಣುತ್ತಿರುವುದಕ್ಕೆ ಅವುಗಳಲ್ಲಿ ಹೋರಾಟದ ಕೆಚ್ಚಿಲ್ಲದಿರುವುದೇ ಕಾರಣ. ಹೋರಾಟಕ್ಕೆ ಸರಕುಗಳಿವೆ, ಹೋರಾಡಬಲ್ಲ ನಾಯಕರುಗಳಿದ್ದಾರೆ. ಆದರೆ ಹೋರಾಟಗಳೇ ಮಾಯ! ಎಲ್ಲಾ ರಾಜಕೀಯ ಪಕ್ಷಗಳಲ್ಲಿಂದು ಅಧಿಕಾರಕ್ಕೇರುವುದೇ ಮೊದಲ ಆದ್ಯತೆ. ಹೋರಾಟದ ಕೆಚ್ಚೆಲ್ಲವೂ ಉಗ್ರ ಭಾಷಣಗಳ ಕೊನೆಯಲ್ಲಿ ಬೀಳುವ ಚಪ್ಪಾಳೆಗಳಲ್ಲಿ ಕೊನೆಗೊಳ್ಳುತ್ತದೆ. ಅಧಿಕಾರಕ್ಕೇರಬಲ್ಲ ಸರಳ ಮಾರ್ಗಗಳೇ ಸದ್ಯದ ರಾಜಕೀಯ ಚಳವಳಿ!

ಹಾಗಾಗಿ ಹೋರಾಟಗಾರ ಮುಖ್ಯಮಂತ್ರಿಗಳಲ್ಲಿ ಬಹುಶಃ ಡಿ.ಕೆ. ಶಿವಕುಮಾರರೇ ಕೊನೆಯವರು.

ಇತ್ತೀಚಿನ ಕೆಲ ಉದಾಹರಣೆಗಳನ್ನೇ ನೋಡಿ, ವಾಲ್ಮೀಕಿ ಹಗರಣ ವಿರೋಧ ಪಕ್ಷಗಳಿಗೆ ಹೋರಾಟದ ನಿರಂತರತೆಗೆ ಸರಕಾಗಲಿಲ್ಲ. ಹಿಂದು ಕಾರ್ಯಕರ್ತರ ಮೇಲಿನ ಮೊಕದ್ದಮೆಗಳು ಹೋರಾಟದ ಸರಕಾಗಲಿಲ್ಲ. ಹಿಜಾಬ್ ಮತ್ತು ಜನಿವಾರಗಳೆರಡನ್ನೂ ಧರಿಸಬಹುದೆಂದ ಸಂಗತಿ ಹಿಂದುತ್ವ ಪ್ರತಿಪಾದಿಸುವ ಪಕ್ಷಕ್ಕೆ ಹೋರಾಟ ಮಾಡಬಲ್ಲ ಸಂಗತಿ ಎನಿಸಲಿಲ್ಲ! ಅಂದರೆ ಜನಿವಾರವನ್ನು ಅವರೂ ಕೂಡ ವಸ್ತಸಂಹಿತೆಯ ಸಾಲಲ್ಲಿ ಸೇರಿಸಿಬಿಟ್ಟಿದ್ದರು! ನೀಟ್ ಪರೀಕ್ಷೆಯ ಸಂಗತಿ ಕಾಂಗ್ರೆಸಿಗೂ ಹೋರಾಟದ ಸರಕಾಗಲಿಲ್ಲ. ಇಂಥ ಸಂಗತಿಗಳನ್ನು ಬಿಟ್ಟು ಕಾಂಗ್ರೆಸ್ ಮೋದಿಯವರ ವಿದೇಶಿ ಪ್ರವಾಸದ ಬಗ್ಗೆ ಮಾತಾಡುತ್ತದೆ. ಬಿಜೆಪಿ ಕೂಡ ಡಿಕೆಶಿಯ ಶಾಲಿನ ಬೆಲೆಯನ್ನೇ ಜ್ವಲಂತ ಸಮಸ್ಯೆ ಎಂಬಂತೆ ಬಿಂಬಿಸುತ್ತದೆ. ಕಾಂಗ್ರೆಸ್ ವಿಜಯೇಂದ್ರರ ನಾಯಕತ್ವಕ್ಕೆ ವಂಶವಾದ ಪಟ್ಟ ಕಟ್ಟುತ್ತದೆ. ಹಾಗಾದರೆ ಬಿಜೆಪಿಯಲ್ಲಿ ದುಬಾರಿ ಶಾಲು ಧರಿಸುವವರಿಲ್ಲವೇ? ಕಾಂಗ್ರೆಸಿನಲ್ಲಿ ವಂಶವಾದವಿಲ್ಲವೇ? ಇನ್ನೊಂದು ವಿಚಿತ್ರವೆಂದರೆ ಸ್ವಾತಂತ್ರ್ಯ ಕಾಲದ ಕಾಂಗ್ರೆಸ್ ಮೋದಿಯನ್ನು ವಿರೋಧಿಸುವ ಭರದಲ್ಲಿ ದೇಶವನ್ನೇ ವಿರೋಧಿಸುತ್ತದೆ. ರಾಜ್ಯದ ಎಲ್ಲಾ ಪಕ್ಷಗಳ ಒಳಗೆ ಇಂದು ಜಿಹುಜೂರ್ ಸಂಸ್ಕೃತಿ ಮನೆಮಾಡಿದೆ. ಪ್ರಜ್ಞಾವಂತ-ವಿದ್ಯಾವಂತ-ಬುದ್ಧಿವಂತರೇನೋ ರಾಜಕೀಯಕ್ಕೆ ಬರುತ್ತಿದ್ದಾರೆ. ಆದರೆ ರಾಜಕಾರಣದ ಒಳಕೋಣೆಯ ಪ್ರವೇಶಕ್ಕೆ ಡೈ ಪ್ಲೂಟಿನ ಪೆಟ್ಟಿಗೆ ಕೊಂಡೊಯ್ಯಲೇಬೇಕು, ಮಸಲತ್ತು ಮಾಡಲೇಬೇಕು. ಅಂದರೆ ವರಿಷ್ಠರ ಕೃಪಾಕಟಾಕ್ಷಕ್ಕೆ ಬಿಳಲೇಬೇಕು. ಬಿಜೆಪಿಯೊಳಗೆ ಬರುವವರು ಇನ್ನಿಲ್ಲದಂತೆ ತನ್ನನ್ನು ತಾನು ಹಿಂದು ಎಂದು ಬಿಂಬಿಸಲ್ಪಡಲು ಸರ್ಕಸ್ ಮಾಡಬೇಕು. ಹಾಗೆ ಕಾಂಗ್ರೆಸಿನೊಳಗೆ ಪ್ರವೇಶಿಸುವವನೂ ಅರೆಬರೆ ಸೆಕ್ಯುಲರ್ ಜ್ಞಾನವನ್ನು ವರಿಷ್ಠರ ಮುಂದೆ ಪ್ರದರ್ಶಿಸಲೇಬೇಕು! ಇನ್ನು ಜೆಡಿಎಸ್‌ಗೆ ಹೋಗಬೇಕೆಂದುಕೊಂಡವನದ್ದು ಬೇರೆಯೇ ಕಥೆ. ಹಾಗಾದರೆ ಬಕೆಟ್ ಹಿಡಿಯಲಾರದ ಸಂವೇದನಾಶೀಲರದ್ದೇನು ಗತಿ? ಸ್ವಾಭಿಮಾನಿಗಾರು ದಿಕ್ಕು? ಎಲ್ಲಾ ಪಕ್ಷಗಳು ಒಂದೇ ರೀತಿ ಕಾಣುವುದಕ್ಕೆ ಇನ್ನೂ ಒಂದು ಕುತೂಹಲಕರ ಸಂಗತಿಯಿದೆ. ಕಾಂಗ್ರೆಸಿನಲ್ಲಿ ವಂಶ ರಾಜಕಾರಣ ತೆರೆದ ಪುಸ್ತಕ. ಯಾವ ಮುಜುಗರವಿಲ್ಲದೆ ಒಂದೇ ಕ್ಷೇತ್ರವನ್ನು ಮೂರು ತಲೆಮಾರುಗಳು ಆಳುತ್ತಾ ಬರುವುದು ಅಲ್ಲಿ ಗಂಭೀರವಾದ ಸಂಗತಿಯಲ್ಲ. ಆದರೆ ಬಿಜೆಪಿಯಲ್ಲಿ ಅದು ಅಷ್ಟು ಸುಲಭವಲ್ಲ. ಆದರೆ ಪ್ರತಿಷ್ಠಾಪನೆಗಾಗಿ ಅಲ್ಲಿ ಬೇರೆಬೇರೆ ರೀತಿಯ ವಸೀಲುಗಳಿವೆ! ರಾಜಕಾರಣದಲ್ಲಿ ಇಂಥವೇ ನಡೆದರೆ ಇನ್ನು ವಿಷಯಾಧಾರಿತ ರಾಜಕಾರಣಕ್ಕೆ ಬಿಡುವೆಲ್ಲಿ? ಹೋರಾಟಗಳಿಲ್ಲದೆ ಸಿದ್ಧಾಂತಗಳು ಆಕಾರ ಪಡೆಯುವುದು ಹೇಗೆ? ಹೊಸ ನಾಯಕತ್ವ ನಿರ್ಮಾಣವಾಗುವುದು ಹೇಗೆ? ನರೇಂದ್ರ ಮೋದಿಯವರೇನೋ ಒಂದು ಲಕ್ಷ ಯುವಕರನ್ನು ರಾಜಕಾರಣಕ್ಕೆ ಇಳಿಸುತ್ತೇನೆ ಎನ್ನುತ್ತಾರೆ. ಅವರ ಮಾತನ್ನು ಕೇಳಿ ರಾಜಕೀಯದಂಗಳಕ್ಕೆ ಬಂದವನನ್ನು ಅರೆಜೀವಗೊಳಿಸಬಲ್ಲ ಎಲ್ಲಾ ವಿದ್ಯೆಗಳು ಹೋರಾಟ ಮರೆತ ರಾಜಕೀಯ ಪಕ್ಷಗಳಲ್ಲಿವೆ. ಅಂಥ ಅಣ್ಣಾಮಲೈಯಂಥ ಅಣ್ಣಾಮಲೈಯವರಿಗೆ ಬಿಜೆಪಿಯಂಥ ಪಕ್ಷದಲ್ಲಿ ಕಷ್ಟವಾಯಿತೆಂದರೆ ರಾಜಕಾರಣ ಸಂವೇದನಾಶೀಲರಿಗಲ್ಲ ಎಂಬ ಭಾವನೆ ಮೂಡಲಾರದೇ? ರಾಜಕೀಯ ರಂಗ ಶ್ರೀಮಂತರ ಕಾಸ್ಟ್ಲೀ ಹವ್ಯಾಸ ಎನ್ನುವ ದೊಡ್ಡ ವರ್ಗ ಇಂದೂ ಇದೆ. ಪ್ರಯೋಗದ ಹೆಸರಲ್ಲಿ ರಾಜಕೀಯಕ್ಕೆ ಬಂದ ಬಡವನೂ ಕೊನೆಗೇನಾಗುತ್ತಾನೆ ಎಂಬುದನ್ನು ರಾಜ್ಯ ನೋಡಿದೆ!

ಇತ್ತೀಚೆಗೆ ತಮಿಳುನಾಡು ವಿಧಾನಸಭೆಗೆ ಆಯ್ಕೆಯಾದ ಆಟೋ ಚಾಲಕನೊಬ್ಬ ಪ್ರಮಾಣವಚನ ಕಾರ್ಯಕ್ರಮಕ್ಕೆ ತೆರಳಲು ಅಂಗಡಿಯೊಂದರಲ್ಲಿ ಚಿನ್ನಾಭರಣಗಳನ್ನು ಬಾಡಿಗೆಗೆ ಕೇಳಿದ್ದ ಸುದ್ದಿ ರಾಜಕಾರಣದಲ್ಲಿ ಬಡವ vs ಶ್ರೀಮಂತ ವ್ಯಾಖ್ಯಾನವನ್ನು ಅಣಕಿಸಿದಂತಿತ್ತು! ಈ ಎಲ್ಲಾ ಅಪಸವ್ಯಗಳಿಗೆ ಮತ್ತದೇ ಕಾರಣ ರಾಜಕಾರಣ ತನ್ನ ಮೂಲ ಆಶಯದಿಂದ ದಿನೇ ದಿನೇ ದೂರವಾಗುತ್ತಿರುವುದು! ಮೌಲ್ಯಾಧಾರಿತ ರಾಜಕಾರಣ ಎಂಬುದು ಈಗ ಬಹುದೂರದ ಸಂಗತಿ. ರಾಜಕಾರಣದಲ್ಲಿ ಕನಿಷ್ಠ ಹೋರಾಟಗಳಾದರೂ ಇರಲಿ ಎಂಬುದು ಸದ್ಯದ ತುರ್ತು. ರಾಜಕಾರಣದಲ್ಲಿ ಸರಿಯಾದ ಅಷ್ಟಬಂಧ ಬ್ರಹ್ಮಕಲಶ-ಪುನರ್ ಪ್ರತಿಷ್ಠೆಗಳಾಗಲು ಇದು ಸರಿಯಾದ ಸಮಯ.

ತಿಳಿವು ಮುಖ್ಯವಲ್ಲ, ಆಚರಣೆ ಮುಖ್ಯ

ಅಜ್ಞೇಭ್ಯೋ ಗ್ರಂಥಿನಃ ಶ್ರೇಷ್ಠಾಃ ಗ್ರಂಥಿಭ್ಯೋ ಧಾರಿಣೋ ವರಾಃ ।
ಧಾರಿಭ್ಯೋ ಜ್ಞಾನಿನಃ ಶ್ರೇಷ್ಠಾಃ ಜ್ಞಾನಿಭ್ಯೋ ವ್ಯವಸಾಯಿನಃ ॥ -ಮನುಸ್ಮೃತಿ

ಏನೂ ತಿಳಿಯದವರಿಗಿಂತ ಗ್ರಂಥವನ್ನು ಓದಿದವರು ಶ್ರೇಷ್ಠರು. ಗ್ರಂಥವನ್ನು ಓದಿದವರಿಗಿಂತ ಅದನ್ನು ಸ್ಮೃತಿಯಲ್ಲಿಟ್ಟುಕೊಂಡವರು ಶ್ರೇಷ್ಠರು. ಗ್ರಂಥ ಧಾರಣೆ ಮಾಡಿದವರಿಗಿಂತ ಅದನ್ನು ಚೆನ್ನಾಗಿ ತಿಳಿದವರು ಶ್ರೇಷ್ಠರು. ತಿಳಿದವರಿಗಿಂತಲೂ ಅದನ್ನು ಕಾರ್ಯಾಚರಣೆಯಲ್ಲಿ ಇಟ್ಟುಕೊಂಡವರು ಶ್ರೇಷ್ಠರು - ಎಂಬುದು ಶ್ಲೋಕಾರ್ಥ.



ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಬೇರೆ ಬೇರೆ ಕಾರಣಗಳಿಂದ, ಅವರು ಮಾಡುವ ಮಹತ್ ಕಾರ್ಯದಿಂದ ಜನರನ್ನು ಶ್ರೇಷ್ಠರು ಎಂದು ಗುರುತಿಸುತ್ತೇವೆ. ಮನುಷ್ಯರಾಗಿ ಹುಟ್ಟಿದ ಮೇಲೆ, ಪ್ರಕೃತಿಯಲ್ಲಿರುವ ವಸ್ತುಗಳಿಂದ ಪ್ರಯೋಜನ ಪಡೆದುಕೊಂಡ ಮೇಲೆ ಉತ್ತಮ ಕೆಲಸಗಳನ್ನು ಮಾಡಿ ಉತ್ತಮರು, ಶ್ರೇಷ್ಠರು ಎಂದು ಗುರುತಿಸುವಂತೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯ. ಜೀವನದಲ್ಲಿ ಒಳ್ಳೆಯದನ್ನು ಮಾಡಬೇಕು. ಅದು ಸಾಧ್ಯವಾಗದಿದ್ದರೆ ಸುಮ್ಮನಿರಬೇಕು. ಕೆಟ್ಟ ಕೆಲಸವನ್ನೆಂದು ಮಾಡಬಾರದು. ಹಾಗೆ ಮಾಡಿದರೆ ಮನುಷ್ಯ ಜನ್ಮವನ್ನು ಹಾಳು ಮಾಡಿಕೊಂಡಂತೆ.

ಪ್ರಕೃತ ಶ್ಲೋಕ ನಿರೂಪಿಸುವ, ನಿರ್ದೇಶಿಸುವ ಶ್ರೇಷ್ಠತೆ ಇನ್ನೊಂದು ಬಗೆಯಲ್ಲಿದೆ. 'ನುಡಿದಂತೆ ನಡೆದವನ ಅಡಿಗೆನ್ನ ನಮನ' ಎಂಬ ಸೂಕ್ತಿ ಸಾಲಿದೆ. ನಡೆದು ತೋರಿಸುವವನೇ ಸರ್ವಶ್ರೇಷ್ಠ. ನುಡಿಯುವವರಿದ್ದಾರೆ. ಆದರೆ ನುಡಿಗನುಗುಣವಾಗಿ ನಡೆ ಇರುವುದಿಲ್ಲ. ನುಡಿಗೂ, ನಡೆಗೂ ಮಹದಂತರ. ಇಂಥವರನ್ನು ಲೋಕ ಒಪ್ಪುವುದಿಲ್ಲ. ಆದರ್ಶವನ್ನು ನಡೆದು ತೋರಿಸುವುದೇ ಬಹು ಮುಖ್ಯ. ಇದು ಸಾಕಷ್ಟು ಜನರ ಮೇಲೆ ಪ್ರಭಾವ ಬೀರುತ್ತದೆ.

ಹಿಂದೊಮ್ಮೆ ನಡೆದ ಘಟನೆಯನ್ನು ನಾವು ಟಿವಿ ಮಾಧ್ಯಮದಲ್ಲಿ ನೋಡಿರಬಹುದು. ಪತ್ರಿಕಾ ಮಾಧ್ಯಮದಲ್ಲಿ ಓದಿರಬಹುದು ಅಥವಾ ಇತರರು ಹೇಳಿದ್ದನ್ನು ಕೇಳಿರಬಹುದು. ಅದೆಂದರೆ ಈ ದೇಶ ಕಂಡ ಜನಪ್ರಿಯ ಪ್ರಧಾನಿ ಸಾರ್ವಜನಿಕರೆದುರು ನಡೆದುಕೊಂಡ ಬಗೆ. ಆಗಷ್ಟೇ ಸ್ವಚ್ಛ ಭಾರತ ಅಭಿಯಾನ ಘೋಷಣೆಯಾಗಿ ಜಾಗೃತಿಯ ಪ್ರಜ್ಞೆಯನ್ನು ಮೂಡಿಸಲಾಗಿತ್ತು. ಸ್ವಚ್ಛ ಭಾರತದ ಸ್ಲೋಗನ್ನುಗಳ ಜಾಹೀರಾತುಗಳು ಎಲ್ಲೆಡೆ ರಾರಾಜಿಸುತ್ತಿದ್ದವು. ಸ್ವಚ್ಛತೆಯ ಮಹತ್ವ, ಹೇಗೆ ನಡೆದುಕೊಳ್ಳಬೇಕು ಇತ್ಯಾದಿ ಮಾಹಿತಿ ಪುಂಖಾನುಪುಂಖವಾಗಿ ಬರುತ್ತಿತ್ತು. ಜನರೆಷ್ಟು ಜಾಗೃತರಾದರು ಎಂಬುದು ಹೇಳಲಾಗದು. ಆದರೆ ಪ್ರಧಾನಿ ಮೋದಿಯವರು ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪುಸ್ತಕಗಳಿಗೆ ಸುತ್ತಿದ ಬಣ್ಣದ ಕಾಗದವನ್ನು ಇತರರಲ್ಲೂ ಕೊಡದೆ, ಎಲ್ಲಿಯೂ ಬಿಸಾಡದೆ ತಮ್ಮ ಕಿಸೆಯಲ್ಲಿ ಇರಿಸಿಕೊಂಡರು. ಕೇವಲ ನುಡಿದಿಲ್ಲ; ನಡೆದು ತೋರಿಸಿದರು. ಈ ಒಂದು ಘಟನೆ ಲಕ್ಷಾಂತರ ಜನರಿಗೆ ಸ್ವಚ್ಛತೆಯ ಶಿಕ್ಷಣ ನೀಡಿತು. ಕಂಡ ಕಂಡಲ್ಲಿ ಬಿಸಾಡಬಾರದು ಎಂಬ ಪ್ರಜ್ಞೆಯನ್ನು ಮೂಡಿಸಿತು. ಹೇಳುವುದಾಗಲಿ, ತಿಳುವಳಿಕೆ ನೀಡುವುದಾಗಲಿ ಇವುಗಳಿಗಿಂತ ಪರಿಣಾಮ ನಡೆಯೊಂದು ತಿಳಿಸಿತು. ನಡೆಯೇ ಪರಮ ಶ್ರೇಷ್ಠ. ಏನು ತಿಳಿಯದಿರುವುದಕ್ಕಿಂತಲೂ ಗ್ರಂಥಾದಿಗಳನ್ನು ಓದಿ ತಿಳಿದುಕೊಳ್ಳುವುದು ಶ್ರೇಷ್ಠ. ಓದಿ ಮರೆತರೆ ಪ್ರಯೋಜನವಿಲ್ಲ. ಓದಿದ್ದನ್ನು ಸ್ಮೃತಿಯಲ್ಲಿ ಇರಿಸಿಕೊಳ್ಳುವುದು ಇನ್ನೂ ಶ್ರೇಷ್ಠ. ಇದನ್ನು ಚೆನ್ನಾಗಿ ಇಟ್ಟುಕೊಳ್ಳುವವರು ಮತ್ತೂ ಶ್ರೇಷ್ಠರು. ಇವರಿಗಿಂತಲೂ ಶ್ರೇಷ್ಠರೆಂದರೆ ಸ್ವತಃ ನಡೆದು ಮೌಲ್ಯವನ್ನು ಕಾಪಿಡುವವರು ಸರ್ವ ಶ್ರೇಷ್ಠರು. ನೆನಪಿರಲಿ. ಆದ್ದರಿಂದ ನುಡಿಯೋಣ, ನಡೆಯಲ್ಲೂ ಅದು ಬಿಂಬಿತವಾಗಲಿ.

ಅರಾಜಕತೆಗಿಂತ ಕೆಟ್ಟ ಪ್ರಜಾಪ್ರಭುತ್ವವೇ ಲೇಸು

▸ ಬೈಂದೂರು ಚಂದ್ರಶೇಖರ ನಾವಡ



ಸ್ವಾತಂತ್ರ್ಯ ಬಂದಾಗಿನಿಂದಲೂ ಭಾರತದಲ್ಲಿ ಸಂವಿಧಾನದ ಆಶಯಕ್ಕನುಗುಣವಾಗಿ ನಿಯಮಿತ ಚುನಾವಣೆಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರಚನೆ, ಸುಲಲಿತ ಅಧಿಕಾರ ಹಸ್ತಾಂತರ ನಡೆಯುತ್ತಾ ಬಂದಿದೆ. ಚುನಾವಣೆಯಲ್ಲಿ ಜನಬೆಂಬಲ ಕಳೆದುಕೊಂಡ ರಾಜಕೀಯ ಪಕ್ಷಗಳು ಅಧಿಕಾರ ಬಿಟ್ಟು ವಿರೋಧ ಪಕ್ಷದಲ್ಲಿ ಕುಳಿತು ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಾ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಯಶಸ್ವಿಗೊಳಿಸಿವೆ. ಸಂವಿಧಾನಾತ್ಮಕ ಸಂಸ್ಥೆಗಳು ಸಶಕ್ತವಾಗಿ ಕಾರ್ಯನಿರ್ವಹಿಸುತ್ತಾ ಪ್ರಜಾಪ್ರಭುತ್ವ ಆಳವಾಗಿ ಬೇರೂರುವಂತೆ ಮಾಡಿವೆ. ಪಾಕಿಸ್ತಾನ, ಬಾಂಗ್ಲಾ ದೇಶಗಳ ಸೇನೆಯಂತೆ ಚುನಾಯಿತ ಸರ್ಕಾರವನ್ನು ಪಲ್ಲಟಗೊಳಿಸುವ ಷಡ್ಯಂತ್ರಗಳಲ್ಲಿ ಎಂದೂ ಭಾಗಿಯಾಗದ ಭಾರತೀಯ ಸೇನೆ ಸದಾ ನಾಗರಿಕ ನಾಯಕತ್ವಕ್ಕೆ ನಿಷ್ಠವಾಗಿದೆ. ಕೇಂದ್ರ ಗೃಹ ಖಾತೆಯ ಅಧೀನವಿರುವ ದೊಡ್ಡ ಸಂಖ್ಯೆಯ ಅರೆ ಸೇನಾಪಡೆಗಳು ಯಾವುದೇ ಆಂತರಿಕ ಕ್ಷೋಭೆಯನ್ನು ಎದುರಿಸಲು ಸದಾ ಸನ್ನದ್ಧವಾಗಿರುತ್ತವೆ. ಹಾಗಾಗಿ ಭಾರತದಂತಹ ಪ್ರಜಾಪ್ರಭುತ್ವದಲ್ಲಿ ಸರ್ಕಾರವನ್ನು ಹಿಂಸಾತ್ಮಕ ಮಾರ್ಗದಿಂದ ಉರುಳಿಸುವುದು ಅಸಂಭವದ ಮಾತು.

ಶ್ರೀಲಂಕಾ, ಬಾಂಗ್ಲಾ, ನೇಪಾಲದಂತಹ ಪುಟ್ಟ ರಾಷ್ಟ್ರಗಳಲ್ಲಿ ಭ್ರಷ್ಟ ಸರ್ಕಾರದ ವಿರುದ್ಧ ಯುವಜನತೆ (ಜೆನ್-ಜಿ) ನಡೆಸಿದ ಕ್ರಾಂತಿಯಿಂದ ಭಾರತದಲ್ಲೂ ಕೆಲವರು ಉತ್ಸಾಹಿತರಾಗಿರುವಂತೆ ಕಾಣುತ್ತಿದೆ. ಕಾಕ್ರೋಚ್ ಜನತಾಪಕ್ಷ ಎಂಬ ಹೆಸರಿನಲ್ಲಿ ಅರಾಜಕತೆ ಸೃಷ್ಟಿಸಹೊರಟ ಗುಂಪೊಂದು ಪರದೆಯ ಹಿಂದಿನಿಂದ ಸಂಘಟಿತವಾಗುತ್ತಿರುವಂತೆ ಕಾಣುತ್ತಿದೆ. ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ಹೊಂದಿದವರು ಪ್ರಭುತ್ವವನ್ನು ಟೀಕಿಸುವುದು ಆರೋಗ್ಯಕರವೇ. ಆದರೂ ಬ್ಯಾಲೆಟ್ಟಿನಿಂದ ಅಲ್ಲದಿದ್ದರೆ ಬುಲೆಟ್ಟಿನಿಂದಾದರೂ ಸರಿ ಚುನಾಯಿತ ಸರ್ಕಾರವನ್ನು ಕಿತ್ತೆಸೆಯಲೇಬೇಕು ಎಂಬ ಧೋರಣೆ ಅನುಸರಿಸಿದರೆ ಅದು ದೇಶವನ್ನು ಅರಾಜಕತೆಯತ್ತ ನೂಕುವ ಯತ್ನ ಎಂದೇ ಹೇಳಬೇಕಾಗುತ್ತದೆ. ಬಾಂಗ್ಲಾ-ನೇಪಾಳದಲ್ಲಿ ವ್ಯಾಪಕ ಹಿಂಸಾಚಾರ ನಡೆದು ಆಡಳಿತಾರೂಢ ಸರ್ಕಾರವನ್ನು ಕಿತ್ತೆಸೆಯಲಾಯಿತು. ಸರ್ಕಾರಿ ಆಸ್ತಿಪಾಸ್ತಿಗೆ ಬೆಂಕಿ ಹಚ್ಚುವ, ನೂರಾರು ಜನರ ಸಾವಿಗೆ ಕಾರಣವಾದ ಹಿಂಸೆಯ ಮೂಲಕ ರಚನೆಯಾದ ಸರ್ಕಾರವೂ ಕ್ಷಿಪ್ರವಾಗಿ ದೇಶದ ಸಾಮಾನ್ಯ ಜನರ ಬದುಕಿನಲ್ಲಿ ಭಾರಿ ಬದಲಾವಣೆ ತರಲು ಸಾಧ್ಯವಾಗಿಲ್ಲ. ನೇಪಾಳದಲ್ಲಾದಂತೆ ನಮ್ಮಲ್ಲೂ ಆಡಳಿತ ಚುಕ್ಕಾಣಿಯನ್ನು ಹಿಡಿದ ನಾಯಕರನ್ನು ಜನ ಅಟ್ಟಾಡಿಸಿ ಓಡಿಸಲಿದ್ದಾರೆ ಎಂಬ ರಾಜಕೀಯ ನಾಯಕರ ಹೇಳಿಕೆಗಳು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಂತಹದ್ದಲ್ಲ.

ಶಾಂತಿಯುತ ಸಾರ್ವತ್ರಿಕ ಮತದಾನದ ಮೂಲಕ ಪ್ರಭುತ್ವವನ್ನು ಬದಲಿಸುವ ಪ್ರಜಾಪ್ರಭುತ್ವ ವ್ಯವಸ್ಥೆಯಿಂದಾಗಿಯೇ ನಮ್ಮ ದೇಶ ಇಂದು ನೆರೆಯ ರಾಷ್ಟ್ರಗಳಿಗಿಂತ ಹೆಚ್ಚಿನ ಪ್ರಗತಿ ಸಾಧಿಸಿದೆ. ದೇಶದ ಸಾಮಾನ್ಯ ಜನರು ನೆಮ್ಮದಿಯಿಂದ ಬದುಕುತ್ತಿದ್ದಾರೆ. ಜಗತಿನಾದ್ಯಂತ ಅನೇಕ ಬಾರಿ ಚುನಾಯಿತ ಸರ್ಕಾರವನ್ನು ಬಲಪೂರ್ವಕವಾಗಿ ಬದಲಿಸಿದ ಉದಾಹರಣೆಗಳಿವೆ. ಅದರಿಂದ ಆ ದೇಶ ಎದುರಿಸುತ್ತಿರುವ ಸಮಸ್ಯೆಗಳಿಂದ ಹೊರಬಂದಿಲ್ಲ ಎನ್ನುವುದೂ ದಿಟ. ಹಿಂದೆ ರಾಜಪ್ರಭುತ್ವವಿದ್ದಾಗಲೂ ಪ್ರಭುತ್ವದ ವಿರುದ್ಧ ಷಡ್ಯಂತ್ರಗಳು ನಡೆಯುತ್ತಲೇ ಇದ್ದವು. ಪ್ರಭುತ್ವ ಯಾವುದೇ ಇರಲಿ ವಿರೋಧಿಗಳು ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ. ಅಂದಿನ ಕೇಂದ್ರ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಜನಾಂದೋಲನ ನಡೆಸಿ ಆ ಮೂಲಕ ದೆಹಲಿಯಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಆಮ್ ಆದ್ಮಿ ಪಕ್ಷ (ಎಎಪಿ) ಕೂಡಾ ದೆಹಲಿಯಲ್ಲಿ ನಿರೀಕ್ಷೆಯಂತೆ ಆಡಳಿತ ನಡೆಸಲು ವಿಫಲವಾಗಿ ಕೊನೆಗೆ ಜನರಿಂದಲೇ ತಿರಸ್ಕೃತಗೊಂಡಿತು.

ಭಾರತದಂತಹ 140 ಕೋಟಿ ಜನಸಂಖ್ಯೆಯ ದೇಶದಲ್ಲಿ ಹತ್ತೋ ಇಪ್ಪತ್ತು ಲಕ್ಷ ಜನ ಸೇರಿ ಹಿಂಸಾಚಾರ ನಡೆಸಿ ಸರ್ಕಾರವನ್ನು ಉರುಳಿಸುತ್ತೇವೆಂದರೆ ಅವರು ಜನಭಾವನೆಯನ್ನು ಹೇಗೆ ಪ್ರತಿನಿಧಿಸಿದಂತಾಗುತ್ತದೆ? ಅಂತಹ ಯಾವುದೇ ಕುತಂತ್ರಕ್ಕೆ ಜನಬೆಂಬಲವೂ ಸಿಗುವುದಿಲ್ಲ ಮತ್ತು ಸರ್ಕಾರವೂ ಸುಲಭವಾಗಿ ಉಕ್ಕಿನ ಕೈಗಳಿಂದ ಅದನ್ನು ಹೊಸಕಿಹಾಕಬಲ್ಲದು. ಆದರೆ ಕ್ರಾಂತಿಯ ಭ್ರಾಂತಿಯಲ್ಲಿ ಯುವಪಡೆ ಸೃಷ್ಟಿಸುವ ಹಿಂಸಾಚಾರ ಖಂಡಿತಾ ದೇಶದ ಆರ್ಥಿಕತೆಗೆ ಧಕ್ಕೆ ಮಾಡಬಹುದು. ದೇಶವಲ್ಲಿ ಕೆಲಕಾಲ ಅರಾಜಕತೆಯ ವಾತಾವರಣ ಸೃಷ್ಟಿಯಾಗಬಹುದು. ಅನೇಕ ಅಮಾಯಕರ ಸಾವು ನೋವುಗಳಿಗೆ ಕಾರಣವಾಗಬಹುದು. ಅಪಾರ ಪ್ರಮಾಣದಲ್ಲಿ ಸಾರ್ವಜನಿಕ ಸಂಪತ್ತಿನ ನಾಶಕ್ಕೆ ಕಾರಣವಾಗಬಹುದು. ಇಂತಹ ಹಿಂಸಾತ್ಮಕ ಚಳವಳಿಗಳಲ್ಲಿ ಭಾಗವಹಿಸುವುದೆಂದರೆ ನಮ್ಮ ಕಾಲ ಮೇಲೆ ನಾವೇ ಚಪ್ಪಡಿ ಎಳೆದುಕೊಂಡಂತೆಯೇ ಸರಿ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರ್ಕಾರದ ನೀತಿಯನ್ನು ಶಾಂತಿಯುತವಾಗಿ ವಿರೋಧಿಸಬಹುದು. ಸರ್ಕಾರ ಅಪೇಕ್ಷೆಗೆ ತಕ್ಕಂತೆ ಆಡಳಿತ ನಡೆಸಲಿಲ್ಲ ಎಂದಾದರೆ ಚುನಾವಣೆಯವರೆಗೆ ಕಾಯಬೇಕು ಮತ್ತು ಮತದಾನದ ಮೂಲಕ ಸರ್ಕಾರವನ್ನು ಬದಲಿಸಬೇಕೇ ವಿನಃ ಕಾನೂನನ್ನು ಕೈಗೆತ್ತಿಕೊಳ್ಳುವುದು ಸರಿಯಲ್ಲ.

ಕ್ರಾಂತಿಯ ಕಹಳೆ ಊದುವವರು ಆಗಾಗ್ಗೆ ಮಿಲಿಟರಿ ಸರ್ವಾಧಿಕಾರಿಯ ಮತ್ತು ಕೆಲವೊಮ್ಮೆ ಸೈನ್ಯ ನಾಯಕತ್ವದ ನಿರ್ದೇಶನದಲ್ಲಿ ನಡೆಯುವ ಸೋಕಾಲ್ಡ್ ಪ್ರಜಾಪ್ರಭುತ್ವ ಸರ್ಕಾರವಿರುವ ಪಾಕಿಸ್ತಾನದಂತಹ ದೇಶದ ಸ್ಥಿತಿಗತಿಗಳನ್ನು ನೋಡಲಿ. ಮಿತ್ರ ರಾಷ್ಟ್ರಗಳ ಮತ್ತು ಅಂತಾರಾಷ್ಟ್ರೀಯ ವಿತ್ತೀಯ ಸಂಸ್ಥೆಗಳ ಸಾಲಕ್ಕೆ ಕೈಚಾಚುತ್ತಾ ದಿವಾಳಿಯಂಚಿನಲ್ಲಿರುವ ಪಾಕಿಸ್ತಾನದ ಇಂದಿನ ದಯನೀಯ ಸ್ಥಿತಿಗೆ ಕಾರಣ ಅಲ್ಲಿ ಆಗಾಗ್ಗೆ ನಡೆಯುವ ಕ್ರಾಂತಿ, ಅರಾಜಕತೆಯ ವಾತಾವರಣ. ಬಾಂಗ್ಲಾದಲ್ಲಿ ವಿದ್ಯಾರ್ಥಿಗಳು ಚಳವಳಿ ನಡೆಸಿ ಸಾಧಿಸಿದ್ದಾದರೂ ಏನು? ಚುನಾವಣೆಯಲ್ಲಿ ವಿದ್ಯಾರ್ಥಿಗಳಿಗೆ ಜನಬೆಂಬಲ ಸಿಕ್ಕಿತೇ? ಇಲ್ಲ ತಾನೇ..? ಶೇಖ್ ಹಸೀನಾ ಸರ್ಕಾರ ಹೋದ ನಂತರ ಬಂದ ಹಂಗಾಮಿ ಶಾಸಕ ಮೊಹಮದ್ ಯೂನಸ್ ಸರ್ವಾಧಿಕಾರಿಯಂತೆ ವರ್ತಿಸಿ ದೇಶದ ಪ್ರಗತಿಯ ವೇಗಕ್ಕೆ ಕಡಿವಾಣ ಹಾಕಿದರು. ಸುದೀರ್ಘ ಕಾಲ ದೇಶ ಅರಾಜಕತೆಯನ್ನು ಎದುರಿಸಿತು. ಧಾರ್ಮಿಕ ಅಲ್ಪಸಂಖ್ಯಾತ ಹಿಂದುಗಳ ಮಾರಣ ಹೋಮ ನಡೆಯಿತು. ಆರ್ಥಿಕ ಸ್ಥಿತಿ ಹದಗೆಟ್ಟಿತು. ರಾಜಧಾನಿ ಸಹಿತ ನಗರಗಳಲ್ಲಿ ಚಳವಳಿ, ಹಿಂಸೆ ನಿತ್ಯ ನಡೆಯಿತು. ಜನರ ಬದುಕಿನಲ್ಲಿ ನೆಮ್ಮದಿ ಮರೀಚಿಕೆಯಾಯಿತು.

ಶ್ರೀಲಂಕಾ, ನೇಪಾಲದಲ್ಲಿ ಸರ್ಕಾರವನ್ನು ಹಿಂಸಾತ್ಮಕ ಚಳವಳಿಯ ಮೂಲಕ ಉರುಳಿಸಿದ ನಂತರ ನಡೆದಿದ್ದಾದರೂ ಏನು? ಕಾನೂನಿಲ್ಲ.. ಸಂವಿಧಾನ ಇಲ್ಲ, ನ್ಯಾಯಾಲಯ ಇಲ್ಲ, ಪೋಲಿಸ್ ಠಾಣೆಯಲ್ಲಿ ಪೋಲಿಸರಿಲ್ಲ, ಕಳ್ಳ-ಕಾಕರು, ಪುಂಡ-ಪಟಿಂಗರನ್ನು ತಡೆಯುವವರಿಲ್ಲ. Might is right ಎನ್ನುವ ಸ್ಥಿತಿ. ಎಲ್ಲೆಲ್ಲೂ ಲೂಟಿ-ಕಗ್ಗೊಲೆ, ಅಪಹರಣ, ಮಾನಭಂಗ.... ವೃದ್ಧರ, ಮಕ್ಕಳ, ಮಹಿಳೆಯರ ರಕ್ಷಣೆ ಮಾಡುವವರಿಲ್ಲ, ಅಲ್ಪಸಂಖ್ಯಾತರ ನರಮೇಧ...ಇದು ಅರಾಜಕತೆ...ಇದು ಕ್ರಾಂತಿ...! ಒಟ್ಟಿನಲ್ಲಿ ಜನಸಾಮಾನ್ಯರ ನೆಮ್ಮದಿಯ ಬದುಕಿಗೆ ಕೊಳ್ಳಿ, ಅರ್ಥವ್ಯವಸ್ಥೆಯ ಅಧೋಗತಿ. ಸರ್ಕಾರವೇ ಇಲ್ಲ ಎಂದ ಮೇಲೆ ನೌಕರರ ಸಂಬಳ, ನಿವೃತ್ತರ ಪಿಂಚಣಿ ಹೇಗೆ? ಎಲ್ಲಿಯ ಸಾರಿಗೆ-ಸಂಚಾರ..? ನಗರಗಳ ಜನರಿಗೆ ಹಾಲು-ತರಕಾರಿ ಮತ್ತಿತರ ಅಗತ್ಯ ವಸ್ತುಗಳ ಪೂರೈಕೆ ಹೇಗೆ? ಸ್ವಾತಂತ್ರ್ಯೋತ್ತರದ ಈ ಎಂಟೂವರೆ ದಶಕಗಳಲ್ಲಿ ನೋಡಿದ್ದೇವೆಯೇ ನಾವಿಂತಹ ದುಸ್ಥಿತಿ? ಮತ್ತೇಕೆ ಪ್ರಜಾಪ್ರಭುತ್ವದ ನೆರಳಿನಲ್ಲಿ ತಣ್ಣಗೆ ಕುಳಿತ ಕೆಲವರು ನಮ್ಮಲ್ಲೂ ಕ್ರಾಂತಿಯ ಕನಸು ಕಾಣುತ್ತಿದ್ದಾರೆ? ದಂಗೆ-ಕ್ರಾಂತಿಯ ಕಹಳೆ ಊದುತ್ತಿರುವವರಿಂದ ದಯಮಾಡಿ ದೂರವಿರಿ. ಬೆಂಬಲಿಸದಿರಿ ಅಂತಹ ಧೂರ್ತರನ್ನು. ಕನಸಿನಲ್ಲೂ ಇಂತಹ ದಾರುಣ ದಿನ ನಮಗೆದುರಾಗದಿರಲಿ.

ಪ್ರಕೃತಿಯೊಂದಿಗೆ ಸಹಬಾಳ್ವೆ ಇಂದಿನ ಅಗತ್ಯ

▸ ಡಾ. ಆಶಾಲತಾ ಪಿ.

ವಿಶ್ವ ಪರಿಸರ ದಿನ ಮತ್ತೊಮ್ಮೆ ಬಂದಿದೆ. ಮಾನವ ಮತ್ತು ಪ್ರಕೃತಿಯ ನಡುವಿನ ಅವಿನಾಭಾವ ಸಂಬಂಧವನ್ನು ಪುನಸ್ಮರಿಸುವ ಜೊತೆಗೆ ಪ್ರಕೃತಿ ರಕ್ಷಣೆಗಾಗಿ ಎಲ್ಲರ ಸಹಭಾಗಿತ್ವವನ್ನು ಒಗ್ಗೂಡಿಸುವ ಮಹತ್ವದ ಸಂದರ್ಭ ಮತ್ತೊಮ್ಮೆ ಕೂಡಿ ಬಂದಿದೆ.

ಭಾರತಕ್ಕೆ ಸಂಬಂಧಿಸಿ ಹೇಳುವುದಾದರೆ, ಜೀವಸಂಕುಲಗಳ ಅಸ್ತಿತ್ವಕ್ಕೇ ಸವಾಲೊಡ್ಡುವ ಪರಿಸರ ಬಿಕ್ಕಟ್ಟು ನಮ್ಮಲ್ಲೂ ಎದುರಾಗಿದೆ. ಜೀವಜಲ ಕೊರತೆ, ತ್ಯಾಜ್ಯ ನಿರ್ವಹಣಾ ಭೀತಿ ಮತ್ತು ಮಾಲಿನ್ಯದಂತಹ ಸಂದಿಗ್ಧ ವಾತಾವರಣವು ಜನನೆಮ್ಮದಿ ಕೆಡಿಸಿದೆ ಹಾಗೂ ಜೀವಿಜಗತ್ತಿನ ಅಸ್ತಿತ್ವವನ್ನೇ ಪ್ರಶ್ನಿಸುತ್ತಿದೆ. ಈ ವಾತಾವರಣವು, ಪರಿಸರ ಕಾಳಜಿಯ ಜವಾಬ್ದಾರಿಯನ್ನು ಭಾರತೀಯ ಸಮಾಜ ಕ್ರಮೇಣ ಮರೆತಿದೆಯೆನ್ನುವ ಆತಂಕಕಾರಿ ಬೆಳವಣಿಗೆಗಳನ್ನು ಸೂಚಿಸುತ್ತದೆ.

ಕಾಡು-ನಾಡುಗಳ ವ್ಯತ್ಯಾಸವಿಲ್ಲದೆ ವೇಗಗೊಂಡಿರುವ ನಗರೀಕರಣ, ಮೌನ ವಲಯಗಳನ್ನೂ ಲೆಕ್ಕಿಸದ ಯಂತ್ರೋಪಕರಣಗಳ ಸದ್ದುಗದ್ದಲ, ಮೋಟಾರು ವಾಹನಗಳ ಕರ್ಕಶ ಹಾರ್ನ್‌ಗಳು ಜನರ ನೆಮ್ಮದಿಯನ್ನು ನಿರಂತರ ಕದಡುತ್ತಿವೆ. ಶಬ್ದ ಮಾಲಿನ್ಯವು ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದ್ದು ಪರಿಸರ ಸಮತೋಲನಕ್ಕೆ ಸವಾಲಾಗಿ ಪರಿಣಮಿಸಿದೆ. ಇದರ ಜೊತೆಗೆ, ಕಾರ್ಖಾನೆಗಳಿಂದ ಹೊರಸೂಸುವ ವಿಷಕಾರಿ ಅನಿಲಗಳು, ಹೆಚ್ಚುತ್ತಿರುವ ಪ್ಲಾಸ್ಟಿಕ್ ಬಳಕೆ ಹಾಗೂ ಜನಸಂಖ್ಯೆಯ ಹೆಚ್ಚಳದಿಂದ ಉಂಟಾಗುತ್ತಿರುವ ತ್ಯಾಜ್ಯ ನಿರ್ವಹಣೆಯ ಸಮಸ್ಯೆಗಳು ಪರಿಸರದ ಮೇಲೆ ತೀವ್ರ ಒತ್ತಡವನ್ನುಂಟು ಮಾಡುತ್ತಿವೆ. ಈ ಬೆಳವಣಿಗೆಗಳು ಜೀವವೈವಿಧ್ಯತೆ ಹಾಗೂ ಮಾನವ ಅಸ್ತಿತ್ವಕ್ಕೂ ಅಪಾಯವನ್ನುಂಟು ಮಾಡುವ ಹಂತಕ್ಕೆ ತಲುಪಿವೆ.



ಇಂತಹ ಪರಿಸ್ಥಿತಿಯಲ್ಲಿ ಹಸಿರೇ ಉಸಿರೆನ್ನುವ ಧ್ಯೇಯವನ್ನು ಜೀವನದ ಭಾಗವನ್ನಾಗಿ ಮಾಡಿಕೊಳ್ಳುವುದು ಕಾಲದ ಅನಿವಾರ್ಯತೆಯಾಗಿದೆ. ಆ ಮೂಲಕ ಅಮೂಲ್ಯ ಪ್ರಕೃತಿ ಸಂಪತ್ತನ್ನು ಉಳಿಸಿ ಬೆಳೆಸುವ ಪ್ರಕೃತಿ ಪಥ ನಮ್ಮೆಲ್ಲರ ಮೂಲ ಪಥವಾಗಬೇಕಿದೆ. ಭವಿಷ್ಯದ ತಲೆಮಾರಿನ ಬದುಕಿನೊಂದಿಗೆ ಸಾಮುದಾಯಿಕ ಒಳಿತಿನ ಬದ್ಧತೆಯನ್ನು ಸಾಮೂಹಿಕವಾಗಿ ಎಲ್ಲರೂ ನಿರ್ವಹಿಸಬೇಕಿದೆ. ಮರಗಳ ನೆಡುವಿಕೆ, ನೀರಿನ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆಯ ನಿಯಂತ್ರಣ, ತ್ಯಾಜ್ಯದ ವೈಜ್ಞಾನಿಕ ನಿರ್ವಹಣೆ ಹಾಗೂ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಪ್ರಕೃತಿಯೊಂದಿಗೆ ಹೊಂದಾಣಿಕೆಯ ಬದುಕನ್ನು ರೂಪಿಸಬೇಕಾಗಿದೆ.

ಪ್ರಕೃತಿ ಸ್ನೇಹೀ ಬದುಕಿಗೆ ಪ್ರೇರಣೆ ನೀಡುವ ಪ್ರಕೃತಿ ಧರ್ಮವು ಒಟ್ಟು ಪರಿಸರವ್ಯವಸ್ಥೆ ಮತ್ತು ಜೀವ ವೈವಿಧ್ಯಗಳನ್ನು ಆರೋಗ್ಯಯುತವಾಗಿ ಉಳಿಸಿ, ಮುಂದಿನ ಪೀಳಿಗೆಗೆ ವಿಸ್ತರಿಸುವ ಪ್ರಬುದ್ಧ ಸಂಸ್ಕೃತಿಯಾಗಿದೆ. ಹಿರಿಕಿರಿಯರೆನ್ನುವ ಭೇದಭಾವವಿಲ್ಲದೆ, ಪ್ರಬುದ್ಧರೊಳಗೂ ಪ್ರಕೃತಿ ಪ್ರಜ್ಞೆ ಮೂಡಿಸುವ ಸಾಮೂಹಿಕ ಸಹಭಾಗಿತ್ವದ ನಡಿಗೆಯೂ ಆಗಿದೆ. ಆ ಮೂಲಕ ನಮ್ಮೆಲ್ಲರ ಆಚಾರ-ವಿಚಾರ ಮತ್ತು ಜೀವನಶೈಲಿಯಲ್ಲಿ ಪರಿಸರ ಸ್ನೇಹಿ ಮೌಲ್ಯಗಳು ಪ್ರತಿಫಲಿಸಬೇಕಾಗಿದೆ.

ಹಸಿರು ವೈಚಾರಿಕತೆ/ ಪರಿಸರ ಕಾಳಜಿ ಮೂಲಭೂತ ಕರ್ತವ್ಯಗಳಾಗಿ ಹಾಗೂ ರಾಜ್ಯ ನಿರ್ದೇಶಕ ತತ್ವಗಳಾಗಿ ಭಾರತದ ಸಂವಿಧಾನದಡಿಯಲ್ಲಿ ಕೂಡಾ ಪ್ರತಿಫಲನಗೊಂಡಿದೆ. ರಾಜಸ್ಥಾನದಲ್ಲಿ ಬಿಷ್ಣೋಯಿ ಪಂಥ 29 ಸೂತ್ರಗಳ ಪ್ರಕೃತಿ ನೀತಿಗಳೊಂದಿಗೆ, 1730ರಲ್ಲಿ ಜೋಧ್ಪುರದ ರಾಜನ ಪ್ರಕೃತಿ ವಿರೋಧಿ ನಡೆಯ ವಿರುದ್ಧ ದಂಗೆಯೆದ್ದು, ಸಮುದಾಯದ ನಾಯಕಿ ಅಮೃತದೇವಿ ಮತ್ತು ಇತರ ಸದಸ್ಯರೊಂದಿಗೆ 300ಕ್ಕೂ ಅಧಿಕ ಪರಿಸರ ಭಕ್ತರು ಜೀವ ತ್ಯಾಗ ಮಾಡಿದ ಪ್ರಸಿದ್ಧ ಘಟನೆ ಭಾರತದ ಪರಿಸರ ಚಳುವಳಿಯ ಇತಿಹಾಸದಲ್ಲೇ ಅದ್ವಿತೀಯ ಹೆಜ್ಜೆಯಾಗುಳಿದಿದೆ. ಆ ಮೂಲಕ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಪರಿಸರ ಸಂರಕ್ಷಣಾ ಹೋರಾಟಗಳಿಗೆ ಇದು ಪ್ರೇರಣೆಯೆನಿಸಿದೆ. ಉತ್ತರ ಭಾರತದ ಚಿಪ್ಕೊ ಚಳವಳಿ (1974), ಅಪ್ಪಿಕೋ ಚಳುವಳಿ ಖ್ಯಾತಿಯ ಪಶ್ಚಿಮ ಘಟ್ಟ ಉಳಿಸಿ ಹೋರಾಟ, ಪ್ರಕೃತಿ ಪ್ರೇಮಿ ಸಾಲು ಮರದ ತಿಮ್ಮಕ್ಕ ಹಾಗೂ ಬಸರೀಗಿಡದ ವೀರಪ್ಪನವರಂತ ಮಹಾನ್ ಪ್ರಕೃತಿ ಆರಾಧಕರ ಪ್ರಾಕೃತಿಕ ನಿಷ್ಠೆಯೂ ಸಮಾಜಕ್ಕೆ ನಿರಂತರ ಪ್ರೇರಣೆಯಾಗಿದೆ. ಹಾಗಾಗಿ ಒಟ್ಟು ಜೀವವೈವಿಧ್ಯತೆಯನ್ನು ಸಂರಕ್ಷಿಸಲು, ಆರೋಗ್ಯಕರ ಪರಿಸರ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ನೈಸರ್ಗಿಕ ಪರಿಸರಗಳು ಒದಗಿಸುವ ಶುದ್ಧ ಗಾಳಿ, ನೀರು ಮತ್ತು ಹವಾಮಾನ ನಿಯಂತ್ರಣವನ್ನು ಉಳಿಸಿ ಬೆಳೆಸಲು ಶೀಘ್ರವೇ ಸಮಾಜ ಕಾರ್ಯಪ್ರವೃತ್ತರಾಗಬೇಕಿದೆ. ಮಿಗಿಲಾಗಿ ಮಾನವನ ಯೋಗಕ್ಷೇಮ ಮತ್ತು ಉಳಿವು ಈ ಪರಿಸರ ವ್ಯವಸ್ಥೆಯ ಮೇಲೆ ನೇರವಾಗಿ ಅವಲಂಬಿತವಾಗಿದ್ದು, ಕೂಡಲೇ ಪರಿಸರ ಕೇಂದ್ರಿತ ಸುಸ್ಥಿರ ಅಭಿವೃದ್ಧಿ ಕಡೆ ಸಮಾಜ ಹೆಜ್ಜೆ ಹಾಕಲೇಬೇಕಿದೆ. ಪ್ರಕೃತಿ ರಕ್ಷಣೆಯು ಜಾಗತಿಕ ಆದ್ಯತೆಯಾಗಿ ಪ್ರಕೃತಿ ಸಂಪನ್ಮೂಲಗಳನ್ನು ಜಾಗರೂಕತೆಯಿಂದ ಬಳಸುವ, ಮತ್ತು ಆರೋಗ್ಯಕರ ವಾತಾವರಣವನ್ನು ಮುಂದಿನ ತಲೆಮಾರಿಗೂ ಉಳಿಸಿ ಕೊಡಬೇಕೆನ್ನುವ ಆಲೋಚನಾ ಕ್ರಮವನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ಆದುದರಿಂದ ತ್ಯಾಜ್ಯ ಮರುಬಳಕೆ ಮತ್ತು ಮರುಪಯೋಗವನ್ನು ಉತ್ತೇಜಿಸುವ, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ, ಜೈವಿಕ ಅಥವಾ ಪುನರ್ ಬಳಕೆಯ ವಸ್ತುಗಳನ್ನು ಉಪಯೋಗಿಸುವ, ಗಿಡಮರಗಳನ್ನು ನೆಟ್ಟು, ಹಸಿರು ಪ್ರದೇಶಗಳನ್ನು ಹೆಚ್ಚಿಸುವ, ಕೆರೆ, ಹಳ್ಳಗಳು, ಜಲಾಶಯಗಳು ಮತ್ತು ಅರಣ್ಯಗಳನ್ನು ಸಂರಕ್ಷಿಸುವ, ಮಳೆನೀರು ಸಂಗ್ರಹಿಸಿ, ಜೀವಜಲ ಉಳಿಸುವ ಹಾಗೂ ಜಲಚರ ಜೀವಿಗಳು, ಪ್ರಾಣಿಗಳನ್ನೊಳಗೊಂಡಂತೆ ಅವುಗಳ ಆವಾಸ ಸ್ಥಾನಗಳನ್ನು ರಕ್ಷಿಸುವ ಹೊಣೆಗಾರಿಕೆಯನ್ನು ನಮ್ಮೆಲ್ಲರ ಆಚಾರ ವಿಚಾರದ ಭಾಗವಾಗಿ ಕಟ್ಟುಬದ್ಧವಾಗಿ ನಿರ್ವಹಿಸಲೇಬೇಕಾಗಿದೆ.

ಪರಿಸರವು ಮಾನವ ಕೇಂದ್ರಿತ ವ್ಯವಸ್ಥೆಯಲ್ಲ, ಬದಲಿಗೆ ಎಲ್ಲಾ ಜೀವಿಗಳ ಬದುಕಿನ ಮೂಲ ಎಂಬ ನೈಜ ಸತ್ಯವನ್ನು ಅರ್ಥಮಾಡಿಕೊಂಡು ಪ್ರತಿಯೊಬ್ಬ ನಾಗರಿಕನೂ ಪರಿಸರ ರಕ್ಷಣೆಗಾಗಿ ಕೈಜೋಡಿಸಬೇಕು. ಆ ಮೂಲಕ ಧ್ವನಿಯಿಲ್ಲದ ಜೀವಿಗಳ ಧ್ವನಿಯಾಗಿ ಅವುಗಳ ಧ್ವನಿಯನ್ನು ಪ್ರತಿನಿಧಿಸಬೇಕಾಗಿದೆ.

ಪ್ರಕೃತಿಧರ್ಮಪಾಲನೆ ನಮ್ಮ ಜವಾಬ್ದಾರಿ ಮಾತ್ರವಲ್ಲ, ನಮ್ಮ ಅಸ್ತಿತ್ವದ ಆಧಾರವೂ ಹೌದು.

ತನಿಖೆಗೆ ಎಲ್ಲ ರೀತಿಯ ಸಹಕಾರ ಎಂದ ವಿಪ್ರೋ

ಪುಣೆಯ ವಿಪ್ರೋದಲ್ಲೂ ಬಲವಂತದ ಮತಾಂತರ

ಪುಣೆ: ದೇಶದ ಪ್ರಮುಖ ಐಟಿ ಸಂಸ್ಥೆಗಳಲ್ಲಿ ಒಂದಾದ ವಿಪ್ರೋದಲ್ಲಿ ಕೆಲಸ ಮಾಡುತ್ತಿದ್ದ ಮಾಜಿ ಮಹಿಳಾ ಉದ್ಯೋಗಿಯೊಬ್ಬರು ತಮ್ಮ ಮೇಲಾಧಿಕಾರಿ ಹಾಗೂ ಕೆಲವು ಸಹೋದ್ಯೋಗಿಗಳ ವಿರುದ್ಧ ಧಾರ್ಮಿಕ ಕಿರುಕುಳ, ಮತಾಂತರಕ್ಕೆ ಒತ್ತಡ ಹಾಗೂ ಬಲವಂತದ ರಾಜೀನಾಮೆ ಆರೋಪ ಮಾಡಿರುವುದು ಹೊಸ ವಿವಾದಕ್ಕೆ ಕಾರಣವಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪುಣೆಯ ಹಿಂಜೇವಾಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರಿಂದ ಪ್ರಾಥಮಿಕ ತನಿಖೆ ಆರಂಭಗೊಂಡಿದೆ.

ಸದ್ಯ ಬೆಂಗಳೂರಿನಲ್ಲಿ ವಾಸವಿರುವ 48 ವರ್ಷದ ಮಹಿಳೆ ನೀಡಿರುವ ದೂರಿನ ಪ್ರಕಾರ, ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ತಮ್ಮ ಮಹಿಳಾ ಮೇಲಾಧಿಕಾರಿಯೊಬ್ಬರು ಪದೇಪದೆ ಇಸ್ಲಾಂ ಧರ್ಮವನ್ನು ಸ್ವೀಕರಿಸುವಂತೆ ಒತ್ತಾಯಿಸುತ್ತಿದ್ದರು. ಕೇವಲ ಧರ್ಮದ ವಿಚಾರವಷ್ಟೇ ಅಲ್ಲದೆ, ಮುಸ್ಲಿಂ ಯುವಕನೊಂದಿಗೆ ವೈಯಕ್ತಿಕ ಸಂಬಂಧ ಬೆಳೆಸಿಕೊಳ್ಳುವಂತೆ ಸಲಹೆ ನೀಡಲಾಗುತ್ತಿತ್ತು ಎನ್ನಲಾಗಿದೆ. ಇಂತಹ ಮಾತುಗಳು ನಿರಂತರವಾಗಿ ಕೇಳಿಬರುತ್ತಿದ್ದ ಕಾರಣ ತಮಗೆ ಮಾನಸಿಕ ಒತ್ತಡ ಉಂಟಾಯಿತು ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮಹಿಳೆಯ ಹೇಳಿಕೆಯಂತೆ, ಆರಂಭದಲ್ಲಿ ಇಂತಹ ಹೇಳಿಕೆಗಳನ್ನು ನಿರ್ಲಕ್ಷಿಸಲು ಪ್ರಯತ್ನಿಸಿದರೂ ನಂತರ ಪರಿಸ್ಥಿತಿ ಗಂಭೀರವಾಗತೊಡಗಿತು. ತಮ್ಮ ಧಾರ್ಮಿಕ ನಂಬಿಕೆಗಳು ಮತ್ತು ವೈಯಕ್ತಿಕ ವಿಚಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಕೆಲಸದ ವಾತಾವರಣದಲ್ಲೇ ಪದೇ ಪದೆ ಎದುರಾಗುತ್ತಿದ್ದವು. ಈ ಕುರಿತು ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗ ಹಾಗೂ ಹಿರಿಯ ಅಧಿಕಾರಿಗಳ ಗಮನಕ್ಕೂ ವಿಷಯ ತಂದಿದ್ದರೂ ಸೂಕ್ತ ಕ್ರಮ ಕೈಗೊಳ್ಳಲಿಲ್ಲ ಎಂದು ಅವರು ಆರೋಪಿಸಿದ್ದಾರೆ.

ದೂರಿನಲ್ಲಿ ಮತ್ತೊಂದು ಗಂಭೀರ ಅಂಶವೂ ಉಲ್ಲೇಖವಾಗಿದೆ. ತಮ್ಮ ವಿರುದ್ಧವೇ ಸಂಸ್ಥೆಯ ಆಂತರಿಕ ದೂರು ಸಮಿತಿಯಲ್ಲಿ ಪ್ರಕರಣ ದಾಖಲಿಸಲಾಯಿತು. ತನಿಖೆಯ ವೇಳೆ ತಮ್ಮ ವಾದವನ್ನು ಸಮರ್ಪಕವಾಗಿ ಆಲಿಸಲಿಲ್ಲ ಹಾಗೂ ನ್ಯಾಯಸಮ್ಮತ ಅವಕಾಶ ನೀಡಲಿಲ್ಲ ಎಂದು ಮಹಿಳೆ ಆರೋಪಿಸಿದ್ದಾರೆ. ಇದರಿಂದ ಉದ್ಯೋಗ ಸ್ಥಳದಲ್ಲಿ ತಮಗೆ ಮತ್ತಷ್ಟು ಒತ್ತಡ ಮತ್ತು ಅಸಹಜ ವಾತಾವರಣ ನಿರ್ಮಾಣವಾಯಿತು ಎಂದು ತಿಳಿಸಿದ್ದಾರೆ.

- ಮಾಜಿ ಉದ್ಯೋಗಿಯಿಂದ ದೂರು
- ಪೊಲೀಸರಿಂದ ತನಿಖೆ ಆರಂಭ

ಸಂಸ್ಥೆಗೆ ನೋಟಿಸ್ ಜಾರಿ

ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆಯ ಪರ ವಕೀಲರು ಸಂಸ್ಥೆಗೆ ಕಾನೂನು ನೋಟಿಸ್ ಜಾರಿಗೊಳಿಸಿದ್ದಾರೆ. ಬಲವಂತದ ರಾಜೀನಾಮೆಯನ್ನು ಅಮಾನ್ಯಗೊಳಿಸಿ ಮರುನೇಮಕಾತಿ ನೀಡಬೇಕು, ಸೇವಾ ನಿರಂತರತೆಯನ್ನು ಪರಿಗಣಿಸಬೇಕು ಹಾಗೂ ಮಾನಸಿಕ ಹಿಂಸೆ ಮತ್ತು ವೃತ್ತಿಜೀವನಕ್ಕೆ ಉಂಟಾದ ಹಾನಿಗೆ ಪರಿಹಾರವಾಗಿ 50 ಲಕ್ಷ ರೂಪಾಯಿ ನೀಡಬೇಕು ಎಂದು ನೋಟಿಸ್‌ನಲ್ಲಿ ಒತ್ತಾಯಿಸಲಾಗಿದೆ.

ತನಿಖೆ ಆರಂಭ

ಇದೀಗ ದೂರು ಆಧರಿಸಿ ಪೊಲೀಸರು ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾರೆ. ಅಗತ್ಯ ದಾಖಲೆಗಳು, ಉದ್ಯೋಗ ಸಂಬಂಧಿತ ದಾಖಲೆಗಳು ಹಾಗೂ ಇತರ ಸಾಕ್ಷ್ಯಗಳನ್ನು ಪರಿಶೀಲಿಸುವ ಕಾರ್ಯ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ. ತನಿಖೆಯ ಮುಂದಿನ ಹಂತದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿಯ ಹೇಳಿಕೆಗಳನ್ನೂ ದಾಖಲಿಸುವ ಸಾಧ್ಯತೆ ಇದೆ. ಆದರೆ ಈ ಆರೋಪಗಳ ಕುರಿತು ವಿಪ್ರೋ ಸಂಸ್ಥೆಯ ವಕ್ತಾರರು ಹೇಳಿಕೆ ಬಿಡುಗಡೆ ಮಾಡಿದ್ದು, ಪೊಲೀಸರಿಗೆ ಎಲ್ಲ ರೀತಿಯ ಸಹಕಾರ ನೀಡುತ್ತಿದ್ದೇವೆ. ಅವರಿಗೆ ಬೇಕಾದ ದಾಖಲೆಗಳನ್ನೂ ನೀಡುತ್ತಿದ್ದೇವೆ ಎಂದಿದ್ದಾರೆ. ಹಾಗೆಯೇ, ಕಂಪನಿಯ ಎಲ್ಲ ಸಿಬ್ಬಂದಿಗಳ ಗೌರವ, ಕಲ್ಯಾಣದ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸುತ್ತೇವೆ. ಯಾವುದೇ ರೀತಿಯ ಕಿರುಕುಳ, ತಾರತಮ್ಯ, ತಪ್ಪು ನಡೆಗಳ ವಿಚಾರದಲ್ಲಿ ಶೂನ್ಯ ಸಹಿಷ್ಣುತೆ ಹೊಂದಿದ್ದೇವೆ ಎಂದಿದ್ದಾರೆ.

ಚೀತೋಹಾರಿ

- 1952ರಲ್ಲಿ ಭಾರತದಲ್ಲಿ ಚೀತಾ ಅಳಿದುಹೋಗಿದೆ ಎಂದು ಘೋಷಿಸಲಾಯಿತು.
- ಸೆಪ್ಟೆಂಬರ್ 2022ರಲ್ಲಿ ಮೊದಲ ಎಂಟು ನಮೀಬಿಯನ್ ಚೀತಾಗಳ ಬಿಡುಗಡೆ
- ಡಿಸೆಂಬರ್ 2025ರ ವೇಳೆಗೆ ಒಟ್ಟು ಚೀತಾಗಳ ಸಂಖ್ಯೆ 30ಕ್ಕೆ ಏರಿಕೆ
- ನವೆಂಬರ್ 2025ರಲ್ಲಿ ತಾಯಿಯಾದ ಭಾರತದಲ್ಲಿ ಜನಿಸಿದ ಮೊದಲ ಮರಿ ಮುಖಿ
- 2032ರ ವೇಳೆಗೆ 60ರಿಂದ 70 ಚೀತಾಗಳನ್ನು ಹೊಂದುವ ಗುರಿ

ಭಾರತದಲ್ಲಿ ಅಳಿವಿನಂಚಿನಲ್ಲಿದ್ದ ದೊಡ್ಡ ಬೆಕ್ಕಿನ ತಳಿ ಸಂತತಿಗಾಗಿ ಮೋದಿ ಆರಂಭಿಸಿದ್ದ ಪ್ರಾಜೆಕ್ಟ್ ಚೀತಾ

ಭಾರತ ಸರ್ಕಾರ ಪ್ರಾಜೆಕ್ಟ್ ಚೀತಾ ಯೋಜನೆಯ ಮೂಲಕ ದೇಶದಲ್ಲಿ ಚೀತಾ ಸಂತತಿಗೆ ಮರುಜೀವ ನೀಡಿದ್ದು, 1952ರಿಂದ ಅಧಿಕೃತವಾಗಿದ್ದ ಅಳಿವಿನ ಸ್ಥಿತಿ ತಲುಪಿದ್ದ ಪರಿಸ್ಥಿತಿಯನ್ನು ಯಶಸ್ವಿಯಾಗಿ ಬದಲಾಯಿಸಿದೆ. ಪ್ರಧಾನಿ ನರೇಂದ್ರ ಮೋದಿ ಮೊದಲ ಹಂತದ ಚೀತಾಗಳನ್ನು ಕುನೋ ರಾಷ್ಟ್ರೀಯ ಉದ್ಯಾನವನಕ್ಕೆ ಬಿಡುಗಡೆ ಮಾಡುವುದರೊಂದಿಗೆ ಈ ಯೋಜನೆಗೆ ಚಾಲನೆ ನೀಡುವ ಮೂಲಕ ಚೀತಾ ಸಂತತಿಗೆ ಮರುಜೀವ ನೀಡಿದ್ದರು. ಆ ಮೂಲಕ ಡಿಸೆಂಬರ್ 2025ರ ವೇಳೆಗೆ ಭಾರತದಲ್ಲಿನ ಒಟ್ಟು ಚೀತಾಗಳ ಸಂಖ್ಯೆ 30ಕ್ಕೆ ತಲುಪಿದ್ದು, ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.



ಸುದ್ದಿ ಸಮಗ್ರ

ಜಾಗತಿಕ ಯೋಜನೆಗಳು

ವಿಶ್ವದ ದೊಡ್ಡ ಬೆಕ್ಕುಗಳ ಸಂರಕ್ಷಣೆಯಲ್ಲಿ ಜಾಗತಿಕ ನಾಯಕತ್ವ ವಹಿಸುವ ರಾಷ್ಟ್ರೀಯ ಕಾರ್ಯತಂತ್ರದೊಂದಿಗೆ ಪ್ರಾಜೆಕ್ಟ್ ಚೀತಾ ಜಾರಿಗೆ ಬಂದಿದೆ. ಏಪ್ರಿಲ್ 2023ರಲ್ಲಿ ಪ್ರಾಜೆಕ್ಟ್ ಟೈಗರ್‌ನ 50ನೇ ವರ್ಷದ ನೆನಪಿಗಾಗಿ, ಚೀತಾ ಸೇರಿದಂತೆ ಏಳು ದೊಡ್ಡ ಬೆಕ್ಕಿನ ತಳಿಗಳ ಸಂರಕ್ಷಣೆಗಾಗಿ ಅಂತಾರಾಷ್ಟ್ರೀಯ ಸಹಕಾರವನ್ನು ಬಲಪಡಿಸಲು ಪ್ರಧಾನಿ ಮೋದಿ, ಇಂಟರ್ನ್ಯಾಷನಲ್ ಬಿಗ್ ಕ್ಯಾಟ್ ಅಲಯನ್ಸ್ ಅನ್ನು ಪ್ರಾರಂಭಿಸಿದರು. ರಾಷ್ಟ್ರೀಯ ವನ್ಯಜೀವಿ ಅಂಕಿ-ಅಂಶಗಳ ಪ್ರಕಾರ, ಭಾರತ ಪ್ರಸ್ತುತ ಜಾಗತಿಕ ಹುಲಿಗಳ ಸಂಖ್ಯೆಯ ಶೇ.70 ಕ್ಕಿಂತ ಹೆಚ್ಚು ಭಾಗ ಹೊಂದಿದ್ದು, ಇದರೊಂದಿಗೆ ಅತೀ ಹೆಚ್ಚು ಏಕ-ಕೊಂಬಿನ ಖಡ್ಗಮೃಗಗಳು ಮತ್ತು ಏಷ್ಯಾಟಿಕ್ ಆನೆಗಳನ್ನು ಹೊಂದಿದೆ. ಚೀತಾ ಸಂತತಿಯ ಯಶಸ್ಸು ಭವಿಷ್ಯದ ಬದುಕುಳಿಯುವಿಕೆ ಪ್ರಮಾಣ, ಆನುವಂಶಿಕ ವೈವಿಧ್ಯತೆ, ಆಹಾರದ ಲಭ್ಯತೆ, ರೋಗ ನಿಯಂತ್ರಣ ಮತ್ತು ಭೂಪ್ರದೇಶದ ಮೇಲೆ ಅವಲಂಬಿತವಾಗಿರುತ್ತದೆ.



ಮರುಜೀವ ನೀಡುವ ಪ್ರಯತ್ನ

ಸ್ವತಂತ್ರ ಭಾರತದಲ್ಲಿ ಚೀತಾವನ್ನು ಮರಳಿ ತರುವ ಕುರಿತು ದಶಕಗಳ ಕಾಲ ಚರ್ಚೆಗಳು ನಡೆದಿದ್ದರೂ, ಪ್ರಸ್ತುತ ಸರ್ಕಾರದ ಆಡಳಿತಾವಧಿಯಲ್ಲಿ ಈ ಕಲ್ಪನೆ ಕಾರ್ಯರೂಪಕ್ಕೆ ಬಂದಿದೆ. ತಜ್ಞರ ಮೌಲ್ಯಮಾಪನದ ನಂತರ, ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನವನವನ್ನು ಮೊದಲ ಮರುಪರಿಚಯ ತಾಣವಾಗಿ ಆಯ್ಕೆ ಮಾಡಲಾಯಿತು. ಈ ಹಿಂದೆ ನಡೆದ ಗ್ರಾಮಗಳ ಸ್ಥಳಾಂತರದಿಂದಾಗಿ ಅಲ್ಲಿ ಮುಕ್ತ ಆವಾಸಸ್ಥಾನ ನಿರ್ಮಾಣವಾಗಿತ್ತು. ಸೆಪ್ಟೆಂಬರ್ 17, 2022ರಂದು ಪ್ರಧಾನಿ ಮೋದಿ, ನಮೀಬಿಯಾದಿಂದ ತಂದ ಮೊದಲ ಎಂಟು ಚೀತಾಗಳನ್ನು ಉದ್ಯಾನವನಕ್ಕೆ ಬಿಡುಗಡೆ ಮಾಡುವ ಮೂಲಕ 'ಪ್ರಾಜೆಕ್ಟ್ ಚೀತಾ'ಗೆ ಅಧಿಕೃತ ಚಾಲನೆ ನೀಡಿದರು. ದೊಡ್ಡ ಮಾಂಸಾಹಾರಿ ಪ್ರಾಣಿಯೊಂದರ ವಿಶ್ವದ ಮೊದಲ ಅಂತರ್ಖಂಡೀಯ ಸ್ಥಳಾಂತರ ಎಂದು ಸರ್ಕಾರ ಇದನ್ನು ಬಣ್ಣಿಸಿದೆ. ಫೆಬ್ರವರಿ 2023 ರಲ್ಲಿ ದಕ್ಷಿಣ ಆಫ್ರಿಕಾದಿಂದ 12 ಚೀತಾಗಳ ಎರಡನೇ ತಂಡ ಬಂದಿಳಿಯಿತು, ಇದರಿಂದಾಗಿ ಆರಂಭಿಕ ಮೂಲ ಸಂಖ್ಯೆ 20ಕ್ಕೆ ಏರಿತು. ಸುಮಾರು 17,000 ಚದರ ಕಿಮೀ ವಿಸ್ತೀರ್ಣದ ಕುನೋ-ಗಾಂಧಿ ಸಾಗರ ಪ್ರದೇಶದಲ್ಲಿ 2032 ರ ವೇಳೆಗೆ ಚೀತಾಗಳ ಸಂಖ್ಯೆಯನ್ನು 60 ರಿಂದ 70 ಕ್ಕೆ ವೃದ್ಧಿಸುವುದು ಯೋಜನೆಯ ದೀರ್ಘಾವಧಿ ಉದ್ದೇಶ. ವಲಯ ಆಧಾರಿತ ಸಂರಕ್ಷಣಾ ಮಾದರಿಯ ಮುಂದಿನ ಹಂತಕ್ಕಾಗಿ ಗಾಂಧಿ ಸಾಗರ ವನ್ಯಜೀವಿ ಅಭಯಾರಣ್ಯದಲ್ಲಿ ಈಗಾಗಲೇ ಸಿದ್ಧತೆಗಳು ಪೂರ್ಣಗೊಂಡಿವೆ.

ಸಂತತಿಯ ಮೈಲಿಗಲ್ಲುಗಳು

ಹೊಸ ಪರಿಸರದಲ್ಲಿ ಚೀತಾಗಳ ಬದುಕುಳಿಯುವಿಕೆ ಮತ್ತು ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಈ ಯೋಜನೆ ಗಮನಾರ್ಹ ಜೈವಿಕ ಮೈಲಿಗಲ್ಲುಗಳನ್ನು ಸಾಧಿಸಿದೆ. ಡಿಸೆಂಬರ್ 2025ರ ವೇಳೆಗೆ ಭಾರತದಲ್ಲಿನ ಒಟ್ಟು ಚೀತಾಗಳ ಸಂಖ್ಯೆ 30ಕ್ಕೆ ತಲುಪಿದೆ. ಇದರಲ್ಲಿ 12 ವಯಸ್ಕ ಚೀತಾಗಳು, ಒಂಬತ್ತು ಉಪ-ವಯಸ್ಕ ಮತ್ತು ಒಂಬತ್ತು ಮರಿಗಳು ಸೇರಿವೆ. ಈ ಸಂಖ್ಯೆ 11 ಮೂಲ ಚೀತಾಗಳು ಮತ್ತು ಭಾರತದಲ್ಲೇ ಜನಿಸಿದ 19 ಚೀತಾಗಳನ್ನು ಒಳಗೊಂಡಿದೆ. ನವೆಂಬರ್ 2025ರಲ್ಲಿ ಭಾರತದ ಮಣ್ಣಿನಲ್ಲಿ ಜನಿಸಿದ ಮೊದಲ ಚೀತಾ ಮರಿ 'ಮುಖಿ' ಐದು ಮರಿಗಳಿಗೆ ಜನ್ಮ ನೀಡುವ ಮೂಲಕ ಕಾರ್ಯಕ್ರಮದ ಎರಡನೇ ತಲೆಮಾರಿನ ಯಶಸ್ಸನ್ನು ಸಾಧಿಸಿದಂತಾಯಿತು. ನಮೀಬಿಯಾದ ಹೆಣ್ಣು ಚೀತಾ 'ಜ್ವಾಲಾ' ಎಂಟು ಮರಿಗಳಿಗೆ, ನಮೀಬಿಯಾದ 'ಆಶಾ' ಮೂರು ಮರಿಗಳಿಗೆ ಮತ್ತು ದಕ್ಷಿಣ ಆಫ್ರಿಕಾದ 'ಗಾಮಿನಿ' ಆರು ಮರಿಗಳಿಗೆ ಜನ್ಮ ನೀಡಿವೆ. ಹೆಣ್ಣು ಚೀತಾಗಳಾದ ನಿರ್ವಾ ಮತ್ತು ವೀರಾ ಕೂಡ ಮರಿಗಳಿಗೆ ಜನ್ಮ ನೀಡಿವೆ. ಇದರ ಹೊರತಾಗಿಯೂ, ದೊಡ್ಡ ಮಾಂಸಾಹಾರಿಗಳ ಪುನರುಜ್ಜೀವನಕ್ಕೆ ಸಂಬಂಧಿಸಿದ ಸಂಕೀರ್ಣತೆಗಳು, ಒತ್ತಡ, ಕಾಯಿಲೆ, ಪ್ರಾದೇಶಿಕ ಒತ್ತಡಗಳು ಮತ್ತು ಹೊಂದಾಣಿಕೆಯ ಸವಾಲುಗಳನ್ನು ಎದುರಿಸಬೇಕಾಗಿದೆ.

ತಳಿಯ ಅಳಿವು

ಏಷ್ಯಾಟಿಕ್ ಚೀತಾಗಳು ಐತಿಹಾಸಿಕವಾಗಿ ಭಾರತದ ಬಹುತೇಕ ಭಾಗಗಳ ಪೊದೆ ಕಾಡು, ಒಣ ಹುಲ್ಲುಗಾವಲುಗಳು, ಸವನ್ನಾಗಳು ಮತ್ತು ಅರೆ-ಶುಷ್ಕ ಪ್ರದೇಶಗಳಲ್ಲಿ ವಾಸಿಸುತ್ತಿದ್ದವು. ರಾಜಮನೆತನದ ಬೇಟೆಯ ಸಂಪ್ರದಾಯಗಳಿಗಾಗಿ ಈ ಪ್ರಾಣಿಗಳನ್ನು ಸೆರೆಹಿಡಿದು ತರಬೇತಿ ನೀಡಲಾಗುತ್ತಿತ್ತು. ಭಾರತದಲ್ಲಿ ವನ್ಯಜೀವಿ ಚೀತಾಗಳ ಕೊನೆಯ ಅಧಿಕೃತ ದೃಢೀಕೃತ ವೀಕ್ಷಣೆ 1947ರಲ್ಲಿ ವರದಿಯಾಗಿತ್ತು; ಆಗ ಪ್ರಸ್ತುತ ಛತ್ತೀಸ್‌ಗಢದಲ್ಲಿರುವ ಕೊರಿಯಾ ಜಿಲ್ಲೆಯ ಕಾಡುಗಳಲ್ಲಿ ಮೂರು ಪ್ರಾಣಿಗಳನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು. ಭಾರತ ಸರ್ಕಾರ 1952ರಲ್ಲಿ ಈ ತಳಿಯನ್ನು ಅಧಿಕೃತವಾಗಿ ಅಳಿವಿನಂಚಿನಲ್ಲಿದೆ ಎಂದು ಘೋಷಿಸಿತು. ಸ್ವತಂತ್ರ ಭಾರತದಲ್ಲಿ ಅಳಿದುಹೋದ ಏಕೈಕ ದೊಡ್ಡ ಮಾಂಸಾಹಾರಿ ಪ್ರಾಣಿ ಇದಾಗಿದೆ. ಅತಿಯಾದ ಬೇಟೆ, ಕಳ್ಳಬೇಟೆ, ಕೃಷಿ ವಿಸ್ತರಣೆ, ಆವಾಸಸ್ಥಾನದ ಅವನತಿ ಮತ್ತು ಕಡಿಮೆ ಸಂತಾನೋತ್ಪತ್ತಿ ದರ ಸೇರಿದಂತೆ ಹಲವು ಕಾರಣಗಳಿಂದ ಈ ಅಳಿವು ಸಂಭವಿಸಿದೆ. ಚೀತಾಗಳಿಗೆ ದೊಡ್ಡ ಮಾನವ ಸಂಚಾರ ಮುಕ್ತ ವಲಯಗಳ ಅಗತ್ಯವಿರುತ್ತದೆ. ಆದರೆ, ಭಾರತದ ಹುಲ್ಲುಗಾವಲುಗಳು ಮತ್ತು ಸವನ್ನಾಗಳನ್ನು ಇತರ ಉದ್ದೇಶಗಳಿಗಾಗಿ ಪರಿವರ್ತಿಸಿದ್ದರಿಂದ ಅಥವಾ ಪಾಳುಭೂಮಿಗಳಾಗಿ ಪರಿಗಣಿಸಿದ್ದರಿಂದ ಈ ತಳಿ ಹೆಚ್ಚು ಬಾಧಿತವಾಯಿತು.

ಪದವಿ ಮರೆಮಾಚಿ ಉದ್ಯೋಗ ಸರಿಯಲ್ಲ

ಹೊಸದಿಲ್ಲಿ: ಸಾರ್ವಜನಿಕ ಉದ್ಯೋಗಗಳಲ್ಲಿ ನಿಗದಿತ ಅರ್ಹತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕಡಿಮೆ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗಾಗಿ ಮೀಸಲಾದ ಹುದ್ದೆಗಳನ್ನು ಹೆಚ್ಚಿನ ವಿದ್ಯಾರ್ಹತೆ ಹೊಂದಿರುವವರು ಪಡೆದುಕೊಳ್ಳಲು ಅವಕಾಶ ನೀಡಿದರೆ, ನಿಜವಾದ ಅರ್ಹ ಅಭ್ಯರ್ಥಿಗಳ ಅವಕಾಶ ಕಸಿದುಕೊಂಡಂತಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಅಹ್ಸನುದ್ದೀನ್ ಅಮಾನುಲ್ಲಾ ಹಾಗೂ ಆರ್. ಮಹಾದೇವನ್ ಅವರಿದ್ದ ನ್ಯಾಯಪೀಠ, ಮದ್ರಾಸ್ ಹೈಕೋರ್ಟ್ ನೀಡಿದ್ದ ಆದೇಶವನ್ನು ರದ್ದುಪಡಿಸಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಬ್ಯಾಂಕ್ ಅಟೆಂಡರ್ ಹುದ್ದೆಗೆ ನೇಮಕಗೊಂಡಿದ್ದ ವ್ಯಕ್ತಿಯು ತಾನು ಪದವೀಧರ ಎಂಬ ಮಾಹಿತಿಯನ್ನು ಮರೆಮಾಚಿ ಉದ್ಯೋಗ ಪಡೆದಿದ್ದ. ಆ ಹುದ್ದೆ 10ನೇ ತರಗತಿ ಅಥವಾ ಅದಕ್ಕಿಂತ ಕಡಿಮೆ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಮಾತ್ರ ಮೀಸಲಾಗಿತ್ತು. ಈ ವಿಚಾರ ಬೆಳಕಿಗೆ ಬಂದ ಬಳಿಕ ಬ್ಯಾಂಕ್ ಆತನನ್ನು ಸೇವೆಯಿಂದ ವಜಾಗೊಳಿಸಿತ್ತು. ವಜಾ ಕ್ರಮವನ್ನು ಪ್ರಶ್ನಿಸಿ ಉದ್ಯೋಗಿ ನ್ಯಾಯಾಲಯದ ಮೊರೆ ಹೋಗಿದ್ದ. ಮದ್ರಾಸ್ ಹೈಕೋರ್ಟ್ ಆತನ ಮರುನೇಮಕಕ್ಕೆ ಆದೇಶ ನೀಡಿದ್ದರೂ, ಸುಪ್ರೀಂ ಕೋರ್ಟ್ ಇದೀಗ ಆ ಆದೇಶವನ್ನು ರದ್ದುಪಡಿಸಿದೆ.

ಸಾರ್ವಜನಿಕ ಉದ್ಯೋಗಗಳು ನಿಗದಿತ ಅರ್ಹತೆಗಳ ಆಧಾರದ ಮೇಲೆ ಎಲ್ಲ ಅರ್ಹ ಅಭ್ಯರ್ಥಿಗಳಿಗೆ ಲಭ್ಯವಾಗಬೇಕು. ಕಡಿಮೆ ವಿದ್ಯಾರ್ಹತೆ ಹೊಂದಿರುವವರಿಗಾಗಿ ಮೀಸಲಾದ ಹುದ್ದೆಗಳಲ್ಲಿ ಹೆಚ್ಚಿನ ವಿದ್ಯಾರ್ಹತೆ ಹೊಂದಿದವರಿಗೆ ಅವಕಾಶ ನೀಡಿದರೆ, ನಿಜವಾದ ಅರ್ಹ ಅಭ್ಯರ್ಥಿಗಳು ಉದ್ಯೋಗಾವಕಾಶದಿಂದ ವಂಚಿತರಾಗುತ್ತಾರೆ ಎಂದು ನ್ಯಾಯಪೀಠ ಹೇಳಿದೆ. ಹೆಚ್ಚುವರಿ ವಿದ್ಯಾರ್ಹತೆಗೆ ಮಿತಿ ವಿಧಿಸುವುದು ನ್ಯಾಯಸಮ್ಮತ ಕ್ರಮವಾಗಿದೆ. ಉನ್ನತ ಶಿಕ್ಷಣ ಪಡೆಯಲುಸಾಧ್ಯವಾಗದವರಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಇಂತಹ ನಿಯಮಗಳನ್ನು ರೂಪಿಸಲಾಗುತ್ತದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಕಿರುಸುದ್ದಿ

ರಾಜ್ಯಸಭಾ ಚುನಾವಣೆ:11 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಹೊಸದಿಲ್ಲಿ: ಜೂನ್ 18ರಂದು ನಿಗದಿಯಾಗಿರುವ ರಾಜ್ಯಸಭೆ ಚುನಾವಣೆಗೆ ಬಿಜೆಪಿ ಗುರುವಾರ 11 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ. ಅಭ್ಯರ್ಥಿಗಳಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಕೂಡ ಸೇರಿದ್ದಾರೆ. ಚುಗ್ ಅವರನ್ನು ಮಧ್ಯಪ್ರದೇಶದಿಂದ ಕಣಕ್ಕಿಳಿಸಲಾಗಿದೆ. 10 ರಾಜ್ಯಗಳ ರಾಜ್ಯಸಭೆಯ 27 ಸ್ಥಾನಗಳಿಗೆ ಜೂ.18 ನಲ್ಲಿ ಮತದಾನ ನಡೆಯಲಿದೆ. ಒಟ್ಟು 245 ಸ್ಥಾನಗಳ ಪೈಕಿ ಬಿಜೆಪಿ ಪ್ರಸ್ತುತ 113 ಸ್ಥಾನಗಳನ್ನು ಹೊಂದಿದ್ದರೆ, ಎನ್‌ಡಿಎ ಒಟ್ಟು 148 ಸ್ಥಾನಗಳನ್ನು ಹೊಂದಿದೆ.

ಇಂದು ಮೋದಿ ತವರೂರಿಗೆ: ಹಲವು ಯೋಜನೆಗೆ ಚಾಲನೆ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಗುಜರಾತ್ ಮತ್ತು ದಮನ್‌ಗೆ ಭೇಟಿ ನೀಡಲಿದ್ದು, ಸುಮಾರು 22,000 ಕೋಟಿ ರೂ. ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಸೂರತ್‌ನಲ್ಲಿ 200 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆ ಉದ್ಘಾಟನೆ ಮತ್ತು ದಾಮನ್‌ನಲ್ಲಿ ನಮೋ ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡವನ್ನೂ ಉದ್ಘಾಟನೆ ಮಾಡಲಿದ್ದಾರೆ.

ಕ್ಷಮೆ ನೀಡಿ, ಇನ್ನೆಂದೂ ಅಪರಾಧ ಕೃತ್ಯ ಎಸಗಲ್ಲ

ಗಾಜಿಯಾಬಾದ್: ಉತ್ತರ ಪ್ರದೇಶದ ಗಾಜಿಯಾಬಾದ್ ನಲ್ಲಿ ಕ್ರಿಮಿನಲ್ ಹಿನ್ನೆಲೆ ಹೊಂದಿರುವ ಸುಮಾರು 150 ರೌಡಿ ಶೀಟರ್‌ಗಳು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಕ್ಷಮೆ ಕೇಳುವ ಪೋಸ್ಟರ್‌ಗಳೊಂದಿಗೆ , ಇನ್ನು ಮುಂದೆ ಯಾವುದೇ ಅಪರಾಧ ಕೃತ್ಯಗಳಲ್ಲಿ ತೊಡಗುವುದಿಲ್ಲ ಎಂಬುದಾಗಿ ಕೈಗಳನ್ನು ಎತ್ತಿ ಪ್ರತಿಜ್ಞೆ ಮಾಡಿದ ಮಹತ್ವದ ಘಟನೆ ನಡೆದಿದೆ. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆಡಳಿತದಲ್ಲಿ ರೂಪಿಸಲಾದ ಪೊಲೀಸ್ ಪುನರ್ವಸತಿ ಉಪಕ್ರಮ 'ಆಪರೇಷನ್ ಕ್ಲೀನ್‌ಸ್ವೀಪ್'ನಡಿಯಲ್ಲಿ ಇನ್ನು ಮುಂದೆ ಅಪರಾಧ ಕೃತ್ಯಗಳನ್ನು ಎಸಗುವುದಿಲ್ಲ ಎಂದು ರೌಡಿಗಳು ಪ್ರತಿಜ್ಞೆ ಮಾಡಿದರು. ವಿಪಕ್ಷ ಆಡಳಿತದ ಕೆಲವು ರಾಜ್ಯಗಳಲ್ಲಿ ಸ್ವಜನಪಕ್ಷಪಾತದಲ್ಲಿ ಗಂಭೀರ ಅಪರಾಧದ ಕ್ರಿಮಿನಲ್‌ಗಳ ವಿರುದ್ಧದ ಕೇಸುಗಳನ್ನು ಹಿಂಪಡೆಯಲಾಗುತ್ತಿರುವ ಬಗ್ಗೆ ಕಳವಳಗಳು ವ್ಯಕ್ತವಾಗುತ್ತಿದ್ದರೆ, ಉತ್ತರಪ್ರದೇಶದಲ್ಲಿನ ಯೋಗಿ ಆದಿತ್ಯನಾಥ್ ನೇತೃತ್ವದ ಬಿಜೆಪಿ ಸರಕಾರದಲ್ಲಿ ಅಪರಾಧಿಗಳು ಹೃದಯಪರಿವರ್ತನೆಯೊಂದಿಗೆ ಇಂತಹ ನಿಲುವು ತಳೆಯುತ್ತಿರುವುದೀಗ ಗಮನ ಸೆಳೆದಿದೆ. ಅಪರಾಧ ಚಟುವಟಿಕೆಗಳಲ್ಲಿ ತೊಡಗಿದ್ದ ಯುವಕರು ಮತ್ತು ಮಧ್ಯವಯಸ್ಕ ರೌಡಿ ಶೀಟರ್‌ಗಳು, 'ಯೋಗಿ ಆದಿತ್ಯನಾಥ್‌ಜೀ ದಯವಿಟ್ಟು ನಮ್ಮನ್ನು ಕ್ಷಮಿಸಿ' ಎಂಬ ಫಲಕಗಳನ್ನು ಹಿಡಿದು, ತಾವು ಮತ್ತೆ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ ಎಂದು ಘೋಷಿಸಿದರಲ್ಲದೆ, ಸಿಎಂ ತಮ್ಮನ್ನು ಕ್ಷಮಿಸುತ್ತಾರೆ ಎಂಬ ಭರವಸೆ ಇದೆ ಎಂದರು.

ಕೇರಳ ಕರಾವಳಿಗೆ ನೈಋತ್ಯ ಮುಂಗಾರು ಮಳೆ ಪ್ರವೇಶ

ಹೊಸದಿಲ್ಲಿ: ಭಾರತೀಯ ಹವಾಮಾನ ಇಲಾಖೆ (ಐಎಂಡಿ), ಗುರುವಾರ, ನೈಋತ್ಯ ಮುಂಗಾರು ಅಧಿಕೃತವಾಗಿ ಕೇರಳವನ್ನು ಪ್ರವೇಶಿಸಿದೆ ಎಂದು ದೃಢಪಡಿಸಿದೆ. ದೇಶದಲ್ಲಿ ಸೂಕ್ತ ಸಮಯದಲ್ಲಿ ಮುಂಗಾರು ಆರಂಭವಾಗದಿರುವುದು ಆತಂಕಕ್ಕೀಡು ಮಾಡಿತ್ತು. ಹವಾಮಾನ ಇಲಾಖೆಯ ಪ್ರಕಾರ, ಮುಂಗಾರು ಅರಬ್ಬಿ ಸಮುದ್ರ, ಲಕ್ಷದ್ವೀಪ ದ್ವೀಪಗಳು, ಮಾಹೆ ಮತ್ತು ಕರ್ನಾಟಕ, ತಮಿಳುನಾಡು ಹಾಗೂ ಬಂಗಾಳ ಕೊಲ್ಲಿಯ ಕೆಲವು ಭಾಗಗಳಿಗೆ ಪ್ರವೇಶಿಸಿದೆ. ಸಾಮಾನ್ಯವಾಗಿ ಜೂನ್ 1ರ ಸುಮಾರಿಗೆ ಮುಂಗಾರು ಆರಂಭವಾಗುತ್ತದೆಯಾದರೂ, ಈ ಬಾರಿ ಮುನ್ಸೂಚನೆ ನೀಡಿದ್ದ ಮೇ 26 ಕ್ಕಿಂತ ತಡವಾಗಿ ಪ್ರವೇಶಿಸಿದೆ.



ಮಳೆಯ ಮುನ್ಸೂಚನೆ: ಇಲಾಖೆ, ಈ ಬಾರಿಯ ಮುಂಗಾರು ಮಳೆಯ ಮುನ್ಸೂಚನೆಯನ್ನು ಸಾಮಾನ್ಯಕ್ಕಿಂತ ಕಡಿಮೆ ಎಂದು ಪರಿಷ್ಕರಿಸಿದ್ದು, ಒಟ್ಟು ಮಳೆಯು ದೀರ್ಘಾವಧಿ ಸರಾಸರಿಯ ಶೇ. 90 ರಷ್ಟಿರಬಹುದು ಎಂದು ಅಂದಾಜಿಸಿದೆ. 1971 ರಿಂದ 2020 ರವರೆಗಿನ ದತ್ತಾಂಶದ ಆಧಾರದ ಮೇಲೆ ರಾಷ್ಟ್ರೀಯ ದೀರ್ಘಾವಧಿ ಮಳೆಯ ಸರಾಸರಿ 87 ಸೆಂಟಿಮೀಟರ್ ಆಗಿದೆ.

ಎಲ್ ನಿನೋ ಪ್ರಭಾವ ಏನು?: ಸಮಭಾಜಕ ಪೆಸಿಫಿಕ್ ವಲಯದಲ್ಲಿ ಉಂಟಾಗುತ್ತಿರುವ ಎಲ್ ನಿನೋ ಪರಿವರ್ತನೆ ಈ ಬಾರಿ ಮಳೆ ಕಡಿಮೆಯಾಗಲು ಕಾರಣವಾಗಲಿದೆ. ಈ ಪರಿಸ್ಥಿತಿ, ಜೂನ್ ತಿಂಗಳಲ್ಲಿ ದುರ್ಬಲವಾಗಿರಲಿದ್ದು, ಸೆಪ್ಟೆಂಬರ್ ವೇಳೆಗೆ ಮಧ್ಯಮದಿಂದ ತೀವ್ರ ರೂಪಕ್ಕೆ ಬದಲಾಗುವ ಸಾಧ್ಯತೆಯಿದೆ.

ಉಗ್ರ ದಾಳಿ ಸಂಚು ವಿಫಲ: ಭಯೋತ್ಪಾದಕರಿಬ್ಬರ ಸೆರೆ

ಮೊಹಾಲಿ: ಭಯೋತ್ಪಾದನೆ ವಿರುದ್ಧದ ಕಾರ್ಯಾಚರಣೆಯಲ್ಲಿ, ವಿದೇಶಿ ಮೂಲದ ಭಯೋತ್ಪಾದಕ ಕಾರ್ಯಾಚರಣೆಯ ಇಬ್ಬರು ಸಹಚರರನ್ನು ಮೊಹಾಲಿ ರಾಜ್ಯ ವಿಶೇಷ ಕಾರ್ಯಾಚರಣೆ ಪಡೆಯು (ಎಸ್‌ಎಸ್‌ಒಸಿ) ಮೊಹಾಲಿಯಿಂದ ಬಂಧಿಸಿದೆ. ಬಂಧಿತರಿಂದ ಸುಧಾರಿತ ಸ್ಫೋಟಕ ಸಾಧಕವನ್ನು (ಐಇಡಿ) ವಶಪಡಿಸಿಕೊಂಡಿದೆ ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಗೌರವ್ ಯಾದವ್ ತಿಳಿಸಿದ್ದಾರೆ. ಈ ಮೂಲಕ ಎಸ್‌ಎಎಸ್ ನಗರದ ಪ್ರಮುಖ ಸಾರ್ವಜನಿಕ ಮೂಲಸೌಕರ್ಯಗಳನ್ನು ಗುರಿಯಾಗಿಸುವ ಉದ್ದೇಶದ ಭಯೋತ್ಪಾದಕ ಸಂಚು ವಿಫಲಗೊಳಿಸಲಾಗಿದೆ. ಬಂಧಿತರು ವಿದೇಶ ಮೂಲದ ಭಯೋತ್ಪಾದಕ ಕಾರ್ಯಾಚರಣೆಯೊಂದಿಗೆ ಸಂಪರ್ಕ ಹೊಂದಿದ್ದು, ದೊಡ್ಡ ಪಿತೂರಿ ಭಾಗವಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಗಡಿಯಾಚೆಗಿನ ಭಯೋತ್ಪಾದನೆಯನ್ನು ನಿಗ್ರಹಿಸಲು ಮತ್ತು ಪ್ರಮುಖ ಸ್ಥಾಪನೆಗಳ ಮೇಲಿನ ದಾಳಿಗಳನ್ನು ತಡೆಯಲು ನಡೆಯುತ್ತಿರುವ ಪ್ರಯತ್ನಗಳಲ್ಲಿ ಸ್ಫೋಟಕ ಸಾಧನದ ವಶಪಡಿಸಿಕೊಳ್ಳುವಿಕೆಯನ್ನು ಗಮನಾರ್ಹ ಯಶಸ್ಸಾಗಿ ನೋಡಲಾಗುತ್ತಿದೆ ಎಂದು ಡಿಜಿಪಿ ಹೇಳಿದ್ದಾರೆ. ತನಿಖಾಧಿಕಾರಿಗಳು ಈಗ ಅದರ ನಿರ್ವಾಹಕರು, ಸಹವರ್ತಿಗಳು, ಲಾಜಿಸ್ಟಿಕಲ್ ಬೆಂಬಲ ವ್ಯವಸ್ಥೆ ಮತ್ತು ಪಿತೂರಿಗೆ ಸಂಬಂಧಿಸಿದ ಇತರ ಸಂಪರ್ಕಗಳು ಸೇರಿದಂತೆ ಇಡೀ ಭಯೋತ್ಪಾದಕ ಜಾಲದ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆ ಮುಂದುವರಿದಂತೆ ಇನ್ನೂ ಬಂಧಿತರ ಸಂಖ್ಯೆ ಹೆಚ್ಚಳಗೊಳ್ಳಬಹುದು ಎಂದು ಮಾಹಿತಿ ನೀಡಿದ್ದಾರೆ. ಎಂದು ಪಂಜಾಬ್ ಪೊಲೀಸರು ಭಯೋತ್ಪಾದಕ ಜಾಲಗಳನ್ನು ನಾಶಪಡಿಸಲು, ಶಾಂತಿ ಮತ್ತು ಸುರಕ್ಷತೆ ಕಾಪಾಡಿಕೊಳ್ಳಲು ಬದ್ಧವಾಗಿದೆ ಎಂದು ಡಿಜಿಪಿ ಹೇಳಿದ್ದಾರೆ.

ಜ್ಞಾನವಾಪಿ ಗಲಭೆ: ಆರೋಪಿಗಳ ಖುಲಾಸೆ

ವಾರಾಣಸಿ: ವಾರಾಣಸಿಯ ಜ್ಞಾನವಾಪಿ ಗೇಟ್ ಬಳಿ ಭದ್ರತಾ ಸಿಬ್ಬಂದಿ ಬನಾರಸಿನ ಮುಫ್ತಿ ಮೌಲಾನಾ ಅಬ್ದುಲ್ ಬಾಟಿನ್ ಅವರನ್ನು ಶೋಧನೆಗೊಳಪಡಿಸಿದ ಹಿನ್ನೆಲೆಯಲ್ಲಿ ಉಂಟಾದ ಗುಂಪು ಘರ್ಷಣೆ ಪ್ರಕರಣದ ಎಲ್ಲ 14 ಆರೋಪಿಗಳನ್ನು ಸೆಷನ್ಸ್ ನ್ಯಾಯಾಲಯ ಖುಲಾಸೆಗೊಳಿಸಿದೆ. ಪ್ರಕರಣದ ವಿಚಾರಣೆ ನಡೆಸಿದ ಅಡಿಷನಲ್ ಸೆಷನ್ ನ್ಯಾಯಾಧೀಶರಾದ ಯಜುವೇಂದ್ರ ವಿಕ್ರಮ್ ಸಿಂಗ್ ಅವರು,ಆರೋಪಿಗಳ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಹೇಳಿ ಆರೋಪಿಗಳನ್ನು ಖುಲಾಸೆಗೊಳಿಸಿದರು. ಎರಡೂ ಗುಂಪುಗಳ ಶಂಕರ್ ಗಿರಿ, ಮಹಂತ ರಾಜೇಂದ್ರ ತಿವಾರಿ, ಭಾನು ಮಿಶ್ರಾ, ಗುಲ್ಶನ್ ಕಪೂರ್, ಅಜಯ್ ಚೌಬೆ, ಜುಗ್ನು ಗೋಸ್ವಾಮಿ, ಶಿವ ಸೇಠ್, ಮೊಹಮ್ಮದ್ ಇಜಾಜ್, ಮಾಜಿ ಕೌನ್ಸಿಲರ್ ಸಲೀಮ್ , ಶೇರ್ ಅಲಿ,ಗುಲ್ಜರ್ ಅಲಿ, ಶಮ್ಶೇರ್ ಅಲಿ, ಇರ್ಫಾನ್ ,ಬಚ್ಚಾ ಮುಸಲ್ಮಾನ್, ಅಚ್ಚು ಮಿಯಾ, ಹಾಜಿ ಸುಲೇಮಾನ್ ಮತ್ತು ಇತರ 2000ಮಂದಿ ಅಪರಿಚಿತರ ವಿರುದ್ಧ ಕೇಸು ದಾಖಲಾಗಿತ್ತು. ಆರೋಪಿಗಳಲ್ಲಿ ಇಬ್ಬರು ವಿಚಾರಣೆಯ ಅವಧಿಯಲ್ಲಿ ನಿಧನರಾಗಿದ್ದರು.

ಜೋರಾಗಿ ಸಂಗೀತ ಕೇಳಲು ಇಲ್ಲ ಅನುಮತಿ | ಹಿಜಾಬ್ ಕಡ್ಡಾಯ

ಕೇರಳದಲ್ಲಿ ಇಸ್ಲಾಮಿಕ್ ಸ್ನೇಹಿ ಜಿಮ್!

ಕೇರಳ: ಕೇರಳದ ಪಾಲಕ್ಕಾಡ್ ಜಿಲ್ಲೆಯ ಫಿಟ್‌ನೆಸ್ ಕೇಂದ್ರವೊಂದು ತನ್ನನ್ನು ಇಸ್ಲಾಮಿಕ್ ಸ್ನೇಹಿ ಜಿಮ್ ಎಂದು ಬಿಂಬಿಸಿಕೊಂಡಿರುವುದು ತೀವ್ರ ವಿವಾದಕ್ಕೆ ಕಾರಣವಾಗಿದೆ. ಜಿಮ್ ಮಾಲೀಕರು ವಿಡಿಯೋ ಅಳಿಸಿದ ಬಳಿಕ ವಿವಾದ ಒಂದಷ್ಟು ಮಟ್ಟಿಗೆ ತಣ್ಣಗಾಗಿದೆಯಾದರೂ ಭಾರೀ ಟೀಕೆ ವ್ಯಕ್ತವಾಗಿದೆ.



ಪ್ರಚಾರದ ವಿಡಿಯೋಗೆ ಆಕ್ಷೇಪ: ಪುತುನಗರಂ ಮೂಲದ ಈ ಜಿಮ್‌ನ ಮಾಲೀಕ ನವಾಜ್ ಮುತ್ತು ಟಿ ಬಿಡುಗಡೆ ಮಾಡಿದ ಪ್ರಚಾರದ ವಿಡಿಯೋದಿಂದಾಗಿ ಈ ವಿವಾದ ಆರಂಭವಾಗಿದೆ. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ವ್ಯಾಯಾಮ ಸ್ಥಳಗಳು, ವಿಭಿನ್ನ ಸಮಯ ಮತ್ತು ಲಿಂಗ ಆಧಾರಿತ ಪ್ರತ್ಯೇಕ ತರಬೇತುದಾರರನ್ನು ನಿಯೋಜಿಸುವುದು ಸೇರಿದಂತೆ ಹಲವು ನಿಯಮಗಳನ್ನು ಆ ವಿಡಿಯೋದಲ್ಲಿ ಘೋಷಿಸಲಾಗಿತ್ತು.

ಇದರೊಂದಿಗೆ ಮಹಿಳೆಯರು ದೇಹವನ್ನು ಮುಚ್ಚಿಕೊಳ್ಳಬೇಕು ಮತ್ತು ಹಿಜಾಬ್ ಧರಿಸಬೇಕು ಹಾಗೂ ಜೋರಾದ ಸಂಗೀತ ನಿಷೇಧಿಸಿ ಹೆಡ್‌ಫೋನ್‌ಗಳಿಗೆ ಮಾತ್ರ ಅವಕಾಶ ಎಂಬ ನಿಯಮಗಳನ್ನು ವಿಧಿಸಲಾಗಿತ್ತು. ಈ ನಿಯಮಗಳು ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದು, ಈ ಕೇಂದ್ರ ಮುಸ್ಲಿಮರಿಗೆ ಮಾತ್ರವೇ ಸೀಮಿತವಾಗಿದೆಯೇ ಎಂಬ ಆತಂಕವನ್ನು ಬಳಕೆದಾರರು ವ್ಯಕ್ತಪಡಿಸಿದ್ದರು.

ಮಾಲೀಕರಿಂದ ವಿಡಿಯೋ ಡಿಲೀಟ್: ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಮಾಲೀಕ ಮೊದಲ ಪ್ರಚಾರದ ವಿಡಿಯೋವನ್ನು ತೆಗೆದುಹಾಕಿದ್ದು, ಜಿಮ್ ಯಾವುದೇ ಧರ್ಮದ ನಿರ್ಬಂಧವಿಲ್ಲದೆ ಎಲ್ಲರಿಗೂ ಮುಕ್ತವಾಗಿದೆ ಎಂದು ಹೊಸ ವಿಡಿಯೋ ಮೂಲಕ ಸ್ಪಷ್ಟಪಡಿಸಿದ್ದಾರೆ. ಇಸ್ಲಾಮಿಕ್ ಸ್ನೇಹಿ ಎಂಬ ಹಣೆಪಟ್ಟಿ ಕೇವಲ ಅಲ್ಲಿನ ಕಾರ್ಯಾಚರಣೆಯ ಮಾನದಂಡಗಳನ್ನು ಸೂಚಿಸುತ್ತದೆಯೇ ಹೊರತು ಮುಸ್ಲಿಮರಿಗೆ ಮಾತ್ರ ಪ್ರವೇಶ ಎಂದು ಅರ್ಥವಲ್ಲ, ಎಂದು ಸ್ಪಷ್ಟಪಡಿಸಿದ್ದಾರೆ.

ಹಿನ್ನೆಲೆ ಮತ್ತು ಉದ್ದೇಶ: ಈ ಫಿಟ್‌ನೆಸ್ ಕೇಂದ್ರ ಹೊಸದೇನಲ್ಲ, ಬದಲಿಗೆ ಇದು ಕಳೆದ ಸುಮಾರು 15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ನವೀಕರಣಗೊಳ್ಳುತ್ತಿದೆ. ಜೋರಾದ ಸಂಗೀತ ಹಿಡಿಸದವರಿಗೆ ಮತ್ತು ಯುನಿಸೆಕ್ಸ್ ಜಿಮ್ ವಾತಾವರಣದಲ್ಲಿ ಮುಜುಗರ ಅನುಭವಿಸುವ ಮತ್ತು ಸಂಪ್ರದಾಯಬದ್ಧ ತತ್ವಗಳನ್ನು ಪಾಲಿಸುವ ಸ್ವಧರ್ಮೀಯರು ಸೇರಿದಂತೆ ಹಲವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ನಿರ್ದಿಷ್ಟ ಮಾರ್ಗಸೂಚಿಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ಮಾಲೀಕರು ಹೇಳಿಕೊಂಡಿದ್ದಾರೆ.

ಕಂಪನಿಗಳಿಂದ ಎಥನಾಲ್ ಇಂಧನ ವ್ಯವಸ್ಥೆಯ ವಾಹನಗಳ ಅನಾವರಣ

ಆಟೋಮೊಬೈಲ್ ಕ್ಷೇತ್ರದಿಂದ ಮಹತ್ತರ ಸಾಧನೆ

ಹೊಸದಿಲ್ಲಿ: ಪರಿಸರ ಸಂರಕ್ಷಣೆ, ಇಂಧನ ಆಮದು ಮೇಲಿನ ಅವಲಂಬನೆ ಕಡಿಮೆ ಮಾಡುವ ಉದ್ದೇಶದಿಂದ ದೇಶದ ಆಟೋಮೊಬೈಲ್ ವಲಯವು ಹೊಸ ಆವಿಷ್ಕಾರ ಮಾಡಿದೆ. ಸ್ಥಳೀಯ ಪರ್ಯಾಯ ಇಂಧನಗಳ ಬಳಕೆ ಉತ್ತೇಜಿಸುವ ಸಲುವಾಗಿ ಮಾರುತಿ ಸುಜುಕಿ ಐತಿಹಾಸಿಕ ಕಾರ್ಯಕೈಗೊಂಡಿದೆ. ವಿಶ್ವ ಪರಿಸರ ದಿನ ಜೂನ್ 5 ಕ್ಕೂ ಮುನ್ನ ಗುರುವಾರ ಸುಜುಕಿ ಕಂಪನಿ ಭಾರತದ ಮೊದಲ ಫ್ಲೆಕ್ಸ್-ಫ್ಯೂಯಲ್ ಪ್ರಯಾಣಿಕ ಕಾರನ್ನು ಅಧಿಕೃತವಾಗಿ ಅನಾವರಣಗೊಳಿಸಿದೆ.

ದಿಲ್ಲಿಯ ತಾಜ್ ಪ್ಯಾಲೇಸ್ ಹೋಟೆಲ್‌ನಲ್ಲಿ ಗುರುವಾರ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಈ ಕಾರನ್ನು ಅನಾವರಣಗೊಳಿಸಿದ್ದಾರೆ. ಈ ಮೂಲಕ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ದೇಶದ ಮೊದಲ ಫ್ಲೆಕ್ಸ್ ಫ್ಯೂಯಲ್ ಕಾರು ವ್ಯಾಗನಾರ್ ಅನ್ನು ತಯಾರಿಸಿದೆ. ಈ ಕಾರು ಟಾಲ್ ಬಾಯ್ ಹ್ಯಾಚ್‌ಬ್ಯಾಕ್ ಇ85 ಇಂಧನದಲ್ಲಿ (ಶೇ.85ರಷ್ಟು ಎಥನಾಲ್ ಮಿಶ್ರಣವನ್ನು ಹೊಂದಿರುವ ಪೆಟ್ರೋಲ್) ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ.



ಈ ಕ್ರಮವು ಪಳೆಯುಳಿಕೆ ಇಂಧನಗಳಿಂದ ಸ್ವಚ್ಛ ಇಂಧನ ಪರ್ಯಾಯಗಳಿಗೆ ಪರಿವರ್ತನೆಯಾಗುವ ಭಾರತದ ಪ್ರಯಾಣದಲ್ಲಿ ಮಹತ್ವದ ಹೆಜ್ಜೆಯನ್ನು ಸೂಚಿಸುತ್ತದೆ.

ಸಾಂಪ್ರದಾಯಿಕ ಪೆಟ್ರೋಲ್-ಇಂಧನ ವಾಹನಗಳಿಗೆ ವ್ಯತಿರಿಕ್ತವಾಗಿ, ಎಥನಾಲ್ ಮಿಶ್ರಣಗಳು ಟೈಲ್‌ಪೈಪ್ ಹೊರಸೂಸುವಿಕೆ ಕಡಿಮೆ ಮಾಡಲು ಮತ್ತು ಕಚ್ಚಾ ತೈಲದ ಬಳಕೆ ಕಡಿಮೆಗೊಳಿಸಲು ಸಹಕಾರಿಯಾಗಿದೆ.

ಭಾರತದ ಇಂಧನ ಭದ್ರತಾ ಗುರಿಗಳಿಗೆ ಸಹಾಯ ಮಾಡುವಾಗ ವಾಹನ ಉದ್ಯಮದಲ್ಲಿ ಎಥೆನಾಲ್ ಬಳಕೆ ಹೆಚ್ಚಿಸುವ ಕೇಂದ್ರ ಸರ್ಕಾರದ ಉದ್ದೇಶದೊಂದಿಗೆ ಈ ಯೋಜನೆಯನ್ನು ಕೈಗೊಳ್ಳಲಾಗಿದೆ ಎಂದು ಇಂಡೋ-ಜಪಾನೀಸ್ ವಾಹನ ಕಂಪನಿ ಹೇಳಿಕೊಂಡಿದೆ.

ಹೀರೋದಿಂದಲೂ ಸಾಧನೆ: ಹೀರೋ ಮೋಟೋಕಾರ್ಪ್ ಸ್ಪ್ಲೆಂಡರ್ + ಮತ್ತು ಎಚ್‌ಎಫ್ ಡಿಲಕ್ಸ್‌ನ ಫ್ಲೆಕ್ಸ್-ಫ್ಯೂಯಲ್ ಆವೃತ್ತಿಗಳನ್ನು ಬಿಡುಗಡೆ ಮಾಡಿದೆ. ಇ20 ಯಿಂದ ಇ85 ವರೆಗಿನ ಎಥೆನಾಲ್ ಮಿಶ್ರಣಗಳೊಂದಿಗೆ ಹೊಂದಿಕೊಳ್ಳುವ ಈ ಬೈಕ್ ದಿಲ್ಲಿಯಲ್ಲಿ ಮತ್ತು ಮಹಾರಾಷ್ಟ್ರದ ಆಯ್ದ ಪ್ರದೇಶಗಳಲ್ಲಿ ಲಭ್ಯವಾಗಲಿದೆ. ಇನ್ನುಳಿದಂತೆ ಮುಂದಿನ ದಿನಗಳಲ್ಲಿ ರಾಷ್ಟ್ರವ್ಯಾಪಿ ಮಾರಾಟ ಮಾಡಲು ಯೋಜಿಸಲಾಗಿದೆ. ಸರ್ಕಾರವು ಹೆಚ್ಚಿನ ಎಥನಾಲ್ ಅಳವಡಿಕೆಗೆ ಒತ್ತು ನೀಡುತ್ತಿರುವುದರಿಂದ, ಮೋಟರ್ ಸೈಕಲ್ ಫ್ಲೆಕ್ಸ್-ಇಂಧನ ತಂತ್ರಜ್ಞಾನವನ್ನು ಪರಿಚಯಿಸಿದೆ.

ಕಿರುಸುದ್ದಿ

ಅಪಘಾತ: ಅಕ್ಕ - ತಮ್ಮ ಸಾವು



• **ಸಂಕೇಶ್ವರ:** ರಾಷ್ಟ್ರೀಯ ಹೆದ್ದಾರಿ ಕಣಗಲಾ ಬಳಿಯ ಗುರುವಾರ ಟ್ರಕ್ ಹಾಗೂ ಬೈಕ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಅಕ್ಕ-ತಮ್ಮ ಮೃತಪಟ್ಟ ಧಾರುಣ ಘಟನೆ ನಡೆದಿದೆ.

ಮೃತರನ್ನು ಕಣಗಲಾ ಗ್ರಾಮದ ಅಪ್ಪಾಸಾಹೇಬ ಮಹಾಲಿಂಗ ಲಾಟ್ಕರ್ (60) ಹಾಗೂ ಮಾಂಗನೂರ ಗ್ರಾಮದ ಸುವರ್ಣ ಸಾತಗೌಡ ಪಾಟೀಲ (62) ಎಂದು ಗುರುತಿಸಲಾಗಿದೆ. ಟ್ರಕ್ ಡಿಕ್ಕಿ ಹೊಡೆದ ಪರಿಣಾಮ ಅಪ್ಪಾಸಾಹೇಬ್ ಲಾಟ್ಕರ್ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದು, ಅಸ್ವಸ್ಥಗೊಂಡಿದ್ದ ಸುವರ್ಣ ಪಾಟೀಲ ಅವರನ್ನು ಬೆಳಗಾವಿಯ ಆಸ್ಪತ್ರೆಗೆ ಸಾಗಿಸಲಾಗಿತ್ತು ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

ಕಣಗಲಾ ಸಮೀಪದ ಹಿಟ್ನಿ ಗ್ರಾಮ ಮಾರ್ಗದಿಂದ ಅಪ್ಪಾಸಾಹೇಬ್ ಲಾಟ್ಕರ್, ಸುವರ್ಣ ಪಾಟೀಲ ಅವರೊಂದಿಗೆ ಬೈಕ್ (ಸ್ಕೂಟಿ) ಯಲ್ಲಿ ಮಾಂಗನೂರ ಕಡೆಗೆ ತೆರಳುತ್ತಿದ್ದ ವೇಳೆ ಟ್ರಕ್ ಹಿಂದಿನಿಂದ ಬೈಕ್ ಗೆ ಡಿಕ್ಕಿ ಹೊಡೆದ ಹೊಡೆದ ಪರಿಣಾಮ ಈ ಅವಘಡ ಸಂಭವಿಸಿದೆ ಎನ್ನಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥ ಟ್ರಕ್ ಚಾಲಕನನ್ನು ಪೋಲಿಸರು ವಶಕ್ಕೆ ಪಡೆದಿದ್ದು, ಈ ಕುರಿತು ಸಂಕೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳದಲ್ಲೇ ಹೆಂಡತಿ ಸಾವು : ಗಂಡನಿಗೆ ತೀವ್ರ ಘಟಕದಲ್ಲಿ ಚಿಕಿತ್ಸೆ



• **ಸಿರುಗುಪ್ಪ :** ರಸ್ತೆ ಕಾಮಗಾರಿಗೆ ತೆಗೆದ ಗುಂಡಿಯಲ್ಲಿ ಬಿದ್ದ ಗಂಡ ಹೆಂಡತಿ, ಸ್ಥಳದಲ್ಲೇ ಹೆಂಡತಿ ಮೃತಪಟ್ಟಿದ್ದು, ಗಂಡನಿಗೆ ಜಿಲ್ಲಾ ಬಿಮ್ಸ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಿರುಗುಪ್ಪದಿಂದ ರಾವಿಹಾಳ ಗ್ರಾಮಕ್ಕೆ ಬುಧವಾರ ರಾತ್ರಿ ತೆರಳುವಾಗ ತಾಲೂಕಿನ ಚಾಣಕನೂರು ಕ್ರಾಸ್ ಹತ್ತಿರ ರಾಜ್ಯ ಹೆದ್ದಾರಿ 63ರಲ್ಲಿ ಈ ಘಟನೆ ನಡೆಯಿತು.

ರಸ್ತೆ ಕಾಮಗಾರಿಗೆ ತೆಗೆದ ಗುಂಡಿಯಲ್ಲಿ ಬಿದ್ದ ಗಂಡ ಹೆಂಡತಿ

ಮೃತ ಮಂಜುಳ(36) ತಾಲೂಕಿನ ರಾವಿಹಾಳ್ ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನರ್ಸ್ ಸಿಬ್ಬಂದಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ತೀವ್ರ ಗಾಯಗೊಂಡ ಚಂದ್ರಶೇಖರ(46) ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಕುರಿತು ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ ಕನಿಷ್ಠ (ಕ್ವಿಂ)	₹ ಗರಿಷ್ಠ (ಕ್ವಿಂ)
ಅಲಸಂದೆ ಕಾಳು	3635	6729
ಕಡಲೆಕಾಳು	2829	6125
ಉದ್ದಿನಕಾಳು	6009	6009
ಹೆಸರುಕಾಳು	819	5811
ನೆಲಗಡಲೆ (ಶೇಂಗಾ)	4920	7630
ಜೋಳ	1606	5012
ಮಡಿಕೆ (ಮಟಕಿ)	6369	15159
ಈರುಳ್ಳಿ	500	1900
ಆಲೂಗಡ್ಡೆ	1200	1800
ಕುಸುಬೆ	5260	5260
ಸೋಯಾಬೀನ್	3139	6939
ತೊಗರಿ	4036	6029

2.82 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ | ವಿವಿಧ ರಸಗೊಬ್ಬರ ಪೂರೈಕೆ

ಜಿಲ್ಲೆಯಲ್ಲಿ ಬಿತ್ತನೆ ಕಾರ್ಯ ಚುರುಕು

▸ ಮಹಾಂತೇಶ ಕಣವಿ

ದಿಗಂತ ವಿಶೇಷ

• **ಧಾರವಾಡ:** ರೋಹಿಣಿ ಮಳೆಯಿಂದಾಗಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ರೆಕ್ಕೆಪುಕ್ಕ ಬಂದಿವೆ. ಪ್ರಸಕ್ತ ವರ್ಷ ಜಿಲ್ಲೆಯಾದ್ಯಂತ 2.82 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ.

ಕಳೆದ 2-3 ವರ್ಷಗಳಿಂದ ಅತಿವೃಷ್ಟಿ ಹಾಗೂ ನೆರೆಹಾವಳಿಗೆ ತುತ್ತಾಗಿ, ಬೆಳೆ ಹಾನಿ ಸಂಭವಿಸಿದೆ. ಈ ಕಾರಣಕ್ಕೆ ಜಿಲ್ಲೆಯ ರೈತರು ಕಂಗಾಲಾಗಿದ್ದಾರೆ. ಈ ಬಾರಿ ಮುಂಗಾರು ರೋಹಿಣಿ ಮಳೆ ಶುಭ ಶಕುನವಾಗಿ ಪರಿಣಮಿಸಿದ್ದು, ಬಿತ್ತನೆ ಕಾರ್ಯ ಚುರುಕುಗೊಂಡಿದೆ.

ಜಿಲ್ಲೆಯ ಪ್ರಮುಖ ಬೆಳೆಗಳಾದ ಹೆಸರು, ಸೋಯಾಬಿನ್, ಹತ್ತಿ, ಶೇಂಗಾ, ಭತ್ತ, ಮೆಕ್ಕೆಜೋಳ ಹಾಗೂ ಉದ್ದು ಬಿತ್ತನೆಗೆ ರೈತರು ಕಾತರರಾಗಿದ್ದು, ಕೃಷಿ ಇಲಾಖೆ ರೈತ ಸಂಪರ್ಕ ಕೇಂದ್ರಗಳಿಂದ ರೈತರಿಗೆ ಬೀಜ, ಗೊಬ್ಬರ ಪೂರೈಕೆಗೆ ವ್ಯವಸ್ಥೆ ಮಾಡಿದೆ. ಜಿಲ್ಲೆಯಲ್ಲಿ ಹೆಸರು 93,750 ಸಾವಿರ, ಸೋಯಾಬಿನ್ 97 ಸಾವಿರ, ಹತ್ತಿ ಬೆಳೆ 79,292 ಸಾವಿರ, ಭತ್ತ 10,481 ಸಾವಿರ, ಉದ್ದು 8,755 ಸಾವಿರ ಹೆಕ್ಟೇರ್, ಮೆಕ್ಕೆಜೋಳ 60 ಸಾವಿರ ಸೇರಿ ಒಟ್ಟು 2,82,677 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಜರುಗಲಿದೆ.

ಪ್ರಸಕ್ತ ಮುಂಗಾರು ಹಂಗಾಮಿಗೆ 54,648 ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆ ಪೈಕಿ ಜುಲೈ ಅಂತ್ಯಕ್ಕೆ 26,407 ಮೆಟ್ರಿಕ್ ಟನ್ ಪೂರೈಕೆಯಾಗಿದೆ. ಈವರೆಗೂ 18,477 ಮೆಟ್ರಿಕ್ ಟನ್ ಪೂರೈಸಿದ್ದು, ಯೂರಿಯಾ, ಕಾಂಪ್ಲೆಕ್ಸ್, ಪೊಟ್ಯಾಷ್ ದಾಸ್ತಾನಿದೆ. ಒಕ್ಕಲಿಗ ಒಕ್ಕದ್ದರೆ, ಬಿಕ್ಕುವುದು ಜಗವೆಲ್ಲ ಎಂಬ ಗಾದೆ ಮಾತಿನಂತೆ ಸದ್ಯ ನಾಡಿನ ಅನ್ನದಾತರು ಬಸವಣ್ಣನವರ ಕಾಯಕವೇ ಕೈಲಾಸ ಎಂಬ ನಾಣ್ಣುಡಿಯಂತೆ ಭವಿಷ್ಯದಲ್ಲಿ ಉತ್ತಮ ಫಸಲಿನ ನಿರೀಕ್ಷೆಯೊಂದಿಗೆ ಸದ್ಯ ಬಿತ್ತನೆಯ ಕಾರ್ಯದಲ್ಲಿ ತೊಡಗಿದ್ದಾರೆ.



ತಾಲೂಕು ಬಿತ್ತನೆ ಪ್ರದೇಶ	
ಧಾರವಾಡ	57,855
ನವಲಗುಂದ	58,843
ಕಲಘಟಗಿ	37,817
ಅಣ್ಣಿಗೇರಿ	26,554
ಹುಬ್ಬಳ್ಳಿ ಗ್ರಾಮೀಣ	37,594
ಹುಬ್ಬಳ್ಳಿ ನಗರ	6,810
ಅಳ್ನಾವರ	5,654

"ಸದ್ಯ ಮಳೆಗಾಲ ಆರಂಭವಾಗಿದೆ. ಬಿತ್ತನೆಗೆ ಬೇಕಾದ ಬೀಜ-ಗೊಬ್ಬರ ದಾಸ್ತಾನಿದೆ. ಅನ್ನದಾತರು ಭೂಮಿಯಲ್ಲಿ ತೇವಾಂಶ ನೋಡಿಕೊಂಡು ಬಿತ್ತನೆ ಮಾಡಬೇಕು.
■ ಮಂಜುನಾಥ ಅಂತರವಳ್ಳಿ, ಜಂಟಿ ನಿರ್ದೇಶಕ, ಕೃಷಿ ಇಲಾಖೆ, ಧಾರವಾಡ

"ಜಿಲ್ಲೆಯಲ್ಲಿ ಸಾಕಷ್ಟು ಬೀಜ-ಗೊಬ್ಬರ ದಾಸ್ತಾನಿದೆ. ರೈತರು ಕೃತಕ ಅಭಾವದ ವದಂತಿಗಳಿಗೆ ಕಿವಿಗೊಡಬಾರದು ಮತ್ತು ಮುಗಿಬಿದ್ದು ಗೊಬ್ಬರ ಖರೀದಿಸುವ ಅಗತ್ಯವಿಲ್ಲ. ಬಿತ್ತನೆಗೆ ಬೇಕಾದ ಅಗತ್ಯ ಬೀಜ-ಗೊಬ್ಬರ ಖರೀದಿಸಿ, ರಶೀದಿ ಪಡೆಯಬೇಕು.
■ ಸ್ನೇಹಲ್ ಆರ್., ಜಿಲ್ಲಾಧಿಕಾರಿ, ಧಾರವಾಡ

"ರೈತರಿಗೆ ಯಾವುದೇ ರೀತಿಯ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆ ಆಗದಂತೆ ಜಿಲ್ಲಾಡಳಿತ ಹಾಗೂ ಕೃಷಿ ಇಲಾಖೆ ಮುಂಜಾಗ್ರತೆ ಕ್ರಮ ವಹಿಸಬೇಕು.
■ ಮಲ್ಲಿಕಾರ್ಜುನ ಶಿರೂರ, ರೈತ ಮುಖಂಡ

ವಾರ್ಡ್‌ನ ನಿರ್ಲಕ್ಷ್ಯ ಖಂಡಿಸಿ ಪ್ರತಿಭಟನೆ

• **ರಾಯಚೂರು:** ತರಗತಿಗಳು ಆರಂಭವಾಗಿದ್ದರಿಂದ ವಸತಿ ನಿಲಯಕ್ಕೆ ಆಗಮಿಸಿರುವ ವಿದ್ಯಾರ್ಥಿಗಳಿಗೆ ಉಪಹಾರ, ಊಟ ನೀಡುವುದಿರಲಿ ಕುಡಿಯುವುದಕ್ಕೂ ನೀರು ಕೊಡದೆ ಸತಾಯಿಸುತ್ತಿರುವ ನಗರದ ಡಾ.ಬಿ.ಆರ್.ಅಂಬೇಡ್ಕರ್ ಪದವಿ ಪೂರ್ವ ವಿದ್ಯಾರ್ಥಿ ನಿಲಯದ ವಾರ್ಡನ್ ಕ್ರಮವನ್ನು ಖಂಡಿಸಿ ಉಪ ನಿರ್ದೇಶಕರ ಕಚೇರಿ ಎದುರು ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದರು.

ನೀರು, ಊಟ ನೀಡದ ಅಧಿಕಾರಿ ವಿರುದ್ಧ ಆಕ್ರೋಶ

ಪದವಿಪೂರ್ವ ವಿದ್ಯಾರ್ಥಿಗಳು ಜೂ.1ರಂದೇ ವಿದ್ಯಾರ್ಥಿ ನಿಲಯಕ್ಕೆ ಆಗಮಿಸಿದ್ದಾರೆ ಆದರೆ ಅಂದಿನಿಂದ ಇಂದಿನವರೆಗೂ ವಿದ್ಯಾರ್ಥಿಗಳಿಗೆ ವಸತಿ ನಿಲಯದಲ್ಲಿ ಉಪಹಾರ, ಊಟ, ಕುಡಿಯುವುದಕ್ಕೆ ನೀರು ಸೇರಿದಂತೆ ಯಾವುದೇ ಕನಿಷ್ಠ ಸೌಲಭ್ಯವನ್ನು ಒದಗಿಸಿಲ್ಲ ಎಂದು ಆರೋಪಿಸಿ ವಿದ್ಯಾರ್ಥಿಗಳು ಹಾಗೂ ದಲಿತ ವಿದ್ಯಾರ್ಥಿ ಫೆಡರೇಷನ್‌ನ ಮುಖಂಡರು ಗುರುವಾರ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಕಚೇರಿ ಎದಿರು ಪ್ರತಿಭಟನೆ ಮಾಡಿ ವಾರ್ಡನ್ ವಿರುದ್ಧ ಆಕ್ರೋಷ ವ್ಯಕ್ತಪಡಿಸಿದರು.

ವಸತಿ ನಿಲಯ ಆರಂಭವಾಗಿದೆ ವಸತಿ ನಿಲಯಕ್ಕೆ ಆಗಮಿಸುವಂತೆ ವಿದ್ಯಾರ್ಥಿಗಳಿಗೆಸ್ವತಃವಾರ್ಡನ್ ಫೋನ್ ಮಾಡಿ ಕರೆದ ಮೇಲೆನೇ ವಿದ್ಯಾರ್ಥಿಗಳು ಆಗಮಿಸಿದ್ದಾರೆ. ವಾರ್ಡನ್ ಕರೆಯ ಮೇರೆಗೆ ವಿದ್ಯಾರ್ಥಿಗಳು ಆಗಮಿಸಿದ್ದಾರೆ ಎಂದ ಮೇಲೆ ವಿದ್ಯಾರ್ಥಿಗಳಿಗೆ ಉಪಹಾರ, ಊಟ ಸೇರಿದಂತೆ ಇತರೆ ಸೌಲಭ್ಯವನ್ನು ಒದಗಿಸದೇ ವಿದ್ಯಾರ್ಥಿಗಳ ಮೆಲೇನೇ ಅವಾಜ್ ಹಾಕುತ್ತಿದ್ದಾರೆ ಈ ಕುರಿತು ಜಿಲ್ಲಾಧಿಕಾರಿಗಲೀಗಾದರೂ ಹೇಳಿರಿ, ಉಪನಿರ್ದೇಶಕರಿಗಾದರೂ ಹೇಳಿರಿ ನಾನೇನು ಮಾಡಲು ಆಗುವುದಿಲ್ಲ ಎಂದು ಬೆದರಿಸುತ್ತಿದ್ದಾರೆ ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ದೂರಿದರು.

ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಒದಗಿಸದ ವಾರ್ಡನ್ ಅವರನ್ನು ಬೇರೆಡೆ ವರ್ಗಾಯಿಸುವಂತೆ ಸಂಘಟನೆಯ ಮುಖಂಡರು ಆಗ್ರಹಿಸಿದರಲ್ಲದೆ ತಕ್ಷಣ ವಿದ್ಯಾರ್ಥಿಗಳಿಗೆ ನೀಡಬೇಕಾದ ಸೌಲಭ್ಯಗಳನ್ನು ನೀಡದಿದ್ದರೆ ಧರಣಿ ಸತ್ಯಾಗ್ರಹ ಮಾಡಲಾಗುವುದು ಎಂದು ಹೇಳಿದರು.

ಪ್ರತಿಭಟನೆಯಲ್ಲಿಕೆ.ವಸಂತಕುಮಾರ, ಕುಮಾರ ಬೈಲಮರ್ಚೆಡ್, ಅಭಿಲಾಶ್, ಮಂಜುನಾಥ, ಅರ್ಜುನ್, ವಿಕಾಸ್ ಸೇರಿದಂತೆ ಇತರರಿದ್ದರು.



53.19 ಲಕ್ಷ ರೂ. ವಂಚನೆ

• **ಅಂಕೋಲಾ:** ಆನ್ ಲೈನ್ ಟ್ರೇಡಿಂಗ್ ನಲ್ಲಿ ಲಕ್ಷಾಂತರ ಹಣ ತೊಡಗಿಸಿದ ವ್ಯಕ್ತಿಯೋರ್ವರು ತಮಗೆ ಮೋಸ ಆಗಿರುವ ಕುರಿತಂತೆ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ತಾಲೂಕಿನ ಅವರ್ಸಾದ ಮಠಾಕೇರಿಯ ಕಮಲಾಕ್ಷಅಪಾ ಭಟ್(52) ಎನ್ನುವವರೇ ಆನ್ ಲೈನ್ ಟ್ರೇಡಿಂಗ್ ಆಪ್ ನಲ್ಲಿ ಹಣ ಹೂಡಿಕೆ ಮಾಡಿರುವ ವ್ಯಕ್ತಿಯಾಗಿದ್ದು, ಸುಮಾರು 53.19 ಲಕ್ಷ ರೂಪಾಯಿಗಳಷ್ಟು ಹಣ ಹೂಡಿಕೆ ಮಾಡಿರುವ ಅವರು ತೊಡಗಿಸಿದ ಹಣ ಮರಳಿ ಪಡೆಯಲಾಗದೇ ವಂಚನೆಗೊಳಗಾಗಿದ್ದಾರೆ.

ಕಳೆದ ಏಪ್ರಿಲ್ ತಿಂಗಳ 1 ರಂದು ಸಾಮಾಜಿಕ ಜಾಲತಾಣ ಬಳಸುತ್ತಿದ್ದ ಸಂದರ್ಭದಲ್ಲಿ ಬಿ ಎಕ್ಸ್ ಬಿ ಮಾರ್ಕೆಟ್ ಎಂಬ ಟ್ರೇಡಿಂಗ್ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಅತಿ ಹೆಚ್ಚಿನ ಹಣ ಗಳಿಸಬಹುದು ಎಂಬ ಸಂದೇಶ ನೋಡಿದ ಕಮಲಾಕ್ಷ ಭಟ್ ಲಿಂಕ್ ಕ್ಲಿಕ್ ಮಾಡಿ ತಮ್ಮ ಹೆಸರು ನೋಂದಣಿ ಮಾಡಿ ಅಲ್ಲಿ ಕೇಳಲಾಗಿರುವ ವೈಯಕ್ತಿಕ ಮಾಹಿತಿಯನ್ನು ಭರ್ತಿ ಮಾಡಿದ್ದಾರೆ.

ಏಪ್ರಿಲ್ 2 ರಂದು ನಿಕಿತಾ ಎಂಬ ಮಹಿಳೆ ಕರೆ ಮಾಡಿ ಕಂಪನಿಯಲ್ಲಿ ಕಮಲಾಕ್ಷ ಭಟ್ ಅವರ ಹೆಸರಲ್ಲಿ ಖಾತೆ ತೆರೆದಿರುವುದಾಗಿ ತಿಳಿಸಿದ್ದು, ಏಪ್ರಿಲ್ 3 ರಂದು ಕಂಪನಿಯ ಮಾರ್ಕೆಟ್ ಅಕೌಂಟ್ ವ್ಯವಸ್ಥಾಪಕ ಸೈಯ್ಯದ್ ಎನ್ನುವ ವ್ಯಕ್ತಿ ಟೆಲಿಗ್ರಾಪ್ ಆಪ್ ಮೂಲಕ ಸಂಪರ್ಕಿಸಿ ಕಂಪನಿಯಲ್ಲಿ ಹೂಡಿಕೆ ಕುರಿತಂತೆ ತಿಳಿಸುವುದಾಗಿ ಹೇಳಿ ಕಳುಹಿಸುವ ಖಾತೆಗೆ ಹಣ ಜಮಾ ಮಾಡುವಂತೆ ತಿಳಿಸಿದ್ದು ಕಮಲಾಕ್ಷ ಅವರು ಆರಂಭಿಕವಾಗಿ 19,908 ಹಣ ಜಮಾ ಮಾಡಿದ್ದಾರೆ.

ಕೆಲವು ದಿನಗಳ ನಂತರ ಅಶುತೋಷ ಎನ್ನುವವರು ಕರೆ ಮಾಡಿ ಹೆಚ್ಚಿನ ಹಣ ಹೂಡಿಕೆ ಮಾಡಿದರೆ ದೊಡ್ಡ ಪ್ರಮಾಣದಲ್ಲಿ ಲಾಭಾಂಶ ಪಡೆಯಬಹುದುಎಂದುನಂಬಿಸಿರುವುದರಿಂದ ಕಂಪನಿಯ ಹೆಸರಲ್ಲಿ ನೀಡಲಾದ ವಿವಿಧ ಬ್ಯಾಂಕ್ ಖಾತೆಗಳಿಗೆ ಏಪ್ರಿಲ್ 3 ರಿಂದ ಮೇ 18 ರ ವರೆಗೆ 53,19,908 ರೂಪಾಯಿ ಜಮಾ ಮಾಡಿದ್ದು ಹೂಡಿಕೆ ಮಾಡಿರುವ ಹಣವಾಗಲಿ,ಲಾಭಾಂಶವಾಗಲಿ ಮರಳಿ ಬಂದಿಲ್ಲ ಎಂದು ತಿಳಿದು ಬಂದಿದೆ. ಆನ್ ಲೈನ್ ಟ್ರೇಡಿಂಗ್ ಆಪ್ ನಲ್ಲಿ ಹಣ ಹೂಡಿಕೆ ಮಾಡಿ ವಂಚನೆಗೊಳಗಾದ ಕುರಿತಂತೆ ಕಮಲಾಕ್ಷ ಭಟ್ ಅವರು ಕಾರವಾರದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಇದೇ ರೀತಿಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಣೆ ನೋಡಿ ಸ್ಮಾರ್ಟ್ ವೈಸ್ ಕ್ವಾಂಟ್ ಫಂಡ್ ಎಂಬ ಟ್ರೇಡಿಂಗ್ ಕಂಪನಿಯಲ್ಲಿ ಸುಮಾರು 16.78 ಲಕ್ಷ ರೂಪಾಯಿ ಹೂಡಿಕೆ ಮಾಡಿ ವಂಚನೆಗೊಳಗಾದ ಕುರಿತಂತೆ ಅಂಕೋಲಾದ ಮಠಾಕೇರಿಯ ರಾಮನಾಥ ಪೂರ್ಣಾನಂದ ಭಟ್ ಎನ್ನುವವರು ಇತ್ತೀಚೆಗೆ ಸೈಬರ್ ಕ್ರೈಂ ದೂರು ದಾಖಲಿಸಿದ್ದರು.

ಅಂತರಾಷ್ಟ್ರೀಯ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿರುವ ಹಣಕ್ಕೆ ಬಂದಿರುವ ಭಾರೀ ಪ್ರಮಾಣದ ಲಾಭಾಂಶ ಪಡೆಯಲು ಯು.ಕೆ ಸ್ಟಾಂಪ್ ಡ್ಯೂಟಿ ಕಟ್ಟುವ ಹೆಸರಿನಲ್ಲಿ 20.44 ಲಕ್ಷ ಹಣ ವರ್ಗಾಯಿಸಿಕೊಂಡು ಮೋಸ ಮಾಡಿರುವ ಕುರಿತಂತೆ ಕಾರವಾರದ ಸುಂಕೇರಿಯ ದಾಮೋದರ ಭಟ್ ಎನ್ನುವವರು ಕೆಲವು ದಿನಗಳ ಹಿಂದೆ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಪರಿಸರ ಸಂರಕ್ಷಣೆಗೆ ನರೇಗಾ ಯೋಜನೆ ಸಹಕಾರಿ



• **ಕುಕನೂರ:** ತಾಲೂಕಿನ ಕುದರಿಮೋತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಭೈರನಾಯಕನಹಳ್ಳಿ ಗ್ರಾಮದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿ ಸ್ಥಳದಲ್ಲಿ ರೋಜಗಾರ ದಿನ ಆಚರಿಸಲಾಯಿತು.

ಕಾಮಗಾರಿಸ್ಥಳದಲ್ಲಿಪಂಚಾಯತ ಅಭಿವೃದ್ಧಿ ಅಧಿಕಾರಿ ಪರಶುರಾಮ್ ನಾಯಕ್ ಸರ್ ಮಾತನಾಡಿ, ನರೇಗಾ ಯೋಜನೆಯು ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಒಂದು ವರ ವಿದ್ದಂತೆ ಕೂಲಿಯ ಜ್ಯೋತೆಗೆ ಗ್ರಾಮಗಳಲ್ಲಿನೈಸರ್ಗಿಕಸಂಪನ್ಮೂಲ ಅಭಿವೃದ್ಧಿಪಡಿಸುವಕಾಮಗಿರಿಗಳನ್ನು ಮಾಡುವ ಮೂಲಕ ನೆಲ ಜಲ ಸಂರಕ್ಷಣೆ ಮಾಡಬಹುದು ಅಂದರು ಕೂಲಿಕಾರರು ಕಾಮಾರಿ ಸ್ಥಳದಲ್ಲಿ ಹಾಜರಾತಿ ಯಶಸ್ವಿಯಾಗಲು ಇ ಕೆವೈಸಿ ಅವಶ್ಯ ಅದಕ್ಕಾಗಿ ಎಲ್ಲರೂ ಇ ಕೆವೈಸಿ ಮಾಡಬೇಕು. ಅಳತೆ ಪ್ರಕಾರ ಕೆಲಸ ನಿರ್ವಹಿಸಬೇಕು ಎಂದರು.

ನಂತರ ತಾಲೂಕ ಐ.ಇ.ಸಿ ಸಂಯೋಜಕ ಲಕ್ಷ್ಮಣ ಕೆರಳ್ಳಿ ಮಾತನಾಡಿ, ಕೂಲಿಕಾರರು ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು. ಬಿಸಿಲು ಬಹಳಷ್ಟು ಇರುವುದರಿಂದ ಬೆಳಗ್ಗೆ ಬೇಗನೇ ಕೆಲಸಕ್ಕೆ ಬರಬೇಕು, ತಲೆಗೆ ಟೋಪಿ ಅಥವಾ ವಸ್ತ್ರಗಳನ್ನು ಹಾಕಿರಬೇಕು, ಕೂಲಿಕಾರರು ತಮ್ಮ ಕುಟುಂಬದ ಸುರಕ್ಷತೆಗಾಗಿ ತಾವು ಪ್ರತಿಯೊಬ್ಬರು ಕಖಖಲ್ಗ, ಕಖಒಒಲ್ಗ ಜೀವ ವಿಮೆ ಮಾಡಿಸಿಕೊಳ್ಳಬೇಕು. ಅವಶ್ಯಕತೆ ಇರುವವರು ಅಟಲ್ ಪೆನ್ಷನ್, PMSYMDY ಪ್ರಧಾನಮಂತ್ರಿ ಶ್ರಮ ಯೋಗಿ ಮಾನ್ ಧನ್ ಯೋಜನೆ ಪೆನ್ಸನ್ ಸ್ಕೀಮ್‌ಗಳಲ್ಲಿ ನೊಂದಣಿ ಮಾಡಿಕೊಳ್ಳಬೇಕು ಎಂದರು. ಕೂಲಿಕಾರರು ಕನಿಷ್ಟ ಅಳತೆಯ ಕೆಲಸ ನಿರ್ವಹಿಸಿದರೆ ರೂ. 370 ಸಿಗಲಿದ್ದು ನರೇಗಾ ಯೋಜನೆಯಡಿ ಕೂಲಿಕಾರರು ಕೆಲಸ ಮಾಡಬೇಕು, ಕೂಲಿ ಹಣ ನೇರವಾಗಿ PFMS ಮೂಲಕ ಅವರ ಖಾತೆಗೆ ಜಮೆ ಆಗುವುದರಿಂದ ಕೂಲಿಕಾರರು ತಮ್ಮ ಖಾತೆಯನ್ನು ಸಕ್ರಿಯವಾಗಿ ಇಡುವುದು ಫೆಕಇಐ ಲಿಂಕ್ ಮಾಡಬೇಕು, ಇಕೆವೈಸಿ ಮಾಡಿರಬೇಕು ಎಂದರು.

ಸ್ಥಳದಲ್ಲಿ ಗ್ರಾಮ ಕಾಯಯ ಮಿತ್ರರಾದ ಲಕ್ಷ್ಮವ್ವ ಮೂಲಿಮನಿ, ಕಾಯಕ ಬಂಧುಗಳು, ಭೈರನಾಯಕನಹಳ್ಳಿ ಗ್ರಾಮದ ಕೂಲಿಕಾರರು ಹಾಜರಿದ್ದರು.

ಗ್ರಂಥಾಲಯ ಮೇಲ್ವಿಚಾರಕ ಕೃಷ್ಣೇಗೌಡರಿಗೆ ಬೀಳ್ಕೊಡುಗೆ



• **ಹೂವಿನಹಡಗಲಿ:** ಗ್ರಂಥಾಲಯ ಮೇಲ್ವಿಚಾರಕರಾದಕೆ.ಕೃಷ್ಣೇಗೌಡರು ತಮ್ಮ ಅವಽಯಲ್ಲಿ ಗ್ರಂಥಾಲಯ ಇಲಾಖೆಗೆ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ ಎಂದು ತಾಪಂ ಇಒ ಜಿ.ಪರಮೇಶ್ವರ ತಿಳಿಸಿದರು.

ಪಟ್ಟಣದ ರಾಜೀವಗಾಂಽ ಸಭಾಂಗಣದಲ್ಲಿ ಗುರುವಾರ ಗ್ರಂಥಾಲಯ ಇಲಾಖೆಯ ಹ್ಯಾರಡ ಅರಿವು ಕೇಂದ್ರ ಗ್ರಾಮೀಣ ಮೇಲ್ವಿಚಾರಕರಾದ ಕೆ ಕೃಷ್ಣೇಗೌಡರು ನಿವೃತ್ತರಾದ ಹಿನ್ನೆಲೆಯಲ್ಲಿ ತಾಲೂಕು ಗ್ರಂಥಾಲಯ ಮೇಲ್ವಿಚಾರಕರ ಸಂಘದ ವತಿಯಿಂದ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಗೌರವ ಸನ್ಮಾನ ನೆರವೇರಿಸಿದರು.

ಸರ್ಕಾರದ ಕಡಿಮೆ ಗೌರವಧನ ವೇತನದಲ್ಲಿ ಗ್ರಾಮೀಣ ಗ್ರಂಥಾಲಯದ ಅಭಿವೃದ್ಧಿಗೆ ಮೇಲ್ವಿಚಾರಕರು ಶ್ರಮಿಸುತ್ತಿದ್ದಾರೆ ಎಂದು ಹೇಳಿದರು. ಶಾಖ ಗ್ರಂಥಾಲಯ ಅಽಕಾರಿಗಳಾದ ಬಿ.ನಾರಾಯಣ್ ದಾಸ್, ಹರಪನಹಳ್ಳಿ ತಾಲೂಕಿನ ಬೋವಿ ಮಂಜುನಾಥ, ತಾಲೂಕಿನ ವಿವಿಧ ಗ್ರಾಮೀಣ ಗ್ರಂಥಾಲಯ ಮೇಲ್ವಿಚಾರಕರು ಹಾಗೂ ಜಿಲ್ಲಾ ಸಂಘದ ಕಾರ್ಯದರ್ಶಿ ಬಿ.ಲೋಕೇಶ್ ಉಪಸ್ಥಿತರಿದ್ದರು. ಗ್ರಂಥಾಲಯ ಮೇಲ್ವಿಚಾರಕರ ಜಿಲ್ಲಾ ಸಂಘದ ಅಧ್ಯಕ್ಷ ಕುರಿ ಮಂಜುನಾಥ ಕೆ ಕೃಷ್ಣೇಗೌಡರ ಕಾರ್ಯ ಕುರಿತು ಮಾಹಿತಿ ನೀಡಿದರು. ಕೆ.ದೊಡ್ಡಬಸಪ್ಪ ನಿರ್ವಹಿಸಿದರು.

ರಸ್ತೆ ಅಪಘಾತದಲ್ಲಿ ಇಬ್ಬರ ಸಾವು; ಹಲವರಿಗೆ ಗಾಯ

• **ಮಾನ್ವಿ:** ಪಟ್ಟಣದ ರಾಯಚೂರು ಸಿಂಧನೂರು ರಸ್ತೆಯಲ್ಲಿನ ಸೂರ್ಯ ಫಂಕ್ಷನ್ ಹಾಲ್ ಹತ್ತಿರ ಗುರುವಾರ ಮಧ್ಯಾಹ್ನ ನಡೆದ ರಸ್ತೆ ಅಪಘಾತದಲ್ಲಿ ಕಾರಿನಲ್ಲಿದ್ದ ಹುನುಗುಂದ ತಾಲೂಕಿನ ಸೂಳೆಬಾವಿ ಗ್ರಾಮದ ಸೇರಿದ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟ ಘಟನೆ ನಡೆದಿದೆ.

ಮಂತ್ರಾಲಯ ದರ್ಶನ ಮುಗಿಸಿ ಮರುಳುವಾಗ ಅಪಘಾತ

ಕಾರು ಚಾಲನೆ ಮಾಡುತ್ತಿದ್ದ ರಾಘವೇಂದ್ರ ನಾಗಪ್ಪ (26) ಇಲಕಲ್ , ಪ್ರಿಯಾಂಕ (19) ಮೃತಪಟ್ಟವರು. ಕಾಳಮ್ಮ, ಕವಿತಾ ಎನ್ನುವವರಿಗೆ ಗಂಭಿರವಾದ ತೀವ್ರ ಗಾಯಗಳಾಗಿವೆ. ಮೂವರು ಮಕ್ಕಳಾದ ಸೌಮ್ಯ (14), , ವಿಜಯ (3), ಮಧು (9) ಎನ್ನುವವರಿಗೆ ಸ್ವಲ್ಪ ಗಾಯಗಳಾಗಿವೆ. ಗಾಯಾಳುಗಳನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಬಾಗಲಕೋಟೆಯ ಕುಟುಂಬವೊಂದು ಮಂತ್ರಾಲಯದಲ್ಲಿನ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ತೆರಳಿ ಮರಳಿ ಬಾಗಲಕೋಟೆಗೆ ಕಾರಿನಲ್ಲಿ ತೆರಳುತ್ತಿದ್ದ ಸಮಯದಲ್ಲಿ ಮಾನ್ವಿ ಮುಖ್ಯ ರಸ್ತೆ ಬದಿಯಲ್ಲಿ ನಿಂತಿದ ಲಾರಿಯೊಂದಕ್ಕೆ ಡಿಕ್ಕಿ ಹೊಡೆದಿದೆ. ಸ್ಥಳಕ್ಕೆ ಆಗಮಿಸಿದ ಮಾನ್ವಿ ಪೊಲೀಸ್ ಠಾಣೆಯ ಪಿ.ಐ.ಸೋಮಶೇಖರ ಎಸ್.ಕೆಂಚರೆಡ್ಡಿ ಗಾಯಳುಗಳನ್ನು ಚಿಕಿತ್ಸೆಗಾಗಿ ಕೂಡಲೇ ಆಸ್ಪತ್ರೆಗೆ ಕಳುಹಿಸಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

CHANGE OF NAME

I, **ZUHRA FIZA** (Old Name) R/o: H No.836, National Colony, Mavalli, Po Murdeshwar - 581350, Uttara Kannada, Karnataka, have changed my name as **ZOHRA FIZA MOHAMMED ASHFAQ GAIMA W/o: MOHAMMED IBAD** (New Name) henceforth I will be called and recognized by new name for all future purposes, dated: 04/06/2026.

CHANGE OF NAME

I, **NAYEEM DHALAYAT** (Old Name) R/o: Zari Galli- Chikodi, have changed my name as **NAYEEM SAHEBLAL DHALAYAT** (New Name) henceforth I will be called and recognized by new name for all future purposes, dated: 04/06/2026.

CHANGE OF NAME

I, **AISHWARYA JABI** (Old Name) R/o: Plot Number 01 Elfin Estate, Sulla Road, Gopanakoppa Gram Hubli Keshwapur, Dharwad, Karnataka, Pin Code: 580023, have changed my name as **AISHWARYA VEERBHADRAPPA JABI** (New Name) henceforth I will be called and recognized by new name for all future purposes, dated: 04/06/2026.

CHANGE OF NAME

I, **MOHAMMED FIAZ AHMED** (Old Name) Resident of No 232, Market Aroad, Near Dyrga Lodge, Sagar, Shivamogga 577401 (address), have changed my name as **MOHAMMED FAIZ AHMED** (New Name) henceforth I will be called and recognized by new name for all future purposes, dated: 04/06/2026.

CHANGE OF NAME


I, **VAISHNAVI VISHNUKANTASA PAWAR** (Old Name) Resident of H No 101 Jagadhamba Temple Ward No 01 Gudur Dist: Bagalkot (address), have changed my name as **VAISHNAVI GURU DALABHANJAN** (New Name) henceforth I will be called and recognized by new name for all future purposes, dated: 04/06/2026.

CHANGE OF NAME

I, **IMAMBI PATHAN** (Old Name) Resident of H No: 97 Gandhi Ekta Colony Mantoor Road, Hubballi - 580020 Karnataka (address), have changed my name as **IMAMBI KALADAGI** (New Name) henceforth I will be called and recognized by new name for all future purposes, dated: 04/06/2026.

CHANGE OF NAME

I, **HIBA HASAN KHAN ISMAIL KHAN** (Old Name) Resident of Ikkeri Road, Near Rainbow School, Sagar, Shivamogga - 577401 (address), have changed my name as **HIBA HASSAN** (New Name) henceforth I will be called and recognized by new name for all future purposes, dated: 04/06/2026.



ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲ.

ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **SHAILESH BAGMAR** (Old Name) Resident of 6672B3, K C Rani Road, 8th Cross, Gadag - 582101, Karnataka, India, have changed my name as **SHAILESH VIJAYKUMAR BAGMAR** (New Name) henceforth I will be called and recognized by new name for all future purposes, dated: 04/06/2026.

CHANGE OF NAME

I, **RAVEENDRA NARAYAN DURGEKAR** (Old Name) Resident of H No: 922/A, Khursawada, Kajubag, Karwar, Dist: Uttara Kannada - 581301, Karnataka, India, have changed my name as **RAVEENDRA DURGEKAR** (New Name) for all purposes, vide affidavit dated: 04/06/2026 before notary **P. N. Kuvalekar**

CHANGE OF NAME

I, **Sapthami Sandeep Malagali** Residing at Ashray Nagar Taluka Haliyal (581329) District: Uttara Kannada State Karnataka in my Adhar Card, Pan Card, all other documents my Fathers name is mentioned as **Mr. Sandeep Malagali**, But in my SSLC Marks Card my Father's Name is mentioned as **Sandeep Sadanand Malagali**, Therefore I hereby affirm, that both the names belongs to the same i. e my father. for all purposes, vide affidavit dated: 01/06/2026 before notary **Angadi Akkamahadevi B.**

CHANGE OF NAME

I, **FATIMA SHAFIULLAKHAN KILLEDAR** (Old Name) Resident of H No 121 New J M House Gudihal Road Milan Colony Hubli 580024 (address), have changed my name as **FATIMA ABRARAHMED PALLAN** (New Name) henceforth I will be called and recognized by new name for all future purposes, dated: 04/06/2026.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀರಿಂಗ್ ವಿಭಾಗ, ಬೆಳಗಾವಿ

ಕ್ರಸಂ:ಪಂರಾಇಂ/ವಿಬೆ/ಪಿಬಿ-1/ಟೆಂಡರ-09/2026-27/1155 ದಿನಾಂಕ:03-06-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1&2 ರಲ್ಲಿ ಒಟ್ಟು 15 (26818, 26823, 26988, 27003, 26821, 27049, 27047, 27005, 27006, 27007, 26674/CALL-2, 26304/Call-3, 26685/CALL-2, 26675/CALL-2,27079) ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 50.00 ಹಾಗೂ ರೂ.7.50 ಲಕ್ಷಗಳು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ. 1,00,000/- ಹಾಗೂ 12,500/- ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: 17-06-2026 ಸಂಜೆ 17:28 ರೊಳಗಾಗಿ, ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: 17-06-2026 ಸಂಜೆ 17.30 ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 19-06-2026. ಮುಂಜಾನೆ 11:00 ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 19-06-2026 ರಂದು ಮುಂಜಾನೆ 11.30 ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.inರಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.

DIPR/BGM/RO-NO-360/KSMCA/2026-27

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ದ್ವಿಲಕೋಟೆ ಟೆಂಡರ್ ಪದ್ಧತಿಯಲ್ಲಿ ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ಐಪಿ,ಆರ್&ಡಿ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಸಂಖ್ಯೆ:ಬೆಂಜಮಂ/ಮುಅ(ಐಪಿ,ಆರ್&ಡಿ)/ಅಮುಅ(ಐಪಿ,ಆರ್&ಡಿ)-II/ತಾಂಸ/419/2026-27	ದಿನಾಂಕ: 01-06-2026
1.	ಕರ್ನಾಟಕ, ಬೆಂಗಳೂರು ಜಲ ಮಂಡಳಿ ವ್ಯಾಪ್ತಿಯಾದ್ಯಂತ ಸಾರ್ವಜನಿಕ, ಖಾಸಗಿ, ಪಾಲುದಾರಿಕೆ ಮಾದರಿಯಡಿಯಲ್ಲಿ 20 ವರ್ಷಗಳ ರಿಯಾಯಿತಿ ಅವಧಿಯೊಂದಿಗೆ ಬಯೋಗ್ಯಾಸ್ ಶುದ್ಧೀಕರಣ ಮತ್ತು ಕಂಪ್ರೆಷನ್ ವ್ಯವಸ್ಥೆಗಳನ್ನು ವಿನ್ಯಾಸ, ನಿರ್ಮಾಣ, ಹಣಕಾಸು, ಸರಬರಾಜು, ಅಳವಡಿಕೆ, ಕಾರ್ಯಾಚರಣೆ, ನಿರ್ವಹಣೆ ಮತ್ತು ಹಸ್ತಾಂತರ ಮಾಡುವ ಕಾಮಗಾರಿ.	– / ₹ 77.00 ಲಕ್ಷಗಳು

ಮೇಲ್ಕಂಡ ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **06-07-2026**ರ ಸಂಜೆ **4:00** ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ **07-07-2026**ರ ಸಂಜೆ **4:00** ಗಂಟೆಯ ನಂತರ ತೆರೆಯಲಾಗುವುದು.
ಸಹಿ/- ಮುಖ್ಯ ಅಭಿಯಂತರರು (ಐಪಿ,ಆರ್&ಡಿ)

ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಸಂಖ್ಯೆ:ಐಎಫ್‌ಟಿ ಸಂ: ಬೆಂಜಮಂ/ಮುಅ(ಪೂ) /ಅಮುಅ(ಪೂ)- II/ಉಮುಅ(ಪೂ)/ತಾಂಸ(ಪೂ)/864/2026-27	ದಿನಾಂಕ: 03-06-2026
2.	ಸಕಾನಿಅ (ದಪೂ-3) ಉಪವಿಭಾಗದ ಹರಳೂರು ಸೇವಾಠಾಣೆ ವ್ಯಾಪ್ತಿಯಡಿಯಲ್ಲಿ ಬರುವ ಆರ್.ಎಂ.ಜೆಡ್ ಇಕೋ ಸ್ಪೇಸ್ ಸಮೀಪ ಹೊರವರ್ತುಲ ರಸ್ತೆಗೆ ಅಡ್ಡಲಾಗಿ ಬೃ.ಬೆಂ.ಮ.ಪಾಲಿಕೆ ರಸ್ತೆ ಕಲ್ವರ್ಟ್ ನಿರ್ಮಾಣಕ್ಕಾಗಿ ಬೆಳ್ಳಂದೂರು ಗ್ರಾಮದ ಹೊರವರ್ತುಲ ರಸ್ತೆಯ ಸರ್ವಿಸ್ ರಸ್ತೆಯಲ್ಲಿರುವ ಕಾವೇರಿ 4ನೇ ಹಂತ, 2ನೇ ಘಟ್ಟದ 1800 ಮಿ.ಮೀ. ವ್ಯಾಸದ ನೀರು ಸರಬರಾಜು ಕೊಳವೆಮಾರ್ಗದ ಮಾರ್ಗ ಬದಲಾಯಿಸುವ ಕಾಮಗಾರಿ. (5ನೇ ಕರೆ) ಇಂಡೆಂಟ್ ಸಂಖ್ಯೆ – 2777	₹ 164.93 ಲಕ್ಷಗಳು / ₹ 2,47,400/-

ಮೇಲ್ಕಂಡ ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **12-06-2026**ರ ಸಂಜೆ **4:00** ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ **15-06-2026**ರ ಮಧ್ಯಾಹ್ನ **12:00** ಗಂಟೆಯ ನಂತರ ತೆರೆಯಲಾಗುವುದು.
ಸಹಿ/- ಮುಖ್ಯ ಅಭಿಯಂತರರು (ಪೂರ್ವ)

ಟೆಂಡರ್ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಡಿ.ಐ.ಪಿ.ಆರ್/ಎಸ್‌ಐ/969/2026-27

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್ ಧಾರವಾಡ)

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ, ವಿಭಾಗ, ಧಾರವಾಡ

ನಂ:ಕಾ.ನಿ.ಇಂ/ಗ್ರಾಕುನೀ&ನೈವಿ/ಧಾ/ಕಿಇಂ-1/ಇ-ಟೆಂಡರ/2026-27/296
ದಿನಾಂಕ : 04.06.2026

work ಟೆಂಡರನ ಪ್ರಕಟಣೆ (ಇ-ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ವಿಷಯ: ಕಾಮಗಾರಿಯ ಟೆಂಡರನ ಪ್ರಕಟಣೆ ಕುರಿತು

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ ಕರೆಯಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಧಾರವಾಡ ಜಿಲ್ಲೆ : ಸಾಮಾನ್ಯ : Works Indent No: RWSSD/2026-27/WS/WORK_INDENT10034/Call-2

ಕನಿಷ್ಠ ಮೊತ್ತ: 165.51 ಲಕ್ಷ, ಗರಿಷ್ಠ ಮೊತ್ತ: 165.51 ಲಕ್ಷ

ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿದೆ. (Calander of Events):

(1) ಖಾಲಿ ಟೆಂಡರ ಫಾರ್ಮಗಾಗಿ ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿಗಳನ್ನು ವೆಬ್‌ಸೈಟನಲ್ಲಿ ಭರ್ತಿಮಾಡಿ ಸಲ್ಲಿಸಲು ಕೊನೆಯ ದಿನಾಂಕ: **04.06.2026** ರಿಂದ **11.06.2026** ಸಾಯಂಕಾಲ 04.00 ಘಂಟೆಗೆ (2) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **12.06.2026** ಸಾಯಂಕಾಲ 04.30 ಘಂಟೆಗೆ (3) ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.

ಸದರೀ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಮ್.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ kppp.karnataka.gov.inನಲ್ಲಿ ಪಡೆಯಬಹುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಧಾರವಾಡ.

ವಾಸಾಸಂಇ/ಧಾ/ಕೆಎಸ್‌ಎಂಸಿಎ/254/2026-27

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಜ್ಞಾನ ಗಂಗಾ ಕ್ಯಾಂಪಸ್, ಕಲಬುರಗಿ-585 106, ಕರ್ನಾಟಕ
ದೂ. ಸಂ.: 08472-263202 ಫ್ಯಾಕ್ಸ್: 08472-263206, ಇ-ಮೇಲ್: registrargug@rediffmail.com

ಕ್ರ.ಸಂ. ಗುವಿಕ/ಕನಿವಿ/ಟೆಂಡರ/ಎಇಇ-ಅ/2026-27/65 ದಿನಾಂಕ : 12-05-2026

:: ಟೆಂಡರ ಪ್ರಕಟಣೆ ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ (4ನೇ ಕರೆ) ::

1) ಕಾಮಗಾರಿಯ ವಿವರ : ಗುಲಬರ್ಗಾ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಕುಡಿಯುವ ನೀರಿನ ಕ್ಯಾನ್‌ಗಳನ್ನು ಪೂರೈಸುವ ಕುರಿತು – ಮೂರನೇ ಕರೆ, 2) ಟೆಂಡರಗಿಟ್ಟ ಮೊತ್ತ : ರೂ. **16,00,000=00**, 3) ಲೆಕ್ಕ ಶೀರ್ಷಿಕೆ: "1084", 4) ಗುತ್ತಿಗೆದಾರರ ಅರ್ಹತೆ : ಟೆಂಡರ ಅಧಿಸೂಚನೆಯ ಪ್ರಕಾರ, 5) ಟೆಂಡರ ಫಾರಂ ಪಡೆಯುವ ದಿನಾಂಕ : ಇ-ಪ್ರೊಕ್ಯೂರಮೆಂಟ್ ಪ್ರಕಾರ, 6) ಟೆಂಡರ ಇ.ಎಂ.ಡಿ. ಮೊತ್ತ : ರೂ. 32,000=00, 7) ಟೆಂಡರ ನಂಬರ್ : GU/2024-25/IND0018CALL-3, 8) ಟೆಂಡರ ಸಲ್ಲಿಸುವ ಅಂತಿಮ ದಿನಾಂಕ : 15-06-2026, 9) ಬಿಡ್ಡ ತೆರೆಯುವ ದಿನಾಂಕ : 16-06-2026, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಸ್ಥಳೀಯ ಅಭಿಯಂತರರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ : www.kppp.karnataka.gov.in

ಸಹಿ/- ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/183/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತಿ, ಚಿತ್ರದುರ್ಗ

ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿತ್ರದುರ್ಗ-577501

ಡಿ.ದೇವರಾಜ ಅರಸು ಭವನ, ಸ್ಟೇಡಿಯಂ ರಸ್ತೆ, ದೂರವಾಣಿ ಸಂಖ್ಯೆ08194-235034
E-mail-dobcmchitradurga@gmail.com Fax No.08194-235034

ಸಂ:ಹಿಂಕವಇ/ಸಿಬ್ಬಂದಿ/ಹೊ.ಸಂ/ಸಿಆರ್-02/2026-27 ದಿನಾಂಕ:02.06.2026

ಇ-ಟೆಂಡರ್ ಪ್ರಕಟಣೆ

2026-27ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಹಾಗೂ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ ಹಾಗೂ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಮತ್ತು ಜವಾನರು ಹಾಗೂ ಇತರೆ ಹುದ್ದೆಗಳಿಗೆ ಸಿಬ್ಬಂದಿಯ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯುವ ಬಗ್ಗೆ ಆಸಕ್ತ ಅರ್ಹ ಸಂಸ್ಥೆಗಳಿಂದ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. **ಜಿಲ್ಲೆಯ ಹೆಸರು:- ಚಿತ್ರದುರ್ಗ**

ಇ-ಟೆಂಡರ್ ಇಟ್ಟಿರುವ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- 774.88

ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ):- 11.62

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20.06.2026 ಸಂಜೆ: 5.00 ಗಂಟೆಗೆ

ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್‌ಸೈಟ್ https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

DIPR/CTA/KSMCA/148/2026-27

ಸಹಿ/- ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ – ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ

ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ,
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಲೋಕೋಪಯೋಗಿ ಇಲಾಖೆ ಅನೆಕ್ಸ್ ಕಟ್ಟಡ,
ಕೆ.ಆರ್.ವೃತ್ತ, ಬೆಂಗಳೂರು-560001. ವೆಬ್‌ಸೈಟ್: www.shdpkar.in ಇ-ಮೇಲ್: cposhdp2020@gmail.com

ಸಂ: ಮುಯೋಅ/ರಾಹೆಅಯೋ/ತಾಂತ್ರಿಕ/ಸಕಾಇಂ-7/ಟೆಂಡರ್-ಡಿಪಿಆರ್/2026-27/556 ದಿನಾಂಕ: 04.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ

ಅಧೀಕ್ಷಕ ಅಭಿಯಂತರರು-1 & 2, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಬೆಂಗಳೂರು ಇವರು ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-5, ಘಟ್ಟ-2 ರಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಲೋಕೋಪಯೋಗಿ ಇಲಾಖೆಯಡಿಯಲ್ಲಿನ ಹನ್ನೊಂದು (11) ವಿಭಾಗಗಳ ವ್ಯಾಪ್ತಿಯ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (DPR) ಸಿದ್ಧಪಡಿಸಲು ಕೆಳಕಂಡಂತೆ ಕೆಪಿಪಿ ಪೋರ್ಟಲ್ ಮೂಲಕ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ (KC-4) ಹಾಗೂ KTPP Act-1999 & Rules-2000 ಹಾಗೂ Request For Proposal (RFP) ಅನುಸಾರವಾಗಿ Quality & Cost Based Selection (QCBS) ನಡಿ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಪ್ಯಾಕೇಜ್ ಕಾಮಗಾರಿಗಳ ವಿವರ	ರಸ್ತೆ ಉದ್ದ	ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ (Excl. GST)	ಇಎಂಡಿ ಮೊತ್ತ (ರೂ. ಗಳಲ್ಲಿ)	ಕಾಲಾವಧಿ
1	10 ಪ್ಯಾಕೇಜ್‌ಗಳು- ಕೆಪಿಪಿ ಪೋರ್ಟಲ್‌ನಲ್ಲಿ ವಿವರಗಳನ್ನು ಪಡೆದುಕೊಳ್ಳುವುದು	ಟೆಂಡರ್‌ಗಿಟ್ಟ ಪ್ಯಾಕೇಜ್‌ವಾರು ರಸ್ತೆಯ ಉದ್ದದ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆದುಕೊಳ್ಳುವುದು	ರೂ. 20000/- ಪ್ರತಿ ಕಿಮೀ ಗೆ	ಕೆಪಿಪಿ ಪೋರ್ಟಲ್‌ನಲ್ಲಿ ಪ್ಯಾಕೇಜ್‌ವಾರು EMD ವಿವರಗಳನ್ನು ಪಡೆದುಕೊಳ್ಳುವುದು	30 ದಿನಗಳು

✦ ವಿಭಾಗ/ಜಿಲ್ಲಾವಾರು ಉದ್ದೇಶಿತ ಪ್ಯಾಕೇಜ್ ಕಾಮಗಾರಿ, ಇಎಂಡಿ ಮತ್ತು ಟೆಂಡರ್ ವಿವರಗಳು ಇ-ಪ್ರೊಕ್/ಕೆಪಿಪಿ ಪೋರ್ಟಲ್ (KPPP) ನಲ್ಲಿ ಲಭ್ಯವಿರುತ್ತವೆ. **ಟೆಂಡರ್ ಪ್ರಕ್ರಿಯೆ ವಿವರಗಳು:** (1) ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ದಾಖಲಾತಿಗಳನ್ನು ದಿನಾಂಕ: **05.06.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.** (2) ಟೆಂಡರ್‌ಗೆ ಸಂಬಂದಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಪೂರ್ವಭಾವಿ ಸಭೆಯನ್ನು ದಿನಾಂಕ: **08.06.2026 ರಂದು ಬೆಳಿಗ್ಗೆ 11.30 ಗಂಟೆಗೆ ಈ ಕಛೇರಿಯಲ್ಲಿ ಕೈಗೊಳ್ಳಲಾಗುವುದು.** (3) ಕೆಪಿಪಿ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ **12.06.2026, 16-30 ಗಂಟೆ ವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **15.06.2026.** (5) ತಾಂತ್ರಿಕ ಬಿಡ್ ಅನುಮೋದನೆಗೊಂಡ ಸಮಾಲೋಚಕರುಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **25.06.2026 ಬೆಳಿಗ್ಗೆ 11-30 ಗಂಟೆಗೆ.** (6) ತಿದ್ದುಪಡಿ ಪ್ರಕಟಣೆಗಳು, ಮಾರ್ಪಾಡುಗಳ ಪ್ರಕಟಣೆಗಳು ಮತ್ತು ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅವುಗಳನ್ನು ಇನ್ನು ಮುಂದೆ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಇ-ಪ್ರೊಕ್/ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿತ ಸಮಾಲೋಚಕರುಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಮುಖ್ಯ ಯೋಜನಾಧಿಕಾರಿಯವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ರವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಮೂಲಕ: www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಇ-ಪ್ರೊಕ್ / ಕೆಪಿಪಿ ಪೋರ್ಟಲ್‌ನ ಸಹಾಯವಾಣಿ support@eprochelpdesk.com ದೂರವಾಣಿ ಸಂಖ್ಯೆ: +91-9240214000/+91-9240214001.

ಸಹಿ/-
ಅಧೀಕ್ಷಕ ಇಂಜಿನಿಯರ್-1 & 2, ಯೋಜನಾ ಅನುಷ್ಠಾನ ಘಟಕ,
ರಾಜ್ಯ ಹೆದ್ದಾರಿ ಅಭಿವೃಧ್ಧಿ ಯೋಜನೆ, ಕೆ.ಆರ್.ವೃತ್ತ, ಬೆಂಗಳೂರು-01

DIPR/CP/SPAN/989/2026-27

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ

Ph-08182-222983 e-mail -acfwlshimoga@gmail.com

ಸಂಖ್ಯೆ/ಸಅಸಂ/ವಉವಿಶಿ/ಸಿಆರ್- /2026-27 ದಿ: 03.06.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

2026-27ನೇ ಸಾಲಿನಲ್ಲಿ ಶಿವಮೊಗ್ಗ ವನ್ಯಜೀವಿ ವಿಭಾಗದ, ಸಕ್ರೆಬೈಲು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ ಇಲಾಖಾ ಆನೆಗಳಿಗೆ ಆಹಾರ 01/04/2026 ರಿಂದ 31/03/2027ರವರೆಗೆ ವಿವಿಧ ಪಡಿತರ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸರಬರಾಜುದಾರರು ಕೆಳಕಂಡ ದಿನಾಂಕದಂದು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ.ಸಂ. 1. ಕೆಲಸದ ವಿವರ: ಸಕ್ರೆಬೈಲು ವನ್ಯಜೀವಿ ವಲಯ, ಗಾಜನೂರು ಆನೆ ಶಿಬಿರದ ಇಲಾಖಾ ಆನೆಗಳಿಗೆ ಪಡಿತರ ಸರಬರಾಜು (CALL-2) **ಅಂದಾಜು ಮೊತ್ತ ಎಲ್ಲಾ ತೆರಿಗೆ ಸೇರಿ (ರೂ. ಲಕ್ಷಗಳಲ್ಲಿ):** 97,93,315/-

ಮೇಲಿನ ಅನುಸೂಚಿಯಲ್ಲಿ ಆಹ್ವಾನಿಸಿರುವ ಕಾಮಗಾರಿಯನ್ನು ಸರ್ಕಾರದಿಂದ ನಿಗಧಿಪಡಿಸುವ ಅನುದಾನ ಮತ್ತು ಬಿಡುಗಡೆಯಾಗುವ ಅನುದಾನದ ನಿರೀಕ್ಷೆಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18/06/2026 ಅಪರಾಹ್ನ 16:30 ಗಂಟೆವರೆಗೆ ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/09/06/314

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,ಚಿಕ್ಕಮಗಳೂರು

ದೂರವಾಣಿ ಸಂಖ್ಯೆ:08262-220936 E-Mail:zpedckm@rediffmail.com

ಟೆಂಡರ್ ಪ್ರಕಟಣೆ ಸಂಖ್ಯೆ:44/2025-26/2ನೇಕರೆ/541 ದಿನಾಂಕ:02-06-2026

ಟೆಂಡರ್ ಪ್ರಕಟಣೆ : (2 ನೇ ಕರೆ)

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ಕಳಸ ಮತ್ತು ಶೃಂಗೇರಿ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ **ರೂ.65.00** ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ **ರೂ.40.00** ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ **Standard Tender Document KW- 2&3**ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ:02-06-2026 ರಿಂದ ದಿನಾಂಕ:17-06-2026 ರವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ:19-06-2026 ರಂದು ಸಂಜೆ 05.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ **ದಿನಾಂಕ:23-06-2026 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು **kppp.karnataka.gov.in website** ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಚಿಕ್ಕಮಗಳೂರು

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂ:ಕಾಇಂ/ಲೋಇವಿ/ಮಧು/ಸ.ಇಂ-1/ಟೆಂಡರ್/2026-27 ದಿ: 30.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:07/2026-27 (ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ(ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ, ಕೊರಟಗೆರೆ ಮಧುಗಿರಿ ಹಾಗೂ ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137-283336.

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ: 337.31 ಲಕ್ಷಗಳವರೆಗೆ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 16-06-2026 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 17-06-2026ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 18-06-2026 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 12-06-2026 ಸಂಜೆ 4.00 ಗಂಟೆಗೆ ವರೆಗೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/93/KSMCA/2026-27

ತಾಲೂಕ ಪಂಚಾಯತ ಕಾರ್ಯಾಲಯ, ಕಾರಟಗಿ

ಇ-ಮೇಲ್ : tpkaratagi@gmail.com

ಸಂಖ್ಯೆ : ತಾ.ಪಂ.ಕಾ./ವಾಹನ/ಟೆ.ಪ್ರ/2026-27/185 ದಿನಾಂಕ : 03-06-2026

ಟೆಂಡರ್ ಪ್ರಕಟಣೆ

ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ

2026-27 ನೇ ಸಾಲಿನ (ದಿನಾಂಕ : **01-07-2026** ರಿಂದ **30-06-2027** ರವರೆಗೆ ಅನ್ವಯಿಸುವಂತೆ) **ಸಹಾಯಕ ನಿರ್ದೇಶಕರು (ಗ್ರಾ.ಉ.) ತಾಲೂಕ ಪಂಚಾಯತ ಕಾರಟಗಿ ಇವರಿಗೆ ಗ್ರಾಮ ಪಂಚಾಯಿತಿಗಳ ಕಾರ್ಯಕ್ಷೇತ್ರ ಭೇಟಿ, ಕಾಮಗಾರಿಗಳ ವೀಕ್ಷಣೆ, ಸಭೆ / ತರಬೇತಿಗಳಿಗೆ ಹಾಜರಾಗುವುದು ಇತ್ಯಾದಿ ಕಾರ್ಯ ಚಟುವಟಿಕೆಗಳಿಗಾಗಿ ಪ್ರವಾಸ ಮಾಡಲು ಸುಸಜ್ಜಿತವಾದ ನಾಲ್ಕು ಚಕ್ರದ ಒಂದು ಹವಾ ನಿಯಂತ್ರಿತ ವಾಹನ ಅವಶ್ಯಕತೆಯಿದ್ದು**, ಅದರನ್ವಯ ಹೊರಗುತ್ತಿಗೆ ಆಧಾರದಲ್ಲಿ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನದ ಸೇವೆಯನ್ನು ಪಡೆಯಲು ಯಾವುದೇ ಆಸಕ್ತಿಯುಳ್ಳ ಮೋಟಾರ್ ಕಾರ್ ಮಾಲೀಕರು / ಕ್ಯಾಬ್ ವಾಹನ ಮಾಲೀಕರು / ಏಜೇನ್ಸಿಗಳವರಿಂದ ಇ-ಟೆಂಡರ್ ಪ್ರಕಟಣೆ ಹೊರಡಿಸುವ ಮೂಲಕ ಅರ್ಜಿ ಆಹ್ವಾನಿಸಲಾಗಿರುತ್ತದೆ. ಅರ್ಹ ಆಸಕ್ತ ಟ್ರಾವೆಲ್ ಏಜೆನ್ಸಿ / ಮಾಲೀಕರು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಚಾಲಕ ಸಮೇತ ವಾಹನಗಳ ವರ್ಗ : ಹವಾ ನಿಯಂತ್ರಿತ ಹಳದಿ ಬೋರ್ಡ ಹೊಂದಿರುವ (ಬೊಲೇರೋ, ಹೊಂಡಾ ಅಮೇಜ್, ಇಂಡಿಕಾ ವಿಸ್ತಾ, ಸ್ವಿಫ್ಟ್, ಸ್ವಿಫ್ಟ್ ಡಿಸೈರ್, ಟಾಟಾ ಇಟಿಯಾಸ್, ಆಯ್ ಟ್ವೆಂಟಿ, ವೆರ್ನಾ, ಅವಧಿ : 01-07-2026 ರಿಂದ 30-06-2027 ರವರೆಗೆ (12 ತಿಂಗಳಿಗೆ).

1) ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 04.06.2026 ರಿಂದ, 2) ಟೆಂಡರ್ ಅರ್ಜಿ ಹಾಕಲು ಅಂತಿಮ ದಿನಾಂಕ : 11-06-2026 ಅಪರಾಹ್ನ 3.00, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 12-06-2026 ಅಪರಾಹ್ನ 3.00, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ತೆರೆದ ನಂತರ ತಿಳಿಸಲಾಗುವುದು, 5) ಒಟ್ಟು ಟೆಂಡರ್ ಮೊತ್ತ : ರೂ. 4,20,000/- (ಮಾಸಿಕ 35,000/- ಕಿ.ಮೀ 2000 ಗಳಿಗೆ), 6) ಇ.ಎಂ.ಡಿ. ಮೊತ್ತ : ರೂ. 10,500/-.

ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ, ಕಾರಟಗಿ.

ಡಿಐಪಿಆರ್/ಕೊಪ್ಪಳ/133/ಮಣಿಪಾಲ್/2026-27

ನಗರಸಭಾ ಕಾರ್ಯಾಲಯ ಹೊಸಪೇಟೆ.

ಕ್ರಸಂ/ನಸಹೊ/ತಾಂತ್ರಿಕ/ನಗರಸಭೆ ನಿಧಿ/ಟೆಂಡರ್/2026-27 ದಿನಾಂಕ:27-05-2026

ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಟೆಂಡರ್ ಪ್ರಕಟಣೆ

ನಗರಸಭೆ ನಿಧಿ 2025-26ನೇ ಸಾಲಿನ ನಗರಸಭೆ ನಿಧಿ ಅನುದಾನದಡಿಯಲ್ಲಿ ಈ ಕೆಳಗಿನ ಕೆಲಸಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ (ಚಾಲ್ತಿ ಸಾಲಿನಲ್ಲಿ ನೊಂದಾಯಿತ) ಸೂಕ್ತ ದರ್ಜೆ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು.

1)ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಹಾಗೂ ಖಾಲಿ ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ:10-06-2026 ಸಂಜೆ ;05.00 ಗಂಟೆ ಒಳಗಾಗಿ 2)ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ಹಾಗೂ ತೆರೆಯುವ ದಿನಾಂಕ:11-06-2026 ಸಂಜೆ; 05.30 ಗಂಟೆ ಒಳಗಾಗಿ(3) ಟೆಂಡರಗಳನ್ನು ತೆರೆಯುವ ಸ್ಥಳ: ನಗರಸಭಾ ಕಾರ್ಯಲಯ ಹೊಸಪೇಟೆ.

ಕಾಮಗಾರಿ ಹೆಸರು: 01.Construction of rcc drain from vali basha house to bangarappa house at sirasinakallu ward no 21. ಅಂದಾಜು ಮೊತ್ತ (ಲಕ್ಷಗಳಲ್ಲಿ): **1.20.** ಮುಂಗಡ ಠೇವಣಿ ಮೊತ್ತ: **3000/-**

02.Restoration of cc road from suri house to Ashwatappa house in kotheir oni at ward no 24 in hospet city.ಅಂದಾಜು ಮೊತ್ತ (ಲಕ್ಷಗಳಲ್ಲಿ): **0.80.** ಮುಂಗಡ ಠೇವಣಿ ಮೊತ್ತ: **2000/-**

03.Dismantling and new construction of UGD chambers at kanchgarpert Habibulla hospital to vahid house near kollapuramma temple umesh house eshwar nagar at ward no 24 and tiger pampanna house 8th cross MJ nagar in hospet city. ಅಂದಾಜು ಮೊತ್ತ (ಲಕ್ಷಗಳಲ್ಲಿ): **4.90.** ಮುಂಗಡ ಠೇವಣಿ ಮೊತ್ತ: **12250/-**

04.Construction of chambers near nelamma house fish market line near jin chalwadi keri near bapuji school near raghu plot TB Krishna house and near ramu house at ward no 16 in hospet city. ಅಂದಾಜು ಮೊತ್ತ (ಲಕ್ಷಗಳಲ್ಲಿ): **2.40.** ಮುಂಗಡ ಠೇವಣಿ ಮೊತ್ತ: **6000/-**

05.Construction of UGD chamber at devangpete and uramma temple ,restoration of cc road near vadakaraya temple in ward no 34 and restoration of CC road near durgamma temple in old amaravathi ward no 15 in hospet city. ಅಂದಾಜು ಮೊತ್ತ (ಲಕ್ಷಗಳಲ್ಲಿ): **4.99.** ಮುಂಗಡ ಠೇವಣಿ ಮೊತ್ತ:**12475/-**

06.Laying of UPVC line from ramesh babu house to s anjali and nekar colony 1st cross at ward no 35 ward in hospet city. ಅಂದಾಜು ಮೊತ್ತ (ಲಕ್ಷಗಳಲ್ಲಿ):**1.41.** ಮುಂಗಡ ಠೇವಣಿ ಮೊತ್ತ: **3525/-**

ಟೆಂಡರ್ ಶುಲ್ಕ: 500+50 (ಹೆಚ್ಚಿನ ಮಾಹಿತಿಗಾಗಿ ನಗರಸಭೆ ಕಾರ್ಯಾಲಯ ಹೊಸಪೇಟೆ ಕಛೇರಿ ಕೆಲಸದ ದಿನದಂದು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು. ಸಾಧ್ಯವಾದಲ್ಲಿ ಟೆಂಡರ್ ಸ್ವೀಕರಿಸುವ ದಿನಾಂಕದಂದೇ ಹಾಜರಿರುವ ಟೆಂಡರುದಾರರ ಸಮ್ಮುಖದಲ್ಲಿ ಟೆಂಡರಗಳನ್ನು ತೆರೆಯಲಾಗುವುದು. ಅಥವಾ ಬೇರೆ ದಿನಾಂಕವನ್ನು ನಿಗಧಿಪಡಿಸಲಾಗುವುದು.

ಸಹಿ/-ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/115
ಸಹಿ/-ಪೌರಾಯುಕ್ತರು, ನಗರಸಭೆ ಹೊಸಪೇಟೆ.

ಕಿರುಸುದ್ದಿ

ಆಫ್ಘಾನ್ ಏಕದಿನ ಸರಣಿಗಿಲ್ಲ ವಿರಾಟ್

ಮುಂಬೈ: ಅನುಭವಿ ಬ್ಯಾಟರ್ ವಿರಾಟ್ ಕೊಹ್ಲಿ ಅಫ್ಘಾನಿಸ್ಥಾನ ವಿರುದ್ಧದ ತವರಿನ ಏಕದಿನ ಸರಣಿಯಿಂದ ಹೊರಬಿದ್ದಿದ್ದಾರೆ ಎಂದು ವರದಿಯಾಗಿದೆ. ಆದರೆ ಬಿಸಿಸಿಐ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ವಿರಾಟ್ ಬದಲಿಗೆ ಯಶಸ್ವಿ ಜೈಸ್ವಾಲ್, ಋತುರಾಜ್ ಗಾಯಕ್ವಾಡ್, ತಿಲಕ್ ವರ್ಮಾ ಮತ್ತು ದೇವದತ್ತ್ ಪಡಿಕ್ಕಲ್ ಏಕದಿನ ತಂಡಕ್ಕೆ ಆಯ್ಕೆಯಾಗುವ ಸಾಧ್ಯತೆಯಿದೆ. ಮೇ 31ರಂದು ಅಹಮದಾಬಾದ್‌ನಲ್ಲಿ ನಡೆದಿದ್ದ ಐಪಿಎಲ್ ಫೈನಲ್‌ನಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಅಜೇಯ 75 ರನ್ ಗಳಿಸಿದ್ದ ವಿರಾಟ್ ಕೊಹ್ಲಿ ಆರ್‌ಸಿಬಿ ಗೆಲುವಿನ ರೂವಾರಿ ಆಗಿದ್ದರು. ಇದೇ ಸಂದರ್ಭ ವಿನ್ನಿಂಗ್ ಶಾಟ್ ಸಿಕ್ಸರ್ ಹೊಡೆಯುವ ಮುನ್ನ ಕೊಹ್ಲಿ ಆರ್‌ಸಿಬಿ ಆಟಗಾರರಿಗೆ ತಮಗೆ ಕಾಲು ನೋವಿದೆ, ಸಂಭ್ರಮಿಸುವಾಗ ಎಚ್ಚರ ವಹಿಸಬೇಕೆಂಬ ರೀತಿ ಸನ್ನೆ ಮಾಡಿದ್ದರು. ಮೇ ತಿಂಗಳ ಬಿಸಿಲಿನ ತಾಪದಲ್ಲಿ ಕ್ರಿಕೆಟ್ ಆಡಿರುವುದರಿಂದ ಕೊಹ್ಲಿಗೆ ಕ್ರ್ಯಾಂಪ್ಸ್ ಆಗಿರಬೇಕೆಂದು ಎಲ್ಲರೂ ಭಾವಿಸಿದ್ದರು. ಜೂ.13ರಂದು ಧರ್ಮಶಾಲಾದಲ್ಲಿ ಆರಂಭವಾಗುವ ಮೂರು ಪಂದ್ಯಗಳ ಏಕದಿನ ಸರಣಿಗೆ ಕೊಹ್ಲಿ ಹೊರಗುಳಿಯುತ್ತಾರೆ ಎಂದು ಬಿಸಿಸಿಐ ಮೂಲಗಳು ಗುರುವಾರ ತಿಳಿಸಿವೆ. ಈ ಬಗ್ಗೆ ಭಾರತ ತಂಡದ ಸಹಾಯಕ ಕೋಚ್ ರಯಾನ್ ಟೆನ್ ಡೋಶೆಟ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಐಪಿಎಲ್ ಫೈನಲ್ ವೇಳೆ ಸ್ನಾಯು ಸೆಳೆತಕ್ಕೊಳಗಾದ ಕೊಹ್ಲಿ

ಅಪರೂಪದ ಸ್ನಾಯು ಸೆಳೆತ!: ಐಪಿಎಲ್ ಫೈನಲ್ ವೇಳೆ ಕೊಹ್ಲಿಗೆ ಈ ಗಾಯ ಸಂಭವಿಸಿದೆ. ಸ್ನಾಯು ಸೆಳೆತದಿಂದಾಗಿ ಕೊಹ್ಲಿ ಏಕದಿನ ಸರಣಿಯಿಂದ ಹೊರಬಿದ್ದಿದ್ದಾರೆ. ಸ್ಕ್ಯಾನ್‌ನಲ್ಲಿ ಅವರಿಗೆ ಡಿಸ್ಟಲ್ ಸೆಮಿಮೆಂಬ್ರೇನೋಸಸ್ ಟೆಂಡನ್ ಟಿಯರ್ ಎಂಬ ಅಪರೂಪದ ಸ್ನಾಯು ಸೆಳೆತ ಇರುವುದು ಕಂಡುಬಂದಿದೆ. ಈ ಅಪರೂಪದ ಸ್ನಾಯು ಸೆಳೆತವು, ಸ್ನಾಯುವನ್ನು ಮೂಳೆಯೊಂದಿಗೆ ಸಂಪರ್ಕಿಸುವ ದಪ್ಪ ಟೆಂಡನ್‌ಗೆ ಆಗುವ ಹಾನಿ. ಈ ಟೆಂಡನ್ ಮೊಣಕಾಲಿನ ಕೆಳಭಾಗದಲ್ಲಿರುವ ಒಳ ಶಿನ್‌ಬೋನ್ ಭಾಗಕ್ಕೆ ಅಂಟಿರುತ್ತದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಕೆಎಸ್ ಭರತ್ ಕ್ರಿಕೆಟ್‌ಗೆ ವಿದಾಯ

ವಿಶಾಖಪಟ್ಟಣಂ: ಆಂಧ್ರಪ್ರದೇಶ ವಿಕೆಟ್‌ಕೀಪರ್ ಬ್ಯಾಟರ್ ಕೆಎಸ್ ಭರತ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಭಾರತ ದೇಶವನ್ನು ಪ್ರತಿನಿಧಿಸಿ ಅಂತಾರಾಷ್ಟ್ರೀಯ ಕ್ರಿಕೆಟ್ ಆಡಿರುವುದು ನನ್ನ ಪಾಲಿಗೆ ಅತ್ಯಂತ ಶ್ರೇಷ್ಠವಾದ ಗೌರವ ಎಂದು ಹೇಳಿರುವ ಭರತ್, ತಮ್ಮ ವೃತ್ತಿಜೀವನದಲ್ಲಿ ಬೆಂಬಲ ನೀಡಿದ ಮಾಜಿ ನಾಯಕರಾದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಮಾಜಿ ಕೋಚ್ ರಾಹುಲ್ ದ್ರಾವಿಡ್, ಕುಟುಂಬ, ಬಿಸಿಸಿಐ, ಆಂಧ್ರ ಕ್ರಿಕೆಟ್ ಅಸೋಸಿಯೇಷನ್ ಮತ್ತು ತಮ್ಮ ಕೋಚ್‌ಗಳಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.



ಕ್ರಿಕೆಟ್ ಕೋಚಿಂಗ್‌ನಲ್ಲಿ ತಮ್ಮ ಕ್ರಿಕೆಟ್ ವೃತ್ತಿಜೀವನ ಮುಂದುವರಿಸುವುದಾಗಿ ಭರತ್ ಹೇಳಿಕೊಂಡಿದ್ದಾರೆ. ವಿರಾಟ್ ಕೊಹ್ಲಿ ನಾಯಕತ್ವದಲ್ಲಿ ಆರ್‌ಸಿಬಿ ಪರ ಐಪಿಎಲ್ ಪದಾರ್ಪಣೆ ಮಾಡಿದ್ದರು. ರೋಹಿತ್ ಶರ್ಮಾ ನಾಯಕತ್ವದಲ್ಲಿ ಟೆಸ್ಟ್ ಕ್ರಿಕೆಟ್ ಪದಾರ್ಪಣೆ ಮಾಡಿದ್ದರು. ಭಾರತ ಎ ತಂಡದಲ್ಲಿದ್ದ ಭರತ್ ಸೀನಿಯರ್ ತಂಡ ಸೇರಿಕೊಳ್ಳಲು ನೆರವಾದ ಕೋಚ್ ರಾಹುಲ್ ದ್ರಾವಿಡ್ ಅವರಿಗೂ ಕೃತಜ್ಞತೆ ಸಲ್ಲಿಸಿದ್ದಾರೆ.

ಇಂಡೋನೇಷ್ಯಾ ಓಪನ್‌ನಿಂದ ಹೊರಬಿದ್ದ ಸಿಂಧು, ಆಯುಷ್

ಜಕಾರ್ತ: ಇಂಡೋನೇಷ್ಯಾ ಓಪನ್ 2026ರಿಂದ ಭಾರತದ ತಾರೆಯರಾದ ಪಿವಿ ಸಿಂಧು ಮತ್ತು ಆಯುಷ್ ಶೆಟ್ಟಿ ಹೊರಬಿದ್ದಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದ 16ರ ಸುತ್ತಿ(ಪ್ರಿ ಕ್ವಾರ್ಟರ್)ನಲ್ಲಿ ಆಯುಷ್ ಶೆಟ್ಟಿ ಹಾಂಕಾಂಗ್ ಎದುರಾಳಿ ಲೀ ಚೆಕ್ ಎದುರು 21–16, 13–21, 14–21 ಅಂತರದಿಂದ ಸೋಲುಂಡಿದ್ದಾರೆ. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಸತತ 2ನೇ ಬಾರಿಗೆ ವಿಶ್ವ ನಂ.1 ಆನ್ ಸೆ ಯುಂಗ್ ಎದುರು ಸೋತಿದ್ದಾರೆ. ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ದಕ್ಷಿಣ ಕೊರಿಯಾದ ಆಟಗಾರ್ತಿ ಎದುರು 17–21, 14–21 ಅಂತರದಿಂದ ಸೋಲುಂಡಿದ್ದಾರೆ.

ಫ್ರೆಂಚ್ ಓಪನ್ ಸೋತ ಬಳಿಕ ಸಬಲೆಂಕಾ ನಿವೃತ್ತಿ ಮಾತು!

ಪ್ಯಾರಿಸ್: ಫ್ರೆಂಚ್ ಓಪನ್ 2026ರ ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಬುಧವಾರ ಡಯಾನಾ ಶ್ನೈಡರ್‌ಎದುರು ಆಘಾತಕಾರಿ ಸೋಲುಂಡ ಬಳಿಕ ವಿಶ್ವ ನಂ.1 ಅರೀನಾ ಸಬಲೆಂಕಾ ನಿವೃತ್ತಿಯ ಯೋಚನೆ ಮಾಡಿದ್ದೇನೆ ಎನ್ನುವ ಮೂಲಕ ಅಚ್ಚರಿ ಮೂಡಿಸಿದ್ದಾರೆ. ಮಾನಸಿಕವಾಗಿ ಬಹಳ ಕುಗ್ಗಿದ್ದೇನೆ. ಸ್ವಲ್ಪ ಕಾಲ ಟೆನಿಸ್‌ನಿಂದ ದೂರವುಳಿದ ಮರಳುವುದಾಗಿ ಹೇಳಿದ್ದಾರೆ.

1,248 ಆಟಗಾರರು | ಒಟ್ಟು 39 ದಿನಗಳ ಜಾಗತಿಕ ಫುಟ್ಬಾಲ್ ಕಲರವ | ಒಟ್ಟು 104 ಪಂದ್ಯಗಳು

ಫೀಫಾ ವಿಶ್ವಕಪ್‌ನಲ್ಲಿ 48 ರಾಷ್ಟ್ರಗಳು ಸ್ಪರ್ಧೆ

ಹೊಸದಿಲ್ಲಿ: ಫೀಫಾ ವಿಶ್ವಕಪ್ 2026 ಇತಿಹಾಸದಲ್ಲೇ ಅತಿ ದೊಡ್ಡ ವಿಶ್ವಕಪ್ ಆವೃತ್ತಿಯಾಗಿ ರೂಪುಗೊಂಡಿದೆ. ಈ ಬಾರಿ ಒಟ್ಟು 48 ರಾಷ್ಟ್ರಗಳು ಮತ್ತು 1,248 ಆಟಗಾರರು ಭಾಗವಹಿಸಲಿದ್ದಾರೆ. ಈ ಬಾರಿ ವಿಶ್ವಕಪ್ ಪಂದ್ಯಾವಳಿ ಕೆನಡಾ, ಮೆಕ್ಸಿಕೋ ಮತ್ತು ಅಮೆರಿಕದಲ್ಲಿ ನಡೆಯಲಿದ್ದು, ಒಟ್ಟು 104 ಪಂದ್ಯಗಳಿವೆ. ಜಾಗತಿಕ ಪ್ರತಿನಿಧಿತ್ವವನ್ನು ಹೆಚ್ಚಿಸುವ ಮಹತ್ವದ ಉದ್ದೇಶದಿಂದ ವಿಶ್ವಕಪ್ ಫುಟ್ಬಾಲ್‌ನಲ್ಲಿ ಹೆಚ್ಚಿನ ರಾಷ್ಟ್ರಗಳು ಮತ್ತು ಆಟಗಾರರಿಗೆ ಅವಕಾಶ ನೀಡಲಾಗಿದೆ. ಜೂ.12ರಿಂದ ವಿಶ್ವಕಪ್ ಫುಟ್ಬಾಲ್ ಕಲರವ ಆರಂಭವಾಗಲಿದೆ.

ಈ ವಿಶ್ವಕಪ್‌ನ ಪ್ರಮುಖ ವೈಶಿಷ್ಟ್ಯವೆಂದರೆ ಅನುಭವ ಮತ್ತು ಹೊಸ ಪ್ರತಿಭೆಗಳ ಸಮನ್ವಯ. ಒಟ್ಟು ಆಟಗಾರರಲ್ಲಿ 357 ಮಂದಿ ಈಗಾಗಲೇ ಹಿಂದಿನ ವಿಶ್ವಕಪ್‌ನಲ್ಲಿ ಆಡಿರುವವರು, ಇದರಿಂದ ತಂಡಗಳಿಗೆ ಅನುಭವದ ಬಲ ಸಿಗುತ್ತದೆ. ಇದೇ ವೇಳೆ 891 ಆಟಗಾರರು ಪದಾರ್ಪಣಾ ವಿಶ್ವಕಪ್ ಆಡುತ್ತಿದ್ದಾರೆ. ಇದು ಹೊಸ ಪ್ರತಿಭೆಗಳ ಲಭಿಸಿದ ದೊಡ್ಡ ಅವಕಾಶವನ್ನು ಸೂಚಿಸುತ್ತದೆ. ಈ ವಿಶ್ವಕಪ್ ಹೊಸ ಪೀಳಿಗೆಯ ಆಟಗಾರರಿಗೂ ದೊಡ್ಡ ವೇದಿಕೆಯಾಗುತ್ತಿದೆ. ವಯಸ್ಸಿನ ವೈವಿಧ್ಯತೆಯಲ್ಲೂ ಫೀಫಾ ವಿಶ್ವಕಪ್ ವಿಶೇಷವಾಗಿದೆ. ಅತ್ಯಂತ ಹಿರಿಯ ಆಟಗಾರ ಸ್ಕಾಟ್ಲೆಂಡ್‌ನ ಗೋಲ್‌ಕೀಪರ್ ಕ್ರೆಗ್ ಗೋರ್ಡನ್ ಆಗಿದ್ದು, ಅವರು 43 ವರ್ಷ ವಯಸ್ಸಿನಲ್ಲಿ ಇದೇ ಮೊದಲ ಬಾರಿಗೆ ವಿಶ್ವಕಪ್ ಆಡಲಿದ್ದಾರೆ. ಸ್ಕಾಟ್ಲೆಂಡ್‌ನ 26 ಸದಸ್ಯರ ತಂಡದಲ್ಲಿ ಕ್ರೆಗ್ ಸ್ಥಾನ ಸಂಪಾದಿಸಿದ್ದಾರೆ. ಮತ್ತೊಂದೆಡೆ, ಮೆಕ್ಸಿಕೋದ 17 ವರ್ಷದ ಯುವ ಆಟಗಾರ ಅತ್ಯಂತ ಕಿರಿಯನಾಗಿದ್ದಾನೆ. ಒಟ್ಟು 20 ವರ್ಷಕ್ಕಿಂತ ಕಡಿಮೆ ವಯಸ್ಸಿನ 22 ಆಟಗಾರರು ಮತ್ತು 40 ವರ್ಷ ಅಥವಾ ಹೆಚ್ಚು ವಯಸ್ಸಿನ 7 ಆಟಗಾರರು ಈ ವಿಶ್ವಕಪ್‌ನಲ್ಲಿ ಭಾಗವಹಿಸಲಿದ್ದಾರೆ. ಇದೇ ರೀತಿ, ವಿಶ್ವದ ಕೆಲವು ದಂತಕಥಾ ಆಟಗಾರರು ತಮ್ಮ ಆರನೇ ವಿಶ್ವಕಪ್‌ನಲ್ಲಿ ಭಾಗವಹಿಸುವ ಮೂಲಕ ಇತಿಹಾಸ ನಿರ್ಮಿಸಲು ಸಜ್ಜಾಗಿದ್ದಾರೆ. ಇವರಲ್ಲಿ ಅರ್ಜೆಂಟೀನಾದ ಲಿಯೊನೆಲ್ ಮೆಸ್ಸಿ, ಪೋರ್ಚುಗಲ್‌ನ ಕ್ರಿಶ್ಚಿಯಾನೋ ರೊನಾಲ್ಡೊ ಮತ್ತು ಮೆಕ್ಸಿಕೋದ ಗುಲೆರ್ಮೊ ಒಕಾವೊ ಸೇರಿದ್ದಾರೆ. ಒಟ್ಟಾರೆ, ಈ ವಿಶ್ವಕಪ್ ಅನುಭವ, ಯುವ ಪ್ರತಿಭೆ ಮತ್ತು ಜಾಗತಿಕ ವೈವಿಧ್ಯತೆಯ ಅನನ್ಯ ಮಿಶ್ರಣವನ್ನು ಪ್ರತಿಬಿಂಬಿಸುತ್ತದೆ.





ನೇರಪ್ರಸಾರ: ಯೂನಿಟ್8 ಸ್ಪೋರ್ಟ್ಸ್ (ಝೀ), ಝೀ–5.

ಮುಂದಿನ ಹಂತಗಳು

- ಜೂ.28ರಿಂದ ಜು.3ರವರೆಗೆ: 32ರ ಸುತ್ತು
- ಜು.4ರಿಂದ 7ರವರೆಗೆ: 16ರ ಸುತ್ತು/ಪ್ರಿ ಕ್ವಾರ್ಟರ್
- ಜು.9ರಿಂದ 11ರವರೆಗೆ: ಕ್ವಾರ್ಟರ್ ಫೈನಲ್ಸ್
- ಜು.14ರಿಂದ 15ರವರೆಗೆ: ಸೆಮಿ ಫೈನಲ್ಸ್
- ಜು.19: ಫೈನಲ್

ಭಾರತೀಯ ಮೂಲದ ನಾಲ್ವರು ಆಟಗಾರರು!

2026ರ ಫೀಫಾ ವಿಶ್ವಕಪ್‌ಗೂ ಭಾರತಕ್ಕೂ ಒಂದು ಸಂಬಂಧವಿದೆ. ಅದೇನೆಂದರೆ, ಭಾರತ ತಂಡ ವಿಶ್ವಕಪ್ ಅರ್ಹತೆ ಸಂಪಾದಿಸುವಲ್ಲಿ ವಿಫಲವಾದರೂ ಭಾರತೀಯ ಮೂಲದ ನಾಲ್ವರು ಆಟಗಾರರು ಈ ಬಾರಿ ವಿಶ್ವಕಪ್ ಆಡಲಿದ್ದಾರೆ. ಎಎಫ್‌ಸಿ ಏಷ್ಯನ್ ಕ್ವಾಲಿಫೈಯರ್ಸ್ ದ್ವಿತೀಯ ಸುತ್ತಿನಲ್ಲಿ ಎ ಗುಂಪಿನ ಮೂರನೇ ಸ್ಥಾನವನ್ನು ಸಂಪಾದಿಸಿ ಭಾರತ ಹೊರಬಿದ್ದಿತ್ತು. 1950ರ ವಿಶ್ವಕಪ್ ಅರ್ಹತೆಗಾಗಿ ಸ್ಪರ್ಧಿಸಲು ಇತರ ಏಷ್ಯಾ ರಾಷ್ಟ್ರಗಳೆಲ್ಲವೂ ಸ್ಪರ್ಧೆ ಹಿಂಪಡೆದಿದ್ದು, ಭಾರತ ಅರ್ಹತೆ ಸಂಪಾದಿಸಿತ್ತು. ಆ ಬಳಿಕ ಇಲ್ಲಿಯವರೆಗೆ ಬ್ಲೂ ಟೈಗರ್ಸ್ ವಿಶ್ವಕಪ್ ಅರ್ಹತೆಯನ್ನು ಇಲ್ಲಿಯವರೆಗೆ ಸಂಪಾದಿಸಿಲ್ಲ. ಆದರೆ ನಾಲ್ವರು ಭಾರತೀ ಮೂಲದ ಫುಟ್ಬಾಲ್ ಆಟಗಾರರು ವಿಭಿನ್ನ ರಾಷ್ಟ್ರೀಯ ತಂಡಗಳನ್ನು ಪ್ರತಿನಿಧಿಸಲಿದ್ದಾರೆ.

ತಹ್ಸಿನ್ ಮೊಹಮ್ಮದ್ ಜಮ್ಷಿದ್ (ಕತಾರ್)



19ರ ಹರೆಯದ ತಹ್ಸಿನ್ ಮೊಹಮ್ಮದ್ ಕತಾರ್‌ನ ದೋಹಾದಲ್ಲಿ ಜನಿಸಿದವರು. ಮೂಲತಃ ಕೇರಳದ ಕಣ್ಣೂರು ಜಿಲ್ಲೆಯವರು. 2024ರಲ್ಲಿ ಕತಾರ್ ಪ್ರತಿನಿಧಿಸಿ ಅಂತಾರಾಷ್ಟ್ರೀಯ ಫುಟ್ಬಾಲ್ ಪದಾರ್ಪಣೆಗೈದ ತಹ್ಸಿನ್ ಜಮ್ಷಿದ್ 2 ಪಂದ್ಯಗಳನ್ನಷ್ಟೇ ಆಡಿದ್ದು, ಯಾವುದೇ ಗೋಲ್ ದಾಖಲಿಸಿಲ್ಲ. ಅ–20, ಅ–23 ಕತಾರ್ ಕಿರಿಯರ ರಾಷ್ಟ್ರೀಯ ತಂಡಗಳನ್ನು ಪ್ರತಿನಿಧಿಸಿದ ಅನುಭವ ಹೊಂದಿದ್ದಾರೆ.

ನಿಶಾನ್ ವೇಲುಪಿಳ್ಳೈ (ಆಸ್ಟ್ರೇಲಿಯಾ)



ಮೆಲ್ಬೋರ್ನ್ ನಗರದಲ್ಲಿ ಜನಿಸಿದ ಇವರು ಶ್ರೀಲಂಕಾ ತಮಿಳು ಮತ್ತು ಆಂಗ್ಲೋ–ಇಂಡಿಯನ್ ಮೂಲವನ್ನು ಹೊಂದಿದ್ದಾರೆ. 2024ರಲ್ಲಿ ಪದಾರ್ಪಣೆ ಮಾಡಿದ ನಿಶಾನ್ ಆಸ್ಟ್ರೇಲಿಯಾ ಪರ 7 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 3 ಗೋಲ್‌ಗಳನ್ನು ದಾಖಲಿಸಿದ್ದಾರೆ. ಎಲ್ಲಾ ಮೂರು ಗೋಲ್‌ಗಳನ್ನು ಅರ್ಹತಾ ಸುತ್ತಿನಲ್ಲಿ ಹೊಡೆದಿದ್ದಾರೆ. ಇವರ ತಂದೆ ಶಶಿನಾಥ್ ವೇಲುಪಿಳ್ಳೈ ಶ್ರೀಲಂಕಾ ತಮಿಳರು ಮತ್ತು ತಾಯಿ ಗಿಲಿಯನ್ ಆ್ಯಂಗ್ಲೋ–ಇಂಡಿಯನ್ ಆಗಿದ್ದಾರೆ.

ಸರ್‌ಪ್ರೀತ್ ಸಿಂಗ್ (ನ್ಯೂಜಿಲೆಂಡ್)



ವೆಲ್ಲಿಂಗ್ಟನ್‌ನಲ್ಲಿ ಬೆಳೆದ ಮಿಡ್‌ಫೀಲ್ಡರ್ ಹೆತ್ತವರು ಪಂಜಾಬ್‌ನ ಜಲಂಧರ್ ಮೂಲದವರು. 27 ವರ್ಷದ ಸರ್‌ಪ್ರೀತ್ ವೆಲ್ಲಿಂಗ್ಟನ್ ಫೀನಿಕ್ಸ್ ಹಾಗೂ ಬೇಯರ್ನ್ ಮ್ಯೂನಿಚ್ ಪರ ಕ್ಲಬ್ ಫುಟ್ಬಾಲ್ ಆಡಿರುವ ಅನುಭವ ಹೊಂದಿದ್ದಾರೆ. 2018ರಲ್ಲಿ ನ್ಯೂಜಿಲೆಂಡ್ ರಾಷ್ಟ್ರೀಯ ತಂಡ ಪ್ರತಿನಿಧಿಸಿದ ಬಳಿಕ ಈವರೆಗೆ 24 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 3 ಗೋಲ್‌ಗಳನ್ನು ದಾಖಲಿಸಿದ್ದಾರೆ.

ಸ್ಯಾಮುಯೆಲ್ ಮೌಂಟೌಸಾಮಿ (ಕಾಂಗೋ)



ಪ್ಯಾರಿಸ್‌ನಲ್ಲಿ ಜನಿಸಿದ ಮಿಡ್‌ಫೀಲ್ಡರ್ ತಂದೆ ಇಂಡೋ–ಗಾಡೆಲೊಪಿಯನ್ ತಮಿಳರು. ಕಾಂಗೋ ಪರ 2019ರಲ್ಲಿ ಪದಾರ್ಪಣೆ ಮಾಡಿದ ಸ್ಯಾಮುಯೆಲ್ 57 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದು, ಗೋಲ್ ಖಾತೆ ತೆರೆದಿಲ್ಲ.

ಗುಂಪುಗಳು

- ಎ: ಮೆಕ್ಸಿಕೋ, ದಕ್ಷಿಣ ಆಫ್ರಿಕಾ, ದಕ್ಷಿಣ ಕೊರಿಯಾ, ಜೆಕ್ ಗಣರಾಜ್ಯ.
- ಬಿ: ಕೆನಡಾ, ಸ್ವಿಜರ್‌ಲೆಂಡ್, ಕತಾರ್, ಬೋಸ್ನಿಯ ಮತ್ತು ಹರ್ಜ್‌ಗೊವಿನಾ.
- ಸಿ: ಬ್ರೆಜಿಲ್, ಮೊರಾಕ್ಕೊ, ಸ್ಕಾಟ್ಲೆಂಡ್, ಹೈಟಿ.
- ಡಿ: ಅಮೆರಿಕ, ಪರಗ್ವೆ, ಆಸ್ಟ್ರೇಲಿಯಾ, ಟರ್ಕಿ.
- ಇ: ಜರ್ಮನಿ, ಇಕ್ವಾಡೊರ್, ಐವರಿ ಕೋಸ್ಟ್, ಕ್ಯುರಕಾವೊ.
- ಎಫ್: ನೆದರ್‌ಲೆಂಡ್ಸ್, ಜಪಾನ್, ಸ್ವೀಡನ್, ಟ್ಯುನೀಶಿಯ.
- ಜಿ: ಬೆಲ್ಜಿಯಂ, ಈಜಿಪ್ಟ್, ಇರಾನ್, ನ್ಯೂಜಿಲೆಂಡ್.
- ಎಚ್: ಸ್ಪೇನ್, ಉರಗ್ವೆ, ಸೌದಿ ಅರೇಬಿಯಾ, ಕೇಪ್ ವರ್ಡೆ.
- ಐ: ಫ್ರಾನ್ಸ್, ಸೆನೆಗಲ್, ನಾರ್ವೆ, ಇರಾಕ್.
- ಜೆ: ಅರ್ಜೆಂಟೀನಾ, ಆಸ್ಟ್ರಿಯಾ, ಅಲ್ಜೀರಿಯ, ಜೋರ್ಡನ್.
- ಕೆ: ಪೋರ್ಚುಗಲ್, ಕೊಲಂಬಿಯಾ, ಕಾಂಗೋ, ಉಜ್ಬೇಕಿಸ್ತಾನ.
- ಎಲ್: ಇಂಗ್ಲೆಂಡ್, ಕ್ರೊವೇಶಿಯಾ, ಘಾನಾ, ಪನಾಮ





ಗುಂಪಿನ ಹಂತದ ಪ್ರಮುಖ ಪಂದ್ಯಗಳು

(ಭಾರತೀಯ ಕಾಲಮಾನದಲ್ಲಿ)

ಜೂ.12, ಶುಕ್ರವಾರ: ಮೆಕ್ಸಿಕೋ–ದಕ್ಷಿಣ ಆಫ್ರಿಕಾ (ಉದ್ಘಾಟನಾ ಪಂದ್ಯ), ಮಧ್ಯರಾತ್ರಿ 12.30ರಿಂದ, ಮೆಕ್ಸಿಕೋ.

ಜೂ.14, ಭಾನುವಾರ
ಬ್ರೆಜಿಲ್–ಮೊರಾಕ್ಕೊ
ಬೆಳಗ್ಗೆ 3.30ರಿಂದ, ನ್ಯೂ ಜೆರ್ಸಿ

ಜೂ.15, ಸೋಮವಾರ:
ನೆದರ್‌ಲೆಂಡ್ಸ್–ಜಪಾನ್
ಮಧ್ಯರಾತ್ರಿ 1.30ರಿಂದ, ಅರ್ಲಿಂಗ್ಟನ್

ಜೂ.17, ಬುಧವಾರ
ಫ್ರಾನ್ಸ್–ಸೆನೆಗಲ್
ಮಧ್ಯರಾತ್ರಿ 12.30ರಿಂದ, ನ್ಯೂ ಜೆರ್ಸಿ

ಜೂ.18, ಗುರುವಾರ
ಇಂಗ್ಲೆಂಡ್–ಕ್ರೊವೇಶಿಯಾ
ಮಧ್ಯರಾತ್ರಿ 1.30ರಿಂದ, ಅರ್ಲಿಂಗ್ಟನ್

ಜೂ.19, ಶುಕ್ರವಾರ
ಮೆಕ್ಸಿಕೋ–ದಕ್ಷಿಣ ಕೊರಿಯಾ
ಬೆಳಗ್ಗೆ 6.30ರಿಂದ, ಜೇಪ್ರೊಪನ್

ಜೂ.20, ಶನಿವಾರ
ನೆದರ್‌ಲೆಂಡ್ಸ್–ಸ್ವೀಡನ್
ರಾತ್ರಿ 10.30ರಿಂದ, ಹ್ಯೂಸ್ಟನ್

ಜೂ.21, ಭಾನುವಾರ
ಜರ್ಮನಿ–ಐವರಿ ಕೋಸ್ಟ್
ಮಧ್ಯರಾತ್ರಿ 1.30ರಿಂದ, ಟೊರಾಂಟೊ

ಜೂ.22, ಸೋಮವಾರ
ಅರ್ಜೆಂಟೀನಾ–ಆಸ್ಟ್ರೀಯಾ
ರಾತ್ರಿ 10.30ರಿಂದ, ಅರ್ಲಿಂಗ್ಟನ್

ಜೂ.23, ಮಂಗಳವಾರ
ನಾರ್ವೆ–ಸೆನೆಗಲ್
ಬೆಳಗ್ಗೆ 5.30ರಿಂದ, ಟೊರಾಂಟೊ

ಜೂ.25, ಗುರುವಾರ
ದಕ್ಷಿಣ ಆಫ್ರಿಕಾ–ದಕ್ಷಿಣ ಕೊರಿಯಾ ಬೆಳಗ್ಗೆ 6.30ರಿಂದ, ಗೌಡಾಲಾಜರ

ಜೂ.26, ಶುಕ್ರವಾರ
ಜಪಾನ್–ಸ್ವೀಡನ್,
ಬೆಳಗ್ಗೆ 4.30ರಿಂದ, ಅರ್ಲಿಂಗ್ಟನ್

ಜೂ.27, ಶನಿವಾರ
ನಾರ್ವೆ–ಫ್ರಾನ್ಸ್
ಮಧ್ಯರಾತ್ರಿ 12.30ರಿಂದ, ಫಾಕ್ಸ್‌ಬರೋ
ಉರಗ್ವೆ–ಸ್ಪೇನ್
ಬೆಳಗ್ಗೆ 5.30ರಿಂದ, ಜೇಪ್ರೊಪನ್

ಜೂ.28, ಭಾನುವಾರ
ಕೊಲಂಬಿಯಾ–ಪೋರ್ಚುಗಲ್
ಬೆಳಗ್ಗೆ 5ರಿಂದ, ಮಯಾಮಿ.

ಮಹಾರಾಜ ಟ್ರೋಫಿ ಹರಾಜು

ಬೆಂಗಳೂರು: ಕರುಣ್ ನಾಯರ್, ಮಯಾಂಕ್ ಅಗರವಾಲ್ ಮತ್ತು ಮನೀಶ್ ಪಾಂಡೆ ಅವರು ಶುಕ್ರವಾರ ಇಲ್ಲಿ ನಡೆಯಲಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಐದನೇ ಆವೃತ್ತಿಯ ಆಟಗಾರರ ಹರಾಜಿನಲ್ಲಿ ಪ್ರಮುಖ ಆಕರ್ಷಣೆಯಾಗಲಿದ್ದಾರೆ.

ಒಟ್ಟು 150ಕ್ಕೂ ಹೆಚ್ಚು ಆಟಗಾರರು ಆಯ್ಕೆಗಾಗಿ ಲಭ್ಯರಾಗಿದ್ದು, 6 ಫ್ರಾಂಚೈಸಿಗಳು ತಲಾ 60 ಲಕ್ಷ ರೂ. ಪೂರ್ಣ ಮೊತ್ತದೊಂದಿಗೆ ತಮ್ಮ ತಂಡಗಳನ್ನು ನಿರ್ಮಿಸಲು ಹರಾಜಿನಲ್ಲಿ ಭಾಗವಹಿಸಲಿವೆ. ತಂಡದಲ್ಲಿ ಕನಿಷ್ಠ 16 ಮತ್ತು ಗರಿಷ್ಠ 18 ಆಟಗಾ ರರನ್ನು ಹರಾಜು ಮೂಲಕ ಸೇರಿಸಬಹುದು. ಜೊತೆಗೆ ಕಡ್ಡಾಯವಾಗಿ ಎರಡು ಕ್ಯಾಚ್‌ಮೆಂಟ್ ಏರಿಯಾ ಆಟಗಾರರು ಇರಬೇಕು. ಆಟಗಾರರನ್ನು ಎ, ಬಿ, ಸಿ, ಡಿ ಮತ್ತು ಇ ಗುಂಪುಗಳಾಗಿ ವಿಂಗಡಿಸಲಾಗಿದೆ. ಕ್ರಮವಾಗಿ 2 ಲಕ್ಷ ರೂ, 1 ಲಕ್ಷ ರೂ, 50,000 ರೂ, 75,000 ರೂ. ಮತ್ತು 30,000 ರೂ. ಮೂಲ ಬೆಲೆ ನಿಗದಿಯಾಗಿದೆ. ಫ್ರಾಂಚೈಸಿಗಳು ಎ, ಬಿ ಮತ್ತು ಸಿ ಗುಂಪುಗಳಿಂದ ಒಟ್ಟಾಗಿ ಕನಿಷ್ಠ 12 ಆಟಗಾರರನ್ನು ಆಯ್ಕೆ ಮಾಡಬೇಕು ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎ ಗುಂಪಿನಲ್ಲಿ ತಾರೆಯರು: ಎ ಗುಂಪಿನಲ್ಲಿ ಕರುಣ್ ನಾಯರ್, ಮಯಾಂಕ್ ಅಗರವಾಲ್ ಮತ್ತು ಮನೀಶ್ ಪಾಂಡೆ ಸೇರಿದಂತೆ ಭಾರತ ಮತ್ತು ಐಪಿಎಲ್ ಆಟಗಾರರು ಇದ್ದಾರೆ. ಇವರ ಮೂಲ ಬೆಲೆ 2 ಲಕ್ಷ ರೂ. ಆಗಿದೆ. ಜೊತೆಗೆ ವೈಶಾಕ್ ವಿಜಯಕುಮಾರ್, ಆರ್.ಸ್ಮರಣ್ ಮತ್ತು ಕಳೆದ ಆವೃತ್ತಿಯಲ್ಲಿ ಅತ್ಯಧಿಕ 26 ವಿಕೆಟ್ ಕಬಳಿಸಿದ್ದ ಯಶ್‌ರಾಜ್ ಪೂಂಜ ಕೂಡ ಇದ್ದಾರೆ. ಎ ಗುಂಪಿನಲ್ಲಿ ಹಿಂದಿನ ಆವೃತ್ತಿಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಅಭಿನವ್ ಮನೋಹರ್, ವಿದ್ಯುತ್ ಕಾವೇರಪ್ಪ ಮತ್ತು ಶರತ್ ಬಿ.ಆರ್. ಕೂಡ ಸೇರಿದ್ದಾರೆ.

ಬಿ ಗುಂಪಿನಲ್ಲಿ ಅನುಭವಿಗಳು: ಬಿ ಗುಂಪಿನಲ್ಲಿ 30 ವರ್ಷದೊಳಗಿನವರು ಸ್ಥಾನ ಪಡೆದಿದ್ದು, ಎಲ್ಲಾ ಮಾದರಿಯಲ್ಲಿ ಕರ್ನಾಟಕ ಹಿರಿಯ ತಂಡವನ್ನು ಪ್ರತಿನಿಧಿಸಿದ ಆಟಗಾರರು ಒಳಗೊಂಡಿದ್ದಾರೆ. ಇವರ ಮೂಲ ಬೆಲೆ 1 ಲಕ್ಷ ರೂ. ಆಗಿದೆ.

ಸಿ ಗುಂಪಿನಲ್ಲಿ ಕಿರಿಯರು: ಸಿ ಗುಂಪಿನಲ್ಲಿ 30 ವರ್ಷದೊಳಗಿನ, ಕರ್ನಾಟಕ ಜೂನಿಯರ್ ಮಟ್ಟದಲ್ಲಿ ಆಡಿದ ಆಟಗಾರರು ಸೇರಿದ್ದಾರೆ. ಇವರ ಮೂಲ ಬೆಲೆ 50,000 ರೂ. ಆಗಿದ್ದು, ಗಮನಾರ್ಹ ಹೆಸರುಗಳಲ್ಲಿ ಅನ್ವಯ್ ದ್ರಾವಿಡ್, ಸಮಿತ್ ದ್ರಾವಿಡ್, ಹರ್ಷಿಲ್ ಧರ್ಮಾಣಿ, ಕಾರ್ತಿಕ್ ಎಸ್. ಯು., ಆದರ್ಶ್ ಪ್ರಜ್ವಲ್ ಮತ್ತು ಅನೀಶ್ವರ್ ಗೌತಮ್ ಇದ್ದಾರೆ.

ಡಿ ಗುಂಪಿನಲ್ಲಿ ಹಿರಿಯ ಆಟಗಾರರು: ಡಿ ಗುಂಪಿನಲ್ಲಿ 30ರಿಂದ 35 ವರ್ಷದೊಳಗಿನ ಹಿರಿಯ ರಾಜ್ಯ ತಂಡದ ಆಟಗಾರರಿದ್ದು, ಅವರ ಮೂಲ ಬೆಲೆ 75,000 ರೂ. ಫ್ರಾಂಚೈಸಿಗಳು ತಮ್ಮ ಆಡುವ ಬಳಗದಲ್ಲಿ ಈ ವಿಭಾಗದಿಂದ ಗರಿಷ್ಠ ಎರಡು ಆಟಗಾರರನ್ನು ಮಾತ್ರ ಬಳಸಲು ಅನುಮತಿ ಇದೆ ಎಂದು ಆಯೋಜಕರು ತಿಳಿಸಿದ್ದಾರೆ.

ಇ ಗುಂಪಿನಲ್ಲಿ ನೋಂದಾಯಿತರು: ಇ ಗುಂಪಿನಲ್ಲಿ ಕೆಎಸ್‌ಸಿಎ ನೋಂದಾಯಿತ 30 ವರ್ಷದೊಳಗಿನ ಇತರ ಎಲ್ಲಾ ಆಟಗಾರರನ್ನು ಒಳಗೊಂಡಿದ್ದು, ಇವರನ್ನು ರಾಜ್ಯ ಆಯ್ಕೆ ಸಮಿತಿ ಶಾರ್ಟ್‌ಲಿಸ್ಟ್ ಮಾಡಿದೆ. ಇವರ ಮೂಲ ಬೆಲೆ 30,000 ರೂ. ಎಂದು ಅವರು ತಿಳಿಸಿದ್ದಾರೆ.

ಗರಿಷ್ಠ ನಾಲ್ವರ ರಿಟೇನ್: ಭವಿಷ್ಯದಲ್ಲಿ ಫ್ರಾಂಚೈಸಿಗಳು ತಮ್ಮ 2026 ತಂಡದಿಂದ ಗರಿಷ್ಠ 4 ಆಟಗಾರರನ್ನು ಮುಂದಿನ ಆವೃತ್ತಿಗೆ ರಿಟೇನ್ ಮಾಡಬಹುದು ಎಂದು ಅವರು ಸೇರಿಸಿದ್ದಾರೆ. 5ನೇ ಆವೃತ್ತಿ ಜೂ.12ರಿಂದ ಜು.12ರವರೆಗೆ ಮೈಸೂರು, ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ನಡೆಯಲಿದೆ.

ಟಿ20 ನಾಯಕ ಸ್ಥಾನದಿಂದ ಸೂರ್ಯ ಔಟ್?

ಮುಂಬೈ: ಮುಂಬರುವ ಐರ್ಲೆಂಡ್ ಮತ್ತು ಇಂಗ್ಲೆಂಡ್ ಟಿ20 ಸರಣಿಗಳಿಗೆ ಪ್ರಸ್ತುತ ನಾಯಕ ಸೂರ್ಯ ಕುಮಾರ್ ಯಾದವ್ ಅವರನ್ನು ನಾಯಕ ಸ್ಥಾನದಿಂದ ಕೆಳಗಿಳಿಸಲು ಬಿಸಿಸಿಐ ಚಿಂತನೆ ನಡೆಸಿದೆ. ಸೂರ್ಯಕುಮಾರ್‌ರನ್ನು ನಾಯಕತ್ವದಿಂದ ಕೆಳಗಿಳಿಸಿದರೆ, ಟಿ20 ತಂಡಕ್ಕೆ ಶ್ರೇಯಸ್ ಅಯ್ಯರ್ ಅಥವಾ ಸಂಜು ಸ್ಯಾಮ್ಸನ್ ನಾಯಕರಾಗುವ ಮುಂಚೂಣಿಯಲ್ಲಿದ್ದಾರೆ. ಸೂರ್ಯಕುಮಾರ್ ಬ್ಯಾಟಿಂಗ್ ಲಯದಲ್ಲಿ ಕಾಣಿಸಿಕೊಳ್ಳದಿರುವುದು, ಐಪಿಎಲ್‌ನಲ್ಲೂ ಮುಂಬೈ ಇಂಡಿಯನ್ಸ್ ಪರ ದೊಡ್ಡ ಪರಿಣಾಮಕಾರಿ ಪ್ರದರ್ಶನ ನೀಡಿರಲಿಲ್ಲ. ಈ ಆವೃತ್ತಿಯ ಐಪಿಎಲ್‌ನಲ್ಲಿ ಸೂರ್ಯ 13 ಇನ್ನಿಂಗ್ಸ್‌ಗಳಲ್ಲಿ 20.76ರ ಸರಾಸರಿಯಲ್ಲಿ 270 ರನ್‌ಗಳಷ್ಟೇ ಗಳಿಸಿದ್ದಾರೆ. ಕೊನೆಯಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಅರ್ಧ ಶತಕ ದಾಖಲಿಸುವ ಮೂಲಕ ಈ ಆವೃತ್ತಿ ಮುಗಿಸಿದ್ದರು. ಗುರುವಾರ ಬಿಸಿಸಿಐ ಹಿರಿಯ ಅಧಿಕಾರಿಗಳು ತಂಡದ ಭವಿಷ್ಯದ ಕುರಿತು ಚರ್ಚಿಸಲು ಮುಂಬೈನಲ್ಲಿ ಸಭೆ ಸೇರಿದ್ದರು. ಸೂರ್ಯ ಅವರನ್ನು ನಾಯಕತ್ವದಿಂದ ತೆಗೆಯಬೇಕೆಂಬ ಮಾತಿನಲ್ಲಿ ಆಯ್ಕೆ ಸಮಿತಿ ಮತ್ತು ಟೀಮ್ ಮ್ಯಾನೇಜ್‌ಮೆಂಟ್ ನಡುವೆ ಸಹಮತ ಮೂಡಿದೆ ಎನ್ನಲಾಗಿದೆ. ಸಂಜು ಮತ್ತು ಅಯ್ಯರ್ ಮಾತ್ರವಲ್ಲದೆ, ಭಾರತ ಟಿ20 ಉಪನಾಯಕ ಅಕ್ಷರ್ ಪಟೇಲ್ ಅವರನ್ನೂ ಆಯ್ಕೆಯಾಗಿ ಪರಿಗಣಿಸುವ ಸಾಧ್ಯತೆಯಿದೆ. ತಿಲಕ್ ವರ್ಮಾರನ್ನು ಭವಿಷ್ಯದ ಟಿ20 ನಾಯಕರನ್ನಾಗಿ ಮಾಡಲು ಅವರಿಗೆ ಈಗಾಗಲೇ ಭಾರತ ಎ ನಾಯಕತ್ವದ ಜವಾಬ್ದಾರಿ ವಹಿಸಲಾಗಿದೆ.

ಸಂಜು, ಶ್ರೇಯಸ್ ಅಥವಾ ಅಕ್ಷರ್ ಮಧ್ಯೆ ಪೈಪೋಟಿ

ಪದಬಂಧ

ರಾಜಾ ಸಂಗಮೇಶ ಹಿರೇಮಠ



6005

ಎಡದಿಂದ ಬಲಕ್ಕೆ
5.ಯಾವಾಗಲೂ ಸಂತೋಷದಿಂದಿರುವ ವ್ಯಕ್ತಿ (4)
6.ಈತ ಮದುವೆಯ ಗಂಡು (4)
7.ಬಟ್ಟೆಗಳಿಗೆ ಅಲಂಕಾರಕ್ಕಾಗಿ ಹಾಕುವ ಚಿನ್ನದ ನೂಲು (2)
8.ನೆರವು–ಬೆಂಬಲದ ಸಮಾನಪದ (3)
9.ಆಭರಣ–ಅಲಂಕಾರದ ವಸ್ತು (2)
11.ಗಂಡುಸಂತಾನ–ಪುತ್ರನೀತ (2)
13.ಸಂಸ್ಕೃತ ಮೂಲದ ಗಾಳಿಯಿದು (3)
15.ರುಚಿ,ಭಾವದಲ್ಲಿ ತೀವ್ರವಾಗಿರುವಂಥಾದ್ದು (2)
16.ಮಕ್ಕಳಂಥಹ ಅಮಾಯಕ ಸ್ವಭಾವ (4)
17.ಮನಸ್ಸಿಗೆ ಸಂತೋಷ ನೀಡುವಂಥಾದ್ದು (4)

ಮೇಲಿನಿಂದ ಕೆಳಕ್ಕೆ
1.ದಾರಿಯ ನಡುವೆ ತೋರಿದ ದಬ್ಬಾಳಿಕೆ (4)
2.ಸೌಮ್ಯ–ಮೃದುವಾದ ನಗುವಿದು (4)
3.ನೋಡಲು ಆಕರ್ಷಕವಾಗಿರುವುದು (4)
4.ಹೊಗೆಯನ್ನು ಸೇದುವಿಕೆಯೊಳಗೆ ಮನವಿದೆ (4)
7.ಹುಟ್ಟುವಿಕೆ ಸಂಬಂಧಿಸಿದ ಪದ (3)
10.ದ್ರವಪದಾರ್ಥದ ತಳದಲ್ಲಿ ಉಳಿದ ಭಾಗ (3)
12.ನಡುಗು–ಕಂಪಿಸು ಎಂಬರ್ಥದ ಶಬ್ದ (4)
13.ಸಿನಿಮಾ ನಾಟಕಗಳ ಹಾಸ್ಯ ಪಾತ್ರಧಾರಿ (4)
14.ಮಧುರತೆ–ಆನಂದದಿಂದ ಕೂಡಿದ್ದು (4)
15.ಶರೀರ ದೃಢತೆಗಾಗಿ ಮಾಡುವ ವ್ಯಾಯಾಮ (4)

6004 ಉತ್ತರ

ಎಡದಿಂದ ಬಲಕ್ಕೆ:
1.ದಗಾಕೋರ 6.ದಂಡನೀತಿ
7.ಕರಂಡ 8.ಅತ್ತಿಗೆ
10.ನಡತೆ 11.ದಂಪತಿ
12.ಸಾಂದ್ರತೆ 14.ತಾಲೀಮು
16.ಹರಿಕಾರ 17.ಸುಮನಸ

ಮೇಲಿನಿಂದ ಕೆಳಕ್ಕೆ :
2.ಗಾಣಗಿತ್ತಿ 3.ರಸಿಕ
4.ಕೋದಂಡ 5.ಪತಿವ್ರತೆ
9.ಗೆಳತಿ 10.ಸಾಂತ್ವನ
11.ದಂಡಾಹತ
13.ದ್ರವ್ಯಹೀನ 14.ತಾರಣ
15.ಮುನಿಸು

ಇಂದು ವಿಶ್ವ ಪರಿಸರ ದಿನಾಚರಣೆ | ಪ್ರಕೃತಿಯಿಂದ ಪ್ರೇರಿತ ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ–2026ರ ಘೋಷವಾಕ್ಯ

ಪರಿಸರ ಸಂರಕ್ಷಣೆ ಮತ್ತು ವಿನಾಶ ಮನುಕುಲದಿಂದ ಮಾತ್ರ ಸಾಧ್ಯ

ಬಸವರಾಜ ಶಿವಪ್ಪ ಗಿರಗಾಂವಿ, ಕೃಷಿ ತಜ್ಞರು

ಮತ್ತೇ ಬಂದಿತು ವಿಶ್ವ ಪರಿಸರ ದಿನಾಚರಣೆ, ಆದರೆ ಇದು ಭಾರತದ ಮಟ್ಟಿಗೆ ಆಟಕ್ಕುಂಟು ಲೆಕ್ಕಕ್ಕಿಲ್ಲವೆಂಬಂತಾಗಿದೆ. ಈ ದಿನವೂ ಕೇವಲ ಫೋಟೋಶೂಟ್‌ಗೆ ಸೀಮಿತವಾಗಿದೆ. ಸಧ್ಯದ ಬಿಸಿಲಿಗೆ ಬಹುತೇಕ ಜನತೆಯು ಬಸವಳಿದಿದೆ. ಪ್ರತಿವರ್ಷ ಬಿಸಿಲಿನ ಪ್ರಮಾಣವು ಹೆಚ್ಚಾಗುತ್ತಿದೆ. ಮಕ್ಕಳು, ವೃದ್ಧರು ಮತ್ತು ಪಶುಪಕ್ಷಿಗಳು ಹೈರಾಣಾಗುತ್ತಿವೆ. ಅಕಾಲಿಕ ಮಳೆಯು ಸಹ ಅಲ್ಲಲ್ಲಿ ಬೆಂಕಿ ಮಳೆಯಂತೆ ಬಿದ್ದು ಮತ್ತಷ್ಟು ಅರೆಝಳ ಹಾಗೂ ಹಾನಿಯನ್ನು ಸೃಷ್ಟಿಸುತ್ತಿದೆ. ಹಾಗಾದರೆ ಇಂತಹ ಸಂಧಿಗ್ಧ ಪರಿಸ್ಥಿತಿಗಳಿಗೆ ಕಾರಣರಾರು? ಮತ್ತು ಇಷ್ಟೆಲ್ಲ ಪರಿಸರ ಹಾನಿಯಾಗುತ್ತಿರುವಾಗ ವಿಶ್ವ ಪರಿಸರ ದಿನಾಚರಣೆ ಯಾವ ಪುರುಷಾರ್ಥಕ್ಕೆ? ಪ್ರಸ್ತುತ ಭಾರತದಲ್ಲಿರುವ ವ್ಯವಸ್ಥೆಗಳನ್ನು ಗಮನಿಸಿದರೆ, ಭಾರತವು ವಿಶ್ವದಲ್ಲಿಯೇ ರಣಬಿಸಿಲು ಹೊಂದಿದ ರಾಷ್ಟ್ರವಾಗುವುದು ನಿಶ್ಚಿತ.

ಪ್ರಕೃತಿಯಿಂದ ಸ್ಫೂರ್ತಿ ಪಡೆದಿದೆ. ಹವಾಮಾನಕ್ಕಾಗಿ ನಮ್ಮ ಭವಿಷ್ಯಕ್ಕಾಗಿಎಂಬುದು 2026ರ ಘೋಷವಾಕ್ಯವಾಗಿದೆ. ಪರಿಸರವು ನಾಶವಾಗುವುದು ಕೇವಲ ಮನುಕುಲದಿಂದ ಮಾತ್ರವೆನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಭೂಮಿ ಮತ್ತು ಪರಿಸರವು ಮಾನವನ ತಪ್ಪು ಕಾರ್ಯಗಳಿಗೆ ಎಂದೂ ವಾದಿಸುವುದಿಲ್ಲ, ಬದಲಾಗಿ ಹವಾಮಾನದ ಮೂಲಕ ತಕ್ಕ ಉತ್ತರವನ್ನು ಕೊಡುತ್ತದೆ. ಭೂಮಿ ಮತ್ತು ಪರಿಸರಕ್ಕಾಗಿ ಒಳ್ಳೆಯದನ್ನು ಮಾಡಿದರೆ ಇವು ಮನುಕುಲಕ್ಕೆ ಒಳ್ಳೆಯದನ್ನು ಮಾಡುತ್ತವೆ. ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದು ಮಾಡುತ್ತವೆ. ಅದರಂತೆ ಮನುಕುಲದ ಅಭಿವೃದ್ಧಿಗೆ ಕೈಗಾರಿಕೆಗಳು ಅವಶ್ಯ, ಆದರೆ ಅವುಗಳಿಗೆ ತಕ್ಕುದಾದ ಪರಿಸರ ಸಂರಕ್ಷಣೆ ನಿರಂತರವಾಗಿರುವುದು ಅವಶ್ಯವಾಗಿದೆ.

ಭಾರತದಲ್ಲಿ ಕಳೆದ ದಶಕದಿಂದ ಹೆಚ್ಚುತ್ತಿರುವ ಪರಿಸರ ನಾಶಧ ಹಿಂದೆ ಮನುಕುಲದ ಕರಾಳ ಕಾರ್ಯಗಳು ಅಡಗಿವೆ. ಕ್ಷಣಿಕ ಸುಖಃಕ್ಕಾಗಿ ಮನಸೋಯಿಚ್ಛೆ ಮರಗಳ ಮಾರಣಹೋಮ, ನಗರೀಕರಣ ಮತ್ತು ಅರಣ್ಯ ನಾಶದಂತಹ ಪ್ರಕ್ರೀಯೆಗಳು ನಡೆಯುತ್ತಿರುವುದರಿಂದ ಭಾರತದ ಹಲವು ಭಾಗಗಳು ಬೆಂಕಿಯ ಚೆಂಡಿನಂತಾಗಿವೆ. ಮನುಕುಲವು ಸೌಕರ್ಯಗಳನ್ನು ಅನುಭವಿಸುವಂತೆ ಗಿಡ–ಮರಗಳ ಪಾಲನೆ–ಪೋಷಣೆ ಮಾಡುತ್ತಿಲ್ಲ, ಇಂದು ಬೇಸಿಗೆಯಲ್ಲಿ ಮಾತ್ರ ಬಿರುಬಿಸಿಲಿನ ದರ್ಶನವಾಗುತ್ತಿದೆ, ಮುಂದಿನ ಕೆಲವೆ ವರ್ಷಗಳಲ್ಲಿ ವರ್ಷಪೂರ್ತಿ ಬಿರುಬಿಸಿಲು ಬಂದರೂ ಆಶ್ಚರ್ಯವಿಲ್ಲ, ಅಚ್ಚರಿಯ ಸಂಗತಿಯೆಂದರೆ, ಭಾರತದಲ್ಲಿ ಪ್ರತಿವರ್ಷ ಪರಿಸರ ದಿನಾಚರಣೆಯ ದಿನದಂದು ನಾಟಿ ಮಾಡಿದ ಅಂದಾಜು ಶೇ.80



ಸಸಿಗಳು ನಿರ್ವಹಣೆಯ ಕೊರತೆಯಿಂದ ನಾಶವಾಗುತ್ತಿವೆ.

ಪರಿಸರ ದಿನದಂದು ನಾಟಕೀಯವಾಗಿ ನಾಟಿ ಮಾಡುವ ಜನರು ತದನಂತರದಲ್ಲಿ ಅವುಗಳ ಪಾಲನೆ–ಪೋಷಣೆ ಸೇರಿದಂತೆ ಇತರೆ ಸಾಮಾಜಿಕ ಪ್ರಜ್ಞೆಯನ್ನು ಅಳವಡಿಸಿಕೊಳ್ಳುವುದಿಲ್ಲ, ಇದರಿಂದ ಬಿರುಬಿಸಿಲು, ಬಿರುಗಾಳಿ, ಮಹಾಮಳೆ, ಕಾಡ್ಗಿಚ್ಚು, ಬರಗಾಲ, ಜಲಪ್ರಳಯ, ಅಕಾಲಿಕ ಮಳೆ ಮತ್ತು ಕೊರೆಯುವ ಚಳಿಯಂತಹ ನೈಸರ್ಗಿಕ ವಿಕೋಪಗಳು ಹೆಚ್ಚಾಗುತ್ತಿವೆ. ಬೇಸಿಗೆಯೇತರ ಅವಧಿಯಲ್ಲಿ ಸುಮ್ಮನಿದ್ದು ಬೇಸಿಗೆಯಲ್ಲಿ ಹಿಡಿಶಾಪ ಹಾಕಲಾಗುತ್ತಿದೆ. ನಿಸರ್ಗದಿಂದಾಗುವ ಅನಾಹುತಗಳನ್ನು ನಿಸರ್ಗದಲ್ಲಿ ಗಿಡ–ಮರಗಳನ್ನು ನಾಟಿ ಮಾಡಿ ಅವುಗಳ ಪಾಲನೆ–ಪೋಷಣೆ ಮಾಡಿ ನಿಯಂತ್ರಿಸಬಹುದು ಹೊರತು ಕೃತಕ ಅಥವಾ ಬಾಹ್ಯಶಕ್ತಿಯಿಂದಲ್ಲ ಎಂಬುದನ್ನು ಪ್ರತಿಯೊಬ್ಬರು ಮನಗಾಣಬೇಕು.

ಭಾರತದಲ್ಲಿ ಕ್ಷುಲ್ಲಕ ಕಾರಣಗಳಿಗೆ ಗಿಡ–ಮರಗಳನ್ನು ನಾಶಗೊಳಿಸುವುದು ಬಹಳ ಸಲೀಸಾಗಿದೆ. ಆದರೆ ಗಿಡ–ಮರಗಳನ್ನು ಮರು ನಾಟಿ ಮಾಡುವುದು ಮತ್ತು ನೆಟ್ಟ ಗಿಡ–ಮರಗಳನ್ನು ನಿರ್ವಹಣೆ ಮಾಡುವುದು ಅಸಾಧ್ಯವಾಗಿದೆ. ಗಿಡ–ಮರಗಳಿಂದಲೆ ಮಳೆ ಬರುವುದು, ಗಾಳಿ ತಡೆಯುವುದು ಮತ್ತು ಬಿಸಿಗಾಳಿ ನಿಯಂತ್ರಿಸುವುದು ಸಾಧ್ಯವಿದೆ. ಗಿಡ–ಮರಗಳನ್ನು ಮನಸೋಯಿಚ್ಛೆ ನಾಶಗೊಳಿಸಿದರೆ ಬಿಸಿಗಾಳಿಯಂತಹ ಪ್ರಕೃತಿ ವಿಕೋಪಗಳು ನಿರ್ಮಾಣವಾಗುತ್ತವೆ. ನಿಸರ್ಗದಿಂದ ಒಳ್ಳೆಯದನ್ನು ಬಯಸುವ ನಾವು ನಿಸರ್ಗಕ್ಕಾಗಿ ನಮ್ಮ ಕೊಡುಗೆ ಶೂನ್ಯವಾಗಿದೆ. ಪರಿಸರ ಸಂರಕ್ಷಣೆಯ ವಿಷಯದಲ್ಲಿ ಸರಕಾರದ ಪಾತ್ರ ಬಹಳ ಮಹತ್ವವಿದೆ, ಆದರೆ ಸರಕಾರದಿಂದಲೆ ಎಲ್ಲವೂ ಸಾಧ್ಯವೆಂದು ನಾಗರಿಕರು ಕೈಚೆಲ್ಲಿ ಕುಳಿತುಕೊಳ್ಳಬಾರದು. ಪ್ರತಿಯೊಬ್ಬರು ಉತ್ತಮ ಆರೋಗ್ಯಕ್ಕಾಗಿ ಪರಿಸರಪ್ರಜ್ಞೆಯನ್ನು ಅಳವಡಿಸಿಕೊಂಡಲ್ಲಿ ಗುಣಮಟ್ಟದ ಪರಿಸರದೊಂದಿಗೆ ಶುದ್ಧ ಹವಾಮಾನವನ್ನು ಅನುಭವಿಸಬಹುದಾಗಿದೆ. ನಾಗರಿಕರೆಲ್ಲರು ಸರಕಾರದ ಕಠಿಣ ಕಾನೂನುಗಳಿಗೆ ಹೆದರಿ ಪರಿಸರ ಸಂರಕ್ಷಿಸುವುದು ಮತ್ತು ಗಿಡ–ಮರಗಳನ್ನು ನಾಶಗೊಳಿಸದಿರುವುದು ಆಗಬಾರದು, ಬದಲಾಗಿ ಸ್ವಯಂ ಜಾಗೃತಿಯಿಂದ ಹಚ್ಚಹಸಿರಿನ ಸ್ವಚ್ಛ ಪರಿಸರ ನಿರ್ಮಾಣವಾಗಬೇಕು.

ಮುಂದುವರೆದ ದೇಶಗಳಾದ ಅಮೆರಿಕ, ರಷ್ಯಾ, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ಸ್ವಿಜರ್‌ಲೆಂಡ್, ಚೀನಾ ಮತ್ತು ಜಪಾನ್‌ಗಳಲ್ಲಿ ಗಿಡ–ಮರಗಳನ್ನು ಕಡಿಯುವುದಿಲ್ಲ, ಕಡಿಯುವ ಸಂದರ್ಭವಿದ್ದಲ್ಲಿ ವೈಜ್ಞಾನಿಕವಾಗಿ ಯಥಾಸ್ಥಿತಿಯಲ್ಲಿ ಬೇರುಸಮೇತ ಕಿತ್ತುಕೊಂಡು ಮತ್ತೊಂದು ಸ್ಥಳದಲ್ಲಿ ನೆಡುತ್ತಾರೆ. ಚೀನಾ, ಕ್ಯಾಲಿಫೋರ್ನಿಯಾದಂತಹ ದೇಶಗಳಲ್ಲಿ ಬೇಕೆಂದಾಗ ಮಳೆ ಬರುವಷ್ಟು ಗಡುಸಾದ ನಿಸರ್ಗವಿದೆ. ಹುಟ್ಟು, ಸಾವು ಹಾಗೂ ಇನ್ನಿತರ ಕಾರ್ಯಕ್ರಮಗಳ ಸವಿನೆನಪಿನಲ್ಲಿ ಗಿಡ–ಮರಗಳನ್ನು ನೆಟ್ಟು ಪೋಷಣೆ ಮಾಡುತ್ತಾರೆ. ನೆರೆಯ ಭೂತಾನ್, ಶ್ರೀಲಂಕಾ ಮತ್ತು ನೇಪಾಳಗಳಲ್ಲಿ ಗಿಡ–ಮರಗಳನ್ನು ಕಡಿದರೆ ಮಾನವಹತ್ಯೆಗೆ ಸಮನಾದ ಶಿಕ್ಷೆಗಳನ್ನು ವಿಧಿಸುತ್ತಾರೆ. ಭಾರತದಲ್ಲಿರುವ ಸಧ್ಯದ ಪರಿಸ್ಥಿತಿಗೆ ಮಾಡಿದ್ದುಣ್ಣೋ ಮಾರಾಯಾ... ಎನ್ನುವುದು ಸರಿಯಲ್ಲವೆ? ಅನುಭವಿಸಬೇಕಷ್ಟೆ.

ಕಿರುಸುದ್ದಿ

500ಕ್ಕೂ ಅಧಿಕ ಸಸಿಗಳ ವಿತರಣೆ



◆ **ಗಜೇಂದ್ರಗಡ:** ವಿಶ್ವ ಪರಿಸರ ದಿನದ ಅಂಗವಾಗಿ ಚನ್ನು ಪಾಟೀಲ್ ಫೌಂಡೇಶನ್ ವತಿಯಿಂದ ತಾಲೂಕಿನ ವಿವಿಧ ಶಾಲೆಗಳಿಗೆ ಸುಮಾರು 500ಕ್ಕೂ ಹೆಚ್ಚು ಸಸಿಗಳನ್ನು ವಿತರಣೆ ಮಾಡಲಾಯಿತು.

ಚನ್ನು ಪಾಟೀಲ್ ಫೌಂಡೇಶನ್‌ನ ಉಮೇಶ್ ಚನ್ನು ಪಾಟೀಲ್ ಮಾತನಾಡಿ, ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣು ಎನ್ನುವಂತೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ವಿಶ್ವ ಪರಿಸರ ದಿನದ ಅರಿವು ಹಾಗೂ ಜಾಗೃತಿ ಮೂಡಿಸುವ ಸಲುವಾಗಿ ತಾಲೂಕಿನ ಕುಂಟೋಜಿ, ಗೌಡಗೇರಿ, ವಡಗೋಳ, ಮ್ಯಾಕಲಜರಿ, ಗೋಗೇರಿ, ಮಾಟರಂಗಿ, ರಾಮಾಪುರ, ಉಣಚಗೇರಿ, ಕೊಡಗಾನೂರು, ಚಿಲಝರಿ, ನಾಗರಾಸಾಕೊಪ್ಪ, ಬೆನಸಮಟ್ಟಿ, ಕೊಡಗಾನೂರು ಸೇರಿದಂತೆ ಅನೇಕ ಪ್ರಾಥಮಿಕ ಶಾಲೆಗಳಿಗೆ 10-15 ಸಸಿಗಳಂತೆ ಒಟ್ಟು 500ಕ್ಕೂ ಅಧಿಕ ಸಸಿಗಳನ್ನು ವಿತರಣೆ ಮಾಡಲಾಗಿದೆ. ಶಾಲೆಗಳಲ್ಲಿ ಅವುಗಳ ಲಾಲನೆ ಪೋಷಣೆ ಮಾಡಬೇಕು ಎಂದು ವಿನಂತಿ ಮಾಡಿಕೊಂಡರು. ರವಿ ಕೋನಣ್ಣವರ, ಹನಮಂತ ದಾಸರ, ಶಂಭು ಮಾದರ ಉಪಸ್ಥಿರಿದ್ದರು.

ಅರ್ಜಿ ಆಹ್ವಾನ

◆ **ಗಜೇಂದ್ರಗಡ:** ಪುರಸಭೆ ವ್ಯಾಪ್ತಿಯಲ್ಲಿನ ಸಮಸ್ತ ನಾಗರಿಕರಿಗೆ ಹಾಗೂ ಕಡುಬಡವರಿಗೆ ಪ್ರಧಾನಮಂತ್ರಿ ಆವಾಸ್ ಯೋಜನೆ 2.0 ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಹಾಕಲು ಜೂ. 30ರ ವರೆಗೆ ಮುಂದೂಡಲಾಗಿದ್ದು, ಅರ್ಹ ಫಲಾನುಭವಿಗಳು ಇದರ ಸದುಪಯೋಗ ಪಡೆದು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಡಿತರ ಆಹಾರ ವಿತರಣೆ

◆ **ಗದಗ:** ಜಿಲ್ಲೆಯಲ್ಲಿ ಪಡಿತರ ಆಹಾರ ಧಾನ್ಯವನ್ನು ರಾಜ್ಯ ವ್ಯಾಪ್ತಿಯ ಅನ್ನಭಾಗ್ಯ ವರ್ಗದಡಿ ಮೇ 2026 ಹಾಗೂ ಜೂನ್ 2026 ಎರಡೂ ಮಾಹೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿರುವ ಒಟ್ಟು 365 ನ್ಯಾಯಬೆಲೆ ಅಂಗಡಿಗಳ ಮೂಲಕ ಈ ಕೆಳಗೆ ವಿವರಿಸಿದ ಪ್ರಮಾಣದಲ್ಲಿ ಪಡಿತರವನ್ನು ವಿತರಿಸಲಾಗುತ್ತದೆ.

ಅಂತ್ಯೋದಯ ಪಡಿತರ ಚೀಟಿ (ಪ್ರತಿ ಫಲಾನುಭವಿಗೆ ಏಕ-ಸದಸ್ಯ ದ್ವಿ-ಸದಸ್ಯ ತ್ರಿ-ಸದಸ್ಯ ಎಎವೈ ಪಡಿತರ ಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಿಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಎಎವೈ ಪಡಿತರ ಚೀಟಿ ಪ್ರತಿ ಫಲಾನುಭವಿಗೆ ಕೇಂದ್ರ NFSA ಹಂಚಿಕೆಯ 35 ಕೆ.ಜಿ.ಅಕ್ಕಿ ಹೊರತುಪಡಿಸಿ) 5.ಕೆ.ಜಿ + 5 ಕೆ.ಜಿ= 10 ಕೆ.ಜಿ ಅಕ್ಕಿಯನ್ನು, ಆದ್ಯತಾ (ಬಿಪಿಎಲ್) ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ) ರಾಜ್ಯ ಮತ್ತು ಕೇಂದ್ರ ವರ್ಗದಡಿಯ ಪಡಿತರ ಕಾರ್ಡುಗಳಿಗೆ) 5.ಕೆ.ಜಿ + 5 ಕೆ.ಜಿ= 10 ಕೆ.ಜಿ ಅಕ್ಕಿಯನ್ನು ಫಲಾನುಭವಿಗಳಿಗೆ ವಿತರಿಸಲಾಗುವುದು. ಜೂನ್ 2026ನೇ ಮಾಹೆಯಲ್ಲಿ ರಾಜ್ಯ ವ್ಯಾಪ್ತಿ ಅನ್ನಭಾಗ್ಯ ಯೋಜನೆಯಡಿ ಮೇ ಮತ್ತು ಜೂನ್ 2026 ಎರಡೂ ಮಾಹೆಗಳ ಪಡಿತರ ಆಹಾರ ಧಾನ್ಯವನ್ನು ವಿತರಿಸಲಾಗುತ್ತಿದ್ದು, ಎಲ್ಲ ಅರ್ಹ ಫಲಾನುಭವಿಗಳು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಲ್ಲಿ ಬೆರಳಚ್ಚು ನೀಡಿ ಉಚಿತ ಪಡಿತರವನ್ನು ಪಡೆಯಬೇಕು ಎಂದು ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	4112-6219
ಉದ್ದಿನಕಾಳು	4612-6044
ಅಲಸಂದೆ	2939-2939
ಹೆಸರುಕಾಳು	3612-7011
ಶೇಂಗಾ	5269-7559
ಕಡಲೆಕಾಳು	9000-9000
ಹುರಳಿಕಾಳು	4058-4408
ಬೆಲ್ಲ	3900-3900
ಜೋಳ	1909-4737
ಮೆಕ್ಕೆಜೋಳ	1802-2029
ಸಾಸಿವೆ	4529-4529
ನವಣೆ	4800-4800
ಕುಸುಬೆ	4719-5330
ಸೂರ್ಯಕಾಂತಿ	7082-7082
ತೊಗರಿ	3212-4477
ಗೋಧಿ	1909-5401



ರೋಣ: ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಎಂಎಲ್‌ಸಿ ಡಾ. ಯತೀಂದ್ರ ಸಿದ್ದರಾಮಯ್ಯನವರಿಗೆ ತಾಪಂ ಮಾಜಿ ಸದಸ್ಯ ಹಾಗೂ ಗಜೇಂದ್ರಗಡ ತಾಲೂಕು ಕುರುಬರ ಸಂಘದ ಅಧ್ಯಕ್ಷ ಅಂದಪ್ಪ ಬಿಚ್ಚೂರ, ನರೇಗಲ್ಲ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶರಣಪ್ಪ ಬೆಟಗೇರಿ,ಮುಖಂಡ ಫಕೀರಪ್ಪ ಕುಕನೂರ ಅವರು ಕಂಬಳಿ ಹೊದಿಸಿ ಸನ್ಮಾನಿಸಿದರು.

ಎಲ್‌ಕೆಜಿ, ಯುಕೆಜಿ ಪ್ರಾರಂಭೋತ್ಸವ

◆ **ನರಗುಂದ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಇವರ ವತಿಯಿಂದ ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳನ್ನಾಗಿ ಆಯ್ಕೆ ಮಾಡಿದ ತಾಲೂಕಿನ ಜಗಾಪೂರ-110ನೇ ಅಂಗನವಾಡಿ ಕೇಂದ್ರದಲ್ಲಿ ಎಲ್.ಕೆ.ಜಿ , ಯು.ಕೆ.ಜಿ ಪ್ರಾರಂಭೋತ್ಸವ ಕಾರ್ಯಕ್ರಮ ಜರುಗಿತು. ಮೇಲ್ವಿಚಾರಕಿ ಶಕುಂತಲಾ ಗಣಿ ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಬಡಮಕ್ಕಳಿಗೆ ಗುಣಮಟ್ಟದ ಆರಂಭಿಕ ಶಿಕ್ಷಣ ನೀಡುವ ಉದ್ದೇಶದಿಂದ ಎಲ್.ಕೆ.ಜಿ, ಯು.ಕೆ.ಜಿ ಆರಂಭವು ಪೋಷಕರಿಗೆ ಮತ್ತು ಮಕ್ಕಳಿಗೆ ಬಹಳ ಉಪಯುಕ್ತವಾಗಿದೆ ಎಂದರು.ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೆಂಕಪ್ಪ ಗಿರಿತಿಮ್ಮಣ್ಣವರ ಉದ್ಘಾಟಿಸಿ ಮಾತನಾಡಿ, ಅಂಗನವಾಡಿಗಳನ್ನು ಗೌರ್ಮೆಂಟ್ ಮಾಂಟೆಸ್ಸರಿ ಶಾಲೆಗಳನ್ನಾಗಿ ಮಾಡಲಾಗುತ್ತಿದ್ದು ಇದರಿಂದ ನವೀನ ರೀತಿಯ ಶಾಲಾ ಪೂರ್ವ ಶಿಕ್ಷಣ ಟಿ.ವಿ ಮೂಲಕ ಮಕ್ಕಳಿಗೆ ಮನರಂಜನೆ, ಸಮವಸ್ತ್ರ ಭರಿತ ಶಿಕ್ಷಣ, ಶಿಸ್ತು ಸಮಯ ಪಾಲನೆಗೆ ಆದ್ಯತೆ ನೀಡುವುದು, ಪೋಷಕರು ಖಾಸಗಿ ಶಾಲೆಗಳತ್ತ ವಾಲುವದನ್ನು ತಡೆಯುವದು ಇದರ ಮುಖ್ಯ ಉದ್ದೇಶವಾಗಿದೆ ಎಂದರು. ಅನಿಲ ಧರೆಯಣ್ಣವರ, ಮಲ್ಲಪ್ಪ ಹೂಗಾರ, ದ್ಯಾಮಪ್ಪ ದೇವಕ್ಕಿ, ಶಾಂತವ್ವ ಶೆಲವಡಿ, ಬಸುರಾಜ ಹೂಗಾರ, ಮಲ್ಲಪ್ಪ ಹೂಲಿ, ಭಗವಂತಪ್ಪ ಜಲಗೇರಿ, ಈರಪ್ಪ ಹೂಗಾರ, ಕಬೀರಸಾಬ ಅಗಸರ, ಶೇಕಪ್ಪ ಕೆಲವಡಿ, ಬಸುರೆಡ್ಡಿ ಕಾಮರೆಡ್ಡಿ, ಗುರಪ್ಪ ಕೋನಣ್ಣವರ, ಬಸಪ್ಪ ಹೂಗಾರ, ಉಮೇಶ ಬಾರಕೇರ, ನಾಗಪ್ಪ ಬಾರಕೇರ, ಶಿವಪ್ಪ ಹೂಗಾರ, ಶೈಲಾ ಹುಬ್ಬಳ್ಳಿ, ಶಿವರೆಡ್ಡಿ ಹಂಚಿನಾಳ ಅಂಗನವಾಡಿ ಕೇಂದ್ರಗಳಿಗೆ ವಿವಿಧ ಕೊಡುಗೆ ನೀಡಿ ಮಕ್ಕಳ ಉಜ್ವಲ ಭವಿಷ್ಯಕ್ಕೆ ಶುಭಹಾರೈಸಿದರು. ಶಾರದಾ ಹಳೇಮನಿ ಮತ್ತು ತ್ರಿವೇಣಿ ಬನಪ್ಪನವರ ನಿರೂಪಿಸಿ, ವಂದಿಸಿದರು.



ನರಗುಂದ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಇವತಿಯಿಂದ ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳನ್ನಾಗಿ ಆಯ್ಕೆ ಮಾಡಿದ ತಾಲೂಕಿನ ಜಗಾಪೂರ-110ನೇ ಅಂಗನವಾಡಿ ಕೇಂದ್ರದಲ್ಲಿ ಎಲ್‌ಕೆಜಿ , ಯುಕೆಜಿ ಪ್ರಾರಂಭೋತ್ಸವ ಜರುಗಿತು. ಈರಪ್ಪ ಹೂಗಾರ, ಸಾಹಿತಿಗಳಾದ ಎಚ್.ಬಿ. ಕರಿಬರಮರೆಡ್ಡಿ, ಮಲ್ಲಪ್ಪ ಹೂಲಿ, ಶಿಕ್ಷಕರಾದ ಟಿ.ಆರ್. ಸೀನಪ್ಪನವರ, ಎಚ್.ಬಿ. ಗಣಾಚಾರಿ, ಪಂಚಾಯತ್ ಕಾರ್ಯದರ್ಶಿ ಕೆ.ಎಂ. ಹದಗಲ್, ಪೋಷಣ್ ಅಭಿಯಾನ ತಾಲೂಕು ಸಂಯೋಜಕ ಮಂಜುನಾಥ ಗುಗ್ಗರಿ, ಬಾಲ ವಿಕಾಸ ಸಮಿತಿ ಅಧ್ಯಕ್ಷೆ ಅಂಜಲಿ ಹೂಲಿ ಇದ್ದರು.

ಶಿಫಾರಸು ಪ್ರಮಾಣ ಅನುಸರಿಸಿ | ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಸಲಹೆ

ಮಣ್ಣಿನ ಉತ್ತಮ ಆರೋಗ್ಯಕ್ಕೆ ರಸಗೊಬ್ಬರ ವೈಜ್ಞಾನಿಕವಾಗಿ ಬಳಸಿ

◆ **ಗದಗ:** ಜಿಲ್ಲೆಯ ರೈತರು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದರ ಜೊತೆಗೆ ಮಣ್ಣಿನ ಆರೋಗ್ಯವನ್ನು ಕಾಪಾಡುವ ಉದ್ದೇಶದಿಂದ ರಸಗೊಬ್ಬರಗಳನ್ನು ವೈಜ್ಞಾನಿಕ ರೀತಿಯಲ್ಲಿ ಹಾಗೂ ಶಿಫಾರಸು ಮಾಡಿದ ಪ್ರಮಾಣದಲ್ಲಿ ಬಳಸುವಂತೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದ್ದಾರೆ.

ನಗರದ ಜಿಲ್ಲಾಡಳಿ ಭವನದ ಕೋರ್ಟ್ ಹಾಲನಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿ, ಪ್ರಸ್ತುತ ಜಿಲ್ಲೆಯಲ್ಲಿ ಯೂರಿಯಾ ಬಳಕೆ ಶಿಫಾರಸು ಪ್ರಮಾಣಕ್ಕಿಂತ ಹೆಚ್ಚಾಗುತ್ತಿರುವುದು ಗಮನಕ್ಕೆ ಬಂದಿದೆ. ಇದರಿಂದ ಮಣ್ಣಿನ ಫಲವತ್ತತೆ ಕುಸಿತ, ಪೋಷಕಾಂಶಗಳ ಅಸಮತೋಲನ, ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳ ಹಾಗೂ ಪರಿಸರ ಮಾಲಿನ್ಯದಂತಹ ಸಮಸ್ಯೆಗಳು ಉಂಟಾಗುವ ಸಾಧ್ಯತೆಯಿದೆ. ಆದ್ದರಿಂದ ರೈತರು ಮಣ್ಣಿನ ಪರೀಕ್ಷೆ ಆಧಾರಿತ ಪೋಷಕಾಂಶ ನಿರ್ವಹಣೆಯನ್ನು ಅನುಸರಿಸಬೇಕು ಎಂದರು. ಮಣ್ಣಿನ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಗೋಮಯ ಗೊಬ್ಬರ, ಕಾಂಪೋಸ್ಟ್, ವರ್ಮಿ ಕಾಂಪೋಸ್ಟ್, ಹಸಿರು ಗೊಬ್ಬರ, ಜೈವಿಕ ಗೊಬ್ಬರ ಹಾಗೂ ಬೆಳೆ ಅವಶೇಷಗಳಿಂದ ತಯಾರಿಸಲಾದ ಸಾವಯವ ಗೊಬ್ಬರಗಳ ಬಳಕೆಯನ್ನು ಹೆಚ್ಚಿಸಬೇಕು. ಸಾವಯವ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಸಾವಯವ ಇಂಗಾಲದ ಪ್ರಮಾಣ ಹೆಚ್ಚಾಗಿ ಮಣ್ಣಿನ ರಚನೆ, ನೀರು ಹಿಡಿದಿಡುವ ಸಾಮರ್ಥ್ಯ ಹಾಗೂ ಸೂಕ್ಷ್ಮಜೀವಿಗಳ ಚಟುವಟಿಕೆ ಉತ್ತಮಗೊಳ್ಳುತ್ತದೆ ಎಂದರು.



> ಬೆಳೆವಾರು ಶಿಫಾರಸು ಮಾಡಿದ ಪ್ರಮಾಣದಲ್ಲಿ ಮಾತ್ರ ಗೊಬ್ಬರ ಬಳಸಬೇಕು. ರಸಗೊಬ್ಬರಗಳ ಜೊತೆಗೆ ಸಾವಯವ ಗೊಬ್ಬರ ಮತ್ತು ಜೈವಿಕ ಗೊಬ್ಬರಗಳ ಸಮಗ್ರ ಬಳಕೆಗೆ ಆದ್ಯತೆ ನೀಡಬೇಕು. ಕೃಷಿ ಇಲಾಖೆಯ ಅಧಿಕಾರಿಗಳು. ರೈತ ಸಂಪರ್ಕ ಕೇಂದ್ರಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ತಾಂತ್ರಿಕ ಸಲಹೆಗಳನ್ನು ಪಡೆದು ಗೊಬ್ಬರ ಬಳಕೆ ಮಾಡಬೇಕು.
>
> ■ **ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ**

ಮಣ್ಣಿನ ಆರೋಗ್ಯವೇ ಕೃಷಿಯ ಆಧಾರ

ಕಾಳಸಂತೆ, ಅಕ್ರಮ ಸಂಗ್ರಹಣೆ ಅಥವಾ ಅಧಿಕ ದರದಲ್ಲಿ ಗೊಬ್ಬರ ಮಾರಾಟದಂತಹ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಕೃಷಿ ಇಲಾಖೆ ಅಥವಾ ಜಿಲ್ಲಾ ಆಡಳಿತದ ಗಮನಕ್ಕೆ ತರಬೇಕು. ರೈತರಿಗೆ ಅಗತ್ಯ ಪ್ರಮಾಣದ ಗೊಬ್ಬರ ಲಭ್ಯವಾಗುವಂತೆ ಜಿಲ್ಲಾ ಆಡಳಿತ ಕ್ರಮ ಕೈಗೊಂಡಿದೆ. ಜಿಲ್ಲೆಯ ಎಲ್ಲಾ ರೈತರು ಸಮತೋಲಿತ ರಸಗೊಬ್ಬರಗಳ ಬಳಕೆ, ಸಾವಯವ ಕೃಷಿ ಪದ್ಧತಿಗಳ ಅಳವಡಿಕೆ ಹಾಗೂ ನ್ಯಾನೋ ಯೂರಿಯಾ ಬಳಕೆಯ ಮೂಲಕ ಮಣ್ಣಿನ ಆರೋಗ್ಯವನ್ನು ಕಾಪಾಡಿ ಸುಸ್ಥಿರ ಕೃಷಿಯತ್ತ ಹೆಜ್ಜೆ ಇಡಬೇಕು. ಮಣ್ಣಿನ ಆರೋಗ್ಯವೇ ಕೃಷಿಯ ಆಧಾರ ,ಸಮತೋಲಿತ ಗೊಬ್ಬರ ಬಳಕೆ ನಮ್ಮ ಜವಾಬ್ದಾರಿ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅವರು ಜಿಲ್ಲೆಯ ರೈತರಿಗೆ ಸಲಹೆ ನೀಡಿದ್ದಾರೆ.

ಅವಲಂಬನೆ ಕಡಿಮೆ

ರೈತರು ಸರಿಯಾದ ಗೊಬ್ಬರ, ಸರಿಯಾದ ಪ್ರಮಾಣ, ಸರಿಯಾದ ಸಮಯ ಹಾಗೂ ಸರಿಯಾದ ವಿಧಾನ ಎಂಬ ತತ್ವದ ಅನುಸರಣೆಯಿಂದ ಗೊಬ್ಬರಗಳ ಬಳಕೆ ದಕ್ಷತೆ ಹೆಚ್ಚುವುದರ ಜೊತೆಗೆ ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ. ಜಿಲ್ಲೆಯಲ್ಲಿ ನ್ಯಾನೋ ಯೂರಿಯಾ ಬಳಕೆಯನ್ನು ಉತ್ತೇಜಿಸಲಾಗುತ್ತಿದೆ. ನ್ಯಾನೋ ಯೂರಿಯಾ ಬಳಕೆಯಿಂದ ಸಸ್ಯಗಳಿಗೆ ಸಾರಜನಕ ಪೋಷಕಾಂಶ ಪರಿಣಾಮಕಾರಿಯಾಗಿ ದೊರೆಯುತ್ತದೆ. ರಾಸಾಯನಿಕ ಯೂರಿಯಾ ಮೇಲಿನ ಅವಲಂಬನೆ ಕಡಿಮೆಯಾಗುವುದರ ಜೊತೆಗೆ ಗೊಬ್ಬರ ಬಳಕೆಯ ದಕ್ಷತೆ ಹೆಚ್ಚುತ್ತದೆ. ಕೃಷಿ ಇಲಾಖೆಯ ಶಿಫಾರಸಿನಂತೆ ನ್ಯಾನೋ ಯೂರಿಯಾವನ್ನು ಬಳಸುವಂತೆ ರೈತರಿಗೆ ಸಲಹೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದ್ದಾರೆ.

ಜೂ.9ರಿಂದ ಅಹೋರಾತ್ರಿ ಧರಣಿ

◆ **ಲಕ್ಷ್ಮೇಶ್ವರ:** ಪುರಸಭೆಗೆ ಒಳಪಡುವ ವಾಣಿಜ್ಯ ಹೊಸ ಬಸ್ ನಿಲ್ದಾಣ ಎದುರಿಗೆ ಇರುವ ವಾಣಿಜ್ಯ ಮಳಿಗೆಗಳ ಟೆಂಡರ್ ಅವಧಿ ಮುಗಿದಿದ್ದು ಹೊಸದಾಗಿ ಟೆಂಡರ್ ಕರೆಯಬೇಕು. ಇಲ್ಲವೆಂದರೆ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಜಯ ಕರ್ನಾಟಕ ಸಂಘಟನೆ ಶಿರಹಟ್ಟಿ ಲಕ್ಷ್ಮೇಶ್ವರ ತಾಲೂಕು ಉಸ್ತುವಾರಿ ರಮೇಶ ಹಂಗನಕಟ್ಟಿ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಬಸವರಾಜ ಹಿರೇಮನಿ ಒತ್ತಾಯಿಸಿದರು.

ಅವರು ಪುರಸಭೆಯಲ್ಲಿ ವ್ಯವಸ್ಥಾಪಕಿ ಮಂಜುಳಾ ಹೂಗಾರ್ ಅವರಿಗೆ ಮನವಿ ಸಲ್ಲಿಸಿ ಮಾತನಾಡಿ, ಪುರಸಭೆ ಹದ್ದಿಗೆ ಒಳಪಡುವ ಬಸ್‌ಸ್ಟ್ಯಾಂಡ್ ಎದುರಿಗೆ ಇರುವ ವಾಣಿಜ್ಯ ಮಳಿಗೆಗಳ ಅವಧಿ ಮಾ.30, 2023 ಕ್ಕೆ ಒಟ್ಟು 19 ಮಳಿಗೆಗಳ ಅವಧಿ ಮುಗಿದಿದ್ದು, ಜಯ ಕರ್ನಾಟಕ ಸಂಘಟನೆ ಹಾಗೂ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಅಭಿಮಾನಿ ಬಳಗದ ಮನವಿ ಸಲ್ಲಿಸಿದ್ದೆವು. ಅಂದಿನ ಪುರಸಭೆ ಮುಖ್ಯಾಧಿಕಾರಿ 15 ದಿನಗಳ ಕಾಲವಕಾಶ ನೀಡಲು ತಿಳಿಸಿದ್ದರು. ಆದರೆ ಮೂರು ತಿಂಗಳಾದರೂ ಯಾವುದೇ ಕ್ರಮ ಕೈಗೊಂಡಿಲ್ಲ, ಮಳಿಗೆಯಲ್ಲಿ ಮೊದಲಿದ್ದವರೇ ಮುಂದುವರಿದ್ದಾರೆ. ನೆಪ ಮಾತ್ರಕ್ಕೆ ಅರ್ಜಿಯನ್ನು ಕೊಟ್ಟಿರುತ್ತೇವೆ ಹೇಳುತ್ತಿದ್ದೀರಿ. ಈ ವಿಳಂಬ ಕಾರಣದಿಂದ ಎರಡು ಸಂಘಟನೆಗಳಿಂದ ಜೂನ್ 9 ರಿಂದ ಪುರಸಭೆಯ ಮಳಿಗೆಗಳ ಎದುರು ಅಹೋರಾತ್ರಿ ಧರಣಿ ಸತ್ಯಾಗ್ರಹ ಕೈಗೊಳ್ಳುತ್ತೇವೆ . 2023 ರಿಂದ 2026 ರವರೆಗೆ ಮುಖ್ಯಾಧಿಕಾರಿಗಳು ಆಗಿ ಅಧಿಕಾರ ವಹಿಸಿಕೊಂಡು ಹೋಗಿದ್ದಾರೆ. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು ಹಾಗೂ ತಕ್ಷಣ ಅವರನ್ನು ಸಸ್ಪೆಂಡ್ ಮಾಡಿದ ಆರ್ಡರನ್ನು ತೆಗೆದುಕೊಂಡು ನಾವು ಧರಣಿ ಕುಳಿತ ಸ್ಥಳಕ್ಕೆ ಆಗಮಿಸಿ ಈ ವಾಣಿಜ್ಯ ಮಳಿಗೆಗಳನ್ನು ಖಾಲಿ ಮಾಡಿಸಿ ತಮ್ಮ ಸುಪರ್ದಿಗೆ ತೆಗೆದುಕೊಳ್ಳುವವರೆಗೂ ಅಹೋರಾತ್ರಿ ಸತ್ಯಾಗ್ರಹವನ್ನು ಕೈಗೊಳ್ಳಲಾಗುವುದೆಂದು ಎಚ್ಚರಿಕೆ ಕೊಟ್ಟರು. ತಹಶೀಲ್ದಾರ್ ಧನಂಜಯ ಎಂ. ಹಾಗೂ ಪಿಎಸ್‌ಐ ನಾಗರಾಜ ಗಡದ ಅವರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಭರಮಣ್ಣ ಶೇರಸೂರಿ, ಸುರೇಶ ಹಟ್ಟಿ, ಬಸಣ್ಣ ಮೆಲ್ಮುರಿ, ಮಂಜುನಾಥ ಮುಳಗುಂದ, ಮಹಾಂತೇಶ ಗುದ್ನಾಳ, ಮಹೇಶ್ ಸೂರಣಗಿ, ಸಂಜೀವ ಶೇರಸೂರಿ ಮೈಲಾರಪ್ಪ ಹೆಗ್ಗಣವರ, ಮೈನು, ಎರಡೂ ಸಂಘಟನೆಗಳ ಕಾರ್ಯಕರ್ತರು ಇದ್ದರು.



ಪಿಡಿಒ ಎಸ್.ಆರ್.ಸಂಕನೂರಗೆ ಬೀಳ್ಕೊಡುಗೆ

◆ **ರೋಣ:** ಹತ್ತು ವರ್ಷಗಳು ಗ್ರಾಪಂನಲ್ಲಿ ಪಿಡಿಒ ಆಗಿ ಸೇವೆ ಸಲ್ಲಿಸುವುದು ಸುಲಭದ ಮಾತಲ್ಲ. ಆದರೂ ಪಿಡಿಒ ಎಸ್.ಆರ್.ಸಂಕನೂರ ಅವರು ಗ್ರಾಪಂ ಸದಸ್ಯರುಗಳ ಮತ್ತು ಗ್ರಾಮದ ಹಿರಿಯರ ಪ್ರೀತಿ ವಿಶ್ವಾಸವನ್ನು ಗಳಿಸಿಕೊಂಡಿದ್ದು ಅವರಿಗೆ ಹತ್ತು ವರ್ಷಗಳ ತಮ್ಮ ಸುದಿರ್ಘ ಸೇವೆಯನ್ನು ಸಲ್ಲಿಸಲು ಬಹು ಮುಖ್ಯ ಕಾರಣವಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಬಸವರಾಜ ಮಾಳೇದ ಹೇಳಿದರು.

ಅವರು ಮಾರನಬಸರಿ ಗ್ರಾಮದ ಗ್ರಾಪಂನಲ್ಲಿ ಹತ್ತು ವರ್ಷಗಳ ಸುದಿರ್ಘ ಸೇವೆಯನ್ನು ಸಲ್ಲಿಸಿ ನಿವೃತ್ತರಾದ ಪಿಡಿಒ ಎಸ್.ಆರ್.ಸಂಕನೂರ ಅವರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮದಲ್ಲಿ ಹತ್ತಾರು ಸಮಸ್ಯೆಗಳಿರುತ್ತವೆ. ಅಂತಹ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಕೂಡಲೇ ಪರಿಹರಿಸುವ ಕಾರ್ಯವನ್ನು ಸರಕಾರಿ ನೌಕರರು ಮಾಡಬೇಕು ಎಂದರು.

ಮುಖಂಡ ಶಂಭುಗೌಡ ಪಾಟೀಲ ಮಾತನಾಡಿ, ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಲು ಗ್ರಾಪಂ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅಧಿಕಾರಿಗಳು ಸಮರ್ಪಕ ರೀತಿಯಿಂದ ಅನುಷ್ಠಾನಗೊಳಿಸಿದಾಗ ಮಾತ್ರ ಗ್ರಾಮೀಣ ಭಾಗದ ಜನರಿಗೆ ಯೋಜನೆಗಳು ತಲುಪಲು ಸಾಧ್ಯ ಎಂದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಪಿಡಿಒ ಎಸ್.ಆರ್.ಸಂಕನೂರ, ಮಾರನಬಸರಿ ಗ್ರಾಮ ಸದಾ ಅಭಿವೃದ್ಧಿಯನ್ನು ಬಯಸುವ ಗ್ರಾಮ. ಈ ಗ್ರಾಮದಲ್ಲಿ ನಾನು ಸುದಿರ್ಘ ಸೇವೆ ಸಲ್ಲಿಸಿದ್ದು ನನ್ನ ಭಾಗ್ಯವಾಗಿದೆ. ಈ ಗ್ರಾಮದ ಜನರು ಸರ್ಕಾರಿ ನೌಕರರ ಬಗ್ಗೆ ಕಾಳಜಿ ಹೊಂದಿದ್ದು, ಅವರ ಬಗ್ಗೆ ಅತ್ಯಂತ ಗೌರವ ಪ್ರೀತಿ ವಿಶ್ವಾಸವನ್ನು ಇಟ್ಟುಕೊಂಡಿದ್ದಾರೆ. ಗ್ರಾಮದ ಜನರ, ಜನಪ್ರತಿನಿಧಿಗಳ ಸಹಕಾರವನ್ನು ನಾನು ಎಂದಿಗೂ ಮರೆಯುವುದಿಲ್ಲ ಎಂದರು. ಕಾರ್ಯಕ್ರಮದಲ್ಲಿ ನೂತನವಾಗಿ ನೋಡಲ್‌ಅಧಿಕಾರಿಗಳಾಗಿ ಆಗಮಿಸಿದ ಬಸವರಾಜ ಮಾಳೇದ ಹಾಗೂ ಈ ಮೊದಲು ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದ ಎಸ್.ಎಫ್.ತಹಶೀಲ್ದಾರ ಅವರಿಗೆ ಗ್ರಾಮದ ಹಿರಿಯರು ಸನ್ಮಾನಿಸಿದರು. ಚಂದ್ರು ಮಾರನಬಸರಿ, ಶ್ರೀಶೈಲ್ ಶಾಂತಗೀರಮಠ, ಈರಪ್ಪ ಮರಡಿ, ಶರಣಪ್ಪ ಸಂಗಟಿ, ಬೂದೇಶ ವಣಗೇರಿ, ಶರಣಪ್ಪ ಮ್ಯಾಗೇರಿ, ಶಿವಕುಮಾರ ದಿಂಡೂರ, ಮೆಹಬೂಬ ಮೋತೆಖಾನ್, ಮಹ್ಮದ ಸವಡಿ, ನೂರಜಾನಬಿ ವಾರಿಕಲ್, ಹನಮವ್ವ ತಳವಾರ, ದಿಲ್‌ಶ್ಯಾದಬೇಗಂ ದೋಟಿಹಾಳ, ನೇತ್ರಾವತಿ ಹೂಗಾರ, ಪರಶುರಾಮ ಅಬ್ಬಿಗೇರಿ ಸೇರಿದಂತೆ ಗ್ರಾಪಂ ಪಿಡಿಒ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.



ವಿಶೇಷ ಮಹಿಳಾ ಗ್ರಾಮ ಸಭೆ

◆ **ಗದಗ:** ತಾಲೂಕಿನ ಲಕ್ಕುಂಡಿ ಗ್ರಾಮ ಪಂಚಾಯತ್ ಆಶ್ರಯದಲ್ಲಿ ವಿಶೇಷ ಮಹಿಳಾ ಗ್ರಾಮ ಸಭೆಯು ಜೂ.5 ರಂದು ಬೆಳಗ್ಗೆ 11ಕ್ಕೆ ಅನ್ನದಾನೀಶ್ವರ ಸಭಾ ಭವನದಲ್ಲಿ ಜರುಗಲಿದೆ. ಸಭೆಯಲ್ಲಿ ಮಹಿಳೆಯರ ಹಕ್ಕುಗಳ ಕುರಿತು ಚರ್ಚೆ ಹಾಗೂ ಅನುಸೂಚಿತ ಜಾತಿ ಮತ್ತು ಪಂಗಡಗಳ ಸಮಸ್ಯೆಗಳ ಕುರಿತು ವಿಶೇಷ ಗ್ರಾಮ ಸಭೆ ಇದಾಗಿದೆ. ಇದೇ ಸಂದರ್ಭದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಗುವುದು ಎಂದು ಪಿಡಿಒ ಡಾ.ಅಮೀರನಾಯಕ ತಿಳಿಸಿದ್ದಾರೆ.

ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

◆ **ಗದಗ:** ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ ಮಾದರಿ ಶಾಲೆ, ಶಿರಹಟ್ಟಿ ಇಲ್ಲಿ ಇಂಗ್ಲಿಷ್, ಹಿಂದಿ ಮತ್ತು ವಿಜ್ಞಾನ ವಿಷಯಗಳನ್ನು ಬೋಧಿಸಲು ಅರ್ಹ ಅತಿಥಿ ಉಪನ್ಯಾಸಕರು ಅವಶ್ಯವಿರುತ್ತಾರೆ. ಅರ್ಹ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಜೂ.9ರೊಳಗಾಗಿ ತಮ್ಮ ಶೈಕ್ಷಣಿಕ ದಾಖಲಾತಿಗಳನ್ನು ಮುಖ್ಯೋಪಾಧ್ಯಾಯರು, ಮೌಲಾನಾ ಆಜಾದ ಮಾದರಿ ಶಾಲೆ, ಶಿರಹಟ್ಟಿ ಇಲ್ಲಿ ಖುದ್ದು ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರಬರಾಜಿನಲ್ಲಿ ವ್ಯತ್ಯಯ ಸಾಧ್ಯತೆ

◆ **ಲಕ್ಷ್ಮೇಶ್ವರ:** ಹಾವೇರಿ ಜಿಲ್ಲೆಯ ಮೇವುಂಡಿ ಜಾಕ್ ವೆಲ್‌ನಿಂದ ಸೂರಣಗಿ ಮಾರ್ಗವಾಗಿ ಲಕ್ಷ್ಮೇಶ್ವರ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಪೈಪ್ ಲೈನ್‌ಗಳು ಮಧ್ಯದಲ್ಲಿ ಹಾನಿಗೊಂಡು ನೀರು ಸೋರಿಕೆಯಾಗುತ್ತಿರುವ ಕಾರಣ ನಾಲ್ಕು ಕಡೆಗಳಲ್ಲಿ ಹೊಸ 400 ಮಿ.ಮೀ. ಎಂ.ಎಸ್. ಪೈಪ್‌ಲೈನ್‌ಗಳನ್ನು ಅಳವಡಿಸುವ ಕಾಮಗಾರಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಮುಂದಿನ 4 ರಿಂದ 5 ದಿನಗಳವರೆಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಯಿದೆ ಎಂದು ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಜೂನ್ 7ರಂದು ರಜತ ಮಹೋತ್ಸವಕ್ಕೆ ಚಾಲನೆ



◆ **ಗದಗ:** 2002ರ ಮೇ 16 ರಂದು ನೋಂದಣಿ ಮಾಡಲ್ಪಟ್ಟ ಕಾಳಿದಾಸ ಶಿಕ್ಷಣ ಸಂಸ್ಥೆಯು 2027ಕ್ಕೆ 25 ವರ್ಷಗಳನ್ನು ಪೂರೈಸಲಿದೆ. ಅದರ ನಿಮಿತ್ತವಾಗಿ 2026-2027ರ ಶೈಕ್ಷಣಿಕ ವರ್ಷವನ್ನು ರಜತೋತ್ಸವ ವರ್ಷವೆಂದು ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ರಜತ ಮಹೋತ್ಸವ ಸಮಿತಿ ಉಸ್ತುವಾರಿ ಡಾ.ಜಿ.ಬಿ.ಪಾಟೀಲ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕಾಳಿದಾಸ ಶಿಕ್ಷಣ ಸಂಸ್ಥೆ ವತಿಯಿಂದ ಪ್ರಸ್ತುತ ಕನ್ನಡ/ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳು, ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರ/ ಮಹಿಳಾ ವಸತಿ ನಿಲಯಗಳನ್ನು ಮತ್ತು ಐ.ಟಿ.ಐ. ಕಾಲೇಜು ನಡೆಸಲಾಗುತ್ತಿದೆ. ಬರುವ ದಿನಮಾನಗಳಲ್ಲಿ ವೈದ್ಯಕೀಯ/ವಿಜ್ಞಾನ-ತಂತ್ರಜ್ಞಾನ, ತಾಂತ್ರಿಕ ವಿದ್ಯಾಲಯಗಳು ಮತ್ತು ಕೇಂದ್ರ ಪಠ್ಯ ಕ್ರಮದ ಶಾಲಾ-ಕಾಲೇಜುಗಳ ಸ್ಥಾಪನೆಗೆ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದರು.

ನಿವೃತ್ತ ನ್ಯಾಯಾಧೀಶ ಎಸ್.ಜಿ.ಪಲ್ಲೇದ ಮಾತನಾಡಿ, ರಜತ ಮಹೋತ್ಸವದ ಅಂಗವಾಗಿ ಜೂ.7ರಂದು ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಶ್ರೀಗಳು ಸಂಸ್ಥೆಯ ನೂತನ ಕಟ್ಟಡದ ಆವರಣದಲ್ಲಿ 25 ಸಸಿಗಳನ್ನು ನೆಟ್ಟು, ಬಯಲು ಆಂಜನೇಯ ದೇವಸ್ಥಾನದ ಆವರಣದ ವೇದಿಕೆಯಲ್ಲಿ ಭಕ್ತ ಸಾಗರವನ್ನು ಉದ್ದೇಶಿಸಿ ಆಶೀರ್ವಚನ ನೀಡಲಿದ್ದಾರೆ. ಶ್ರೀಗಳು ಸದ್ಭಾವನಾ ಪ್ರಶಸ್ತಿ ಪುರಸ್ಕೃತರಾದ ಮಾಜಿ ಶಾಸಕ ಡಿ.ಆರ್.ಪಾಟೀಲ ಮತ್ತು ರಾಜ್ಯ ವಿದ್ಯುತ್ ನಿಗಮದ ನಿರ್ದೇಶಕ ಹಾಗೂ ಅಭಿಯಂತರರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಸಿ. ಬಸವಣ್ಣರವರಿಗೆ ಮತ್ತು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಆಯ್ಕೆಯಾಗಿರುವ ಚಂದ್ರಶೇಖರ ನುಗ್ಗಲಿ ಇವರುಗಳನ್ನು ಸನ್ಮಾನಿಸುವರು. ಮುಂದಿನ ತಿಂಗಳಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಪ್ರತಿಶತ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಂತರದ ಮಾಸಗಳಲ್ಲಿ ಆದ್ಯತಾನುಸಾರ ಆಯಾ ತಿಂಗಳುಗಳ ಮಹತ್ವಕ್ಕನುಗುಣವಾಗಿ ಆರೋಗ್ಯ ಶಿಬಿರ, ರಕ್ತದಾನ, ಯುವಕ-ಯುವತಿಯರಿಗೆ ದೇಶಿ ಕ್ರೀಡೆಗಳ ಉತ್ಸವ, ಮಹಿಳೆಯರಿಗಾಗಿ ಮಹಿಳಾ ಸಬಲೀಕರಣ, ಸಾಂಸ್ಕೃತಿಕ ಸ್ಪರ್ಧಾತ್ಮಕ ಕಾರ್ಯಕ್ರಮ, ಕಾನೂನು ಅರಿವು-ನೆರವು, ಅಪರಾಧ ತಡೆಯುಂತಹ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಸಾವಯುವ ಕೃಷಿ ಕೌಶಲ್ಯಾಧಾರಿತ ತರಬೇತಿ, ಉದ್ಯೋಗ ಮೇಳ, ವೃತ್ತಿ ಮಾರ್ಗದರ್ಶನ, ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ ಶಿಬಿರಗಳನ್ನು ರೂಪಿಸಲಾಗಿದೆ. ಜಾನಪದ ಜಾತ್ರೆ ಮತ್ತು ಪ್ರತಿ ಕಾರ್ಯಕ್ರಮಗಳಲ್ಲಿ ಸ್ಥಳೀಯ ಪ್ರತಿಭೆಗಳನ್ನು ಬಳಸಿಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ರಜತ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಈ ಎಲ್ಲ ಚಟುವಟಿಕೆಗಳನ್ನು ಒಳಗೊಂಡ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಲಾಗುವುದು ಎಂದರು. ಬಿ.ಬಿ.ಭಾವಿಕಟ್ಟಿ, ಫಕೀರಪ್ಪ ಹೆಬಸೂರ, ಆರ್.ಡಿ.ಕಡ್ಲಿಕೊಪ್ಪ, ನೀಲಕಂಠ ಮರಡಿ, ವೈ.ಬಿ.ಭಾನಾಪೂರ, ಆರ್.ಎಂ. ನಿಂಬನಾಯ್ಕ, ಎಸ್.ಡಿ.ಸಿಂಗಟಾಲಕೇರಿ, ಎಸ್.ಎಸ್.ಕರಡಿ ಇದ್ದರು.

ರಾಜಕಾಲುವೆ ಹೂಳೆತ್ತಿದ ಪುರಸಭೆ: ದುರ್ವಾಸನೆಗೆ ಮುಕ್ತಿ

◆ **ಗಜೇಂದ್ರಗಡ:** ಚರಂಡಿಗಳಲ್ಲಿ ಕೆಲವು ಕಡೆ ಪಾಸ್ಟಿಕ್ ಹಾಗೂ ಘನತ್ಯಾಜ್ಯ ತುಂಬಿಕೊಂಡು ತಾಲೂಕಿನಲ್ಲಿ ಸುರಿದ ಭಾರೀ ಮಳೆಗೆ ಚರಂಡಿ ನೀರು ರಸ್ತೆ ಮೇಲೆ ಹರಿದು ಸಾರ್ವಜನಿಕರ ಓಡಾಟಕ್ಕೆ ಕಿರಿಕಿರಿ ಉಂಟುಮಾಡಿತ್ತು. ಈ ಕುರಿತು ಗುರುವಾರದ (ಜೂ.4) ಹೊಸ ದಿಗಂತ ಪತ್ರಿಕೆಯಲ್ಲಿ ವರುಣನ ಅಬ್ಬರಕ್ಕೆ ರಸ್ತೆಗಳ ಮೇಲೆ ಹರಿದ ಚರಂಡಿ ನೀರು ಎನ್ನುವ ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ದಿಗಂತ ವರದಿ ಪರಿಣಾಮ

ವರದಿ ಬಂದ 24 ಗಂಟೆಯಲ್ಲಿಯೇ ಪುರಸಭೆ ಇಲಾಖೆಯು ಬೆಳಗ್ಗೆ 6 ಗಂಟೆಯಿಂದಲೇ ಸ್ವಚ್ಛತೆ ಕಾರ್ಯ ಆರಂಭಿಸಿದ್ದು, ರಾಜಕಾಲುವೆಯಲ್ಲಿ ಅಪಾರ ಪ್ರಮಾಣದ ಹೂಳನ್ನು ಎತ್ತಿ ಪುರಸಭೆ ಸಾರ್ವಜನಿಕರ ಪ್ರಶಂಸೆಗೆ ಕಾರಣವಾಯಿತು.

ನಿತ್ಯ ಸಾವಿರಾರು ವಿದ್ಯಾರ್ಥಿಗಳು, ಸಾರ್ವಜನಿಕರು ಇದೇ ಮಾರ್ಗವಾಗಿ ಶಾಲಾ ಕಾಲೇಜುಗಳಿಗೆ, ಪುರಸಭೆಗಳಿಗೆ ತೆರಳಬೇಕು. ಮಳೆಗೆ ಚರಂಡಿ ಉಕ್ಕಿ ಹರಿದು ರಸ್ತೆಗೆ ಬರುತ್ತಿದ್ದ ಚರಂಡಿ ನೀರು ಮತ್ತು ತ್ಯಾಜ್ಯಗಳ ಗಬ್ಬು ವಾಸನೆಯಿಂದ ಮೂಗು ಮುಚಿಕೊಂಡು ಹೋಗುತ್ತಿದ್ದ ಜನತೆಯು ಇದೀಗ ಸರಾಗವಾಗಿ ಸಂಚಾರ ಮಾಡುವಂತಾಗಿದೆ.



- ಕಾಲಕಾಲಕ್ಕೆ ರಾಜಕಾಲುವೆ ಹಾಗೂ ಚರಂಡಿ ದುರಸ್ತಿ ಅವಶ್ಯ
- ಚರಂಡಿಗಳಲ್ಲಿ ಕಸ, ಘನತ್ಯಾಜ್ಯ ಎಸೆಯುವವರು ಇನ್ನುಮುಂದೆ ಕಸದ ಬುಟ್ಟಿಗೆ ಅಥವಾ ಕಸ ಸಂಗ್ರಹ ವಾಹನಕ್ಕೆ ಹಾಕಲಿ
- ಪುರಸಭೆಯೊಂದಿಗೆ ಸಾರ್ವಜನಿಕರೂ ಕೈಜೋಡಿಸಿದಾಗ ಮಾತ್ರ ನಗರ ಸ್ವಚ್ಛತೆ ಕಾಪಾಡಲು ಸಾಧ್ಯ ಎಂಬುದು ಪ್ರಜ್ಞಾವಂತ ನಾಗರಿಕರ ಆಶಯ



ಹೊಸ ದಿಗಂತ

ವರುಣನ ಅಬ್ಬರಕ್ಕೆ ರಸ್ತೆಗಳ ಮೇಲೆ ಹರಿದ ಚರಂಡಿ ನೀರು

> ಹೊಸ ದಿಗಂತ ಪತ್ರಿಕೆಯು ಅನೇಕ ಸಾಮಾಜಿಕ ಕಳಕಳಿ ಸುದ್ದಿಗಳನ್ನು ಪ್ರಕಟಿಸುತ್ತಾ ಬಂದಿದೆ. ಗಜೇಂದ್ರಗಡದಲ್ಲಿ ಉತ್ತಮವಾಗಿ ನೊಂದವರ, ಸಾಮಾಜಿಕವಾಗಿ ತೊಂದರೆಯಾಗತ್ತಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ, ಅವುಗಳನ್ನು ಆಡಳಿತ ವರ್ಗಗಳ ಗಮನಕ್ಕೆ ತಂದ ಹೊಸ ದಿಗಂತ ಪತ್ರಿಕೆ ಕಾರ್ಯ ಶ್ಲಾಘನೀಯ.
>
> ■ **ವಿನಾಯಕ ಜರತಾರಿ,** ಕರ್ನಾಟಕ ಅಭಿವೃದ್ಧಿ ವೇದಿಕೆ ರಾಜ್ಯಾಧ್ಯಕ್ಷ

ತಂಬಾಕು ಮುಕ್ತ ಜಿಲ್ಲೆಯನ್ನಾಗಿಸಲು ಸರ್ವರೂ ಕೈಜೋಡಿಸಲಿ

◆ **ಗದಗ:** ಪ್ರತಿವರ್ಷದಂತೆ ಈ ವರ್ಷ ವಿಶ್ವ ತಂಬಾಕು ರಹಿತ ದಿನಾಚರಣೆ ಆಕರ್ಷಣೆ ಬಹಿರಂಗಪಡಿಸುವುದು, ನಿಕೋಟಿನ್ ಮತ್ತು ತಂಬಾಕು ವ್ಯಸನವನ್ನು ಎದುರಿಸುವುದು ಎಂಬ ಘೋಷಣೆಯೊಂದಿಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸಮೀಕ್ಷಾ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಜಿಲ್ಲಾ ಎನ್.ಸಿ.ಟಿ ಘಟಕ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಎಸ್.ವಿ.ಟಿ ಪ್ಯಾರ್ ಮೇಡಿಕಲ್ ಕಾಲೇಜನಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ದಿವಾಣಿ ನ್ಯಾಯಾಧೀಶ ಸಿ.ಎಸ್.ಶಿವನಗೌಡ್ರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ,ಯುವ ಪೀಳಿಗೆ ಸಂಪೂರ್ಣ ತಂಬಾಕು ಮುಕ್ತ ಯುವ ಪೀಳಿಗೆ ಮಾಡಲು ಪ್ರಸುತ್ತ ಶಾಲಾ, ಕಾಲೇಜುಗಳಲ್ಲಿ ತಂಬಾಕು ವ್ಯಸನದ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವುದರ ಮೂಲಕ ಸಾಧ್ಯ ಹಾಗೂ ತಂಬಾಕು ನಿಯಂತ್ರಣ ಕಾಯ್ದೆ (ಕೋಟ್ಪಾ-2003) ಇನ್ನಷ್ಟು ಪರಿಣಾಮಕಾರಿಯಾಗಿ ಕೆಲವೊಂದು ತಿದ್ದುಪಡಿ ಅವಶ್ಯಕತೆಯಿದೆ. ತಂಬಾಕು ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲರೂ ಕೈಜೋಡಿಸಿ ಎಂದರು.

ವಿನಯ ಕುಬಸದ್ ಮಾತನಾಡಿದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ರೂಪಸೇನ್ ಚವ್ಹಾಣ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರ ಗೋಪಾಲಾ ಸುರಪುರ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಬಸಮ್ಮ ಚಿತ್ತರಗಿ, ರೇಷ್ಮಾ ನದಾಫ್, ವೀರೇಶ ಮದಕಟ್ಟಿ, ಶಿವಕುಮಾರ ಬಗಾಡೆ ಉಪಸ್ಥಿತರಿದ್ದರು.



ಉತ್ಪನ್ನಗಳ ಆಕರ್ಷಣೆ

ತಂಬಾಕು ಉತ್ಪನ್ನಗಳ ಆಕರ್ಷಕ ಪ್ಯಾಕೇಜಿಂಗ್, ವಿವಿಧ ಬಣ್ಣ ಮತ್ತು ಸುವಾಸನೆ, ಫ್ಲೇವರ್ ಹಾಗೂ ಡಿಜಿಟಲ್ ಮಾರ್ಕೆಟ್ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ವ್ಯಸನಗಳಿಯಾಗುವಂತೆ ಮಾಡಲಾಗುತ್ತಿದೆ. ತಂಬಾಕು ಮತ್ತು ನಿಕೋಟಿನ್ ವ್ಯಸನಿಗಳಿಗೆ ತಂಬಾಕು ವ್ಯಸನ ಮುಕ್ತ ಕೇಂದ್ರಗಳ ಮೂಲಕ ಹಾಗೂ ವ್ಯಸನ ತ್ಯಜಿಸುವ ಸಹಾಯವಾಣಿಗಳ ಮೂಲಕ ತಂಬಾಕು ವ್ಯಸನದಿಂದ ಹೊರಬರಲು ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ತಂಬಾಕು ವ್ಯಸನದಿಂದ ಆರೋಗ್ಯದ ಮೇಲೆ ಬಹಳಷ್ಟು ದುಷ್ಪರಿಣಾಮಗಳ ಉಂಟಾಗುತ್ತವೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಿತ್ ಖೋನಾ ಹೇಳಿದರು.

112 ಗೆ ಕರೆ ಮಾಡಿ

ಶಾಲಾ ಸುತ್ತ-ಮುತ್ತ 100 ಗಜದವರೆಗೆ ತಂಬಾಕು ಮಾರಾಟ ಕಂಡುಬಂದಲ್ಲಿ ಹಾಗೂ ಕೋಟ್ಪಾ ಕಾಯ್ದೆ ಉಲ್ಲಂಘನೆಯಾದಲ್ಲಿ 112 ಗೆ ಕರೆ ಮಾಡಿದರೆ ತಕ್ಷಣ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು. ನಂತರ ಡ್ರಗ್ ಫ್ರೀ ಆ್ಯಪ್ ಮೂಲಕ ಕಾನೂನು ಬಾಹಿರ ಮಾದಕ ದ್ರವ್ಯಗಳ ಬಳಕೆ ಸಂಗ್ರಹಣೆ ಉತ್ಪಾದನೆ ಬೆಳೆ ಕಂಡುಬಂದಲ್ಲಿ ದೂರು ನೀಡಬಹುದಾಗಿ ಉಪ ಪೊಲೀಸ್ ವರಿಷ್ಠಾಧಿಕಾರಿ ಎಂ.ಐ.ಸಜ್ಜನವರ ತಿಳಿಸಿದರು.

ಡಿಸಿ ಕಚೇರಿಯಲ್ಲಿ ಸಸಿ ನೆಟ್ಟ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್

ಬಿಸಿಲನಾಡಿನಲ್ಲಿ ಭಾರತ ವನ ಯೋಜನೆಗೆ ಚಾಲನೆ



ವಿಶ್ವ ಪರಿಸರ ದಿನ

ರಾಯಚೂರು: ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಿಲ್ಲಾಡಳಿತ, ಎಸ್‌ಪಿಎಮ್‌ಸಿಐಎಲ್ ಸಂಸ್ಥೆಯ ಸಾಮಾಜಿಕ ಕಳಕಳಿಯ (ಸಿಎಸ್‌ಆರ್) ಸಹಯೋಗದೊಂದಿಗೆ ಜೂ.5ರ ವಿಶ್ವ ಪರಿಸರ ದಿನಾಚರಣೆ-2026ರ ಅಂಗವಾಗಿ (ವಿಶೇಷ ಹಸಿರು ಅಭಿಯಾನ) ತಾಯಿಯ ಹೆಸರಿನಲ್ಲಿ ಒಂದು ಮರ ಕಾರ್ಯಕ್ರಮದಡಿ ರಾಯಚೂರು ಭಾರತ ವನ ಯೋಜನೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಜಿಲ್ಲಾಧಿಕಾರಿ ಪೂವಿತಾ.ಎಸ್ ಮಾತನಾಡಿ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಯ ಮಹತ್ವಾಕಾಂಕ್ಷೆ ಜಿಲ್ಲೆಯ ಪ್ರಗತಿ ಪರಿಶೀಲನೆ ಸಭೆಯನ್ನು ಹಣಕಾಸು ಸಚಿವರು ನಡೆಸಿದ್ದಾರೆ. ಭಾರತ ವನ ಯೋಜನೆಯಡಿ ಒಟ್ಟು 60 ಸಾವಿರ ಸ್ಥಳೀಯ ಜಾತಿಯ ಸಸಿಗಳನ್ನು ನೆಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ 10 ಸಾವಿರ ಸಸಿಗಳು ಹಾಗೂ ರಾಯಚೂರು ಮಹಾನಗರ ಪಾಲಿಕೆಯ ಘನ ತ್ಯಾಜ್ಯ ನಿರ್ವಹಣಾ ಘಟಕ ಪ್ರದೇಶದಲ್ಲಿ 50 ಸಾವಿರ ಸಸಿಗಳನ್ನು ನೆಡಲಾಗುತ್ತದೆ ಎಂದು ಹೇಳಿದರು.ಪರಿಸರ ಸಮತೋಲನವನ್ನು ಕಾಪಾಡಲು ಒಟ್ಟು ಭೌಗೋಳಿಕ ವಿಸ್ತೀರ್ಣದ ಕನಿಷ್ಠ ಶೇ.30 ಭಾಗ ಅರಣ್ಯಾವರಣ ಹೊಂದಿರಬೇಕೆಂಬ ರಾಷ್ಟ್ರೀಯ ಗುರಿ ಇದ್ದರೂ, ರಾಯಚೂರು ಜಿಲ್ಲೆಯ ಅರಣ್ಯಾವರಣವು ಶೇ.2ಕ್ಕಿಂತಲೂ ಕಡಿಮೆ ಇದೆ. ಇದರ ಪರಿಣಾಮವಾಗಿ ಭೂಮಿಯ ಉಷ್ಣತೆ ಹೆಚ್ಚಳ, ಮಣ್ಣಿನ ಫಲವತ್ತತೆ ಕುಸಿತ,

ಭೂಗರ್ಭ ಜಲಮಟ್ಟ ಇಳಿಕೆ, ಜೀವ ವೈವಿಧ್ಯತೆಯ ನಷ್ಟ ಹಾಗೂ ಹವಾಮಾನ ವೈಪರೀತ್ಯಗಳಂತಹ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದರು.

> **ಭಾರತ ವನ ಯೋಜನೆ ರಾಯಚೂರು ಜಿಲ್ಲೆಯ ಪರಿಸರ ಭವಿಷ್ಯಕ್ಕೆ ಹೊಸ ಆಶಾಕಿರಣವಾಗಲಿದೆ.**
> ■ **ಪೂವಿತಾ.ಎಸ್, ಜಿಲ್ಲಾಧಿಕಾರಿ**

ಇದೇ ಸಂದರ್ಭದಲ್ಲಿ ಹಣಕಾಸು ಸಚಿವಾಲಯದ ಕಾರ್ಯದರ್ಶಿ ಸಂಜಯ್ ಲೋಹಿಯಾ, ಆಪ್ತ ಕಾರ್ಯದರ್ಶಿ ಅನಿರುದ್ಧ ಶ್ರವಣ್, ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಶಾಜಿ ಕೃಷ್ಣನ್, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಜಿ.ಪಂ ಸಿಇಓ ಈಶ್ವರ ಕುಮಾರ್ ಕಾಂದೂ, ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹೊಪಾತ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ. ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ ಸೇರಿದಂತೆ ಇತರರಿದ್ದರು. ಸಿಂಧನೂರು ವಿಶೇಷ ಭೂ ಸ್ವಾಧೀನ ಅಧಿಕಾರಿ ಶ್ರುತಿ ಕಾರ್ಯಕ್ರಮದ ನಿರೂಪಣೆ ಮಾಡಿದರು.

ಜಿಲ್ಲೆಯಲ್ಲಿ ಗ್ರೀನ್ ಕವರ ಕಡಿಮೆ | ಕಾಡು ಬೆಳೆಸಲು ಅರಣ್ಯ ಇಲಾಖೆ, ಜಿಲ್ಲಾಡಳಿತ ಸಜ್ಜು

3.60 ಲಕ್ಷ ಸಸಿ ನೆಡುವ ಗುರಿ

▶ **ಜಗದೀಶ ಎಂ.ಗಾಣಿಗೇರ**



ಬಾಗಲಕೋಟೆ: ಹಸಿರು ಕರ್ನಾಟಕ ಧ್ಯೇಯೊದೊಂದಿಗೆ ಪರಿಸರ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಜಿಲ್ಲೆಯಲ್ಲಿ ಹಸಿರು ವಾತಾವರಣ ಕಡಿಮೆ ಇರುವುದರಿಂದ ಈ ಬಾರಿ ವಿಶ್ವ ಪರಿಸರ ದಿನಾಚರಣೆಯಂದು 3.60 ಲಕ್ಷ ಸಸಿಗಳನ್ನು ನೆಡಲು ಅರಣ್ಯ ಇಲಾಖೆ ಮತ್ತು ಜಿಲ್ಲಾಡಳಿತ ಸಜ್ಜಾಗಿದೆ.

ಜಿಲ್ಲೆಯಲ್ಲಿಗ್ರೀನ್‌ಕವರಕಡಿಮೆಯಾಗಿದೆ.ಪರಿಸರ ದಿನಾಚರಣೆ ಅಂಗವಾಗಿ ಕೆರೆಗಳ ಸುತ್ತಮುತ್ತ, ಶಾಲಾ ಕಾಲೇಜು, ಸಕ್ಕರೆ ಕಾರ್ಖಾನೆ, ಸರ್ಕಾರಿ ಕಚೇರಿಗಳ ಆವರಣ, ಸಂಘ ಸಂಸ್ಥೆಗಳ ಆವರಣ , ರಸ್ತೆಯ ಬದಿ, ಗುಡ್ಡಗಳಲ್ಲಿ ಅರಣ್ಯವನ್ನು ಬೆಳೆಸುವ ಮೂಲಕ ಜಿಲ್ಲೆಯಲ್ಲಿ ಹಸಿರು ವಾತಾವರಣ ನಿರ್ಮಾಣಕ್ಕೆ ಅರಣ್ಯ ಅಧಿಕಾರಿಗಳು ಅಣಿಯಾಗುತ್ತಿದ್ದಾರೆ.

ಕಳೆದ ವರ್ಷ ಜಿಲ್ಲಾಡಳಿತ, ಅರಣ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಮೂಲಕ 9 ನರ್ಸರಿಯಿಂದ 4.95 ಲಕ್ಷ ಸಸಿಗಳನ್ನು ನೆಡಲಾಗಿತ್ತು. ಈ ಬಾರಿ 3.60 ಲಕ್ಷ ಸಸಿಗಳನ್ನು ನೆಡುವ ಗುರಿಯನ್ನು ಹೊಂದಲಾಗಿದೆ.

ದಿಗಂತ ವಿಶೇಷ

ಹಸಿರು ಕರ್ನಾಟಕ ಧ್ಯೇಯದೊಂದಿಗೆ ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತಿದ್ದು ಸ್ಕೂಲ್‌ಗಳ ಆವರಣದಲ್ಲಿ ಹೆಚ್ಚು ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಅರಣ್ಯ ಇಲಾಖೆ ಮುಂದಾಗಿದೆ.

ಸಂಗಪ್ಪ ಅವರು ಜಿಲ್ಲಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡ ನಂತರ ಪರಿಸರ ಬೆಳೆಸಲು ಒತ್ತು ನೀಡಿದರು. ಮುಚಖಂಡಿ ವೀರಭದ್ರೇಶ್ವರ ದೇವಸ್ಥಾನದ ಮುಂಭಾಗ ಗುಡ್ಡದ ಆವರಣದಲ್ಲಿ ಸಾವಿರಾರು ಸಸಿಗಳನ್ನು ನೆಡಲಾಯಿತು.ಈಗ ಪ್ರತಿ ಸಕ್ಕರೆ ಕಾರ್ಖಾನೆಯಲ್ಲಿ 4 ರಿಂದ 5 ಸಾವಿರ ಸಸಿಗಳನ್ನು ನೆಡಬೇಕು ಎಂಬ ಉದ್ದೇಶವನ್ನು ಜಿಲ್ಲಾಧಿಕಾರಿಗಳು ಇಟ್ಟುಕೊಂಡಿದ್ದು, ಅದಕ್ಕೆ ಸಕ್ಕರೆ ಕಾರ್ಖಾನೆಗಳು ಸಹ ಸಾಥ್ ನೀಡುತ್ತಿವೆ.

ಜಿಲ್ಲೆಯಲ್ಲಿ ಅರಣ್ಯ ಇಲಾಖೆ ಬೆಳೆಸಿರುವ ಸಸಿಗಳನ್ನು ಉಳಿಸಿಕೊಂಡು ಬೆಳೆಸಿ ಹೋಗುವುದು ಮುಖ್ಯವಾಗಿದೆ. ಕೇವಲ ವರ್ಷಕ್ಕೊಮ್ಮೆ ಬರುವ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವೊಂದನ್ನು ಅರಣ್ಯ ಇಲಾಖೆ ಮಾಡಿ ಕೈ ತೊಳೆದುಕೊಳ್ಳದೇ ಯಾವ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸಲು ಸಾವಿರಾರು, ನೂರಾರು ಸಸಿಗಳನ್ನು ಬೆಳೆಸುತ್ತಾರೆ ಅವುಗಳ ರಕ್ಷಣೆಗೂ ಮುಂದಾಗಬೇಕು. ಅಂದಾಗ ಹಸಿರು ಕರ್ನಾಟಕವಾಗಲು ಸಾಧ್ಯವಿದೆ.

ಹಸಿರು ಕರ್ನಾಟಕ ಧ್ಯೇಯದೊಂದಿಗೆ ಈ ಬಾರಿ ವಿಶ್ವಪರಿಸರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಶಾಲೆಗಳ ಆವರಣದಲ್ಲಿ ಗಿಡಳನ್ನು ಬೆಳೆಸಲು ಕಾರ್ಯಕ್ರಮ ರೂಪಿಸಲಾಗಿದೆ. ಸಸಿಗಳನ್ನು ಯಾರಾದರೂ ಬೆಳೆಸಲು ಮುಂದಾದರೆ ಅಂತಹವರಿಗೆ ಉಚಿತವಾಗಿ ಸಸಿಗಳನ್ನು ನೀಡುತ್ತೇವೆ.

> **ಜಿಲ್ಲೆಯಲ್ಲಿ ಹಸಿರು ವಾತಾವರಣವನ್ನು ನಿರ್ಮಾಣ ಮಾಡಲು ಅರಣ್ಯ ಇಲಾಖೆ ಸಜ್ಜಾಗಿದೆ. ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ಆವರಣದಲ್ಲಿ, ರಸ್ತೆ ಬದಿ, ಗುಡ್ಡಗಳಲ್ಲಿ ಅರಣ್ಯವನ್ನು ಬೆಳೆಸಲಾಗುವುದು. ಈ ವರ್ಷ ಈ ಬಾರಿ 3.56 ಲಕ್ಷ ಸಸಿಗಳನು ನೆಡುವ ಗುರಿಯನು ಹೊಂದಲಾಗಿದೆ. ಸಸಿಗಳನ್ನು ನೆಟ್ಟು ನಂತರ ನಾಲ್ಕೈದು ವರ್ಷಗಳಲ್ಲಿ ಅವು ಯಶಸ್ಸು ಕಾಣಲಿವೆ. ಅರಣ್ಯ ಇಲಾಖೆ ಬೆಳವಣಿಗೆಗೆ ಒತ್ತು ನೀಡಲಿದೆ.**
> ■ **ಸ್ವಪ್ನಿಲ್ ಅಹಿರೇ, ಡಿಸಿಎಫ್ ಅರಣ್ಯ ಇಲಾಖೆ ಬಾಗಲಕೋಟೆ**

ಸಾರ್ವಜನಿಕರೂ ಕೂಡ ಪರಿಸರ ಬೆಳವಣಿಗೆಗೆ ಇಲಾಖೆಗಳೊಂದಿಗೆ ಕೈ ಜೋಡಿಸಬೇಕು ಎಂದು ಬಾಗಲಕೊಟೆ ರೇಜ್ ಆಫೀಸರ್ ಮಹಾಂತೇಶ ಸಜ್ಜನ್ ಹೇಳುತ್ತಾರೆ.

ಕಿರುಸುದ್ದಿ

ಸ್ಪೈಸ್‌ಜೆಟ್ ಕಂಪನಿಗೆ ದಂಡ !

ಬೆಳಗಾವಿ : ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ದೋಷಪೂರಿತ ವಿಮಾನ ಟಿಕೆಟ್ ನೀಡಿದ ಪ್ರಕರಣದಲ್ಲಿ ಸಂಸದ ಈರಣ್ಣ ಕಡಾಡಿ ಅವರ ಪರವಾಗಿ ತೀರ್ಪು ನೀಡಿದೆ.ಈರಣ್ಣ ಕಡಾಡಿ ಅವರು 2020ರಲ್ಲಿ ದೆಹಲಿ-ಬೆಂಗಳೂರು ಮತ್ತು ಬೆಂಗಳೂರು- ದೆಹಲಿ ಪ್ರಯಾಣಕ್ಕಾಗಿ ಒಟ್ಟು 10,927 ಮೌಲ್ಯದ ಟಿಕೆಟ್‌ಗಳನ್ನು ಖರೀದಿಸಿದ್ದರು. ಬಳಿಕ ಮರುಪಾವತಿಗಾಗಿ ಸಲ್ಲಿಸಿದಾಗ, ಟಿಕೆಟ್‌ಗಳು ''ಕೂಪನ್ ಟಿಕೆಟ್'' ಆಗಿರುವುದರಿಂದ ಹಣ ಮರುಪಾವತಿ ಸಾಧ್ಯವಿಲ್ಲ ಎಂದು ತಿಳಿಸಲಾಗಿತ್ತು.

> ▸▸ **ದೋಷಪೂರಿತ ಏರ್ ಟಿಕೆಟ್ ಪ್ರಕರಣ**
> ▸▸ **ಗ್ರಾಹಕರ ಆಯೋಗದ ಆದೇಶ**

ಇದರಿಂದ ತಮಗೆ ತೊಂದರೆ ಹಾಗೂ ಮುಜುಗರ ಉಂಟಾಗಿದೆ ಎಂದು ಆರೋಪಿಸಿ ಅವರು ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಿದ್ದರು.ಪ್ರಕರಣದ ವಿಚಾರಣೆಯಲ್ಲಿ ಸ್ಪೈಸ್ಜೆಟ್ ಹಾಜರಾಗದ ಕಾರಣ ಅದರ ವಿರುದ್ಧ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಯಿತು. ಟಿಕೆಟ್ ಬುಕ್ಕಿಂಗ್ ಮಧ್ಯವರ್ತಿಯಾಗಿದ್ದ ಇಸ್ ಮೈ ಟ್ರೀಪ್ ತನ್ನಿಂದ ಯಾವುದೇ ಸೇವಾ ನ್ಯೂನ್ಯತೆ ಆಗಿಲ್ಲ ಎಂದು ವಾದಿಸಿತು.

ಪ್ರಕರಣವನ್ನು ಪರಿಶೀಲಿಸಿದ ಆಯೋಗವು ಸ್ಪೈಸ್ಜೆಟ್ ಸಂಸ್ಥೆಯು ದೋಷಯುಕ್ತ ಟಿಕೆಟ್ ನೀಡಿ ಸೇವಾ ನ್ಯೂನ್ಯತೆ ಎಸಗಿದೆ ಎಂದು ತೀರ್ಮಾನಿಸಿ, 10,927 ಮೊತ್ತವನ್ನು 9.11.2020 ರಿಂದ ವಾರ್ಷಿಕ 9% ಬಡ್ಡಿಯೊಂದಿಗೆ ಮರುಪಾವತಿಸಲು ಆದೇಶಿಸಿತು. ಜೊತೆಗೆ ಮಾನಸಿಕ ವೇದನೆಗೆ 10,000 ಪರಿಹಾರ ಹಾಗೂ ಪ್ರಕರಣದ ವೆಚ್ಚವಾಗಿ 5,000 ಪಾವತಿಸುವಂತೆ ಜೂ.3ರಂದು ಆದೇಶ ನೀಡಿದೆ.

ಸಿಂದಗಿಯ ಪುಟಾಣಿ ಶ್ರೀನಿಧಿಗೆ ಐಬಿಆರ್ ಅಚೀವರ್' ಗೌರವ

ಸಿಂದಗಿ: ನಗರದ ಉನ್ನತಿ ಪೂರ್ವ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ 2 ವರ್ಷ 11ತಿಂಗಳ ಬಾಲಕಿ ಶ್ರೀನಿಧಿ ಸಂತೋಷ ಬಗಲಿ ತನ್ನ ಅಸಾಧಾರಣ ಬುದ್ಧಿಶಕ್ತಿಯನ್ನು ಪ್ರದರ್ಶಿಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ (ಐಬಿಆರ್ ಅಚೀವರ್') ಸಾಧಕ ಪ್ರಶಸ್ತಿಗೆ ಭಾಜನನಾಗಿದ್ದಾಳೆ.



ಈ ಪುಟಾಣಿ ಬಾಲಕಿ 10 ಹಣ್ಣುಗಳು, 17 ಪ್ರಾಣಿಗಳನ್ನು ಗುರುತಿಸಿ ಹೆಸರಿಸುವುದರ ಜೊತೆಗೆ, ವರ್ಷದ ತಿಂಗಳುಗಳು, ವಾರದ ದಿನಗಳು ಹಾಗೂ ಕನ್ನಡದ 8 ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಹೆಸರುಗಳನ್ನು ನಿರರ್ಗಳವಾಗಿ ಹೇಳುತ್ತಾಳೆ. ಅಷ್ಟೇ ಅಲ್ಲದೆ, ಎ ನಿಂದ ಎಲ್ ? ಅಕ್ಷರಗಳವರೆಗೆ ಆರಂಭವಾಗುವ 12 ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳನ್ನು ಅಕಾರಾಧಿಯಾಗಿ (ಅಲ್ಫಾಬೇಟಿಕಲ್ ಆರ್ಡರ್) ನೆನಪಿಸಿಕೊಂಡು ಹೇಳುವ ಸಾಮರ್ಥ್ಯ ಹೊಂದಿದ್ದಾಳೆ.

ಇವುಗಳೊಂದಿಗೆ ಭಾರತದ 28 ರಾಜ್ಯಗಳ ರಾಜಧಾನಿಗಳು, 2ನೇ ಮಗ್ಗಿ, ಇಂಗ್ಲಿಷ್ ಅಲಾಫಬೆಟ್ ಹಾಡು ಮತ್ತು 1 ರಿಂದ 10 ರವರೆಗೆ ಸಂಖ್ಯೆಗಳನ್ನು ಎಣಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದಾಳೆ. ಇವಳ ಈ ಅದ್ಭುತ ಸಾಧನೆಯನ್ನು ಪರಿಶೀಲಿಸಿ ಏಪ್ರಿಲ್ 7, 2026 ರಂದು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಯು ಅಧಿಕೃತವಾಗಿ ದೃಢೀಕರಿಸಿ, ಪ್ರಶಸ್ತಿ ನೀಡಿ ಗೌರವಿಸಿದೆ. ಸಿಂದಗಿ ಹಾಗೂ ವಿಜಯಪುರ ಜಿಲ್ಲೆಯ ಈ ಬಾಲಕಿಯ ಸಾಧನೆಗೆ ಸಾರ್ವಜನಿಕರಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ ಎಂದು ಶಾಲೆಯ ಮುಖ್ಯಗುರುಮಾತೆ ಅಶ್ವಿನಿ ಪರಶಿವಪ್ಪಗೋಳ ಹಾಗೂ ಆಡಳಿತಾಧಿಕಾರಿ ರೇವಣಸಿದ್ಧ ಗುಣಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

49 ಮಕ್ಕಳ ರಕ್ಷಿಸಿದ ಆರ್‌ಪಿಎಫ್



ಹುಬ್ಬಳ್ಳಿ: ನೈರುತ್ಯ ರೈಲ್ವೆ ನನ್ಹೆ ಫರಿಸ್ತೇ ಕಾರ್ಯಚರಣೆಯಡಿ ಮೇ ತಿಂಗಳಲ್ಲಿ 13 ಹುಡುಗಿಯರು ಸೇರಿದಂತೆ 49 ಮಕ್ಕಳನ್ನು ರಕ್ಷಿಸಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ರೈಲ್ವೆ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ರೈಲ್ವೆ ಆಸ್ತಿ, ಪ್ರಯಾಣಿಕರ ಪ್ರದೇಶಗಳು ಮತ್ತು ಪ್ರಯಾಣಿಕರ ಕಲ್ಯಾಣವನ್ನು ಕಾಪಾಡುವ ತನ್ನ ದೃಢ ಬದ್ಧತೆಯನ್ನು ನಿರಂತರವಾಗಿ ಮುಂದುವರಿಸಿಕೊಂಡಿದೆ.

ಆಪರೇಷನ್ ಡಿಗ್ನಿಟಿ ಕಾರ್ಯಾಚರಣೆಯಡಿ ಆರೈಕೆ ಮತ್ತು ರಕ್ಷಣೆಯ ಅಗತ್ಯವಿದ್ದ 3 ವೃದ್ಧರನ್ನು (2 ಗಂಡು 1 ಹೆಣ್ಣು) ರಕ್ಷಿಸಿ, ಸಮರ್ಪಕ ಪರಿಶೀಲನೆಯ ನಂತರ ಅವರ ಕುಟುಂಬಗಳು ಅಥವಾ ಎನ್‌ಜಿಒಗಳಿಗೆ ಹಸ್ತಾಂತರಿಸಲಾಗಿದೆ. ಮೇರಿ ಸಹೇಲಿ ಉಪಕ್ರಮದಡಿ ಆರ್‌ಪಿಎಫ್ ಸಿಬ್ಬಂದಿ ಒಂಟಿಯಾಗಿ ಅಥವಾ ಸಹಾಯವಿಲ್ಲದೆ ಪ್ರಯಾಣಿಸುವ ಮಹಿಳಾ ಪ್ರಯಾಣಿಕರಿಗೆ ಸುರಕ್ಷಿತ ಪ್ರಯಾಣವನ್ನು ಖಚಿತಪಡಿಸಿದ್ದಾರೆ.

ಟೌಟ್‌ಗಳ ವಿರುದ್ಧ ಕ್ರಮದಡಿ(ಉಪಲಬ್ಧ್'' ಕಾರ್ಯಾಚರಣೆ) ನಿಜವಾದ ಪ್ರಯಾಣಿಕರಿಗೆ ರೈಲುಟಿಕೆಟ್‌ಗಳನ್ಯಾಯಯುತಲಭ್ಯತೆಯನ್ನು ಖಚಿತಪಡಿಸಲು ಹಾಗೂ ಕಾಳ ಸಂತೆಯಲ್ಲಿ ಟಿಕೆಟ್ ಗಳ ಮಾರಾಟ ತಡೆಯಲು ಕರ್ನಾಟಕ ಮತ್ತು ಗೋವಾ ಸೇರದಂತೆ ವಿವಿಧ ಪ್ರವಾಸ ಏಜೆನ್ಸಿಗಳು ಮತ್ತು ಸ್ಥಳಗಳಲ್ಲಿ ತೀವ್ರ ತಪಾಸಣೆ ನಡೆಸಲಾಗಿದೆ. ಈ ಕಾರ್ಯಾಚರಣೆಯಡಿ 36 ಪ್ರಕರಣಗಳಲ್ಲಿ 37 ಟೌಟ್‌ಗಳನ್ನು ಬಂಧಿಸಿ, 1,53,620 ಮೌಲ್ಯದ 49 ಲೈವ್ ಟಿಕೆಟ್‌ಗಳು ಹಾಗೂ 4,65,968 ಮೌಲ್ಯದ 263 ಬಳಸಿದ ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರ್‌ಪಿಎಫ್ ಸಿಬ್ಬಂದಿ ಪ್ರಯಾಣಿಕರು ಕಳೆದುಕೊಂಡ ಅಥವಾ ಬಿಟ್ಟುಹೋದ ಲ್ಯಾಪ್‌ಟಾಪ್‌ಗಳು, ಮೊಬೈಲ್ ಫೋನ್‌ಗಳು, ಆಭರಣಗಳು ಸೇರಿದಂತೆ 50.34 ಲಕ್ಷ ಮೌಲ್ಯದ ಇತರ ವೈಯಕ್ತಿಕ ವಸ್ತುಗಳನ್ನು ವಶಪಡಿಸಿಕೊಂಡು ಅವುಗಳ ವಾರಸುದಾರರಿಗೆ ಹಿಂತಿರುಗಿಸಲಾಗಿದೆ. ಪ್ರತಿದಿನ ಸರಾಸರಿ 36-40 ಎಕ್ಸ್‌ಪ್ರೆಸ್ ಮತ್ತು ವಿಶೇಷ ರೈಲುಗಳಿಗೆ 125-130 ಆರ್‌ಪಿಎಫ್ ಸಿಬ್ಬಂದಿ ಬೆಂಗಾವಲು ನೀಡುತ್ತಿದ್ದು, ನಿರಂತರ ಜಾಗರೂಕತೆ ಮತ್ತು ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸುತ್ತಿದ್ದಾರೆ.

ರೈಲ್ವೆ ಆಸ್ತಿ ಕಳುವು ಮಾಡಿದ 7 ಪ್ರಕರಣಗಳನ್ನು ದಾಖಲಿಸಿ 13 ಆರೋಪಿ ಬಂಧಿಸಿ, 1,04,160 ಮೌಲ್ಯದ ಒಟ್ಟು ಕದ್ದ ಆಸ್ತಿಯಲ್ಲಿ 86,160 ಮೌಲ್ಯದ ರೈಲ್ವೆ ಆಸ್ತಿಯನ್ನು ವಶಪಡಿಸಿಕೊಂಡಿದೆ. ರೈಲ್ವೆ ಆರ್‌ಪಿಎಫ್ ಸಿಬ್ಬಂದಿ ಉತ್ತಮ ಕರ್ತವ್ಯ ನಿರ್ವಹಿಸಿದ್ದು, ಪ್ರತಿಯೊಬ್ಬ ಪ್ರಯಾಣಿಕರ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಕಾಪಾಡುವ ಕೆಲಸ ಮಾಡುತ್ತಿದ್ದಾರೆ ಎಂದು ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಪಿ. ಅನಂತ ಸಿಬ್ಬಂದಿಗೆ ಅಭಿನಂದಿಸಿದ್ದಾರೆ.

> **ಆಪರೇಷನ್ ಸತ್ರಾಕ್**
> **7 ಮದ್ಯ ಪ್ರಕರಣಗಳನ್ನು ಪತ್ತೆ ಹಚ್ಚಿ 83,31,457 ಮೌಲ್ಯದ 1458 ಬಾಟಲಿಗಳನ್ನು (1309 ಲೀಟರ್) ವಶಪಡಿಸಿಕೊಂಡು ಅಬಕಾರಿ ಇಲಾಖೆಗೆ ಹಸ್ತಾಂತರಿಸಲಾಗಿದೆ.**

> **8 ಪ್ರಕರಣಗಳು ಪತ್ತೆ**
> **33.80 ಲಕ್ಷ ಮೌಲ್ಯದ 37 ಕೆಜಿ ಗಾಂಜಾ ಹಾಗೂ 30 ಲಕ್ಷ ಮೌಲ್ಯದ ಕೊರಿಯನ್ ಬ್ರಾಂಡ್‌ನ 1,99,600 ಸಿಗರೇಟ್ ಹೊಂದಿರುವ 20 ರಟ್ಟಿನ ಪೆಟ್ಟಿಗೆ ವಶ.**

ಮೊದಲ ಬಾರಿ ಸಾರಂಗ್ ಹೆಲಿಕಾಪ್ಟರ್ ತಂಡದ ಅದ್ಭುತ ವೈಮಾನಿಕ ಪ್ರದರ್ಶನ

ಸ್ಮರಣೀಯ ಕ್ಷಣಕ್ಕೆ ಸಾಕ್ಷಿಯಾದ ಬೆಳಗಾವಿ

ಬೆಳಗಾವಿ: ಏರ್‌ಮ್ಯಾನ್ ತರಬೇತಿ ಶಾಲೆಯಲ್ಲಿ ನಡೆದ 7ನೇ ಅಗ್ನಿ ವೀರ ವಾಯು ಬ್ಯಾಚ್‌ನ ಪಾಸಿಂಗ್ ಔಟ್ ಪರೇಡ್‌ನಲ್ಲಿ ಸಾರಂಗ್ ಹೆಲಿಕಾಪ್ಟರ್ ಪ್ರದರ್ಶನ ತಂಡವು ಅದ್ಭುತವಾದ ವೈಮಾನಿಕ ಪ್ರದರ್ಶನವನ್ನು ಪ್ರದರ್ಶಿಸುವ ಮೂಲಕ ಬೆಳಗಾವಿ ಹೆಮ್ಮೆಯ ಮತ್ತು ಸ್ಮರಣೀಯ ಕ್ಷಣಕ್ಕೆ ಸಾಕ್ಷಿಯಾಯಿತು. ಈ ಕಾರ್ಯಕ್ರಮವು 1,250 ಅಗ್ನಿ ವೀರ ವಾಯು ನೇಮಕಾತಿದಾರರು 22 ವಾರಗಳ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಅವರ ಸಮರ್ಪಣೆ, ಶಿಸ್ತು ಮತ್ತು ರಾಷ್ಟ್ರ ಸೇವೆಗೆ ಬದ್ಧತೆಯನ್ನು ಆಚರಿಸಿತು.



ಪ್ರಮುಖ ಆಕರ್ಷಣೆಯಾಗಿದ್ದ ವಾಯುಪಡೆಯ 'ಸಾರಂಗ್' ಹೆಲಿಕಾಪ್ಟರ್ ತಂಡ ಆಕಾಶದಲ್ಲಿ ರೋಚಕ ವೈಮಾನಿಕ ಕಸರತ್ತುಗಳನ್ನು ಪ್ರದರ್ಶಿಸಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು. ದೇಶ- ವಿದೇಶಗಳಲ್ಲಿ 1,200ಕ್ಕೂ ಹೆಚ್ಚು ಏರ್ ಶೋಗಳನ್ನು ನಡೆಸಿರುವ ಈ ತಂಡ, ತನ್ನ ನಿಖರ ಹಾಗೂ ಸಾಹಸಮಯ ಹಾರಾಟದ ಮೂಲಕ ವಾಯು ಪಡೆಯ ಸಾಮರ್ಥ್ಯವನ್ನು ಅನಾವರಣಗೊಳಿಸಿತು.

ಈ ಪ್ರದರ್ಶನದಲ್ಲಿ ಎಚ್‌ಎಎಲ್ ನಿರ್ಮಿತ ಸ್ವದೇಶಿ ಅತ್ಯಾಧುನಿಕ ಎಎಲ್‌ಎಚ್ ಧ್ರುವ್ ಹೆಲಿಕಾಪ್ಟರ್‌ಗಳನ್ನು ಬಳಸಲಾಗಿದ್ದು, ಸ್ವದೇಶಿ ತಂತ್ರಜ್ಞಾನ ಹಾಗೂ 'ಆತ್ಮನಿರ್ಭರ ಭಾರತ'ದ ಶಕ್ತಿಯನ್ನು ಪ್ರದರ್ಶಿಸಿತು. ವಾಯುಪಡೆಯ ವೈಮಾನಿಕ ಸಾಹಸಗಳನ್ನು ಕಣ್ತುಂಬಿಕೊಂಡ ಸಾರ್ವಜನಿಕರು ಹಾಗೂ ಯೋಧರ ಕುಟುಂಬಸ್ಥರು ಪೈಲಟ್‌ಗಳ ಕೌಶಲ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಜಯಘೋಷ ಮೊಳಗಿಸಿದರು.

ಶಿರಹಟ್ಟಿಯಲ್ಲಿ ಉತ್ತಮ ಮಳೆ: ಅನ್ನದಾತನ ಮೊಗದಲ್ಲಿ ಹರ್ಷ

ಶಿರಹಟ್ಟಿ: ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಅತ್ಯುತ್ತಮ ಮಳೆಯಾಗಿದ್ದು, ಅನ್ನದಾತರಲ್ಲಿ ಹರ್ಷ ಮೂಡಿಸಿದೆ.

ಬೆಳಗಿನಿಂದ ಮೋಡ-ಬಿಸಿಲಿನ ನಡುವೆ ಉಷ್ಣಾಂಶದಲ್ಲೂ ಏರಿಕೆಯಾಗಿತ್ತು. ಮಳೆ ಸುರಿಯುವ ನಿರೀಕ್ಷೆ ಸಹ ಮೂಡಿಸಿತ್ತು. ಮಧ್ಯಾಹ್ನ ಸುರಿದ ಭಾರಿ ಮಳೆಗೆ ಹೊಲ ಗದ್ದೆಗಳಲ್ಲೂ ನೀರು ತುಂಬಿತು. ಈಗಾಗಲೇ ಬಿತ್ತನೆ ಮಾಡಿದ ಜಮೀನಿಗೆ ಬೆಳೆಗಳು ಚಿಗುರೊಡೆಯಲು ಸಾಕಷ್ಟು ಮಳೆಯಾಗಿದ್ದು, ರೈತರ ಖುಷಿಯನ್ನು ಇಮ್ಮಡಿಗೊಳಿಸಿತು. ಇನ್ನು ಬೀಜ ಬಿತ್ತಲು ಹದಗೊಳಿಸಲಾದ ಜಮೀನುಗಳಿಗೆ ಬೀಜ ಮತ್ತು ಗೊಬ್ಬರ ಖರೀದಿ ಜೋರಾದ ದೃಶ್ಯಗಳು ಕಂಡುಬಂದವು. ಮಳೆ ಪ್ರಾರಂಭವಾದಾಗಿನಿಂದ ಕೆಲ ಸಮಯದವರೆಗೆ ಜನ-ಜನವಾರು ಅಸ್ತವ್ಯಸ್ತಗೊಂಡಿತು.

ಮಳೆ ನಿಂತ ನಂತರ ಮಾರುಕಟ್ಟೆಯಲ್ಲಿ ಮತ್ತೆ ಸರಾಗವಾಗಿ ವ್ಯಾಪಾರ ವಹಿವಾಟು ನಡೆಯಿತು. ಮಧ್ಯಾಹ್ನದ ಮಳೆಯಿಂದಾಗಿ ಸ್ಥಳೀಯ ಬಸ್ ನಿಲ್ದಾಣಕ್ಕೆ ಹೋಗುವ ದ್ವಾರವು ಸಂಪೂರ್ಣ ನೀರು ತುಂಬಿ ಮಿನಿ ಕೆರೆ ನಿರ್ಮಾಣವಾಯಿತು. ಇದರಿಂದಾಗಿ ಪ್ರಯಾಣಿಕರು ಹರಸಾಹಸಪಟ್ಟರು.



9.35 ಲಕ್ಷ ರೂ. ವಂಚನೆ

ಹುಬ್ಬಳ್ಳಿ: ವೃದ್ಧರೊಬ್ಬರಿಗೆ ತಿಳಿದಂತೆ ಅಪರಿಚಿತರ ಅವರ ಖಾತೆಯಿಂದ 9.35 ಲಕ್ಷ ರೂ. ವರ್ಗಾಯಿಸಿಕೊಂಡು ವಂಚಿಸಿದ ಪ್ರಕರಣ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ನಿವೃತ್ತ ನೌಕರ, ಧಾರವಾಡದ ಶ್ರೀಪಾದನಗರದ ಬಳಿಯ ಮಾಕಡವಾಲೆ ಪ್ಲಾಟ್ ನಿವಾಸಿ ನಿಂಗಪ್ಪ ಬಿರಾದಾರ(62) ಎಂಬುವರಿಗೆ ಅಪರಿಚಿತರು ವಂಚಿಸಿದ್ದಾರೆ. ನಿಂಗಪ್ಪ ಅವರು ತಮ್ಮ ಎಸ್ ಬಿಐ ಖಾತೆಯಿಂದ ಹಣ ತೆಗೆಯಲು ಹೋದಾಗ ವೇತನ ಖಾತೆಯಿಂದ 8.40 ಲಕ್ಷ ಮತ್ತು ಪಿಂಚಣಿ ಖಾತೆಯಿಂದ 95 ಸಾವಿರ ವರ್ಗಾಯಿಸಿಕೊಂಡು ವಂಚಿಸಿದ್ದಾರೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಘಟ್ಟಗಳ ವ್ಯಾಪ್ತಿಯಲ್ಲಿ ಕೇಂದ್ರೀಯ ಉನ್ನತಾಧಿಕಾರ ಸಮಿತಿ ಪ್ರವಾಸ, ಸಮೀಕ್ಷೆ

ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯೊಂದಿಗೆ ಸಮಾಲೋಚನೆ

ಶಿರಸಿ: ಅರಣ್ಯ ಮತ್ತು ಪರಿಸರ ಸಂರಕ್ಷಣೆಯ ಉದ್ದೇಶದಿಂದ ಸುಪ್ರೀಂ ಕೋರ್ಟ್‌ನಿಂದ ನಿಯುಕ್ತಗೊಂಡಿರುವ ಕೇಂದ್ರೀಯ ಉನ್ನತಾಧಿಕಾರ ಸಮಿತಿಯು (ಸಿಇಸಿ) ಜೂನ್ 1 ರಿಂದ 4 ರವರೆಗೆ ಪಶ್ಚಿಮ ಘಟ್ಟಗಳ ವ್ಯಾಪ್ತಿಯಲ್ಲಿ ವ್ಯಾಪಕ ಪ್ರವಾಸ ಹಾಗೂ ಸಮೀಕ್ಷೆ ನಡೆಸಿತು.

ಈ ಭೇಟಿಯ ಭಾಗವಾಗಿ ಶಿರಸಿಗೆ ಆಗಮಿಸಿದ್ದ ಸಿ.ಇ.ಸಿ. ತಂಡವು ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಮತ್ತು ವೃಕ್ಷಲಕ್ಷ ಆಂದೋಲನದ ಪ್ರಮುಖರೊಂದಿಗೆ ಮಹತ್ವದ ಸಮಾಲೋಚನೆ ನಡೆಸಿತು.

ಸಭೆಯ ನೇತೃತ್ವ ವಹಿಸಿದ್ದ ಸಿ.ಇ.ಸಿ. ತಂಡದ ಮುಖ್ಯಸ್ಥರಾದ ಡಾ. ಸುನೀಲ್ ಲಿಮಯೆ ಅವರು, ಅರಣ್ಯ ಮತ್ತು ಪರಿಸರ ವ್ಯವಸ್ಥೆಯ ಉಳಿವಿಗಾಗಿ ಸಾರ್ವಜನಿಕ ಒತ್ತಡ ಗುಂಪುಗಳ ಕ್ರಿಯಾಶೀಲ ಪ್ರಯತ್ನಗಳು ನಿರಂತರವಾಗಿ ಇರಬೇಕು ಎಂದು ಪ್ರತಿಪಾದಿಸಿದರು. ಪ್ರಸಿದ್ಧ ಪರಿಸರ ವಿಜ್ಞಾನಿ ಡಾ. ಮಾಧವ ಗಾಡ್ಗೀಳ್ ಅವರ ಕೊಡುಗೆಯನ್ನು ಸ್ಮರಿಸಿದ ಅವರು, ಕರ್ನಾಟಕ ಪಶ್ಚಿಮ ಘಟ್ಟಗಳ



ಕಾರ್ಯಪಡೆಯ ಮುತುವರ್ಜಿಯಿಂದ ಬೇಡ್ತಿ, ಅಘನಾಶಿನಿ ಮತ್ತು ಶಾಲ್ಮಲಾ ವಲಯಗಳನ್ನು ವನ್ಯಜೀವಿ ಸಂರಕ್ಷಿತ ಪ್ರದೇಶಗಳನ್ನಾಗಿ ಘೋಷಿಸಿರುವುದನ್ನು ಶ್ಲಾಘಿಸಿದರು.

ಪರಿಸರ ಹೋರಾಟಗಾರ ಅನಂತಹೆಗಡೆ ಆಶೀಸರ ಮಾತನಾಡಿ, ಸುಪ್ರೀಂ ಕೋರ್ಟ್ ವ್ಯಾಪ್ತಿಯ ಉನ್ನತಾಧಿಕಾರ ಸಮಿತಿಯೊಂದು ಮೊದಲ ಬಾರಿಗೆ ಶಿರಸಿಗೆ ಭೇಟಿ ನೀಡಿ ಕಾರ್ಯಕರ್ತರ ಅಹವಾಲು ಆಲಿಸುತ್ತಿರುವುದಕ್ಕೆ ಕೃತಜ್ಞತೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಪಶ್ಚಿಮ ಘಟ್ಟಗಳ ಡೀಮ್ಡ್ ಅರಣ್ಯಗಳ ರಕ್ಷಣೆ, ಬೇಡ್ತಿ, ಅಘನಾಶಿನಿ ಮತ್ತು ಶರಾವತಿ ಕಣಿವೆಗಳ ಸಂರಕ್ಷಣೆ ಕುರಿತು ಸಮಿತಿಗೆ ಅಧಿಕೃತ ಮನವಿ ಸಲ್ಲಿಸಲಾಯಿತು.

ವಿಜ್ಞಾನಿ ಡಾ. ಕೇಶವ ಕೊರ್ಸೆ ಅವರು ಕಣಿವೆ ವ್ಯಾಪ್ತಿಯ ರೈತರ ಸ್ಥಿತಿಗತಿ ಹಾಗೂ ಜಲ-ಜಂಗಲ್ ಮೂಲಗಳ ಪ್ರಸ್ತುತ ಸ್ಥಿತಿಯ ಬಗ್ಗೆ ಸಮಿತಿಗೆ ವೈಜ್ಞಾನಿಕ ಮಾಹಿತಿ ನೀಡಿದರು. ಕರ್ನಾಟಕ ಪವರ್ ಕಾರ್ಪೊರೇಷನ್ ಲಿಮಿಟೆಡ್ (ಕೆಪಿಸಿಎಲ್) ಪರಿಸರ ಕಾಯ್ದೆಗಳನ್ನು ಉಲ್ಲಂಘಿಸುತ್ತಿರುವ ಕುರಿತು ಆಧಾರ ಸಹಿತ ದಾಖಲೆಗಳನ್ನು ವೃಕ್ಷ ಆಂದೋಲನದ ಕಾರ್ಯಕರ್ತರು ಸಮಿತಿಯ ಮುಂದಿಟ್ಟರು. ಜೊತೆಗೆ ಕರಾವಳಿ ನಿಯಂತ್ರಣ ವಲಯ (ಸಿ.ಆರ್.ಜೆಡ್) ಕಾಯ್ದೆಯು ಸರಿಯಾಗಿ ಜಾರಿಯಾಗದೇ ಕರಾವಳಿಯ ಜೀವವೈವಿಧ್ಯ ಬರಡಾಗುತ್ತಿರುವ ಆತಂಕವನ್ನು ಸಮಿತಿಯ ಗಮನಕ್ಕೆ ತರಲಾಯಿತು. ಬೇಡ್ತಿ-ಅಘನಾಶಿನಿ ಜನಾಂದೋಲನದ ಕುರಿತು ಸುದೀರ್ಘ ಕಾಲದಿಂದ ಕೇಳಿದ್ದೆವು, ಇಂದು ನೇರವಾಗಿ ಬಂದು ಜನರ ಚಳುವಳಿಯನ್ನು ಪರಿಚಯ ಮಾಡಿಕೊಂಡಿರುವುದು ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದ ಡಾ. ಸುನೀಲ್ ಲಿಮಯೆ, ಸಾರ್ವಜನಿಕರು ಹಾಗೂ ರೈತರು ಪರಿಸರ ಹಾನಿಯ ಕುರಿತು ಸಿ.ಇ.ಸಿ.ಗೆ ನೇರವಾಗಿಯೇ ದೂರು ಸಲ್ಲಿಸಬಹುದು ಎಂದು ಮಾಹಿತಿ ನೀಡಿದರು. ಅಲ್ಲದೇ ಶೀಘ್ರದಲ್ಲೇ ಮತ್ತೊಮ್ಮೆ ಈ ಕಣಿವೆ ಪ್ರದೇಶಗಳಿಗೆ ಭೇಟಿ ನೀಡುವುದಾಗಿ ಭರವಸೆ ನೀಡಿದರು.

> ▸▸ **ಅರಣ್ಯ ಮತ್ತು ಪರಿಸರ ಸಂರಕ್ಷಣೆಯ ಉದ್ದೇಶದಿಂದ ಸುಪ್ರೀಂ ಕೋರ್ಟ್‌ನಿಂದ ನಿಯುಕ್ತಗೊಂಡಿರುವ ಕೇಂದ್ರೀಯ ಉನ್ನತಾಧಿಕಾರ ಸಮಿತಿ (ಸಿಇಸಿ)**

> **ಕೇಂದ್ರೀಯ ಉನ್ನತಾಧಿಕಾರ ಸಮಿತಿ (ಸಿಇಸಿ) ಸಂಪರ್ಕದಿಂದಾಗಿ ಬೇಡ್ತಿ-ಅಘನಾಶಿನಿ ಸಮಿತಿಯ ಹೋರಾಟಕ್ಕೆ ಮತ್ತಷ್ಟು ಬಲ ಬಂದಿದೆ.**
> ■ **ನಾರಾಯಣ ಗಡೀಕೈ, ಸಮಿತಿಯ ಸಂಚಾಲಕ**

ನಿಯೋಗದ ಪರವಾಗಿ ಕದಂಬ ವಿಶ್ವೇಶ್ವರ ಭಟ್ ಅವರು ಸಮಿತಿಗೆ ನೆನಪಿನ ಕಾಣಿಕೆ ನೀಡಿದರು. ಗಣಪತಿ ಕೆ. ವಂದಿಸಿದರು. ಈ ಸಮಾಲೋಚನಾ ಸಭೆಯಲ್ಲಿ ಜಿಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಹೀರಾಲಾಲ್ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಸೂರ್ಯವಂಶಿ ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಾರ್ಷಿಕ ಸ್ನೇಹ ಸಮ್ಮೇಳನ ಇಂದು

ಶಿರಸಿ: ಇಲ್ಲಿನ ಎಂಇಎಸ್ ಐಟಿಐ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ದತ್ತಿನಿಧಿ ಬಹುಮಾನ ವಿತರಣಾ ಸಮಾರಂಭ ಜೂನ್ 5ರ ಬೆಳಿಗ್ಗೆ 11ಕ್ಕೆ ಎಂ.ಇ.ಎಸ್. ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ನಡೆಯಲಿದೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ.ಇ.ಎಸ್ ಅಧ್ಯಕ್ಷ ಜಿ.ಎಂ.ಹೆಗಡೆ ಮುಳಖಂಡವಹಿಸಲಿದ್ದು, ಅತಿಥಿಗಳಾಗಿ ಪತ್ರಕರ್ತ ರಾಘವೇಂದ್ರ ಬೆಟ್ಟಕೊಪ್ಪ ಆಗಮಿಸಲಿದ್ದಾರೆ. ಉಪಸಮಿತಿ ಅಧ್ಯಕ್ಷ ಹರೀಶ ಪಂಡಿತ್, ಸದಸ್ಯರಾದ ವಿನಾಯಕ ಜೋಶಿ, ಶ್ರೀಧರ ನಾಯಕ, ನರಸಿಂಹ ಹೆಗಡೆ, ರಾಜೀವ ಹೆಗಡೆ ಉಪಸ್ಥಿತರಿರಲಿದ್ದಾರೆ ಎಂದು ಐ. ಟಿ. ಐ.ಪ್ರಾಚಾರ್ಯ ಗಣೇಶ ಭಟ್ಟ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಕ್ಷಾಳಿಯಲ್ಲಿ ಕುಸಿದ ಸೇತುವೆ: ಸಂಚಾರಕ್ಕೆ ಸಂಕಷ್ಟ



ದಾಂಡೇಲಿ: ತಾಲೂಕಿನ ಕೋಗಿಲಬನ – ಬಡಕಾನಶಿರಡಾ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಸಾಕ್ಷಾಳಿಗೆ ಸಂಪರ್ಕ ಕಲ್ಪಿಸುವ ಸೇತುವೆಯೊಂದು ಕುಸಿದು ಸಂಚಾರಕ್ಕೆ ಸಂಕಷ್ಟ ಎದುರಾಗಿದೆ. ಸಾಕ್ಷಾಳಿಯಲ್ಲಿ ಸರಿ ಸುಮಾರು 30 – 40 ಮನೆಗಳಿದ್ದು, ಇದೇ ರಸ್ತೆಯಲ್ಲಿ ಮುಂದೆ ರೆಸಾರ್ಟ್ ಕೂಡ ಇದೆ. ಇಲ್ಲಿಯ ಮಕ್ಕಳು ಶಾಲಾ–ಕಾಲೇಜಿಗೆ ದಾಂಡೇಲಿಗೆ ಬರಬೇಕು. ದೈನಂದಿನ ಕೆಲಸ ಕಾರ್ಯಗಳಿಗೆ ದಾಂಡೇಲಿಗೆ ಬರಬೇಕಾದರೆ ಇಲ್ಲಿಯ ನಿವಾಸಿಗಳು ಇದೇ ರಸ್ತೆಯಲ್ಲಿ ಬರಬೇಕಾಗಿದ್ದು, ಇದೀಗ ಸೇತುವೆ ಕುಸಿದಿರುವ ಹಿನ್ನಲೆಯಲ್ಲಿ ವಾಹನ ಸಂಚಾರಕ್ಕೆ ಸಂಕಷ್ಟ ಎದುರಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿದೆ.

ಅರ್ಜಿ ಆಹ್ವಾನ

ಕಾರವಾರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳು/ಮಾಧ್ಯಮ ಸಂಸ್ಥೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ತಿದ್ದುಪಡಿ ಮಾಡಲಾದ ಹೊಸ ಮಾರ್ಗಸೂಚಿಯನ್ವಯ ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಪತ್ರಕರ್ತರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಪೂರ್ಣಾವಧಿ/ಅರೆಕಾಲಿಕ ವರದಿಗಾರರಾಗಿ ನೇಮಕವಾಗಿದ್ದಲ್ಲಿ ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ/ ಸ್ಥಾನಿಕ ಸಂಪಾದಕರ/ ಮುಖ್ಯಸ್ಥರ ಶಿಫಾರಸ್ಸು ಪತ್ರ ಮತ್ತು ಸೇವಾ ಪ್ರಮಾಣ ಪತ್ರವನ್ನು ಲಗತ್ತಿಸಿ ''ಸೇವಾಸಿಂಧು'' ಪೋರ್ಟಲ್ https://sevasindhu.karnataka.gov.in ಮೂಲಕ ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60289	68800
ಬಿಳಿಗೋಟು	25099	36698
ಕೆಂಪುಗೋಟು	27509	41699
ಬೆಟ್ಟೆ	42699	49909
ರಾಶಿ	50000	54559
ಚಾಲಿ	44099	49019
ಬಿ.ಕಾಳುಮೆಣಸು	79999	92500

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	60299	60299
ರಾಶಿ	51009	57119
ಬೆಟ್ಟೆ	38701	48119
ಕೆಂಪುಗೋಟು	17099	36799
ಬಿಳಿಗೋಟು	17109	35600
ಚಾಲಿ	38199	48700
ಕೋಕಾ	16000	32899
ಕಾಳುಮೆಣಸು	60829	66009



ಯಲ್ಲಾಪುರ: ಬ್ಲಾಕ್ ಕಾಂಗ್ರೆಸ್ ಸಮಿತಿ ಮತ್ತು ಶಿವರಾಮ್ ಹೆಬ್ಬಾರ್ ಅಭಿಮಾನಿ ಬಳಗ ಸಂಯೋಗದಲ್ಲಿ ಶಾಸಕ ಶಿವರಾಮ್ ಹೆಬ್ಬಾರ್ ಅವರ ಜನ್ಮದಿನದ ನಿಮಿತ್ತ ಶ್ರೀ ಗ್ರಾಮದೇವಿ ದೇವಾಲಯದಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ನಂತರ ಕೆಪಿಸಿಸಿ ಮಾಜಿ ಸದಸ್ಯ ವಿಜಯ ಮಿರಾಶಿ ಹಾಗೂ ವಿಕಾಸ್ ಬ್ಯಾಂಕ್ ಅಧ್ಯಕ್ಷ ಮುರಳಿ ಹೆಗಡೆ ನೇತೃತ್ವದಲ್ಲಿ ಪಟ್ಟಣದ ನಾಯಕನಕೆರೆ ಬಳಿಯ ವೃದ್ಧಾಶ್ರಮದಲ್ಲಿ ಶಾಸಕ ಹೆಬ್ಬಾರ್ ರವರ ಜನ್ಮದಿನ ಆಚರಣೆ ಮಾಡಿದರು.

ಸೇವಾ ನಿವೃತ್ತಿಗೊಂಡ ಯೋಧನಿಗೆ ಅದ್ದೂರಿ ಸ್ವಾಗತ

ಹೊನ್ನಾವರ: ಭಾರತೀಯ ಸೇನೆಯಲ್ಲಿ 23 ವರ್ಷಗಳ ಕಾಲ ಸೇವೆ ಸಲ್ಲಿಸಿ ಸೇವಾ ನಿವೃತ್ತಿಗೊಂಡು ಆಗಮಿಸಿದ ಯೋಧ ರಾಜು ಪಿ ಅವರಿಗೆ ಅದ್ದೂರಿಯಾಗಿ ಸ್ವಾಗತಿಸಲಾಯಿತು.

2003ರಲ್ಲಿ ಭಾರತೀಯ ಸೇನೆಗೆ ಆಯ್ಕೆಯಾದ ರಾಜು ಪಿ ಅವರು ಹೈದರಬಾದನಲ್ಲಿ ತರಬೇತಿ ಪಡೆದು ಆಂಧ್ರಪ್ರದೇಶ, ಜಮ್ಮುಕಾಶ್ಮೀರ, ಗುಜರಾತ್ ಸೇರಿದಂತೆ ವಿವಿಧ ರಾಜ್ಯದಲ್ಲಿ ಸುದೀರ್ಘ 23 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದ್ದರು. ಸೇವಾ ಅವಧಿಯಲ್ಲಿ ವಿವಿಧ ಹುದ್ದೆಯನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ಪ್ರಶಂಸೆಗೆ ಪಾತ್ರರಾಗಿದ್ದರು. ಗುರುವಾರ ಮುಂಜಾನೆ ಕುಮಟಾ ರೈಲು ನಿಲ್ದಾಣಕ್ಕೆ ಆಗಮಿಸಿದಾಗ ಶಾಸಕ ದಿನಕರ ಶೆಟ್ಟಿ ಸೇರಿದಂತೆ ಸಾರ್ವಜನಿಕರು ಬರಮಾಡಿಕೊಂಡರು.

ನಂತರ ಅರೇಅಂಗಡಿ ಸರ್ಕಲ್ ಸಮೀಪ ಪುಷ್ಪವೃಷ್ಟಿ ಸುರಿಸಿ ಸನ್ಮಾನಿಸಿ ಗೌರವಿಸಲಾಯಿತು. ಶ್ರೀ ಕರಿಕಾನ ಪರಮೇಶ್ವರಿ ಕಮಾನಿನ ಮುಂಭಾಗದಲ್ಲಿ ನಮನ ಸಲ್ಲಿಸಿ ಅದ್ದೂರಿ ಮೆರವಣಿಗೆ ಮೂಲಕ ಕೆರೆಕೋಣವರೆಗೆ ತೆರಳಿದರು. ಕೆರೆಕೋಣ ಶಾಲಾ ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿ ಸೈನಿಕರಿಗೆ ಗೌರವ ಸಲ್ಲಿಸಿದರು. ಸೇವಾ ಅವಧಿಯಲ್ಲಿ ವೀರಮರಣ ಹೊಂದಿದ ವೀರಯೋಧ ದಿ.ನಾಗರಾಜ ಶೆಟ್ಟಿ ಇವರ ಸ್ಮಾರಕಕ್ಕೆ ಸೈನಿಕ ರಾಜು ಪಿ. ಗೌರವ ಸಲ್ಲಿಸಿದರು. ನಂತರ ಮಹಾಸತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮನೆಗೆ ಆಗಮಿಸುತ್ತಿದ್ದಂತೆ ಆರತಿ ಬೆಳಗಿ ಬರಮಾಡಿಕೊಳ್ಳಲಾಯಿತು. ಇದೆ ವೇಳೆ ಹಲವು ಸಂಘಟನೆಯ ವತಿಯಿಂದ ಗೌರವಿಸಲಾಯಿತು. ಜೆಡಿಎಸ್ ಜಿಲ್ಲಾಧ್ಯಕ್ಷ ಸೂರಜ್ ನಾಯ್ಕ ಸೋನಿ ತಮ್ಮ ಕಾರ್ಯಕರ್ತರೊಂದಿಗೆ ಆಗಮಿಸಿ ಗೌರವಿಸಿದರು.



ಹೊನ್ನಾವರ: ಭಾರತೀಯ ಸೇನೆಯಲ್ಲಿ 23 ವರ್ಷಗಳ ಕಾಲ ಸೇವೆ ಸಲ್ಲಿಸಿ ಸೇವಾ ನಿವೃತ್ತಿಗೊಂಡು ಆಗಮಿಸಿದ ಯೋಧ ರಾಜು ಪಿ ಅವರಿಗೆ ಅದ್ದೂರಿಯಾಗಿ ಸ್ವಾಗತಿಸಲಾಯಿತು.ಗುರುವಾರ ಮುಂಜಾನೆ ಕುಮಟಾ ರೈಲು ನಿಲ್ದಾಣಕ್ಕೆ ಆಗಮಿಸಿದಾಗ ಶಾಸಕ ದಿನಕರ ಶೆಟ್ಟಿ ಸೇರಿದಂತೆ ಸಾರ್ವಜನಿಕರು ಬರಮಾಡಿಕೊಂಡರು. ನಂತರ ಅರೇಅಂಗಡಿ ಸರ್ಕಲ್ ಸಮೀಪ ಪುಷ್ಪವೃಷ್ಟಿ ಸುರಿಸಿ ಸನ್ಮಾನಿಸಿ ಗೌರವಿಸಲಾಯಿತು.

ಮೂರಿನಕಟ್ಟೆ ಧ್ವಂಸ: ಕಟ್ಟೆ ಮರುನಿರ್ಮಾಣಕ್ಕೆ ಆಗ್ರಹ

ಹಿಂದುಗಳಿಂದ ಇಂದು ಬೃಹತ್ ಪ್ರತಿಭಟನೆ

ಭಟ್ಕಳ: ಪಟ್ಟಣದ ಮೂರಿನಕಟ್ಟೆಯಲ್ಲಿ ನಿರ್ಮಿಸಲಾದ ನೂತನ ಕಟ್ಟೆಯನ್ನು ಧ್ವಂಸ ಮಾಡಿರುವ ಕೃತ್ಯವನ್ನು ತೀವ್ರವಾಗಿ ಖಂಡಿಸಿ ಮತ್ತು ಕಟ್ಟೆ ಮರುನಿರ್ಮಾಣಕ್ಕೆ ಆಗ್ರಹಿಸಿ ಜೂ.6ರಂದು ಮಧ್ಯಾಹ್ನ ಹಿಂದು ಸಂಘಟನೆಗಳ ಒಕ್ಕೂಟ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿ ತಾಲೂಕು ಆಡಳಿತ ಸೌಧದಲ್ಲಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಿದೆ.

ಶುಕ್ರವಾರ ಮಧ್ಯಾಹ್ನ 3 ಗಂಟೆಯಿಂದ ಪಟ್ಟಣದ ಚೆನ್ನಪಟ್ಟಣ ಹನುಮಂತದೇವಸ್ಥಾನದ ಆವರಣದಿಂದ ಪ್ರತಿಭಟನಾ ಮೆರವಣಿಗೆ ಆರಂಭವಾಗಲಿದೆ. ಹಿಂದೂ ಸಂಘಟನೆಗಳ ಒಕ್ಕೂಟ ಕರೆಯ ಮೇರೆಗೆ ಪಟ್ಟಣದಲ್ಲಿ ಹಿಂದುಗಳ ಅಂಗಡಿಮುಂಗಟ್ಟುಗಳು ಶುಕ್ರವಾರ ಮಧ್ಯಾಹ್ನ ಸ್ವಯಂಪ್ರೇರಿತ ಬಂದ್ ಆಗುವ ಸಾಧ್ಯತೆ ಇದೆ. ಈಗಾಗಲೇ ತಾಲೂಕಿನ 16 ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲೂ ಸಹ ಹಿಂದೂ ಸಂಘಟನೆಗಳ ಒಕ್ಕೂಟದವರು ಭೇಟಿ ನೀಡಿ ಕಟ್ಟೆ ಧ್ವಂಸ ಖಂಡಿಸಿ ನಡೆಯುವ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದ್ದಾರೆ. ಮೂರಿನಕಟ್ಟೆ ಮರುನಿರ್ಮಾಣ ಮಾಡುವುದು. ಕಟ್ಟೆ ಧ್ವಂಸ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು. ಮುಂದೆ ಹೀಗಾಗದಂತೆ ನಿಗಾವಹಿಸಬೇಕೆನ್ನುವುದು ಹಿಂದೂ ಸಂಘಟನೆಗಳ ಒಕ್ಕೂಟದ ಆಗ್ರಹವಾಗಿದೆ. ಇಂದಿನ ಪ್ರತಿಭಟನೆಯಲ್ಲಿ ತಾಲೂಕಿನ ವಿವಿಧ ಭಾಗದಿಂದ ಹೆಚ್ಚಿನ ಜನರು ಆಗಮಿಸುವ ನಿರೀಕ್ಷೆ ಇದೆ. ಬೃಹತ್ ಪ್ರತಿಭಟನೆಯ ಹಿನ್ನೆಲೆಯಲ್ಲಿ ಮೂರಿನಕಟ್ಟೆ ಪ್ರದೇಶ ಮತ್ತು ಪಟ್ಟಣದಲ್ಲಿ ಬಿಗು ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಬಂದೋಬಸ್ತ್‌ಗಾಗಿ ಬೇರೆ ಬೇರೆ ಪ್ರದೇಶದ ಪೊಲೀಸ್ ಅಧಿಕಾರಿಗಳು, ಪೊಲೀಸರನ್ನು ಕರೆಯಿಸಲಾಗಿದೆ. ಮೂರಿನಕಟ್ಟೆ ಪ್ರದೇಶದಲ್ಲಿ ಪೂರ್ವಜರ ಕಾಲದಿಂದಲೂ ಮಾರಿ ಹೊರೆ ಇಟ್ಟು ಪೂಜೆ ಮಾಡಲಾಗುತ್ತಿದೆ. ಆದರೆ ಇಂತಹ ಇತಿಹಾಸ ಹೊಂದಿರುವ ಪ್ರದೇಶದಲ್ಲಿ ನೂತನವಾಗಿ ಧಾರ್ಮಿಕ ವಿಧಿವಿಧಾನದಿಂದ ನಿರ್ಮಿಸಿದ ಕಟ್ಟೆಯನ್ನು ಧ್ವಂಸ ಮಾಡಿರುವುದು ಹಿಂದೂಗಳ ಭಾವನೆಗೆ ಧಕ್ಕೆಯಾಗಿರುವ ಬಗ್ಗೆ ಹಿಂದೂ ಸಂಘಟನೆಗಳ ಒಕ್ಕೂಟ ಆಕ್ರೋಶ ವ್ಯಕ್ತಪಡಿಸಿದೆ. ಮತ್ತೆ ಇಂತಹ ಕೃತ್ಯ ನಡೆಯಬಾರದು ಎನ್ನುವ ನಿಟ್ಟಿನಲ್ಲಿ ಕಟ್ಟೆ ಧ್ವಂಸ ಖಂಡಿಸಿ ಬೃಹತ್ ಪ್ರತಿಭಟನೆ ಮೆರವಣಿಗೆ ನಡೆಸಲಾಗುತ್ತಿದ್ದು, ಪ್ರತಿಭಟನೆಯಲ್ಲಿ ಹೆಚ್ಚಿನ ಜನರು ಸೇರುವ ನಿರೀಕ್ಷೆ ಇದೆ.



- ಭಟ್ಕಳದ ಮೂರಿನಕಟ್ಟೆ ಪ್ರದೇಶದಲ್ಲಿ ಬಿಗು ಪೊಲೀಸ್ ಬಂದೋಬಸ್ತ್
- ಹಿಂದು ಸಂಘಟನೆಗಳ ಒಕ್ಕೂಟ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿ ತಾಲೂಕು ಆಡಳಿತ ಸೌಧದಲ್ಲಿ ಅಧಿಕಾರಿಗಳಿಗೆ ಮನವಿ ಸಲ್ಲಿಕೆ ಇಂದು
- ಚೆನ್ನಪಟ್ಟಣ ಹನುಮಂತ ದೇವಸ್ಥಾನದ ಆವರಣದಿಂದ ಪ್ರತಿಭಟನಾ ಮೆರವಣಿಗೆ ಆರಂಭ
- ತಾಲೂಕಿನ ವಿವಿಧ ಭಾಗದಿಂದ ಹೆಚ್ಚಿನ ಜನರು ಆಗಮಿಸುವ ನಿರೀಕ್ಷೆ
- ಕಟ್ಟೆ ಧ್ವಂಸ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು. ಮುಂದೆ ಹೀಗಾಗದಂತೆ ನಿಗಾವಹಿಸಬೇಕೆನ್ನುವುದು ಹಿಂದೂ ಸಂಘಟನೆಗಳ ಒಕ್ಕೂಟದ ಆಗ್ರಹ

ಸಾರ್ವಜನಿಕರಿಂದ ರಸ್ತೆ ತಡೆದು ಪ್ರತಿಭಟನೆ

ದಾಂಡೇಲಿ: ಮಾರುತಿ ನಗರ-ಗಾಂಧಿನಗರದಲ್ಲಿ ಅರ್ಧಕ್ಕೆ ನಿಂತ ಸಿ.ಸಿ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಿ, ಜನರ ಜೀವ ಉಳಿಸಬೇಕೆಂದು ಆಗ್ರಹಿಸಿ ಸ್ಥಳೀಯ ಮಾರುತಿ ನಗರದ ಸಾರ್ವಜನಿಕರು ರಸ್ತೆ ತಡೆದು ಪ್ರತಿಭಟನೆ ನಡೆಸಿದ ಘಟನೆ ಗುರುವಾರ ನಡೆದಿದೆ.

ಇಲ್ಲಿ ಸಿ.ಸಿ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಅಳವಡಿಸಲಾದ ನಾಮಫಲಕದಲ್ಲಿ ಅಂದಾಜು ರೂ.13ಲಕ್ಷ ರೂ ವೆಚ್ಚದಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಾರವಾರ ಇದರ ಅಡಿಯಲ್ಲಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಲಿಮಿಟೆಡ್ ಕಾರವಾರ ಇವರ ಮೂಲಕ ನಿರ್ಮಾಣವಾಗಬೇಕಾಗಿದ್ದ ಸಿ.ಸಿ ರಸ್ತೆಯದು. ನಾಮಫಲಕ ಹಾಕಿ ಸಿ. ಸಿ ರಸ್ತೆ ನಿರ್ಮಾಣಕ್ಕೆ ಚಾಲನೆಯನ್ನು ನೀಡಿ, ಹೆಸರಿಗಷ್ಟೇ ನಾಮಫಲಕ ಅಳವಡಿಸಿದ್ದಲ್ಲಿಂದ ಕೂಗಳತೆಯ ದೂರದವರೆಗೆ ಮಾತ್ರ ಸಿ.ಸಿ.ರಸ್ತೆ ನಿರ್ಮಿಸಿ, ಆನಂತರ ಕಾಮಗಾರಿ ಸ್ಥಗಿತಗೊಂಡು 11 ತಿಂಗಳಾದರೂ, ಈವರೆಗೆ ಕಾಮಗಾರಿಯನ್ನು ಪ್ರಾರಂಭಿಸದೇ ಇರುವುದರಿಂದ ಕಾಮಗಾರಿಯಾಗಬೇಕಾಗಿದ್ದ ರಸ್ತೆ ಸಂಪೂರ್ಣ ಹದಗೆಟ್ಟು ಹೊಂಡ ಗುಂಡಿಗಳಿಂದ ಕೂಡಿ ಪ್ರತಿನಿತ್ಯ ಅದರಲ್ಲಿ ಮುಖ್ಯವಾಗಿ ದ್ವಿಚಕ್ರ ವಾಹನ ಸವಾರರು ಎದ್ದು ಬಿದ್ದು ಗಾಯ ಮಾಡಿಕೊಳ್ಳುತ್ತಿರುವ ಪರಿಸ್ಥಿತಿಯಿದೆ. ಸಿ.ಸಿ ರಸ್ತೆ ಕಾಮಗಾರಿ ಅರ್ಧಕ್ಕೆ ನಿಲ್ಲಿಸಿರುವುದರಿಂದ, ಸಿ.ಸಿ ರಸ್ತೆಯಿಂದ ಮೂಲ ರಸ್ತೆಗೆ ವಾಹನದಲ್ಲಿ ಹೋಗಲು ಹರಸಾಹಸ ಪಡಬೇಕಾಗಿದೆ. ಇಲ್ಲಿ ಪ್ರತಿನಿತ್ಯ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯ ಮಾಡಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಸ್ಥಳೀಯರು ಶಾಸಕರ ಗಮನಕ್ಕೆ ತಂದಿದ್ದರು. ಶಾಸಕರು ನಗರಾಡಳಿತಕ್ಕೆ ಈ ರಸ್ತೆ ಕಾಮಗಾರಿಯನ್ನು ಆದ್ಯತೆಯ ಮೇಲೆ ಮಾಡುವಂತೆ ಸೂಚನೆಯನ್ನು ನೀಡಿದ್ದರು. ಸೂಚನೆ ನೀಡಿ ತಿಂಗಳು ಏಳೆಂಟು ಕಳೆದರೂ, ಕಾಮಗಾರಿಯನ್ನು ಮುಂದುವರಿಸುವ ನಿಟ್ಟಿನಲ್ಲಿ ನಗರಸಭೆ ಈವರೆಗೆ ಯಾವುದೇ ಅಗತ್ಯ ಕ್ರಮವನ್ನು ಕೈಗೊಂಡಿಲ್ಲ, ಈ ರಸ್ತೆ ಇದೇ ರೀತಿ ಇದ್ದಲ್ಲಿ ವಾಹನ ಸವಾರರ ಜೀವಕ್ಕೂ ತೊಂದರೆಯಿದೆ. ಈ ನಿಟ್ಟಿನಲ್ಲಿ ಸ್ಥಳೀಯರು ರಸ್ತೆ ತಡೆದು ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆಗ್ರಹಿಸಿದ್ದಾರೆ.



ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್, ಪರಿಕರ ವಿತರಣೆ

ಭಟ್ಕಳ: ಕನ್ನಡದ ಕಾಂತಾರ ಚಿತ್ರ ಸೇರಿದಂತೆ ಹಲವು ತೆಲುಗು, ತಮಿಳು ಚಿತ್ರದಲ್ಲಿ ನಟಿಸಿರುವ ಭಟ್ಕಳದ ರಮ್ಯಾ ಕೃಷ್ಣ (ಐರಾ) ತಾನು ಹುಟ್ಟಿದ ಊರಿಗೆ ಏನಾದರೂ ಕೊಡುಗೆ ನೀಡಬೇಕೆನ್ನುವ ಹಂಬಲದೊಂದಿಗೆ ಭಟ್ಕಳಕ್ಕೆ ಆಗಮಿಸಿ ತಾಲ್ಲೂಕಿನ ಕುಗ್ರಾಮ ಪ್ರದೇಶದ ವಿದ್ಯಾರ್ಥಿನಿಯರಿಗೆ ಸ್ಕೂಲ್ ಬ್ಯಾಗ್, ನ್ಯಾಪ್‌ಕಿನ್ ಮತ್ತು ನೋಟಬುಕ್‌ಗಳನ್ನು ವಿತರಿಸಿದರು.

ತಾಲ್ಲೂಕಿನ ಹಾಡುವಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಹೆರಬುಡುಕಿ, ನೂಜ್, ಕೆಕ್ಕೋಡನ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್ ಹಾಗೂ ಮಾರುಕೇರಿಯ ಶಿವಶಾಂತಿಕಾ ಪರಮೇಶ್ವರಿ ಪ್ರೌಢ ಶಾಲೆ ಹಾಗೂ ಬೆಳಕೆಯ ಪೌಢಶಾಲಾ ವಿದ್ಯಾರ್ಥಿನಿಯರಿಗೆ ನ್ಯಾಪ್‌ಕಿನ್, ನೋಟ್ ಬುಕ್ ಸೇರಿದಂತೆ ಸ್ಟೇಷನರಿ ಸಾಮಗ್ರಿಗಳನ್ನು ನೀಡಿದರು. ಮಾರುಕೇರಿ ಶಿವಶಾಂತಿಕಾ ಪೌಢಶಾಲೆಯಲ್ಲಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀಕಂಠ ಹೆಬ್ಬಾರ, ನಾರಾಯಣ ಹೆಬ್ಬಾರ ಹಾಗೂ ಇತರರು ಉತ್ತಮ ಕಾರ್ಯಕ್ಕಾಗಿ ಚಿತ್ರನಟಿಯನ್ನು ಸ್ವಾಗತಿಸಿ ಶಾಲು ಹೊದೆಯಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಮ್ಯಾಕೃಷ್ಣ ತಾನು ಭಟ್ಕಳದಲ್ಲಿ ಪ್ರಾಥಮಿಕ ಶಾಲೆ ಕಲಿತು ಬೆಂಗಳೂರಿನಲ್ಲಿ ಇಂಜನೀಯರಿಂಗಮುಗಿಸಿದ ನಂತರ ಚಿತ್ರರಂಗಕ್ಕೆ ಪ್ರವೇಶಿಸಿ ಹಲವು ಚಿತ್ರದಲ್ಲಿ ಸಹನಟಿಯಾಗಿ ನಟಿಸಿದ್ದೇನೆ. ನಾನು ಚಿತ್ರರಂಗದ ನಂಟಿನೊಂದಿಗೆ ಸಮಾಜ ಸೇವೆಯಲ್ಲಿ ಗುರುತಿಸಿಕೊಂಡ ''ಆಹಾರ ಇಂಡಿಯಾ'' ಎನ್.ಜಿ.ಓ ನಲ್ಲಿ ಗುರುತಿಸಿಕೊಂಡು ಇದರ ಮೂಲಕ ಹಲವು ಊರಿನ ಗ್ ಕುಗ್ರಾಮ ಪ್ರದೇಶದಲ್ಲಿರುವ ಶಾಲಾ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದೇನೆ. ನನ್ನ ಹುಟ್ಟೂರಿಗೂ ಬಂದು ಇಲ್ಲಿನ ಗ್ರಾಮೀಣ ವಿದ್ಯಾರ್ಥಿಗಳಿಗೆ ಸಹಾಯ ನೀಡಿದ್ದೇನೆ. ಮುಂದೆಯೂ ಸಹಕಾರ ನೀಡುವೆ ಎಂದರು.

ಈ ಸಂದರ್ಭದಲ್ಲಿ ಮಾರುಕೇರಿ ಶಿವಶಾಂತಿಕಾ ಪೌಢ ಶಾಲೆಯ ಮುಖ್ಯ ಶಿಕ್ಷಕರಾದ ಪಿ.ಟಿ ಚೌಹಾಣ್,ಶಿಕ್ಷಕರಾದ ಉದಯ ಭಟ್, ವಿನಾಯಕ್ ಭಟ್, ದಿನೇಶ, ಕೃಷ್ಣ ನಾಯ್ಕಕಾಟಿಮನೆ ಮುಂತಾದವರಿದ್ದರು. ನಟಿ ರಮ್ಯಾಕೃಷ್ಣ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.



ಎಂ.ಎಂ.ಕರ್ಕಿಕರ್ ದಂಪತಿಗೆ ಸನ್ಮಾನ



ಅಂಕೋಲಾ: ಕಲಾಭಾರತಿ ಟ್ರಸ್ಟ್ ಅಂಕೋಲಾ (ರಿ)ಇವರು ಇತ್ತೀಚೆಗೆ ಏರ್ಪಡಿಸಿದ್ದ 21 ದಿನಗಳ ಧ್ಯಾನ ತರಬೇತಿ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕ ದಂಪತಿಗಳಾದ ಗಿರಿಜಾ ಮತ್ತು ಎಂ.ಎಂ. ಕರ್ಕಿಕರ್ ರವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಂ.ಎಂ.ಕರ್ಕಿಕರ್ ಅವರು ಧ್ಯಾನ, ಯೋಗ, ಸಂಗೀತದ ಸಂಗಮವಾದ ಕಲಾಭಾರತಿ ಟ್ರಸ್ಟ್ ಸಾಮಾಜಿಕವಾಗಿ ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು. ಯಾವುದೇ ಕಾರ್ಯವನ್ನು ಮಾಡಲು ಶ್ರದ್ಧೆ ಬಹಳ ಮುಖ್ಯ. ಏಕಾಗ್ರತೆಯಿಂದ ಅದನ್ನು ಸಾಧಿಸಲು ನಮ್ಮ ಇಚ್ಚಿತ ಗುರಿ ತಲುಪಲು ಧ್ಯಾನ ತುಂಬಾ ಸಹಕಾರಿಯಾಗುತ್ತದೆ. ಯುವ ಜನಾಂಗ ಮೊಬೈಲ್ ನಿಂದ ದೂರವಿದ್ದು ಧ್ಯಾನ ದ ಕಡೆಗೆ ಹೆಚ್ಚು ಗಮನ ಹರಿಸಲು ಸಲಹೆ ನೀಡಿದರು.

ಮುಖ್ಯ ಅತಿಥಿ ಗಳಾಗಿ ಆಗಮಿಸಿದ ಶಾಂತಲಾ ನಾಡಕರ್ಣಿ ಇದೊಂದು ಆತ್ಮ ಸಂತೋಷ ನೀಡುವ ಕಾರ್ಯಕ್ರಮ ಇಂತಹ ಕಾರ್ಯಕ್ರಮ ಗಳಿಗೆ ಸದಾ ನನ್ನ ಬೆಂಬಲವಿದೆ ಎಂದರು.

ನಿವೃತ್ತ ಶಿಕ್ಷಕಿ ನಾಗವೇಣಿ ನಾಯಕ್, ಸಂಗಮ ಸೇವಾ ಸಂಸ್ಥೆಯ ಅಧ್ಯಕ್ಷ ರವೀಂದ್ರ ಶೆಟ್ಟಿ, ನಿವೃತ್ತ ಪೋಲೀಸ್ ಅಧಿಕಾರಿ ಸುರೇಶ ನಾಯ್ಕ ಮುಖ್ಯ ಅತಿಥಿ ಗಳಾಗಿ ಉಪಸ್ಥಿತರಿದ್ದು ಮಾತನಾಡಿದರು. ಇದೇ ಸಂದರ್ಭದಲ್ಲಿ ಶಿಬಿರಾರ್ಥಿಗಳು ತಮ್ಮ ಅನುಭವ ಹಂಚಿಕೊಂಡರು. ವರ್ಷಿಣಿ ಶೆಟ್ಟಿ ಪ್ರಾರ್ಥಿಸಿದರು. ಧ್ಯಾನ ತರಬೇತಿದಾರರಾದ ಸುಧಾ ಶೆಟ್ಟಿ ಪ್ರಾಸ್ತಾವಿಕ ಮಾತನಾಡಿದರು. ಟ್ರಸ್ಟ್ ನ ಅಧ್ಯಕ್ಷ ಪ್ರಶಾಂತ ಶೆಟ್ಟಿ ಸರ್ವರನ್ನೂ ವಂದಿಸಿದರು.

ಸಂಭ್ರಮದ ಶಾಲಾ ಪ್ರಾರಂಭೋತ್ಸವ

ಹಳಿಯಾಳ: ತಾಲೂಕಿನ 2026–27ನೇ ಶೈಕ್ಷಣಿಕ ಸಾಲಿನ ಅಂಗವಾಗಿ ಚಿಬ್ಬಲಗೇರಿಯ ಸರಕಾರಿ ಪ್ರೌಢಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಅತ್ಯಂತ ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು.

ಹಳಿಯಾಳ ತಾಲೂಕಿನ ಕ್ಷೇತ್ರ ಸಮನ್ವಯ ಅಧಿಕಾರಿ ಚೌಗುಲ ಮುಖ್ಯ ಅತಿಥಿಗಳಾಗಿ ಆಗಮಿಸಿ, ಸಸಿಗೆ ನೀರುಣಿಸುವ ಮೂಲಕ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿದರು.

ಶಾಲೆಗೆ ಹೊಸದಾಗಿ ಸೇರ್ಪಡೆಯಾದ 8ನೇ ತರಗತಿ ವಿದ್ಯಾರ್ಥಿಗಳನ್ನು ಸಸಿಗಳನ್ನು ನೀಡಿ ಆತ್ಮೀಯವಾಗಿ ಸ್ವಾಗತಿಸಲಾಯಿತು. ಶಾಲೆಯ ಎಲ್ಲ ಶಿಕ್ಷಕರು ಗುಲಾಬಿ ಹೂಗಳನ್ನು ನೀಡಿ ವಿದ್ಯಾರ್ಥಿಗಳನ್ನು ಬರಮಾಡಿಕೊಂಡರು.

ಕ್ಷೇತ್ರ ಸಮನ್ವಯ ಅಧಿಕಾರಿ ಚೌಗುಲ ಮೇಡಂ ಅವರು, ''ವಿದ್ಯಾರ್ಥಿಗಳು ಜೀವನದಲ್ಲಿ ಸ್ಪಷ್ಟವಾದ ಗುರಿಯನ್ನು ಹೊಂದಬೇಕು. ಆ ಗುರಿಯನ್ನು ಸಾಧಿಸಲು ನಿರಂತರ ಪರಿಶ್ರಮ ಹಾಗೂ ಸಮಯದ ಸದ್ಬಳಕೆ ಅತ್ಯಗತ್ಯ. ಜ್ಞಾನಾರ್ಜನೆಯ ಮೂಲಕ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಬದುಕನ್ನು ಸಾರ್ಥಕಗೊಳಿಸಬೇಕು'' ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು. ಪ್ರತಿಯೊಬ್ಬ ವಿದ್ಯಾರ್ಥಿಯೂ ಅಭ್ಯಾಸದ ಮೂಲಕ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ನತರ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಸಿಹಿ ಊಟವನ್ನು ನೀಡಲಾಯಿತು. ಶಾಲೆಯ ಮುಖ್ಯೋಪಾಧ್ಯಾಯ ನಾರಾಯಣ ಬಾಬ್ರಿ ಅವರು ಅತಿಥಿಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು. ಶಿಕ್ಷಕ ನಿಜಲಿಂಗಪ್ಪ ಬಡಿಗೇರ್ ಅವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ವಿಶ್ವನಾಥ್ ಅವರು ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಅಶ್ಫಾಕ್ ಅಲಿ ಮುಲ್ಲಾ, ಶಿಕ್ಷಕ ಸಿದ್ದಪ್ಪ ಬಿರಾದಾರ್, ಉದಾಸಿರ ಮೋಹಿತೆ, ಶಾಲಾ ಸಿಬ್ಬಂದಿ ಕೊರವರ ಸೇರಿದಂತೆ ಶಿಕ್ಷಕ ವೃಂದ ಉಪಸ್ಥಿತರಿದ್ದರು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಶಾಲಾ ಪ್ರಾರಂಭೋತ್ಸವವು ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹ, ಆತ್ಮವಿಶ್ವಾಸ ಹಾಗೂ ಕಲಿಕೆಯ ಬಗ್ಗೆ ಆಸಕ್ತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು.



ಅಂಧ ಮಕ್ಕಳ ಶಾಲೆಯಲ್ಲಿ ಜನ್ಮದಿನ ಆಚರಣೆ

ಮುಂಡಗೋಡ: ಕಣ್ಣು ಕಾಣದಿದ್ದರೂ ಸತತ ಅಭ್ಯಾಸ, ಪರಿಶ್ರಮದಿಂದ ಜ್ಞಾನಪ್ರಜ್ಞಾ ಅಂಧ ಮಕ್ಕಳ ಶಾಲೆಯ ವಿದ್ಯಾರ್ಥಿಗಳು ತುಂಬಾ ಇಂಪಾದ ದನಿಯಿಂದ ಸಂಗೀತ ಪ್ರದರ್ಶನ ಮಾಡಿದರು ಎಂದು ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಹಿರೇಹಳ್ಳಿ ಹೇಳಿದರು.

ಗುರುವಾರ ಪಟ್ಟಣದ ಜ್ಞಾನಪ್ರಜ್ಞಾ ಅಂಧ ಮಕ್ಕಳ ಶಾಲೆಯ ವಿದ್ಯಾರ್ಥಿಗಳಿಂದ ಕೇಕ್ ಕತ್ತರಿಸುವ ಮೂಲಕ ಶಾಸಕ ಶಿವರಾಮ ಹೆಬ್ಬಾರ ಅವರ ಜನ್ಮದಿನವನ್ನು ಆಚರಿಸಿ ಅವರು ಮಾತನಾಡಿದರು. ಇವರೆಲ್ಲರ ಮಧ್ಯೆ ನಾವು ಶಾಸಕ ಶಿವರಾಮ ಹೆಬ್ಬಾರ ಅವರ ಜನ್ಮದಿನ ಆಚರಿಸುತ್ತಿರುವುದು ನಮ್ಮ ಭಾಗ್ಯವೇ ಸರಿ ಎಂದರು.

ಇದೇ ಸಂದರ್ಭದಲ್ಲಿ ಶಾಲಾ ಮಕ್ಕಳಿಗೆ ಬಟ್ಟೆಗಳನ್ನು ವಿತರಿಸಲಾಯಿತು.

ಈ ವೇಳೆ ರವಿಗೌಡ ಪಾಟೀಲ, ಹನುಮಂತ ಆರೆಗೊಪ್ಪ, ಹುಲಗಪ್ಪ ಭೋವಿ, ಗುಡ್ಡಪ್ಪ ಕಾತೂರ, ರಾಜು ಗುಬ್ಬಕ್ಕನವರ, ರಾಜು ಭೋವಿ, ಶೇಖರ ಲಮಾಣಿ, ಮಂಜುನಾಥ ಕಟಗಿ, ಕಿರಣ ಶೇರಖಾನೆ, ಸಲ್ಮಾ ಶೇರಖಾನೆ ಮುಂತಾದವರು ಇದ್ದರು.



ಯಲ್ಲಾಪುರ ಬ್ಲಾಕ್ ಕಾಂಗ್ರೆಸ್‌ನಿಂದ ಸಂಭ್ರಮ



ಯಲ್ಲಾಪುರ: ಡಿ.ಕೆ. ಶಿವಕುಮಾರ ಅವರು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ ಪ್ರಯುಕ್ತ ಪಟ್ಟಣದ ಅಂಬೇಡ್ಕರ್ ಸರ್ಕಲ್‌ನಲ್ಲಿ ಯಲ್ಲಾಪುರ ಬ್ಲಾಕ್ ಕಾಂಗ್ರೆಸ್ ನಿಂದ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮಾಜಿ ಸದಸ್ಯ ವಿಜಯ ಮಿರಾಶಿ, ಪ್ರಮುಖರಾದ ಭಟ್ ಎನ್.ಕೆ.ಭಟ್, ,ಮುರಳಿ ಹೆಗಡೆ, ಆರ್ ಎಸ್ ಭಟ್, ಶಿರೀಷ್ ಪ್ರಭು, ಎಮ್.ಡಿ.ಮುಲ್ಲಾ, ಲಾರೆನ್ಸ್ ಸಿದ್ದಿ, ಉಲ್ಲಾಸ ಶಾನಭಾಗ, ಸುನಂದಾ ದಾಸ್, ನರ್ಮದಾ ನಾಯ್ಕ್, ಸರಸ್ವತಿ ಗುನಗಾ, ಪೂಜಾ ನೇತ್ರಕರ್, ಫೈರೋಜ್ ಸೈಯದ್, ಮುಸರತ್ ಖಾನ್ ಗಣೇಶ ಪಾಟಣಕರ್ ,ಸತೀಶ್ ನಾಯ್ಕ್,ಅನಿಲ್ ಮರಾಠೆ, ಸಂತೋಷ ನಾಯ್ಕ,ಫಕ್ಕೀರ್ ಹರಿಜನ, ಮಣಿಕಂಠ ನಾಯ್ಕ, ಗಣೇಶ ಹೆಗಡೆ,ಅಮಿತ ಅಂಗಡಿ, ರವಿಚಂದ್ರ ನಾಯ್ಕ್,ರೂಪಾ ಪಾಟಣಕರ್, ಶಂಕರ್ ಹೆಗಡೆ, ಗಣೇಶ್ ರೋಕಡೆ,ವಿಶ್ವಾಸ್ ನಾಯ್ಕ್, ಮಹೇಶ್ ನಾಯ್ಕ್ ಕಾರ್ಯಕರ್ತರು ಇದ್ದರು.

ನ್ಯಾಯಮೂರ್ತಿ ರಾಜೇಶ್ವರಿ ಹೆಗಡೆಗೆ ಗೌರವ

ಸಿದ್ದಾಪುರ: ತಾಲೂಕಿನ ಹಲಗೇರಿ ಮೂಲದವರಾದ ರಾಜೇಶ್ವರಿ ನಾರಾಯಣ ಹೆಗಡೆ ಅವರು ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಸಿದ್ದಾಪುರ ನ್ಯಾಯಾಲಯದ ವಕೀಲರ ಸಂಘದ ಪರವಾಗಿ ಅವರನ್ನು ಧಾರವಾಡ ಹೈಕೋರ್ಟಿಗೆ ತೆರಳಿ ಸನ್ಮಾನಿಸಿ ಗೌರವಿಸಲಾಯಿತು.

ಹಿರಿಯ ನ್ಯಾಯವಾದಿಗಳು, ಸಿದ್ದಾಪುರ ಟಿಎಂಎಸ್ ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ, ಲಯನ್ಸ್ ಡಿಸ್ಟ್ರಿಕ್ಟ್ ಮಾಜಿ ಚೇರಮನ್, ನ್ಯಾಯವಾದಿ ಡಾ.ರವಿ ಹೆಗಡೆ ಹೂವಿನಮನೆ, ವಕೀಲರ ಸಂಘದ ಪ್ರಭಾರಿ ಅಧ್ಯಕ್ಷ ಅಶೋಕ ಆರ್.ನಾಯ್ಕ, ಧಾರವಾಡ ಹೈಕೋರ್ಟಿನ ನ್ಯಾಯವಾದಿ ಸಿದ್ದಾಪುರ ನೇಗಾರಿನ ಎಸ್.ಆರ್. ಹೆಗಡೆ,ಸಿದ್ದಾಪುರ ವಕೀಲರಸಂಘದ ಕಾರ್ಯದರ್ಶಿ ಎಸ್.ಕೆ.ಗೌಡ ಅವರುಗಳು ಪಾಲ್ಗೊಂಡಿದ್ದರು. ಹುಟ್ಟಿದೂರಿನ ವಕೀಲರ ಸಂಘದವರು ಬಂದು ಗೌರವಿಸಿದ ಕುರಿತು ನ್ಯಾಯಮೂರ್ತಿ ಶ್ರೀಮತಿ ರಾಜೇಶ್ವರಿ ಹೆಗಡೆಯವರು ತಮ್ಮ ಸಂತಸವನ್ನು ಈ ಸಂದರ್ಭದಲ್ಲಿ ಹಂಚಿಕೊಂಡರು.



ಧಾರವಾಡ ಹೈಕೋರ್ಟ್ ವಿಭಾಗದಲ್ಲೇ ಉತ್ತರ ಕನ್ನಡ ಇರಲಿ

ಕಾರವಾರ: ಉತ್ತರ ಕನ್ನಡ ಜಿಲ್ಲೆಯನ್ನು ಮಂಗಳೂರು ಹೈಕೋರ್ಟ ವಿಭಾಗಕ್ಕೆ ಸೇರಿಸುವುದಕ್ಕೆತಮ್ಮ ವಿರೋಧವಿದ್ದು, ಧಾರವಾಡದಲ್ಲಿಯೇ ಮುಂದುವರಿಯಬೇಕು ಎಂದು ಕಾರವಾರದ ನ್ಯಾಯವಾದಿಗಳು ಆಗ್ರಹಿಸಿದ್ದಾರೆ.

ಪತ್ರಿಕಾಭವನದಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಹಿರಿಯ ನ್ಯಾಯವಾದಿ ನಾಗರಾಜ ನಾಯಕ, ಉತ್ತರ ಕನ್ನಡ ಜಿಲ್ಲೆಯನ್ನು ಮಂಗಳೂರು ಹೈಕೋರ್ಟ ಪೀಠಕ್ಕೆ ಸೇರಿಸುವ ಬಗ್ಗೆ ಎಲ್ಲೆಡೆ ಸಾರ್ವತ್ರಿಕವಾಗಿ ವಿರೋಧ ವ್ಯಕ್ತವಾಗಿದೆ. ನಾವು ಕೂಡ ಅದನ್ನು ವಿರೋಧಿಸುತ್ತೇವೆ.ನಮ್ಮ ವಕೀಲರ ಸಂಘಟನೆಯಿಂದಲೂ ವಿರೋಧವಿದೆ. ಒಂದು ವೇಳೆ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಮಧ್ಯವರ್ತಿ ಸ್ಥಳವನ್ನು ಗುರುತಿಸಿ ಹೊಸ ಹೈಕೋರ್ಟ ಪೀಠವನ್ನು ಸ್ಥಾಪಿಸಲಿ ಎಂದು ಆಗ್ರಹಿಸಿದರು. ಇಲ್ಲವಾದಲ್ಲಿ ಧಾರವಾಡದಲ್ಲಿಯೇ ಮುಂದುವರಿಯಬೇಕು ಎಂದರು.

ಧಾರವಾಡ ಬಿಟ್ಟು ನಮ್ಮ ಜಿಲ್ಲೆಯನ್ನು ಮಂಗಳೂರು ಹೈಕೋರ್ಟ ಪೀಠಕ್ಕೆ ಸೇರಿಸಿದ್ದಲ್ಲಿ ಜನರಿಗೆ, ನ್ಯಾಯವಾದಿಗಳಿಗೆ ಓಡಾಟಕ್ಕೆ ಸಮಸ್ಯೆಯಾಗುತ್ತದೆ. ಕಾರವಾರದಿಂದ ಮಂಗಳೂರು ಸುಮಾರು ಮೂರುನೂರು ಕಿ.ಮಿ ಗಳಷ್ಟು ದೂರವಿದ್ದು ಐದು ಗಂಟೆಗಳ ಪ್ರಯಾಣವಾಗುತ್ತದೆ. ಆದರೆ ಧಾರವಾಡ ಕೇವಲ 174 ಕಿ.ಮಿ ದೂರುದಲ್ಲಿದೆ. ಹಳಿಯಾಳ, ಜೋಯಿಡಾ ಮತ್ತು ಮುಂಡಗೋಡದವರಿಗೂ ದೂರವಾಗುತ್ತದೆ. ಯಾವುದೇ ಕಾರಣಕ್ಕೂ ಉತ್ತರ ಕನ್ನಡ ಜಿಲ್ಲೆಯನ್ನು ಧಾರವಾಡ ಹೈಕೋಟರ್ಟ ಪೀಠದ ಬದಲು ಮಂಗಳೂರಿಗೆ ಸೇರಿಸುವದಕ್ಕೆ ತಮ್ಮೆಲ್ಲರ ಒಕ್ಕೊರಲ ವಿರೋಧವಿದೆ ಎಂದು ನ್ಯಾಯವಾದಿ ನಾಗರಾಜ ನಾಯಕ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ನ್ಯಾಯವಾದಿಗಳಾದ ಸಂತೋಷ ಭಾಗ್ವತ, ಚರಣ ನಾಯ್ಕ, ಜ್ಯೋತಿ, ಶುಭಾ ಗಾಂವಕರ, ಎಂ.ಎಲ್.ನಾಯಕ ಮುಂತಾದವರು ಹಾಜರಿದ್ದರು.

ಕಿರುಸುದ್ದಿ

ವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆ



ರಟ್ಟೀಹಳ್ಳಿ: ರಟ್ಟೀಹಳ್ಳಿಯ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿರುದ್ಧಿ ಯೋಜನೆ ಧರ್ಮಗಿರಿ ಮಠದಲ್ಲಿವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆ ಮತ್ತು ತಂಬಾಕು ಸೇವನೆ ವಿರೋಧಿ ದಿನಾಚರಣೆಯ ಅಂಗವಾಗಿ ಕಾರ್ಯಕ್ರಮ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಗಳಾದ ರಾಮಪ್ಪ ಸದ್ರಪ್ಪನವರ ಅವರು ಕಾರ್ಯಕ್ರಮದಲ್ಲಿ ಹದಿಹರೆಯದ ಮಕ್ಕಳಿಗೆ ಹಾಗೂ ತಾಯಂದಿಯರಿಗೆ ಋತುಚಕ್ರ ಸಮಯದಲ್ಲಿ ಪಾಲಿಸಬೇಕಾದ ಅಗತ್ಯ ನೈರ್ಮಲ್ಯದ ಸಲಹೆಗಳ ಕುರಿತು ಆರೋಗ್ಯ ಶಿಕ್ಷಣವನ್ನು ನೀಡಿದರು. ಆರೋಗ್ಯ ನಿರೀಕ್ಷಣಾಧಿಕಾರಿಗಳು ನಾಗರಾಜ ಪ್ಯಾಟಿ ಮದ್ಯಪಾನ, ಧೂಮಪಾನ ಕುರಿತು ವಿಸ್ತರವಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಾ.ಆ. ಕೇಂದ್ರ ಕಡೂರು ಸಿಬ್ಬಂದಿಗಳು ಆದ ಬಸವನಗೌಡ ಹೆಚ್ಐಒ, ರೇಷ್ಮಾ ಪಿಹೆಚ್‌ಸಿಒ, ಹಾಗೂ ಆಶಾ ಕಾರ್ಯಕರ್ತೆಯರು ಮತ್ತು ಈ ಯೋಜನೆಯ ಜಿಲ್ಲಾ ಜನಜಾಗೃತ ವೇದಿಕೆ ಹಾವೇರಿ ಸದಸ್ಯರು ಆದ ಶಂಬಣ್ಣ ಗುಳ್ಳಪ್ಪನವರ, ಸುಭಾಷ್ ಹದಡಿ, ಮಾಜಿ ಗ್ರಾಪಂ ಅಧ್ಯಕ್ಷರು ಮಂಜುಪ್ಪ ಡಿ ಕಣಗೋಟಗಿ, ಸೂಪರ್ವೈಸರ್ ಆದ ಕೃಷ್ಣಮೂರ್ತಿ ಮತ್ತು ಎಲ್ಲಾ ಸೇವಾ ಪ್ರತಿನಿದಿಗಳು ಸಿಬ್ಬಂದಿಗಳು ತಾಯಿಂದಿರು ಮಕ್ಕಳು ಭಾಗವಹಿಸಿದ್ದರು.

ಪ್ರತಿಭಾ ಪುರಸ್ಕಾರ ನಾಳೆ

ಹಾವೇರಿ: ಮಾಜಿ ಸಿಎಂ ದಿ. ಎಸ್. ಆರ್. ಬೊಮ್ಮಾಯಿ ಅವರ 102ನೇ ''ಜನ್ಮ ದಿನೋತ್ಸವ'' ಹಾಗೂ ಶಿಗ್ಗಾಂವ ವಿಧಾನಸಭಾ ಮತಕ್ಷೇತ್ರದ ಪದವಿ ಮಹಾವಿದ್ಯಾಲಯಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಜೂ.6ರಂದು ಶಿಗ್ಗಾಂವ ಪಟ್ಟಣದ ಸವಣೂರು ರಸ್ತೆಯ ಬಸವರಾಜ ಬೊಮ್ಮಾಯಿ ಅವರ ಮನೆಯಲ್ಲಿ ಮಧ್ಯಾಹ್ನ 12ಕ್ಕೆ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಬಿಜೆಪಿ ಪ್ರಮುಖರು ಪಾಲ್ಗೊಳ್ಳಲಿದ್ದಾರೆ. ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು, ಹಾಗೂ ಅಭಿಮಾನಿಗಳು ಮತ್ತು ಸಾರ್ವಜನಿಕರು ಈ ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಕೋರಿದ್ದಾರೆ.

ನೋಡಲ್ ಅಧಿಕಾರಿ ನೇಮಕ

ಹಾವೇರಿ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ರ ಸಂಬಂಧ 1950 ಜಿಲ್ಲಾ ಮತದಾರರ ಸಹಾಯವಾಣಿ ಕೇಂದ್ರಕ್ಕೆ ಜೂನ್ 8ರಿಂದ ಅಕ್ಟೋಬರ್ 8ರವರೆಗೆ ಜಿಲ್ಲಾ ನೋಡಲ್ ಅಧಿಕಾರಿ ನೇಮಕ ಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಹಾಯಕ ನಿರ್ದೇಶಕ ಕುಮಾರ ವಡ್ಡಿನಕಟ್ಟಿ (ಮೊ.7259866537) ಜಿಲ್ಲಾ ನೋಡಲ್ ಅಧಿಕಾರಿಗಳಾಗಿದ್ದು, ಪ್ರತಿ ದಿನ ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಹಾಗೂ ಮಧ್ಯಾಹ್ನ 2ರಿಂದ ಸಂಜೆ 6ರವರೆಗೆ ಎರಡು ಪಾಳೆಯಲ್ಲಿ ಕೆಲಸ ನಿರ್ವಹಿಸಲು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಅರ್ಜಿ ಆಹ್ವಾನ

ಹಾವೇರಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳು/ ಮಾಧ್ಯಮ ಸಂಸ್ಥೆಗಳಲ್ಲಿ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ತಿದ್ದುಪಡಿ ಮಾಡಲಾದ ಹೊಸ ಮಾರ್ಗಸೂಚಿಯನ್ವಯ ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಪತ್ರಕರ್ತರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಪೂರ್ಣಾವಧಿ/ಅರೆಕಾಲಿಕ ವರದಿಗಾರರಾಗಿ ನೇಮಕವಾಗಿದ್ದಲ್ಲಿ ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ/ ಸ್ಥಾನಿಕ ಸಂಪಾದಕರ, ಮುಖ್ಯಸ್ಥರ ಶಿಫಾರಸ್ಸು ಪತ್ರ ಮತ್ತು ಸೇವಾ ಪ್ರಮಾಣ ಪತ್ರವನ್ನು ಲಗತ್ತಿಸಿ ಸೇವಾಸಿಂಧು ಪೋರ್ಟಲ್ https://sevasindhu.karnataka.gov.in ಮೂಲಕ ಆನ್‌ಲೈನ್‌ನಲ್ಲಿ ಜೂನ್ 20ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಟ್ಟೀಹಳ್ಳಿ: ಸ್ಥಳೀಯ ಪಟ್ಟಣ ಪಂಚಾಯತಿ ಕಾರ್ಯಾಲಯದಲ್ಲಿ ಗುರುವಾರ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಜಯಂತಿ ಆಚರಣೆ ಮಾಡಲಾಯಿತು. ಈ ಸಂಧರ್ಭದಲ್ಲಿ ಪಟ್ಟಣ ಪಂಚಾಯತ ಅಧ್ಯಕ್ಷರಾದ ರವೀಂದ್ರ ಮುದಿಯಪ್ಪನವರ, ಸದಸ್ಯರಾದ ಮಕಬೂಲಸಾಬ ಮುಲ್ಲಾ, ಮತ್ತು ಪಟ್ಟಣ ಪಂಚಾಯತಿಯ ಸಿಬ್ಬಂದಿಯವರು ಹಾಗೂ ಊರ ನಾಗರೀಕರು ಭಾಗವಹಿಸಿದ್ದರು.

ಧೂಮಪಾನದಿಂದ ವಿದ್ಯಾರ್ಥಿಗಳು ದೂರವಿರಿ

ಸಿದ್ದಾಪುರ: ಧೂಮಪಾನ ಮಾಡುವುದರಿಂದ ವ್ಯಕ್ತಿಯ ವ್ಯಕ್ತಿತ್ವ ನಾಶವಾಗುವುದರ ಜತೆಗೆ ಕುಟುಂಬವೂ ನಾಶವಾಗುತ್ತದೆ. ವಿದ್ಯಾರ್ಥಿಗಳು ಧೂಮಪಾನದಿಂದ ದೂರವಿದ್ದು ಉತ್ತಮ ನಾಗರಿಕರಾಗಬೇಕು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶಿರಸಿ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಶಂಕರ ಭಟ್ಟ ಸಿದ್ದಾಪುರ ಹೇಳಿದರು.

ತಾಲೂಕಿನ ಜಿಡ್ಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕವಂಚೂರು ವಲಯದಿಂದ ಮಂಗಳವಾರ ಆಯೋಜಿಸಿದ್ದ ಧೂಮಪಾನ ವಿರೋಧಿ ದಿನಾಚರಣೆಯ ಸಂಪನ್ಮೂಲವ್ಯಕ್ತಿಗಳಾಗಿ ಅವರು ಮಾತನಾಡಿದರು. ಆರೋಗ್ಯವಂತನಾಗಿ ಜೀವನ ನಡೆಸಬೇಕಾದರೆ ಎಲ್ಲ ದುಶ್ಚಟಗಳಿಂದ ದೂರ ಇರಬೇಕು. ಉತ್ತಮ ಆಹಾರ ಸೇವನೆ, ಸಜ್ಜನರ ಸಂಘ ಮಾಡಬೇಕು ಎಂದು ಅವರು ಕರೆನೀಡಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ರಮೇಶ ಹೆಗಡೆ ಹಾರ್ಸಿಮನೆ, ವಿದ್ಯಾರ್ಥಿಗಳು ತಮ್ಮ ಮನೆ ಹಾಗೂ ಸುತ್ತಮುತ್ತಲಿನಲ್ಲಿ ಯಾರು ಚಟಗಳನ್ನು ಮಾಡುತ್ತಾರೋ ಅವರಿಗೆ ಅದರಿಂದಾಗುವ ದುಷ್ಪರಿಣಾಮಗಳ ಕುರಿತು ಮನವರಿಕೆ ಮಾಡಿಕೊಡಬೇಕು ಎಂದರು. ಪ್ರೌಢಶಾಲೆಯ ಮುಖ್ಯಾಧ್ಯಾಪಕ ಪ್ರಕಾಶ ಭಟ್ಟ ಅಧ್ಯಕ್ಷತೆ ವಹಿಸಿದ್ದರು. ಪ್ರೌಢಶಾಲೆಯ ಶಿಕ್ಷಕರಾದ ಹರೀಶ ಬಿಳಗಿ, ರಾಘವೇಂದ್ರ ನಾಯ್ಕ, ನಾಸೀರ ಹುಸೇನ್, ಕೇಶವ ಹೆಗಡೆ, ಪೂರ್ಣಿಮಾ ಶಾಸ್ತ್ರಿ, ಶ್ವೇತಾ ಗೌಡ ಉಪಸ್ಥಿತರಿದ್ದರು. ಸೇವಾ ಪ್ರತಿನಿಧಿ ಅಣ್ಣಪ್ಪ ಸ್ವಾಗತಿಸಿದರು. ಗ್ರಾಮಾಭಿವೃದ್ಧಿ ಯೋಜನೆಯ ಮೇಲ್ವಿಚಾರಕಿ ಪೂರ್ಣಿಮಾ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕ ಚಂದ್ರಶೇಖರ ನಾಯ್ಕ ವಂದಿಸಿದರು.



ಸಿದ್ದಾಪುರ: ತಾಲೂಕಿನ ಜಿಡ್ಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕವಂಚೂರು ವಲಯದಿಂದ ಮಂಗಳವಾರ ಆಯೋಜಿಸಿದ್ದ ಧೂಮಪಾನ ವಿರೋಧಿ ದಿನಾಚರಣೆ ಕಾರ್ಯಕ್ರಮ ನಡೆಯಿತು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶಿರಸಿ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಶಂಕರ ಭಟ್ಟ ಸಿದ್ದಾಪುರ,ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ರಮೇಶ ಹೆಗಡೆ ಹಾರ್ಸಿಮನೆ, ಪ್ರೌಢಶಾಲೆಯ ಮುಖ್ಯಾಧ್ಯಾಪಕ ಪ್ರಕಾಶ ಭಟ್ಟ ಮತ್ತಿತರರು ಇದ್ದರು.

ಜೂ.20ರಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಆರಂಭ

ಸಾರ್ವಜನಿಕರ ಸಹಕಾರ ಅಗತ್ಯ: ಡಿಸಿ

ಹಾವೇರಿ: ಭಾರತ ಚುನಾವಣಾ ಆಯೋಗದ ನಿರ್ದೇಶನದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾಲ ಕಾಲಕ್ಕೆ ಆಗುತ್ತಲೇ ಇರುತ್ತದೆ. 1950ರಿಂದ ಇದುವರೆಗೂ ದೇಶಾದ್ಯಂತ ಆರು ಬಾರಿ ಮತದಾರರ ಪಟ್ಟಿ ಪರಿಷ್ಕರಣೆ ಆಗಿದೆ. ಆದರ ಮುಂದಿನ ಭಾಗವಾಗಿ ಭಾರತ ಚುನಾವಣಾ ಆಯೋಗದಿಂದ ಇದೀಗ ದೇಶಾದ್ಯಂತ 2025ರಿಂದ ಆರಂಭವಾಗಿದ್ದು, ಜಿಲ್ಲೆಯಲ್ಲಿ ಜೂ.20ರಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಆರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಹೇಳಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಭಾರತ ಚುನಾವಣಾ ಆಯೋಗವು ಈ ಹಿಂದೆ ದೇಶಾದ್ಯಂತ ಎರಡು ಹಂತದಲ್ಲಿ 2002ರಲ್ಲಿ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ ನಡೆಸಿತ್ತು. ರಾಜ್ಯದಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಪಟ್ಟಿ ತಯಾರಿಸುವ ಕುರಿತು ವೇಳಾಪಟ್ಟಿ ಪ್ರಕಟಿಸಿದ್ದು, ಆದರಂತೆ ಜೂ.20ರಿಂದ ಜಿಲ್ಲೆಯಲ್ಲಿ ಪ್ರಕ್ರಿಯೆ ಆರಂಭವಾಗಲಿದೆ. ಅದರಂತೆ ಜಿಲ್ಲೆಯಲ್ಲಿ ದೋಷರಹಿತ ಮತದಾರರ ಪಟ್ಟಿ ತಯಾರಿಕೆಗೆ ಸಾರ್ವಜನಿಕರು ಸಹಕಾರ ಅಗತ್ಯ ಎಂದರು.

ಬೇರೆಡೆ ವರ್ಗಾವಣೆ ಅಥವಾ ಸ್ಥಳಾಂತರದಿಂದ ಎರಡು ಕಡೆ ನೋಂದಣಿ ಆಗಿದ್ದನ್ನು ಸರಿಪಡಿಸಲು ಹಾಗೂ ನಿಧನರಾದವರನ್ನು ಪಟ್ಟಿಯಿಂದ ತೆಗೆದುಹಾಕಲಾಗುವುದು. ಇನ್ನು ಈ ಕುರಿತ ತಪ್ಪು ಮಾಹಿತಿ ಅಥವಾ ವದಂತಿಗಳನ್ನು ಸಾರ್ವಜನಿಕರು ನಂಬದೇ ನಿಮ್ಮ ವ್ಯಾಪ್ತಿಯ ಬಿಎಲ್‌ಒಗಳ ಮೂಲಕ ಸಮಗ್ರ ಮಾಹಿತಿ ಪಡೆಯಬಹುದು ಹಾಗೂ ನೋಂದಣಿ ಮಾಡಿಕೊಳ್ಳಬೇಕು ಎಂದರು.



> ಚುನಾವಣಾ ಆಯೋಗದ ನಿರ್ದೇಶನದಂತೆ ರಾಜಕೀಯ ಪಕ್ಷಗಳಿಗೆ ಪ್ರತಿ ಭೂತ್‌ಗಳಲ್ಲಿ ಬಿಎಲ್ ಎಗಳನ್ನು ನೇಮಕ ಮಾಡುವಂತೆ ತಿಳಿಸಲಾಗಿದೆ. ಅದರಂತೆ ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳು ಸೇರಿ 1482 ಮತಗಟ್ಟೆಗಳಿದ್ದು, ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ತಲಾ 1482 ಬೂತ್ ಲೆವಲ್ ಏಜೆಂಟರನ್ನು ನೇಮಿಸಿವೆ. ಜೆಡಿಎಸ್‌ನಿಂದ ರಾಣಿಬೆನ್ನೂರು ಕ್ಷೇತ್ರದ 266 ಬೂತ್‌ಗಳಿಗೆ ಬಿಎಲ್‌ಎಗಳು ನೇಮಕಗೊಂಡಿದ್ದಾರೆ.
>
> ■ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಚುನಾವಣಾಧಿಕಾರಿ, ಹಾವೇರಿ.

ಜೂ.20ರಿಂದ 29ರ ವರೆಗೆ ಚುನಾವಣಾ ಸಿಬ್ಬಂದಿಗೆ ತರಬೇತಿ, ಪೂರ್ವಸಿದ್ಧತೆ ಮುದ್ರಣ ಕಾರ್ಯ ಜರುಗಲಿದೆ. ಜೂ.30ರಿಂದ ಜು.29ರ ವರೆಗೆ ಒಂದು ತಿಂಗಳ ಕಾಲ ಬಿ.ಎಲ್.ಓ.ಗಳು ಪ್ರತಿ ಮತದಾರರ ಮನೆ-ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಜತೆಗೆ ಇದೇ ಅವಧಿಯಲ್ಲಿ ಮತಗಟ್ಟೆಗಳ ಪುನರ್ರಚನೆಯ ಕೆಲಸವೂ ನಡೆಯಲಿದೆ. ಆ.5ಕ್ಕೆ ಕರಡು ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ. ಈ ಕರಡು ಪಟ್ಟಿಗೆ ಸೆ.4ರ ವರೆಗೆ ಆಕ್ಷೇಪಣೆ ಅಥವಾ ದೂರುಗಳಿದ್ದಲ್ಲಿ ಸಲ್ಲಿಸಹುದು. ಅ.3ರೊಳಗೆ ಆಕ್ಷೇಪಣೆಗಳನ್ನು ಪರಿಶೀಲಿಸಿ ವಿಲೇವಾರಿ ಮಾಡಿ ಅಕ್ಟೋಬರ್ 7ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ವಿವರಿಸಿದರು.

ಜಿಲ್ಲೆಯಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳಲ್ಲಿ 13,36,130 ಮತದಾರರಿದ್ದಾರೆ. ಪ್ರತಿ ಮತಗಟ್ಟೆಗೆ ಬೂತ್‌ಮಟ್ಟದ ಅಧಿಕಾರಿಗಳ ನೇಮಕ ಮಾಡಲಾಗಿದ್ದು, ಬಿ.ಎಲ್.ಓಗಳ ಮೇಲುಸ್ತುವಾರಿಗೆ ಸೂಪರ್‌ವೈಸರ್ ನೇಮಕ ಮಾಡಲಾಗಿದೆ. ಬೂತ್‌ಗಳಲ್ಲಿ ಶುದ್ಧ ಮತದಾರರ ಪಟ್ಟಿ ಮತ್ತು ಮ್ಯಾಪಿಂಗ್ ಕೆಲಸಕ್ಕೆ ಸಹಕರಿಸಲು ಬೂತ್‌ಮಟ್ಟದ ಏಜೆಂಟರನ್ನು ನೇಮಕ ಮಾಡುವಂತೆ ಈಗಾಗಲೆ ರಾಜಕೀಯ ಪಕ್ಷಗಳಿಗೆ ಸೂಚಿಸಲಾಗಿದೆ. ಮನೆ-ಮನೆಗೆ ಬರುವ ಬಿಎಲ್‌ಓಳಿಗೆ ಮತದಾರರು ಅಗತ್ಯ ಸಹಕಾರ ನೀಡಬೇಕು. ಎಸ್‌ಐಆರ್ ಕುರಿತು ಸಾರ್ವಜನಿಕರಲ್ಲಿ ಯಾವುದೇ ರೀತಿ ಗೊಂದಲಗಳಿದ್ದಲ್ಲಿ ಆಯಾ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದರು.

ಫೆಸಿಲಿಟೇಷನ್ ಸೆಂಟರ್ ಸ್ಥಾಪನೆ: 2002ರ ಮತದಾರರ ಪಟ್ಟಿಗೆ 2025ರ ಮತದಾರರ ಪಟ್ಟಿಗೆ ಮ್ಯಾಪಿಂಗ್ ಮಾಡುವ ಎಸ್.ಐ.ಆರ್. ಕಾರ್ಯ ತೀವ್ರಗೊಳಿಸಲು ಬಿಎಲ್‌ಓ ಹಂತದಲ್ಲಿ ಫೆಸಿಲಿಟೇಷನ್ ಸೆಂಟರ್ ಸ್ಥಾಪನೆ ಮಾಡಲಾಗುತ್ತಿದೆ. ಬಿಎಲ್‌ಓ ಮತ್ತು ಬಿಎಲ್‌ಎಗಳು ಇದರ ಸದುಪಯೋಗ ಪಡೆದು ಪರಸ್ಪರ ಸಮನ್ವಯದಿಂದ ಎಸ್‌ಈಆರ್ ಕಾರ್ಯ ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು. ಈ ವೇಳೆ ಅಪರ ಜಿಲ್ಲಾಧಿಕಾರಿ ನಾಗರಾಜ ಇದ್ದರು.

ಬಿ.ಕೆ.ಹರಿಪ್ರಸಾದ್‌ಗೆ ಶಾಸಕ ಮಾನೆ ಸನ್ಮಾನ

ಹಾನಗಲ್ಲ: ಮಾಜಿ ಪ್ರಧಾನಿಗಳಾದ ದಿ.ಇಂದಿರಾ ಗಾಂಧಿ, ದಿ.ರಾಜೀವ್ ಗಾಂಧಿ ಅವರ ಕಾಲದಿಂದಲೂ ರಾಷ್ಟಮಟ್ಟದಲ್ಲಿ ಸಂಘಟನೆಯಲ್ಲಿ ವಿಶೇಷ ಛಾಪು ಮೂಡಿಸಿರುವ ಬಿ.ಕೆ. ಹರಿಪ್ರಸಾದ್ ಅವರಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನ ಒಲಿದು ಬಂದಿದ್ದು, ಹಲವು ದಶಕಗಳ ರಾಜಕೀಯ ಅನುಭವ, ಸಂಘಟನಾ ಸಾಮರ್ಥ್ಯ ಮತ್ತು ಜನಪರ ಚಿಂತನೆಯೊಂದಿಗೆ ಪಕ್ಷವನ್ನು ಇನ್ನಷ್ಟು ಬಲಿಷ್ಠಗೊಳಿಸಲಿದ್ದಾರೆ ಎಂದು ಶಾಸಕ ಶ್ರೀನಿವಾಸ ಮಾನೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಗುರುವಾರ ಬೆಂಗಳೂರಿನಲ್ಲಿ ಬಿ.ಕೆ.ಹರಿಪ್ರಸಾದ ಅವರನ್ನು ಭೇಟಿ ಮಾಡಿ ಅಭಿನಂದಿಸಿರುವ ಶ್ರೀನಿವಾಸ ಮಾನೆ, ಒಂದೆಡೆ ಆಡಳಿತದಲ್ಲಿ ಡಿ.ಕೆ.ಶಿವಕುಮಾರ, ಇನ್ನೊಂದೆಡೆ ಸಂಘಟನೆಯಲ್ಲಿ ಬಿ.ಕೆ.ಹರಿಪ್ರಸಾದ ಅವರ ನೇತೃತ್ವದಲ್ಲಿ ಗಟ್ಟಿ ನಾಯಕತ್ವ ಸಿಕ್ಕಿದೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಮುಂದಿನ ಸಚಿವ ಸಂಪುಟ ವಿಸ್ತರಣೆಯಲ್ಲಿ ಹೊಸ ಮುಖಗಳು ಹಾಗೂ ಯುವಕರಿಗೆ ಅವಕಾಶ ಸಿಗುವ ನಂಬಿಕೆ ಇದೆ. ಹಾವೇರಿ ಜಿಲ್ಲೆಯ ಪರಿಸ್ಥಿತಿಯನ್ನು ವರಿಷ್ಠರಿಗೆ ವಿವರಿಸಿದ್ದು, ಜಿಲ್ಲೆಗೆ ಸಚಿವ ಸ್ಥಾನ ಏಕೆ ನೀಡಬೇಕು? ಎನ್ನುವುದನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ. ಜಿಲ್ಲೆಗೆ ಸಚಿವ ಸ್ಥಾನ ಸಿಗುವ ವಿಶ್ವಾಸವಿದೆ ಎಂದಿರುವ ಶಾಸಕ ಮಾನೆ, ರಾಜಕಾರಣ ಎಂದರೆ ನಿತ್ಯವೂ ಸಹ ಸವಾಲು ಎದುರಿಸಬೇಕಾಗುತ್ತದೆ. ಸವಾಲು ಎದುರಿಸಿ, ಜನಸೇವೆಯ ಮೂಲ ಉದ್ದೇಶ ಈಡೇರಿಸಲು ಆದ್ಯತೆ ನೀಡಬೇಕಿದೆ ಎಂದಿದ್ದಾರೆ.

ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ಅವರ ಭೇಟಿಯ ಸಂದರ್ಭದಲ್ಲಿ ಶಿಗ್ಗಾಂವಿ, ಸವಣೂರು ಕ್ಷೇತ್ರದ ಶಾಸಕ ಯಾಸೀರಖಾನ್ ಪಠಾಣ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಇದ್ದರು.



ಹಾವೇರಿ: ಜೂ.6ಕ್ಕೆ ವಿದ್ಯುತ್ ವ್ಯತ್ಯಯ

ಹಾವೇರಿ: ಹಾವೇರಿ 110 ಕೆ.ವ್ಹಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಜೂನ್ 6ರಂದು ಶನಿವಾರ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ, 110ಕೆವಿ ಹಾವೇರಿ, 33 ಕೆ.ವಿ ಕೇರಿಮತ್ತಿಹಳ್ಳಿ ಹಾಗೂ ಗಾಂಧೀಪುರ ಮತ್ತು 33 ಕೆವಿ ಆಡೂರು ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಫೀಡರ್‌ಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಈ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಗೆ ಬರುವ ಸಂಪೂರ್ಣ ಹಾವೇರಿ ನಗರ, ಆಲದಕಟ್ಟಿ, ಚಿಕ್ಕಲಿಂಗದಹಳ್ಳಿ, ದೇವಗಿರಿ, ಡಿ.ಸಿ.ಆಫೀಸ್, ದೇವಗಿರಿ ಯಲ್ಲಾಪುರ, ನಾಗನೂರ, ಕೋಳೂರು, ಗಣಜೂರ, ಕರ್ಜಗಿ, ಯತ್ತಿನಹಳ್ಳಿ, ದೇವಿಹೊಸೂರ, ದಿಡಗೂರು, ಹಿರೇಲಿಂಗದಹಳ್ಳಿ, ನೆಲೋಗಲ್, ಹೊಂಬರಡಿ, ಹೊಸಳ್ಳಿ, ಕಬ್ಬೂರು, ಕಲ್ಲಾಪುರ, ಕನಕಾಪುರ, ಕೇರಿಮತ್ತಿಹಳ್ಳಿ, ಸಂಗೂರ, ತೋಟದಯಲ್ಲಾಪುರ, ವೆಂಕಟಾಪುರ, ಗೌರಾಪುರ, ಎಸ್.ಪಿ. ಆಫೀಸ್, ಕುರುಬಗೊಂಡ, ಬಿದರಗಡ್ಡಿ, ಕೋಡಿಹಳ್ಳಿ, ತಿಮ್ಮಾಪುರ, ಕುಳೇನೂರು, ಕಲ್ಲಾಪುರ, ಹೊಸೂರು ಹಾಗೂ ಸದರಿ ಫೀಡರ ವ್ಯಾಪ್ತಿಗೆ ಬರುವ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವದು. ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂನ ಹಾವೇರಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶಿಷ್ಟ ಚೇತನರಿಂದ ರಾಷ್ಟ್ರ ಪ್ರಶಸ್ತಿಗೆ ಅರ್ಜಿ ಆಹ್ವಾನ

ಹಾವೇರಿ: ಕೇಂದ್ರ ಸರ್ಕಾರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ವತಿಯಿಂದ 2026-27ನೇ ಸಾಲಿಗೆ ವಿಶ್ವ ವಿಕಲಚೇತನರ ದಿನಾಚರಣೆಯ ಸಮಾರಂಭದಲ್ಲಿ ವಿಶಿಷ್ಟಚೇತನರ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿಕಲಚೇತನರಿಂದ ರಾಷ್ಟ್ರ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಅರ್ಜಿ ಆಹ್ವಾನಿಸಲಾಗಿದೆ.

ಸಬಲೀಕರಣ, ಪುನರ್ವಸತಿ, ಶಿಕ್ಷಣ, ಕೌಶಲ್ಯ, ಅಭಿವೃದ್ಧಿ, ಉದ್ಯೋಗ ಸೃಷ್ಟಿ, ತಡೆರಹಿತ ವಾತಾವರಣ, ಸಂಶೋಧನೆ, ನಾವಿನ್ಯತೆ, ಕ್ರೀಡೆ, ಕಲೆ, ಸಾಹಿತ್ಯ ಮತ್ತು ಇತರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿಕಲಚೇತನರು ವೆಬ್‌ಸೈಟ್ www.awards.gov.in ಮೂಲಕ ಜು.31ರೊಳಗಾಗಿ ಅರ್ಜಿ ಸಲ್ಲಿಸಿ, ಆಂಗ್ಲ ಭಾಷೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸ್ಪಷ್ಟ ಶಿಫಾರಸ್ಸಿನೊಂದಿಗೆ ನಿಗದಿತ ಅವಧಿಯೊಳಗೆ ನೇರವಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕು. ಜಿಲ್ಲೆಯ ಸಾಧನೆಗೈದ ವಿಕಲಚೇತನರು ಇದರ ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ.ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಗಾಗಿ www.depwd.gov.in ವೆಬ್-ಸೈಟ್ ಅಥವಾ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು, ಜಿಲ್ಲಾ ಕಚೇರಿ, ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 04, ನೆಲಮಹಡಿ, ದೇವಗಿರಿ ಹಾವೇರಿ ಈ ವಿಳಾಸದಲ್ಲಿ ಸಂಪರ್ಕಿಸಬಹುದೆಂದು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಠಲ್ ಚೌಗಲೆಗೆ ಗೌರವ ಸನ್ಮಾನ



ಹಾನಗಲ್ಲ: ತಾಲೂಕಿನ ನೂತನ ದಂಡಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿಕೊಂಡ ವಿಠಲ್ ಚೌಗಲೆ ಅವರಿಗೆ ಅವರ ಕಚೇರಿಯಲ್ಲಿ ತಾಲೂಕು ಮಾಜಿ ಸೈನಿಕರ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಹಿಂದೆ ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಎಸ್. ರೇಣುಕಾವರನ್ನು ಬೆಂಗಳೂರು ಯಲಹಂಕ ತಾಲೂಕಿಗೆ ಗ್ರೇಡ್-1 ತಹಶೀಲ್ದಾರರಾಗಿ ವರ್ಗಾವಣೆಗೊಂಡಿದ್ದರಿಂದ ಶುಕ್ರವಾರ ಹಾನಗಲ್ಲ ತಹಶೀಲ್ದಾರರಾಗಿ ವಿಠಲ್ ಚೌಗಲೆಯವರು ಅಧಿಕಾರ ವಹಿಸಿಕೊಂಡಿದ್ದಾರೆ.

ಮಾಜಿ ಸೈನಿಕ ಸಂಘದ ತಾಲೂಕು ಅಧ್ಯಕ್ಷ ಶಂಕರ್ ಗೌಡ ಪಾಟೀಲ, ಉಪಾಧ್ಯಕ್ಷ ಚಂದ್ರಶೇಖರ್ ರಾಮಪುರ, ಕಾರ್ಯದರ್ಶಿ ಕುಮಾರ ಯಳವಟ್ಟಿ, ಖಜಾಂಚಿ ಅರುಣ್ ಕುಮಾರ್ ಮೆಳಿಹಳ್ಳಿ, ನಿಂಗಪ್ಪ ಕನ್ನೇಶ್ವರ್, ಮೌನೇಶ್ವರ ಬಡಿಗೇರ್, ನಾಗಪ್ಪ ಕುಮ್ಮೂರ್, ಸಂತೋಷ್ ಆರೆರ್, ಗುಡ್ಡಪ್ಪ ಕಬ್ಬುರ್, ಫಕ್ಕೀರೇಶ ಅಂಬಿಗೇರ, ಜಗದೀಶ್ ಮಡಿವಾಳರ, ವಿನಯ್ ಬಂಕನಾಳ, ರೇವಣಪ್ಪ ಕೊಪ್ಪದ್, ಮಲ್ಲಿಕಾರ್ಜುನ್ ಸುಣಗಾರ, ಮಹಾಂತೇಶ್ ತಾವರಗೇರಿ ಇತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ರಟ್ಟೀಹಳ್ಳಿ: ಪಟ್ಟಣದ ಚಿಕ್ಕಯಡಚಿ ರಸ್ತೆ ಅಗಲೀಕರಣ ಸಲುವಾಗಿ ರಸ್ತೆಯ ಬದಿಯಲ್ಲಿರುವ ವಿದ್ಯುತ್ ಲೈನ್ ಸ್ಥಳಾಂತರಿಸುವ ಕಾಮಗಾರಿ ಇರುವುದರಿಂದ ಜೂ. 6ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ರಟ್ಟೀಹಳ್ಳಿ ಪಟ್ಟಣದ ಮಹಾಲಕ್ಷ್ಮೀ ಸರ್ಕಲ್ ನಿಂದ ಚಿಕ್ಕಯಡಚಿ ರಸ್ತೆಯ ಫೈರ್ ಸ್ಟೇಷನ್‌ವರೆಗೆ ಪಟ್ಟಣದ ವಿದ್ಯುತ್ ಮತ್ತು ಸಣ್ಣಗುಬ್ಬಿ ಗ್ರಾಮದ ವಿದ್ಯುತ್ ಸರಬರಾಜು ಇರುವುದಿಲ್ಲ, ಆದ್ದರಿಂದ ಎಲ್ಲ ವಿದ್ಯುತ್ ಗ್ರಾಹಕರು ಸಹಕರಿಸಲು ಸಹಾಯಕ ಇಂಜಿನಿಯರ್ (ವಿ) ಹೆಸ್ಕಾಂ ರಟ್ಟೀಹಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಪ್ಪಿರುವ ಮಹಜರು ಸರಿಪಡಿಸಲು ಆಗ್ರಹ

ಸಿದ್ದಾಪುರ: ಅರಣ್ಯವಾಸಿಗಳ ಸಾಗುವಳಿ ಕ್ಷೇತ್ರದ ಮಹಜರ್ ಪ್ರಕ್ರಿಯೆಯಲ್ಲಿ ಉಂಟಾದ ನ್ಯೂನ್ಯತೆಯಿಂದಾಗಿ ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿಗಳು ತಿರಸ್ಕೃತವಾಗಿವೆ. ಈ ಕುರಿತು ಸ್ಪಷ್ಟೀಕರಣ ಕೇಳಿದ್ದರೂ ಜಿಲ್ಲಾಧಿಕಾರಿಗಳಿಂದ ಉತ್ತರ ಬಾರದ ಹಿನ್ನೆಲೆಯಲ್ಲಿ ಬುಧವಾರ ಸಿದ್ದಾಪುರ ತಹಶೀಲ್ದಾರ್ ಎಮ್. ಆರ್.ಕುಲಕರ್ಣಿಯವರೊಂದಿಗೆ ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ನೇತೃತ್ವದಲ್ಲಿ ಸೌಹಾರ್ದಯುತ ಚರ್ಚೆ ನಡೆಸಲಾಯಿತು ಎಂದು ಅರಣ್ಯ ಭೂಮಿ ಹೋರಾಟಗಾರರ ವೇದಿಕೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಾಜ್ಯ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಮಹಜರ್ ಪ್ರಕ್ರಿಯೆ ನಡೆಸುತ್ತಿರುವುದಕ್ಕೆ ಜಿಲ್ಲಾಧಿಕಾರಿಗೆ ಪತ್ರ ನೀಡಿ ಮೂರು ತಿಂಗಳಾದರೂ ಉತ್ತರ ಬಂದಿಲ್ಲ, ಮುಂದೆ ನ್ಯೂನ್ಯತೆಯನ್ನು ಸರಿಪಡಿಸಿ ಮಹಜರು ಪ್ರಕ್ರಿಯೆ ಮುಂದುವರಿಸಬೇಕು. ಮಹಜರ್ ಸಂದರ್ಭದಲ್ಲಿ ಅಧಿಕಾರಿಗಳ ತಂಡದೊಂದಿಗೆ ಸ್ಥಳೀಯ ಮುಖಂಡರನ್ನು ಸೇರಿಸಿಕೊಳ್ಳಬೇಕು. ಜಂಟಿ ಮಹಜರ್ ಯಾಂತ್ರೀಕವಾಗಿ (ಬಿಟ್ಟಸ್ಥಳದಿಂದ ಕೂಡಿದ ಬೆರಳಚ್ಚು ಪ್ರತಿ) ತಯಾರಿಸಿದ್ದು, ಅಪೂರ್ಣ ಅಂಶಗಳಿಂದ ಕೂಡಿದೆ.

ಜಂಟಿ ಮಹಜರ್ ಸಂದರ್ಭದಲ್ಲಿ ಅರಣ್ಯವಾಸಿಗೆ ಮುಂಚಿತವಾಗಿ ನೋಟಿಸ್ ಇಲ್ಲವೇ ಮಾಹಿತಿ ನೀಡದೇ, ಅರಣ್ಯವಾಸಿಗಳ ಅನುಪಸ್ಥಿತಿಯಲ್ಲಿ ಸ್ಥಳ ಪರಿಶೀಲನೆ ಮಾಡುವುದಿಲ್ಲ ಎಂದು ಪ್ರಸ್ತಾಪಿಸಲಾಗಿತ್ತು. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಮಹಜರು ನಡೆಸಲಾಗಿದೆ ಎಂಬ ವಿಷಯವನ್ನು ಹೋರಾಟಗಾರರು ತಹಶೀಲ್ದಾರರ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಸಹಾಯಕ ಅಧೀಕ್ಷಕ ಕೇಶವ ಮೂರ್ತಿ ಹಿಮ್ಮಡಿ, ಹೆಚ್ಚುವರಿ ಅಧೀಕ್ಷಕ ಶಿವರಾಯಪ್ಪ ಉಪಸ್ಥಿತರಿದ್ದರು. ತಿರಸ್ಕೃತ ಅರ್ಜಿಗಳ ಕುರಿತು ಕೇಳಿರುವ ಸ್ಪಷ್ಟೀಕರಣಕ್ಕೆ ಮುಂದಿನ ಹತ್ತು ದಿವಸಗಳ ಒಳಗೆ ಉತ್ತರ ನೀಡಲಾಗುವುದೆಂದು ತಹಶೀಲ್ದಾರರು ಭರವಸೆ ನೀಡಿದರು.

ಸಂಚಾಲಕ ಮಹಾಬಲೇಶ್ವರ ನಾಯ್ಕ ಬೇಡ್ಕಣಿ, ಹರಿಹರ ನಾಯ್ಕ ಓಂಕಾರ ಹೆಗ್ಗರಣೆ, ಸೀತಾರಾಮ ನಾಯ್ಕ ಹುಕ್ಕಳಿ, ಕೆ.ಟಿ.ನಾಯ್ಕ ಹೆಗ್ಗೇರಿ, ಮಂಜುನಾಥ ಮಡಿವಾಳ ಕಿಲಾರ, ಬಿ.ಡಿ.ನಾಯ್ಕ ಕುರಿಗೆತೋಟ, ಅಬ್ದುಲ್ ಸುಭಾನ ಅರೆಂದೂರು, ನಾರಾಯಣ ನಾಯ್ಕ ಗಾಳಮಾಂವ, ಸುಧಾಕರ ಮಡಿವಾಳ ಬಿಳಗಿ, ರಾಮಚಂದ್ರ ನಾಯ್ಕ ಬೇಡ್ಕಣಿ, ಎಮ್.ಟಿ.ಗೌಡ ಹೆಗ್ಗರಣೆ, ಆರ್.ಟಿ.ನಾಯ್ಕ ಅರಳಿಮಕ್ಕಿ, ಶ್ರೀಧರ ಹೆಗಡೆ ಕೆರೆಮನೆ, ಚಂದ್ರಶೇಖರ ಕೊಡಿಯಾ ಅಳಗೋಡ, ಹಾಜಿರಾ ಬೇಗಂ ಕಾನಗೋಡ, ಜಗದೀಶ ನಾಯ್ಕ ಶಿರಳಗಿ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಸಮತೋಲಿತ ರಸಗೊಬ್ಬರ ಬಳಕೆಗೆ ಆದ್ಯತೆ ನೀಡಿ: ಬೆನಕನಕೊಂಡ

ಬ್ಯಾಡಗಿ: ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಂಡು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ರೈತರು ಸಮತೋಲಿತ ರಸಗೊಬ್ಬರ ಬಳಕೆಗೆ ಆದ್ಯತೆ ನೀಡಬೇಕು ಎಂದು ಬ್ಯಾಡಗಿ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಮಂಜುನಾಥ ಬೆನಕನಕೊಂಡ ಹೇಳಿದರು.

ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಕೇಂದ್ರ ಸರ್ಕಾರದ ಖೇತ್ ಬಚಾವೋ ಆಂದೋಲನದ ಅಂಗವಾಗಿ ಆಯೋಜಿಸಲಾದ ''ಸಮತೋಲಿತ ರಸಗೊಬ್ಬರ ಬಳಕೆ ಕುರಿತು ರೈತರ ಜಾಗೃತಿ ಕಾರ್ಯಕ್ರಮ'' ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಹಾಯಕ ಕೃಷಿ ನಿರ್ದೇಶಕರಾದ ಗಣೇಶ್ ಕಮ್ಮಾರ್, ಮಣ್ಣಿನ ಆರೋಗ್ಯ ಸಂರಕ್ಷಣೆ ಹಾಗೂ ಸುಸ್ಥಿರ ಕೃಷಿಯನ್ನು ಉತ್ತೇಜಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ದೇಶಾದ್ಯಂತ ಖೇತ್ ಬಚಾವೋ ಅಭಿಯಾನವನ್ನು ಹಮ್ಮಿಕೊಂಡಿದೆ.



ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆಯನ್ನು ನಿಯಂತ್ರಿಸುವುದು, ನೈಸರ್ಗಿಕ ಕೃಷಿ ಪದ್ಧತಿಗಳನ್ನು ಉತ್ತೇಜಿಸುವುದು ಹಾಗೂ ಮಣ್ಣು ಪರೀಕ್ಷೆ ಆಧಾರಿತ ಗೊಬ್ಬರ ಬಳಕೆಯ ಬಗ್ಗೆ ರೈತರಿಗೆ ಅರಿವು ಮೂಡಿಸುವುದು ಈ ಅಭಿಯಾನದ ಪ್ರಮುಖ ಗುರಿಗಳಾಗಿವೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಮುಖ್ಯಸ್ಥರಾದ ಡಾ. ಎ.ಹೆಚ್. ಬಿರಾದರ್, ಇತ್ತೀಚಿನ ದಿನಗಳಲ್ಲಿ ಯೂರಿಯಾ ಸೇರಿದಂತೆ ಕೆಲವು ರಸಗೊಬ್ಬರಗಳ ಅತಿಯಾದ ಬಳಕೆಯಿಂದ ಮಣ್ಣಿನಲ್ಲಿನ ಪೋಷಕಾಂಶಗಳ ಸಮತೋಲನ ಹದಗೆಡುತ್ತಿದ್ದು, ಬೆಳೆಗಳ ಉತ್ಪಾದನಾ ಸಾಮರ್ಥ್ಯ ಕುಂಠಿತವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಮಣ್ಣಿನ ಪರೀಕ್ಷಾ ವರದಿಯನ್ನು ಆಧರಿಸಿ ಬೆಳೆಗಳಿಗೆ ಅಗತ್ಯವಿರುವ ಪ್ರಮಾಣದಲ್ಲಿ ಮಾತ್ರ ಗೊಬ್ಬರಗಳನ್ನು ಬಳಸುವುದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗುವುದರ ಜೊತೆಗೆ ಗುಣಮಟ್ಟದ ಇಳುವರಿ ಪಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಡಾ. ರಶ್ಮಿ, ಸಮತೋಲಿತ ರಸಗೊಬ್ಬರ ಬಳಕೆಯ ಮಹತ್ವ, ಸಾವಯವ ಮತ್ತು ಜೈವಿಕ ಗೊಬ್ಬರಗಳ ಉಪಯೋಗ, ಹಸಿರು ಗೊಬ್ಬರ ಬೆಳೆಗಳ ಅಳವಡಿಕೆ, ಮಣ್ಣಿನ ಆರೋಗ್ಯ ಸಂರಕ್ಷಣೆ ಹಾಗೂ ಸಮಗ್ರ ಪೋಷಕಾಂಶ ನಿರ್ವಹಣೆ ಕುರಿತು ರೈತರಿಗೆ ವಿವರವಾದ ಮಾಹಿತಿ ನೀಡಿದರು. ರೈತರು ಮಣ್ಣಿನ ಆರೋಗ್ಯ ಕಾರ್ಡ್‌ಗಳನ್ನು ಸಮರ್ಪಕವಾಗಿ ಬಳಸಿಕೊಂಡು ವೈಜ್ಞಾನಿಕ ಶಿಫಾರಸುಗಳಂತೆ ಗೊಬ್ಬರ ಬಳಕೆ ಮಾಡುವಂತೆ ಕರೆ ನೀಡಿದರು.ಕೃಷಿಕ ಸಮಾಜದ ಸದಸ್ಯ ಶಂಕರಗೌಡ ಪಾಟೀಲ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೃಷಿಕ ಸಮಾಜದ ಉಪಾಧ್ಯಕ್ಷ ಎನ್.ಟಿ. ಪಾಟೀಲ, ಸದಸ್ಯರಾದ ಬಸವರಾಜ ಸಂಕಣ್ಣನವರ, ಮಲ್ಲನಗೌಡ ಭದ್ರಗೌಡ್ರ, ಶಿವಪ್ಪ ಪೋಟೇರ, ಎಸ್.ಎನ್. ತೋಟದ, ಕೃಷಿ ಅಧಿಕಾರಿಗಳಾದ ನಿಂಗಪ್ಪ ಕಾಕೋಳ, ನಾಗರಾಜ ಬನ್ನಿಹಟ್ಟಿ, ಕೃಷಿ ಇಲಾಖೆಯ ಸಿಬ್ಬಂದಿ ಹಾಗೂ ತಾಲೂಕಿನ ರೈತ ಬಾಂಧವರು ಭಾಗವಹಿಸಿದ್ದರು.

ಕಾರ್ಯಕ್ರಮದ ಮೂಲಕ ರೈತರಿಗೆ ಮಣ್ಣಿನ ಆರೋಗ್ಯ ಸಂರಕ್ಷಣೆ, ಸಮತೋಲಿತ ಪೋಷಕಾಂಶ ನಿರ್ವಹಣೆ ಹಾಗೂ ಸುಸ್ಥಿರ ಕೃಷಿ ಪದ್ಧತಿಗಳ ಕುರಿತು ಅರಿವು ಮೂಡಿಸಲಾಯಿತು.

ಸಮಯಕ್ಕೆ ಬಾರದ ಬಸ್: ಪ್ರಯಾಣಿಕರಿಂದ ಪ್ರತಿಭಟನೆ

ಮುಂಡಗೋಡ: ಪಟ್ಟಣದಿಂದ ಯಲ್ಲಾಪುರಕ್ಕೆ ತೆರಳುವ ಬಸ್ ಸರಿಯಾದ ಸಮಯಕ್ಕೆ ಬಾರದ ಕಾರಣ ಪ್ರಯಾಣಿಕರು ಬಸ್ ನಿಲ್ದಾಣದಲ್ಲಿ ಪ್ರತಿಭಟಿಸಿದ ಘಟನೆ ಬುಧವಾರ ನಡೆದಿದೆ.

ಮುಂಡಗೋಡದಿಂದ ಯಲ್ಲಾಪುರ, ಯಲ್ಲಾಪುರ ಮುಂಡಗೋಡದ ಮಾರ್ಗದಲ್ಲಿ ಟಿಬೆಟಿಯನ್ ಕ್ಯಾಂಪ್, ಬಡ್ಡಿಗೇರಿ, ಗುಂಜಾವತಿ, ಮೈನಳ್ಳಿ, ಶಿಡ್ಲಗುಂಡಿ, ಹುಣಸಿಟ್ಟಿಕೊಪ್ಪ ಸೇರಿದಂತೆ ಇನ್ನು ಹಲವಾರ ಗ್ರಾಮಗಳಿವೆ. ಈ ಗ್ರಾಮಗಳಿಂದ ಮುಂಡಗೋಡ ಯಲ್ಲಾಪುರ, ಯಲ್ಲಾಪುರದಿಂದ ಮುಂಡಗೋಡಕ್ಕೆ ಅನೇಕ ವಿದ್ಯಾರ್ಥಿಗಳು, ನೌಕರರು, ವ್ಯಾಪಾರಸ್ಥರು ಹಾಗೂ ಸಾರ್ವಜನಿಕರು ದಿನನಿತ್ಯದ ಕೆಲಸಕಾರ್ಯಗಳಿಗೆ ತೆರಳುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಮಾರ್ಗಕ್ಕೆ ಸಮಯಕ್ಕೆ ಸರಿಯಾಗಿ ಬಾರದೆ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ.

ಬೆಳಿಗ್ಗೆಯೂ ಸಹ ಯಲ್ಲಾಪುರದಿಂದ ಮುಂಡಗೋಡಕ್ಕೆ ಬರುವ ಬಸ್ ಎರಡು ಗಂಟೆಗಳ ಕಾಲ ಕಾದರು ಬಸ್ ಬಾರದಿದ್ದಾಗ ಖಾಸಗಿ ವಾಹನದಲ್ಲಿ ಮುಂಡಗೋಡಕ್ಕೆ ಬಂದಿದ್ದೇವೆ. ಇತ್ತಿಚೆಗೆ ನಿತ್ಯವೂ ಇದೆ ಪರಿಸ್ಥಿತಿಯಾಗಿದೆ. ಬಸ್ಸಿಗಾಗಿ ಕಾದು ಕಾದು ನಿಲ್ದಾಣ ಅಧಿಕಾರಿಗಳ



ಜೊತೆ ಜಗಳವಾಡುವ ಪರಸ್ಥಿತಿ ಎದುರಾಗಿದೆ. ಬುಧವಾರವೂ ಸಹ ಮಧ್ಯಾಹ್ನ 3ಗಂಟೆಯಿಂದ ಬಸ್ಸಿಗಾಗಿ ಹಲವಾರು ಪ್ರಯಾಣಿಕರು 6 ಗಂಟೆಯವರಿಗೂ ಕಾದು ಕುಳುತ್ತಿದ್ದಾರೆ. ಆದರೂ ಈವರೆಗೂ ಬಸ್ ಬಂದಿಲ್ಲ. ಈ ವಿಷಯವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದರೆ ರಜೆಯಲ್ಲಿ ಇದ್ದೇವೆ, ಬಸ್ ಇಲ್ಲ ಎಂದು ಹಾರಕೆಯ ಉತ್ತರ ನೀಡುತ್ತಾರೆ ಎಂದು ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಗಂಟೆಗಳ ಕಾಲ ಕಾದು ನಿಂತರು ಬಸ್ ಸಮಯಕ್ಕೆ ಸರಿಯಾಗಿ ಬಾರದ ಕಾರಣ ಪ್ರಯಾಣಿಕರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆಗೆ ಮುಂದಾದರು.

ಭಾನುವಾರ ಸಂಜೆ ಮುಂಡಗೋಡದಿಂದ ಹುಬ್ಬಳ್ಳಿ ಮಾರ್ಗಕ್ಕೆ ಹೋಗುವ ಬಸ್‌ಗಳು ಸರಿಯಾದ ಸಮಯಕ್ಕೆ ಬಾರದ ಕಾರಣ ಪ್ರಯಾಣಿಕರು ತೊಂದರೆ ಅನುಭವಿಸಿ ಪ್ರತಿಭಟನೆ ಮಾಡಿದ್ದರು.ಅಲ್ಲದೆ ಕೆಲ ಬಸ್ ಬಂದರೂ ಮಾರ್ಗ ಮಧ್ಯದಲ್ಲಿ ಕೆಟ್ಟು ನಿಲ್ಲುವ ಪರಿಸ್ಥಿತಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿನಿತ್ಯ ಮುಂಡಗೋಡ ಘಟಕದಿಂದಲೇ ಬೆಳಿಗ್ಗೆ ಮತ್ತು ಸಂಜೆ ಹುಬ್ಬಳ್ಳಿ ಮಾರ್ಗಕ್ಕೆ ಬಸ್ಸಿನ ವ್ಯವಸ್ಥೆ ಮಾಡಬೇಕೆಂದು ಪ್ರಯಾಣಿಕರು ಆಗ್ರಹಿಸಿದ್ದು ಇಲ್ಲಿ ಸ್ಮರಿಸಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಬಸ್ ಸಮಸ್ಯೆ ಇನ್ನಷ್ಟು ಗಂಭೀರವಾಗಿದೆ. ಸರಿಯಾದ ಸಮಯಕ್ಕೆ ಬಸ್‌ಗಳು ಬಾರದ ಕಾರಣ ಪ್ರಯಾಣಿಕರು ತುಂಬಿಕೊಂಡು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮುಂಡಗೋಡದಲ್ಲಿಯೇ ಬಸ್ ಡಿಪೋ ಘಟಕ ಇದೆ. ಆದರೂ ಬಸ್ಸಿನ ಸೌಕರ್ಯವಿಲ್ಲರುವುದು ವಿಪರ್ಯಾಸ ಸಂಗತಿಯಾಗಿದೆ. ಹೆಸರಿಗೆ ಮಾತ್ರ ಬಸ್ ಡಿಪೋ ಘಟಕ ಮುಂಡಗೋಡದಲ್ಲಿ ಇದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕಿರುಸುದ್ದಿ

ಸೈಕಲ್ ಅಭಿಯಾನ ಜೂ.7ರಂದು

ಬೆಳಗಾವಿ: ಫಿಟ್ ಇಂಡಿಯಾ ಆಂದೋಲನದ ಅಡಿಯಲ್ಲಿ ಜೂ.7ರಂದು ಭಾನುವಾರ ಸೈಕಲ್ ಚಾಲನೆ ಅಭಿಯಾನವನ್ನು ಬೆಳಗಾವಿ ಜಿಲ್ಲಾ ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಫಿಟ್ ಇಂಡಿಯಾ ಚಳವಳಿಯು ಪ್ರತಿಯೊಬ್ಬ ನಾಗರೀಕರ ದೈನಂದಿನ ಜೀವನದಲ್ಲಿ ದೈಹಿಕ ಫಿಟ್ನೆಸ್ ಉಪಕ್ರಮದಡಿಯಲ್ಲಿ ಸಂಡೇಸ್ ಆನ್ ಸೈಕಲ್ ಅಭಿಯಾನದ ಮೂಲಕ ವಿಶ್ವ ಬೈಸಿಕಲ್ ದಿನಾಚರಣೆಯ ಅಂಗವಾಗಿ ತಾಲೂಕು ಮತ್ತು ಗ್ರಾಪಂ ಮಟ್ಟದಲ್ಲಿ ಸ್ವಚ್ಚತಾ ರೈಡ್ ವಿಷಯಧಾರಿತ ಬೃಹತ್ ಸೈಕಲ್ ಚಾಲನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಂಡೇಸ್ ಆನ್ ಸೈಕಲ್ ಕಾರ್ಯಕ್ರಮವು ಜೂನ್ 7ರಂದು ಬೆಳಗ್ಗೆ 7.30ಕ್ಕೆ ನಗರದ ಚೆನ್ನಮ್ಮ ವೃತ್ತದಿಂದ ಜಲ್ಲಾ ಆಸ್ಪತ್ರೆ ಮಾರ್ಗವಾಗಿ-ಜಿಲ್ಲಾ ಕ್ರೀಡಾಂಗಣದವರೆಗೆ ಆಯೋಜಿಸಿ ಜುಂಬಾ ಅಥವಾ ಸ್ಕಿಪ್ಪಿಂಗ್ ರೋಪ್ ನಂತಹ ಪೂರಕ ಫಿಟ್ನೆಸ್ ಚಟುವಟಿಕೆಗಳು ಜರುಗುವವು ಎಂದು ಜಿಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಶಸ್ತ್ರ ಚಿಕಿತ್ಸಾ ಕಾರ್ಯಾಗಾರ ಜೂ.13, 14ರಂದು

ಚಿಕ್ಕೋಡಿ: ಸಮೀಪದ ಕೊಲ್ಹಾಪುರ ಜಿಲ್ಲೆಯ ಕನ್ಹೇರಿ ಮಠದ ಆವರಣದಲ್ಲಿರುವ ಸಿದ್ದಗಿರಿ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಲ್ಲಿ ಡಾ. ಶಿವಶಂಕರ ಮರಜಕ್ಕೆ ಅವರು 17 ಗಂಟೆಗಳ ಕಾಲ ಬ್ರೈನ್ ಬೈಪಾಸ್ ಶಸ್ತ್ರ ಚಿಕಿತ್ಸೆಯನ್ನು ನಡೆಸುವ ಮೂಲಕ ಸಾಧನೆ ಮಾಡಿದ್ದಾರೆ. ಹೀಗಾಗಿ ಜೂನ್ 13,14ರಂದು ಬೈಪಾಸ್ ಶಸ್ತ್ರ ಚಿಕಿತ್ಸಾ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ರಕ್ತನಾಳದ ಬಲೂನ್ ಗಂಟು (ಎನ್ಯೂರಿಝಮ್) ಚಿಕಿತ್ಸೆ ನೀಡುವಾಗ ಮೆದುಳನ್ನು ರಕ್ಷಿಸಲು 17 ಗಂಟೆಗಳ ಶಸ್ತ್ರಚಿಕಿತ್ಸೆಗೆ ಅತ್ಯಂತ ಸಂಕೀರ್ಣವಾದ ಬೈಪಾಸ್ ಚಿಕಿತ್ಸೆ ಅಗತ್ಯವಿತ್ತು. ಒಂದು ತಪ್ಪು ಹೆಜ್ಜೆಯು ಮೆದುಳಿನ ರಕ್ತದ ಹರಿವನ್ನು ಸಂಪೂರ್ಣವಾಗಿ ನಿಲ್ಲಿಸಿ ಸಾವು ಸಂಭವಿಸುವ ಸಾಧ್ಯತೆ ಇತ್ತು. ತಂಡದ ಸೂಕ್ಷ್ಮ ಸಿದ್ಧತೆಯೇ ಈ ಯಶಸ್ವಿಗೆ ಕಾರಣವಾಗಿದೆ ಎಂದು ಶಸ್ತ್ರ ಚಿಕಿತ್ಸೆ ಮಾಡಿದ ಡಾ. ಶಿವಶಂಕರ ಮರಜಕ್ಕೆ ತಿಳಿಸಿದರು.

ಇದನ್ನು ಗುರುತಿಸಿ ಪ್ರತಿಷ್ಠಿತ ನ್ಯೂರೋಲಾಜಿಕಲ್ ಸೊಸೈಟಿ ಆಫ್ ಇಂಡಿಯಾ ಸಂಸ್ಥೆ ಜೂನ್ 13,14ರಂದು ಬೈಪಾಸ್ ಶಸ್ತ್ರ ಚಿಕಿತ್ಸಾ ಕಾರ್ಯಾಗಾರವನ್ನು ಕನ್ಹೇರಿಯ ಸಿದ್ಧಗಿರಿ ಆಸ್ಪತ್ರೆ ಆವರಣದಲ್ಲಿ ಆಯೋಜಿಸಲಾಗಿದೆ. ಭಾರತದಲ್ಲಿ ಮೊದಲ ಭಾರಿಗೆ ಗ್ರಾಮೀಣ ಧರ್ಮಾದಾಯ ಆಸ್ಪತ್ರೆಗೆ ಅವಕಾಶ ಸಿಕ್ಕಿದೆ. ಈ ಕಾರ್ಯಾಗಾರದಲ್ಲಿ ಭವಿಷ್ಯದ ನರಶಸ್ತ್ರಚಿಕಿತ್ಸಕರಿಗೆ ಸುಧಾರಿತ ಬೈಪಾಸ್ ತಂತ್ರಗಳ ತರಬೇತಿ ನೀಡಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಖಾನಾಪುರ: ತಾಲೂಕಿನ ವಿವಿಧ ಗ್ರಾಮಗಳಲ್ಲಿ ಖಾಲಿ ಇರುವ ಒಟ್ಟು 7 ಅಂಗನವಾಡಿ ಕಾರ್ಯಕರ್ತೆಯರು ಮತ್ತು 47 ಸಹಾಯಕಿಯರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.16 ಕೊನೆಯ ದಿನ. ಸ್ಥಳೀಯ ಅಭ್ಯರ್ಥಿಗೆ ಮತ್ತು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪೂರೈಸಿದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಪಟ್ಟಣದ ಜಾಂಬೋಟಿ ರಸ್ತೆಯ ಶಿಶು ಅಭಿವೃದ್ಧಿ ಯೋಜನೆ ತಾಲೂಕು ಕಚೇರಿ ಅಥವಾ ಗ್ರಾಪಂ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯೋಗ ತರಬೇತಿ ಶಿಬಿರ



ರಾಯಬಾಗ: ಪತಂಜಲಿ ಯೋಗ ಪೀಠ ಟ್ರಸ್ಟ್ ಹರಿದ್ವಾರ ಪತಂಜಲಿ ಯೋಗ ಸಮಿತಿ ರಾಯಬಾಗ ರಾಜ್ಯ ಪ್ರಭಾವಿ ಅಂತಾರಾಷ್ಟೀಯ ಯೋಗ ಗುರು ಭವಲಾಲ್ ಆರ್ಯ ಅವರ ಮಾರ್ಗದರ್ಶನದಲ್ಲಿ 25 ದಿವಸದ ಅಡ್ವಾನ್ಸ್ ಯೋಗ ತರಬೇತಿ ಶಿಬಿರ ರಾಯಬಾಗದ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಬೆಳಗ್ಗೆ 5.30ರಿಂದ 7ರವರೆಗೆ ಬವಲಾಲ್ ಆರ್ಯ ಬಾಲಚಂದ್ರ ಶರ್ಮ ಜಿ, ನಾಗೇಂದ್ರ ಬಟ್ ಜಿ, ಎಂ.ಡಿ.ಪಾಟೀಲ ಜಿ, ಕಿರಣ ಮೋಲ್ಕರ್ ಜಿ ಹಾಗೂ ಇನ್ನು ಅನೇಕ ಯೋಗ ತರಬೇತಿದಾರಗಳಿಂದ ದಿನಾಲು ಹೇಳಿಕೊಡಲಾಗುತ್ತದೆ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಯೋಗ ಸಮಿತಿಯ ಮುಖ್ಯಸ್ಥರಾದ ಸಂಜು ಕುಸ್ತಿಗಾರ ಹೇಳಿದ್ದಾರೆ



ಬೆಳಗಾವಿ: ಕಳೆದ 31 ವರ್ಷಗಳ ಸುದೀರ್ಘ ಕಾಲ ಶಿಕ್ಷಕರಾಗಿ ಜಿಲ್ಲೆಯ ಅನೇಕ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸಿ, ಬಶೀರಅಹ್ಮದ ಮು ತಹಶೀಲ್ದಾರ್ ಇವರು ಸೇವಾ ನಿವೃತ್ತಿ ಹೊಂದಿದ್ದು, ಶಿಕ್ಷಣ ಇಲಾಖೆ ಮತ್ತು ಮೊದಗಾ ಶಾಲೆ, ಗ್ರಾಮಸ್ಥರ ವತಿಯಿಂದ ತಹಶೀಲ್ದಾರ ದಂಪತಿಯನ್ನು ಸತ್ಕರಿಸಲಾಯಿತು. ಶಿಕ್ಷಣ ಇಲಾಖೆ ಸಿಆರ್‌ಪಿ ಗಿರಿಪ್ಪಗೌಡರ ಮೇಡಂ, ಎಸ್‌ಡಿಎಂಸಿ ಅಧ್ಯಕ್ಷ ರಿಯಾಜ್ ಹಿರೇಕೋಡಿ, ಪ್ರಧಾನ ಗುರುಗಳಾದ ಆರ್.ಎಸ್. ಸೊಗಲ, ವಾಯ್.ಎಂ.ಕಲಾಲ, ಎಸ್.ಎಂ.ನದಾಫ್, ಅಶೋಕ ನಾಯ್ಕ, ಮಕ್ತುಂಬಿ ರಾಜೀಖಾನ, ಗ್ರಾಮದ ಹಿರಿಯರು ಇದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೈಲಹೊಂಗಲ: ಕರ್ನಾಟಕ ರಾಜ್ಯ ಬಣಜಿಗ ಕ್ಷೇಮಾಭಿವೃದ್ಧಿ ಸಂಘ (ರಿ) ಬೆಂಗಳೂರ ಬೈಲಹೊಂಗಲ ತಾಲೂಕಾ ಘಟಕದ ನೇತೃತ್ವದಲ್ಲಿ ಸನ್ 2025-26 ನೇ



ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕಾ ಘಟಕ ಅಧ್ಯಕ್ಷ ವಿರೂಪಾಕ್ಷ ವಾಲಿ ತಿಳಿಸಿದರು. ನಗರದ ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2026ರಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಶೇ.90% ಕ್ಕಿಂತ ಅಧಿಕ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಸೇ 90% ಅಂಕ ಪಡೆದ ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸಮಾಜದ ವತಿಯಿಂದ ಸನ್ಮಾನಿಸಿ, ಗೌರವಿಸಲಾಗುವದು ಎಂದರು. ಅರ್ಹ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ತಾಲೂಕಾ ಯುವ ಘಟಕದ ಅಧ್ಯಕ್ಷ ಸಚೀನ್ ಚೀಲದ, ಮೊ. 9980368672, ಪ್ರಧಾನ ಕಾರ್ಯದರ್ಶಿ ಮಂಜುನಾಥ ಕೋರಿಶೆಟ್ಟಿ, ಮೊ.9844039009, ಕೋಶ್ಯಾಧ್ಯಕ್ಷ ಅಮಿತ ಚಿನಗುಡಿ, ಮೊ. 7795300145 ಜಿಲ್ಲಾ ಯುವ ಘಟಕ ವಿ.ಎಂ.ವಾಲಿ, ಇವರನ್ನು ಸಂಪರ್ಕಿಸಬೇಕು. ಅರ್ಹ ವಿದ್ಯಾರ್ಥಿಗಳು ಜೂ.15 ರೊಳಗಾಗಿ ಹೆಸರು ನೋಂದಾಯಿಸಬೇಕೆಂದು ಮನವಿ ಮಾಡಿದ್ದಾರೆ.



ಗೋಕಾಕ: ನಗರದ ನ್ಯೂ ಇಂಗ್ಲೀಷ್ ಸ್ಕೂಲ್‌ನ ಮುಖ್ಯೋಪಾಧ್ಯಾಯ ಬಿ.ಆರ್.ಚೆಪ್ಪಲಕಟ್ಟಿ, ಸಹ ಶಿಕ್ಷಕ ಬಿ.ಎಚ್.ಪಾಟೀಲ ಸೇವಾ ನಿವೃತ್ತಿ ಹೊಂದಿದ ನಿಮಿತ್ತ ಗುರುವಾರ ಸತ್ಕರಿಸಿ ಬೀಳ್ಕೊಡಲಾಯಿತು. ಚೇರಮನ್ ಎಸ್.ಆರ್.ಪಂಚಗಾವಿ, ವೈಸ್ ಚೇರಮನ್ ಬಿ.ಎಸ್.ಗೊರೋಶಿ, ಕಾರ್ಯದರ್ಶಿ ಪಿ.ಆರ್.ಕುರಬೇಟ, ನಿರ್ದೇಶಕ ಬಿ.ಎಸ್.ಖೋತ, ಬಿ.ಆರ್. ಕರ್ಕಿ, ಬಿ.ಐ.ಕ್ಯಾಸ್ತಿ, ಬಿ.ಆರ್.ತೋಟಗಿ, ಮುಖ್ಯೋಪಾಧ್ಯಾ ಬಿ.ಎಸ್. ಶೇಗುಣಸಿ, ಎಸ್.ವೈ ಜಾಧವ ಇದ್ದರು.

ಪಲ್ಸ್ ಪೋಲಿಯೋ ಅಭಿಯಾನ ಪೂರ್ವಭಾವಿ ಸಭೆ | ಡಿಸಿ ಸೂಚನೆ

ಐದು ವರ್ಷದೊಳಗಿನ ಎಲ್ಲ ಮಕ್ಕಳಿಗೆ ಲಸಿಕೆ ಕಡ್ಡಾಯ

ಬೆಳಗಾವಿ: ಜಿಲ್ಲೆಯಲ್ಲಿನ ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಪೋಲಿಯೋ ಲಸಿಕೆ ನೀಡುವುದರ ಮೂಲಕ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನವನ್ನು ಯಶಸ್ವಿಗೊಳಿಸಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ಜರುಗಿದ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ, ಪಲ್ಸ್ ಪೋಲಿಯೋ ಜಿಲ್ಲಾ ಮಟ್ಟದ ಲಸಿಕಾ ಕಾರ್ಯ ಪಡೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜೂ.28ರಂದು ಜರುಗಲಿರುವ ಪೋಲಿಯೋ ಅಭಿಯಾನದ ಯಶಸ್ವಿಗಾಗಿ ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವುದರ ಜೊತೆಗೆ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಿ ಐದು ವರ್ಷದೊಳಗಿನ ಯಾವೊಬ್ಬ ಮಗು ಲಸಿಕೆಯಿಂದ ವಂಚಿತವಾಗದಂತೆ ಕ್ರಮ ವಹಿಸಲು ಸೂಚಿಸಿದರು.

ಮಿಲಟರಿ ಪ್ರದೇಶ, ಸೈನಿಕರ ವಸತಿ ಗೃಹಗಳಲ್ಲಿ ವಾಸವಿರುವ ಐದು ವರ್ಷದೊಳಗಿನ ಎಲ್ಲ ಮಕ್ಕಳ ವಿವರ ಪಡೆದುಕೊಂಡು ಲಸಿಕೆ ನೀಡಲು ನಿಯೋಜಿತ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಬೇಕು. ಮಿಲಟರಿ, ರೈಲ್ವೆ ಆಸ್ಪತ್ರೆಗಳಲ್ಲಿಯೂ ಸಹ ಪೋಲಿಯೋ ಲಸಿಕಾ ಭೂತಗಳನ್ನು ತೆರೆಯಲು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯು ಪೋಲಿಯೋ ಲಸಿಕಾ ಕಾರ್ಯಕ್ರಮದ ಕುರಿತು ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು. ಅಂಗನವಾಡಿ ಕಾರ್ಯಕರ್ತೆಯರು



> ಲಸಿಕಾ ಅಭಿಯಾನಕ್ಕಾಗಿ ಅಗತ್ಯದ ಸಿಬ್ಬಂದಿಗಳನ್ನು ನಿಯೋಜಿಸಿ ಅಭಿಯಾನದ ಅಂತ್ಯದ ವರೆಗೆ ವಿದ್ಯುತ್ ವ್ಯತ್ಯಯವಾಗದಂತೆ ನಿಗಾ ವಹಿಸಬೇಕು. ಜಿಲ್ಲೆಯ ಯಾವುದೇ ಮಕ್ಕಳು ಲಸಿಕಾ ಕಾರ್ಯದಿಂದ ವಂಚಿತರಾಗಬಾರದು. ಈ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳುವುದರ ಮೂಲಕ ಪಲ್ಸ್ ಪೋಲಿಯೋ ಅಭಿಯಾನವನ್ನು ಯಶಸ್ವಿಗೊಳಿಸಬೇಕು.
> ■ ಮೊಹಮ್ಮದ್ ರೋಷನ್, ಡಿಸಿ

ತಮ್ಮ ವ್ಯಾಪ್ತಿಯ ಐದು ವರ್ಷದೊಳಗಿನ ಎಲ್ಲ ಮಕ್ಕಳ ವಿವರ ಪಡೆದುಕೊಂಡು ಪ್ರತಿ ಮನೆಗೂ ಭೇಟಿ ನೀಡಿ ಐದು ವರ್ಷದೊಳಗಿನ ಪ್ರತಿಯೊಂದು ಮಗು ಲಸಿಕೆ ಪಡೆದುಕೊಂಡಿರುವ ಕುರಿತು ಖಾತ್ರಿ ಪಡೆಸಿಕೊಳ್ಳುವಂತೆ ತಿಳಿಸಿದರು. ಪೋಲಿಯೋ ಲಸಿಕಾ ಭೂತಗಳ ಕುರಿತು ಸಾರ್ವಜನಿಕರಿಗೆ ಸಾಕಷ್ಟು ಮುಂಚಿತವಾಗಿ ಮಾಹಿತಿ ನೀಡಬೇಕು. ಲಸಿಕಾ ಭೂತ್ಗಳಲ್ಲಿ ಸ್ವಚ್ಚತೆಗೆ ಆದ್ಯತೆ ನೀಡಬೇಕು. ಅದೇ ರೀತಿ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಕ್ರಮ ವಹಿಸಬೇಕು.

ಲಸಿಕೆಗಳನ್ನು ನಿಗದಿತ ಸಮಯದೊಳಗಾಗಿ ಎಲ್ಲ ಬೂತ್‌ಗಳಿಗೆ ವಿತರಿಸಬೇಕು. ಲಸಿಕಾ ಸಾಗಾಣಿಕೆಗಾಗಿ ಅಗತ್ಯವಿರುವ ವಾಹನಗಳ ವ್ಯವಸ್ಥೆ ಮಾಡಿಕೊಳ್ಳುವುದರ ಮೂಲಕ ಲಸಿಕೆಗಳನ್ನು ನಿಗದಿತ ಸಮಯಕ್ಕೆ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಿತರಣೆಯಾಗುವಂತೆ ಕ್ರಮ ವಹಿಸಲು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಈಶ್ವರ ಗಡಾದಿ ಅವರು ಮಾತನಾಡಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದ ಯಶಸ್ವಿಗಾಗಿ ಜಿಲ್ಲೆಯಲ್ಲಿ ಕೈಗೊಳ್ಳಲಾದ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಸಭೆಯಲ್ಲಿ ಏರಪೋರ್ಸ್ ವಿಂಗ್ ಕಮಾಂಡರ್ ರಾಹುಲ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಸಂಜಯ ದೊಡಮನಿ, ಕ್ಯಾಂಟೋನಮೆಂಟ್ ಅಧಿಕಾರಿಗಳು, ತಾಲೂಕು ಆರೋಗ್ಯಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

ಕುಡಿಯುವ ನೀರಿನ ಸಮಸ್ಯೆಯಾಗಂತೆ ಕ್ರಮ ವಹಿಸಿ: ಆಡಳಿತಾಧಿಕಾರಿ ಬಸವರಾಜ

ಕಾಗವಾಡ: ತಾಲೂಕಿನ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ನೋಡಿಕೊಂಡು, ಅವಶ್ಯಕತೆ ಇದ್ದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲು ಎಲ್ಲ ಪಿಡಿಒಗಳಿಗೆ ಸೂಚನೆ ನೀಡಲಾಗಿದೆ. ಜೊತೆಗೆ ರೈತರಿಗೆ ಬಿತ್ತನೆ ಬೀಜ, ಗೊಬ್ಬರ ಕೊರತೆಯಾಗದಂತೆ ಕ್ರಮ ಕೈಗೊಳ್ಳುವಂತೆ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಬೆಳಗಾವಿ ಜಿಪಂ ಆಡಳಿತಾಧಿಕಾರಿ ಹಾಗೂ ಉಪ ಕಾರ್ಯದರ್ಶಿ ಅಭಿವೃದ್ಧಿ ಬಸವರಾಜ ಅಡವಿಮಠ ತಿಳಿಸಿದ್ದಾರೆ.

ಅವರು, ಗುರುವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ತಾಲೂಕಿನ ಎಲ್ಲ ಅಧಿಕಾರಿಗಳ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಿದ್ದರು. ಎಲ್ಲ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಯಲ್ಲಿಯ ಮಾಡಬೇಕಾಗಿರುವ ಕಾರ್ಯಗಳ ಪಟ್ಟಿ ಮಾಡಿ, ಆಧ್ಯತೆಯ ಮೇರೆಗೆ ಅವುಗಳನ್ನು ಕಾರ್ಯರೂಪಕ್ಕೆ ತರಲು ಸೂಚಿಸಲಾಗಿದೆ ಎಂದರು. ಈಗಷ್ಟೇ ಶೈಕ್ಷಣಿಕ ವರ್ಷ ಪ್ರಾರಂಭಗೊಂಡಿದ್ದು, ಶಾಲಾ ಕಟ್ಟಡಗಳ ದುರಸ್ತಿ ಮತ್ತು ನೂತನ ಶೌಚಾಲಗಳ ನಿರ್ಮಾಣ ಮತ್ತು ದುರಸ್ತಿ ಕಾರ್ಯಗಳನ್ನು ಮಾಡಿಕೊಳ್ಳಬೇಕು. ತಾಲೂಕಿನ ಯಾವೊಬ್ಬ ಮಗು ಕೂಡಾ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಂಡು, ನೂತನ ಮಕ್ಕಳ ನೊಂದಣಿ ಮಾಡಿಕೊಳ್ಳಬೇಕೆಂದು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ತಾಪಂ ಇಒ ವೀರಣ್ಣಾ ವಾಲಿ, ಎಡಿ ಅಲ್ಲಾವುದ್ದಿನ್ ಅನ್ಸಾರಿ, ಎಸ್ ಎಸ್ ಸನ್ನಾಳ, ಬಿಸಿಎಂನ ವೆಂಕಟೇಶ್ ಕುಲಕರ್ಣಿ, ಕುಡಿಯುವ ನೀರು ಸರಬುರಾಜು ಇಲಾಖೆಯ ರವೀಂದ್ರ ಮುರಗಾಲಿ, ಸಮಾಜ ಕಲ್ಯಾಣ ಇಲಾಖೆಯ ಪರಶುರಾಂ ಪತ್ತಾರ, ಬಿಇಒ ಪಾಂಡುರಂಗ ಮದಭಾವಿ, ಅರಣ್ಯ ಇಲಾಖೆಯ ರಾಕೇಶ ಅರ್ಜುನವಾಡ, ತೋಟಗಾರಿಕೆ ಇಲಾಖೆಯ ರೂಪಾ ಹಳ್ಳೂರ, ಕೃಷಿ ಇಲಾಖೆಯ ನಿಂಗಣ್ಣಾ ಬಿರಾದರ, ಸಿಡಿಪಿಒ ಮೇಲ್ವಿಚಾರಕಿ ಸುಜಾತಾ ಪಾಟೀಲ ಸೇರಿದಂತೆ ಎಲ್ಲ ಇಲಾಖೆಯ ಅಧಿಕಾರಿಗಳು, ಪಿಡಿಒಗಳು. ಇತರರು ಇದ್ದರು.



ಐಗಳಿಯಲ್ಲಿ ಸೇವಾ ನಿವೃತ್ತಿ ಹೊಂದಿದ ಶಿಕ್ಷಕರಿಗೆ ಸನ್ಮಾನ

ಐಗಳಿ: ಅಥಣಿ ತಾಲೂಕಿನ ಐಗಳಿ ಗ್ರಾಮದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ನಿವೃತ್ತ ಹೊಂದಿದವರಿಗೆ ಗ್ರಾಮಸ್ಥರು ಸನ್ಮಾನಿಸಿದರು. ಅಪ್ಪಯ್ಯ ಸ್ವಾಮಿ ಶಿಕ್ಷಣ ಸಂಸ್ಥೆಯಲ್ಲಿ 40 ವರ್ಷಗಳ ಕಾಲ ಪ್ರಧಾನ ಗುರುಗಳಾಗಿ ಸೇವೆ ಸಲ್ಲಿಸಿ ಸೇವಾ ನಿವೃತ್ತಿ ಹೊಂದಿದ ಎಸ್.ಎಂ.ಜನಗೌಡ ಹಾಗೂ ಬಸವೇಶ್ವರ ವಿವಿದೋದ್ದೇಶಗಳ ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಚಂದ್ರಕಾಂತ ಪಾಟೀಲ ಮತ್ತು ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಐಗಳಿಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತ ಹೊಂದಿದ ಡಿ.ಕೆ. ಡಂಬಳಕರ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆ ಮಹಾವೀರ ತೋಟ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತ ಹೊಂದಿದ ಶ್ರೀಕಾಂತ ಭಜಂತ್ರಿ ಇವರನ್ನು ಅಪ್ಪಯ್ಯ ಮಹಾಸ್ವಾಮಿ ಸೇವಾ ಸಂಘ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಶಿವಾನಂದ ಸಿಂಧೂರ ಮಾತನಾಡಿ, ವಿವಿಧ ಕ್ಷೇತ್ರದಲ್ಲಿ ಸಲ್ಲಿಸಿದ ಅಮೂಲ್ಯ ಸೇವೆಯನ್ನು ಸ್ಮರಿಸಿ, ಸರ್ವತೋಮುಖ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆಯನ್ನು ಪ್ರಶಂಸಿಸಿದರು. ಅವರ ನಿಷ್ಠೆ, ಪ್ರಾಮಾಣಿಕತೆ ಹಾಗೂ ಶಿಸ್ತುಬದ್ಧ ಸೇವೆ ಎಲ್ಲರಿಗೂ ಮಾದರಿಯಾಗಿದೆ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಜನಗೌಡ ಅವರು, ತಮ್ಮ ಸೇವಾ ಅವಧಿಯಲ್ಲಿ ಸಹಕರಿಸಿದ ಗ್ರಾಮಸ್ಥರು ಸಂಸ್ಥೆಯ ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಸಿದ್ದಪ್ಪ ಬಳ್ಳೊಳ್ಳಿ, ಭೀಮಗೌಡ ಬಿರಾದಾರ, ರಾಮು ಹಾಲಳ್ಳಿ, ಅಪ್ಪು ಮಾಳಿ, ಡಾ.ರವಿ ಮುದಗೌಡರ, ಬಸವರಾಜ ನೇಮಗೌಡ, ಜಗದೇಶ ಕೊರಬು, ಹಣಮಂತ ಮಿರ್ಜಿ, ರವೀಂದ್ರ ಹಾಲಳ್ಳಿ, ಗಣಪತಿ ಗೊರವ, ಅಪ್ಪು ಮದಬಾವಿ, ಬಸವರಾಜ ತೆಲಸಂಗ ಸೇರಿದಂತೆ ಅನೇಕರು ಉಪಸ್ಥಿ ಇದ್ದರು.



ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರೋಧಿಸಿ ಗ್ರಾಮಸ್ಥರ ಪ್ರತಿಭಟನೆ

ಬೈಲಹೊಂಗಲ, ಜೂ.4: ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಲ್ಲಿ ಕೊಳದೂರು ಹಾಗೂ ಮದನಭಾವಿ ಗ್ರಾಮದ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಗ್ರಾಮಸ್ಥರು ಎಐಡಿಎಸ್‌ಒ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

1938ರಲ್ಲಿ ಸ್ಥಾಪನೆಯಾದ ಕೊಳದೂರು ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಹಾಗೂ 1927ರಲ್ಲಿ ಆರಂಭವಾದ ಮದನಭಾವಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಅಭಿವೃದ್ಧಿ ಪಡಿಸುವ ಬದಲು ಮುಚ್ಚಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ಉದ್ದೇಶಿಸಿ ಎಐಡಿಎಸ್‌ಒ ಜಿಲ್ಲಾ ಸಂಚಾಲಕ ಮಹಾಂತೇಶ ಬಿಳೂರ್ ಮಾತನಾಡಿ, ಗ್ರಾಮೀಣ ಪ್ರದೇಶಗಳ ಶಾಲೆಗಳನ್ನು ಮುಚ್ಚುವ ಮೂಲಕ ಬಡ ಮಕ್ಕಳ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಸರ್ಕಾರವು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಬದಲು ಶಾಲೆಗಳ ವಿಲೀನ ಮತ್ತು ಮುಚ್ಚುವಿಕೆಗೆ ಮುಂದಾಗಿದೆ ಎಂದು ಆರೋಪಿಸಿದರು.

ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಸಾವಿರಾರು ಸರ್ಕಾರಿ ಶಾಲೆಗಳನ್ನು ಮುಚ್ಚುವ ಯತ್ನ ನಡೆಯುತ್ತಿದ್ದು, ಇದರ ವಿರುದ್ಧ ಜನರು ಸಂಘಟಿತರಾಗಿ



ಹೋರಾಟ ನಡೆಸಬೇಕಿದೆ ಎಂದು ಅವರು ಕರೆ ನೀಡಿದರು.

ಪ್ರತಿಭಟನೆಯ ವೇಳೆ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ರಚಿಸಲಾಯಿತು. ಮದನಭಾವಿ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ಅಧ್ಯಕ್ಷ ರಾಮನಗೌಡ ಪಾಟೀಲ ಮಾತನಾಡಿ, ನಮ್ಮೂರ ಶಾಲೆ ಮುಚ್ಚಲು ನಮ್ಮ ಒಪ್ಪಿಗೆಯಿಲ್ಲ. ಶಾಲೆಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸಬೇಕು ಎಂದು ಆಗ್ರಹಿಸಿದರು. ಕೊಳದೂರು ಗ್ರಾಮದ ಬಸವರಾಜ ಕೌಜಲಗಿ ಮಾತನಾಡಿದರು. ಪ್ರತಿಭಟನೆಯಲ್ಲಿ ಗ್ರಾಮಸ್ಥರು, ಪೋಷಕರು, ಯುವಕರು ಭಾಗವಹಿಸಿದ್ದರು.

ಸೈಕಲ್ ಬಳಕೆ ಕುರಿತು ಜಾಗೃತಿ ಜಾಥಾ

ಚಿಕ್ಕೋಡಿ: ಕೈಗೆಟುಕುವ ದರದಲ್ಲಿ ಸಿಗುವ ಸೈಕಲ್ ಬಳಕೆಯನ್ನು ಮಾಡುವುದು ಆರೋಗ್ಯ, ಆರ್ಥಿಕ ಹಾಗೂ ಪರಿಸರ ದೃಷ್ಟಿಯಿಂದ ಇಂದಿನ ದಿನಗಳಲ್ಲಿ ಅತ್ಯವಶ್ಯಕವಾಗಿದೆ. ಸೈಕಲ್ ಬಳಕೆಯ ಜಾಗೃತಿಯನ್ನು ಗ್ರಾಮ, ಪಟ್ಟಣ, ನಗರಗಳಲ್ಲಿ ಮಾಡಲಾಗುತ್ತಿದೆ ಎಂದು ರಾಯಬಾಗ ಸೈಕ್ಲಿಂಗ್ ಕ್ಲಬ್‌ನ ರೂವಾರಿ ಹನುಮಂತ ಟಕ್ಕಣ್ಣವರ ಹೇಳಿದರು.

ತಾಲ್ಲೂಕಿನ ಅಂಕಲಿ ಗ್ರಾಮದಲ್ಲಿ ರಾಯಬಾಗ ಸೈಕ್ಲಿಂಗ್ ಕ್ಲಬ್ ವತಿಯಿಂದ ಹಚ್ಚ ಹಸಿರು ಭವಿಷ್ಯತ್ತಿಗಾಗಿ ಸೈಕ್ಲಿಂಗ್ ಎಂಬ ಧ್ಯೇಯ ವಾಕ್ಯದೊಂದಿಗೆ ಬುಧವಾರ ಹಮ್ಮಿಕೊಂಡಿದ್ದ ಸೈಕ್ಲಿಂಗ್ ಜಾಗೃತಿ ಜಾಥಾ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಸೈಕ್ಲಿಂಗ್ ಮಾಡುವದರಿಂದ ದೈಹಿಕ, ಮಾನಸಿಕ ಹಾಗೂ ಆರೋಗ್ಯದ ಮೇಲೆ ಒಳ್ಳೆಯ ಪ್ರಭಾವ ಬೀರುತ್ತದೆ. ಇತ್ತೀಚಿನ ದಿನಗಳಲ್ಲಿ ಪೆಟ್ರೋಲ್, ಡಿಸೇಲ್ ಸೇರಿದಂತೆ ಇಂಧನ ದರ ಏರಿಕೆಯನ್ನು ಆರ್ಥಿಕವಾಗಿ ಸರಿದೂಗಿಸಲು ಸೈಕಲ್ ಬಳಕೆ ರಾಮಬಾಣವಾಗಿದೆ ಎಂದರು.



ಗ್ರಾಮದ ಪ್ರಮುಖ ಬೀದಿಗಳಲ್ಲಿ ಸೈಕಲ್ ಸವಾರಿ, ಆರೋಗ್ಯದ ರುವಾರಿ, ಪೆಟ್ರೋಲ್ ಡೀಸೆಲ್ ದುಬಾರಿ, ಸೈಕಲ್ ಮೇಲೆ ಸವಾರಿ, ಸೈಕಲ್ ಓಡಿಸೋಣ, ಪರಿಸರ ಸಂರಕ್ಷಿಸೋಣ ಎಂಬ ಮುಂತಾದ ಘೋಷಣೆಗಳನ್ನು ಕೂಗುತ್ತಾ ಸೈಕಲ್ ಜಾಗೃತಿ ಜಾಥಾ ಸಾಗಿತು.

ಈ ವೇಳೆ ರಾಜು ಅಲಾಜ, ಮಹಾದೇವ ಧರ್ಮಟ್ಟಿ, ಮಹಾದೇವ ಪಾಟೀಲ, ಜಿತೇಂದ್ರ ಶೆಟ್ಟಿ, ಸಾಗರ ಶಿಂತ್ರೆ, ಸಂದೇಶ ಶೆಟ್ಟಿ, ಸಂಜು ತೇಲೆ, ರಿತೇಶ ಹೊಸಮನಿ, ಸುನೀಲ ಕಾಂಬಳೆ ಇತರರು ಇದ್ದರು.

ದುಪ್ಪಟ್ಟು ಹಣದ ಆಸೆಯಿಂದ ಮೋಸಕ್ಕೆ ಬಲಿಯಾಗದಿರಿ:ಎಸ್ಪಿ

ಬೆಳಗಾವಿ: ಸಾರ್ವಜನಿಕರೇ ಎಚ್ಚರ. ಕಡಿಮೆ ಅವಧಿಯಲ್ಲಿ ಹಣ ದುಪ್ಪಟ್ಟು ಮಾಡಿಕೊಡುವುದಾಗಿ ನಂಬಿಸುವ ವಂಚಕರ ಜಾಲದ ಬಗ್ಗೆ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಅವರು ಖಡಕ್ ಎಚ್ಚರಿಕೆ ನೀಡಿದರು.

ಗುರುವಾರ ನಮ್ಮ ಬೆಳಗಾವಿಯ ಕಛೇರಿಯಲ್ಲಿ ಮಾಧ್ಯಮಗಳಿಂದಿಗೆ ಮಾತನಾಡಿದ ಅವರು, ಕೆಲ ಆಮಿಷಗಳಿಗೆ ಸಾರ್ವಜನಿಕರು ಬಲಿಯಾಗದಂತೆ ಮತ್ತು ಅನಧಿಕೃತ ಖಾಸಗಿ ಸಂಸ್ಥೆಗಳಲ್ಲಿ ಹಣ ಹೂಡಿಕೆ ಮಾಡದಂತೆ ಮನವಿ ಮಾಡಿದ್ದಾರೆ.

ಸಾರ್ವಜನಿಕರು ತಮ್ಮ ಕಷ್ಟದ ಹಣವನ್ನು ಬ್ಯಾಂಕ್‌ಗಳಲ್ಲಿ ಮಾತ್ರ ಠೇವಣಿ ಇಡಬೇಕು ಮತ್ತು ಯಾವುದೇ ಅನಧಿಕೃತ ಖಾಸಗಿ ಕಂಪನಿಗಳಿಗೆ ಹಣ ನೀಡಬಾರದು ಎಂದು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಕೇವಲ ಸರ್ಕಾರಿ ನೋಂದಣಿಕೃತ ಚಿಟ್ ಫಂಡ್ ಸಂಸ್ಥೆಗಳಿಗೆ ಮಾತ್ರ ಹಣ ಠೇವಣಿ ಇಟ್ಟುಕೊಳ್ಳುವ ಕಾನೂನುಬದ್ಧ ಅನುಮತಿ ಇರುತ್ತದೆ ಎಂದು ಹೇಳಿದರು.

ಯಾರಾದರೂ ಶೇ.20 ರಿಂದ 30 ರಷ್ಟು ಅತಿಯಾದ ಲಾಭಾಂಶ ಅಥವಾ ಹಣ ದುಪ್ಪಟ್ಟು ಮಾಡಿಕೊಡುವುದಾಗಿ ಆಮಿಷ ಒಡ್ಡಿದರೆ ಅದನ್ನು ಯಾರೂ ನಂಬಬಾರದು, ಇಂತಹ ಪ್ರಕರಣಗಳಲ್ಲಿ ನೂರಕ್ಕೆ ನೂರರಷ್ಟು ಮೋಸ ಅಡಗಿರುತ್ತದೆ ಎಂದು ಎಸ್‌ಪಿ ಸ್ಪಷ್ಟಪಡಿಸಿದರು. ಸಾರ್ವಜನಿಕರು ಇಂತಹ ಜಾಲಗಳಿಗೆ ಬಲಿಪಶು ಆಗದೆ, ಯಾವುದೇ ಶಂಕಾಸ್ಪದ ವ್ಯವಹಾರಗಳು ಕಂಡುಬಂದಲ್ಲಿ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಬೇಕು, ವಂಚಕರ ವಿರುದ್ಧ ಕಠಿಣ ಕಾನೂನು ಕ್ರಮ ಖಂಡಿತ ಎಂದು ಅವರು ಎಚ್ಚರಿಸಿದರು.

ನಾಳೆ ಘಟಿಕೋತ್ಸವ:ಡಾ.ಗೋರಬಾಳ

ಬೆಳಗಾವಿ: ಇಲ್ಲಿನ ಉದ್ಯಮ ಭಾಗದಲ್ಲಿರುವ ಪ್ರಸಿದ್ಧ ತಾಂತ್ರಿಕ ಸಂಸ್ಥೆಯಾದ ಜೈನ್ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ರಿಸರ್ಚ್ ಕಾಲೇಜಿನ ಘಟಿಕೋತ್ಸವ ಹಾಗೂ ವಿದ್ಯಾರ್ಥಿಗಳಿಗೆ ಗ್ರಾಜುಯೇಷನ್ ಸರ್ಟಿಫಿಕೇಟ್ ವಿತರಣೆ ಸಮಾರಂಭ ಆಯೋಜಿಸಲಾಗಿದೆ ಎಂದು ಜೆಸಿಇಆರ್‌ನ ಪ್ರಾಚಾರ್ಯ ಮತ್ತು ನಿರ್ದೇಶಕ ಡಾ.ಎಸ್.ವಿ.ಗೋರಬಾಳ ತಿಳಿಸಿದರು.

ಗುರುವಾರ ನಗರದ ಕಾಲೇಜು ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜೂ.6ರಂದು ಬೆಳಗ್ಗೆ 10ಕ್ಕೆ ಈ ಪ್ರತಿಷ್ಠಿತ ಕಾರ್ಯಕ್ರಮವು ಆರಂಭವಾಗಲಿದೆ. ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ರಿಜಿಸ್ಟಾರ್ ಆದ ಡಾ.ಪ್ರಸಾದ್ ರಾಂಪುರೆ, ಪತ್ರಕರ್ತ ಅಜಿತ್ ಹನಮಕ್ಕನವರ್ ಆಗಮಿಸಲಿದ್ದಾರೆ ಎಂದು ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿದ್ಯಾಲಯಕ್ಕೆ ಸಂಯೋಜಿತವಾಗಿರುವ ಈ ಕಾಲೇಜಿನ ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಶನ್ ಹಾಗೂ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗಗಳು ಈಗಾಗಲೇ ಎನ್‌ಬಿಎ ಮಾನ್ಯತೆ ಪಡೆದುಕೊಂಡಿವೆ. ಪ್ರಸಕ್ತ ಸಾಲಿನಲ್ಲಿ ವಿವಿಧ ವಿಭಾಗಗಳಲ್ಲಿ ಯಶಸ್ವಿಯಾಗಿ ತೇರ್ಗಡೆ ಹೊಂದಿದ ಒಟ್ಟು 260 ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಈ ಸಮಾರಂಭದಲ್ಲಿ ಅಧಿಕೃತವಾಗಿ ಪದವಿ ಪ್ರದಾನ ಮಾಡಲಾಗುವುದು ಎಂದು ಅವರು ವಿವರಿಸಿದರು. ಈ ಶನಿವಾರ ನಡೆಯಲಿರುವ ಈ ಘಟಿಕೋತ್ಸವ ಹಾಗೂ ಪದವಿ ಪ್ರಮಾಣಪತ್ರ ವಿತರಣೆ ಸಮಾರಂಭದಲ್ಲಿ ಸಂಸ್ಥೆಯ ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಹಾಗೂ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪ್ರಾಂಶುಪಾಲರು ಕರೆ ನೀಡಿದರು. ಈ ಸುದ್ದಿಗೋಷ್ಠಿಯಲ್ಲಿ ಡಾ. ಪ್ರಕಾಶ ಸೋನವಾಲಕರ್, ನಿವೃತ್ತ ಕರ್ನಲ್ ಜಾನಿ ಹಾಗೂ ಡಾ. ಜ್ಯೋತಿ ಬಿ.ಆರ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿರಿ

ಗೋಕಾಕ: ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದು ಒಳ್ಳೆಯ ಹವ್ಯಾಸಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ನಾಗರಿಕರಾಗಿರೆಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಎಚ್.ಆರ್. ಲವಕುಮಾರ ಹೇಳಿದರು.

ಅವರು, ಗುರುವಾರದಂದು ನಗರದ ಕೆಎಲ್‌ಇ ಸಂಸ್ಥೆಯ ಐಟಿಐ ಕಾಲೇಜಿನಲ್ಲಿ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ ತಂಬಾಕು ಸೇವನೆಯಿಂದ ಕ್ಯಾನ್ಸರನಂತಹ ಮಾರಕ ರೋಗಕ್ಕೆ ತುತ್ತಾಗಿ ಯುವ ಪೀಳಿಗೆ ನಶಿಸುತ್ತಿದೆ. ಇಂತಹ ಮಾರಕ ಹವ್ಯಾಸಗಳಿಂದ ದೂರವಿದ್ದು ಜವಾಬ್ದಾರಿಯುತ ವ್ಯಕ್ತಿಗಳಾಗಿ ಆರೋಗ್ಯವಂತ ಸಮಾಜ ನಿರ್ಮಿಸಲು ಕರೆ ನೀಡಿದರು.

ಈ ವೇಳೆ ಪ್ರಾಚಾರ್ಯ ಮಂಜುನಾಥ ಕಂಬಾರ, ಉಪನ್ಯಾಸಕ ಪ್ರೇಮಾ ಸಾತಪ್ಪಗೋಳ, ಯೋಜನಾಧಿಕಾರಿ ರೋಹಿತ, ಸೇವಾ ಪ್ರತಿನಿಧಿ ಶೈಲಾ ಇದ್ದರು.



ಕೃಷ್ಣರಾಜ ಒಡೆಯರ ಕೊಡುಗೆ ಅಪಾರ



ಯರಗಟ್ಟಿ: ನಾಲ್ವಡಿ ಕೃಷ್ಣರಾಜ ಒಡೆಯರ ಜಯಂತಿಯನ್ನು ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ಗುರುವಾರ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಎಂ.ವಿ.ಗುಂಡಪ್ಪಗೋಳ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಅರ್ಪಿಸಿದರು.

ನಂತರ ಮಾತನಾಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ ಅವರು ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ನೀಡಿದ ಕೊಡುಗೆ ಅಪಾರವಾಗಿದೆ. ಶಿಕ್ಷಣ, ನೀರಾವರಿ, ಕೈಗಾರಿಕೆ ಸೇರಿದಂತೆ ನಾಡಿನ ಸರ್ವಾಂಗ ಅಭಿವೃದ್ಧಿಗೆ ಅವರು ಭದ್ರ ಬುನಾದಿ ಹಾಕಿಕೊಟ್ಟ ಮಹಾನ್ ಆಡಳಿತಗಾರರಾಗಿದ್ದರು ಎಂದು ಸ್ಮರಿಸಿದರು.

ಪಪಂ ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಉಪತಹಶೀಲ್ದಾರ್ ಸಂತೋಷ ಜಾದವ, ಶಿರಸ್ಥದಾರ ಎಸ್.ಬಿ.ಕುಲಕರ್ಣಿ, ಗ್ರಾಮ ಆಡಳಿತಾಧಿಕಾರಿ ದಾನೇಶ್ವರಿ ಮಠ, ಸ್ವರೂಪ ಚವಳಿ, ಶಾಹೀನ್ ಮಿಶ್ರಕೋಟಿ, ಎಲ್.ಸಿ.ತಳವಾರ, ಕೆ ಎಂ.ಗಡಕರಿ, ಲಖನ ಪೂಜೇರಿ, ಸಂತೋಷ ಭರಡಿ, ರವಿ ತಳವಾರ, ಮಂಜುನಾತ ಬಡಿಗೇರಿ, ವಿಜಯ ಉಪ್ಪಿನ ಸೇರಿದಂತೆ ಅನೇಕರು ಇದ್ದರು.

ಕಿರುಸುದ್ದಿ

ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲಿ

ಮುಗಳಖೋಡ: ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಯುಜಿಸಿ ಅರ್ಹ ಅತಿಥಿ ಉಪನ್ಯಾಸಕರಿಗೆ ಸೇವಾಭದ್ರತೆ-ಖಾಯಮಾತಿ ನೀಡಬೇಕೆಂದು ನೂತನ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ ಅವರಿಗೆ ರಾಜ್ಯ ಅತಿಥಿ ಉಪನ್ಯಾಸಕರ ಮುಖಂಡ ಡಾ.ರಾಜು ಕಂಬಾರ ಒತ್ತಾಯಿಸಿದ್ದಾರೆ.



ಪಟ್ಟಣಕ್ಕೆ ಆಗಮಿಸಿದ ಅವರು ಗುರುವಾರ ಸ್ಥಳೀಯ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ನೂತನ ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ ಅವರಿಗೆ ಅಖಿಲ ಕರ್ನಾಟಕ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಯುಜಿಸಿ ವಿದ್ಯಾರ್ಹತೆ ಹೊಂದಿದ ಅತಿಥಿ ಉಪನ್ಯಾಸಕರು 10-15, 20 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರಲ್ಲಿ ಸಾಕಷ್ಟು ಅನುಭವ ಹೊಂದಿದ ಹಿರಿಯ ಶಿಕ್ಷಕರ ವಯೋಮಿತಿ ಕೂಡಾ ಮೀರುತ್ತಿದೆ. ಈಗಿರುವ ಅತಿಥಿ ಉಪನ್ಯಾಸಕರನ್ನೇ ಖಾಯಂಗೊಳಿಸಬೇಕೆಂದು ಹೇಳಿದರು. ರಾಜ್ಯದ ಎಲ್ಲ ಅತಿಥಿ ಉಪನ್ಯಾಸಕರು ಸಂಘಟನಾತ್ಮಕವಾಗಿ ಹಿಂದಿನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲಿದ್ದೇವೆ. ಆದಕ್ಕಾಗಿ ಎಲ್ಲ ಸಮಾನ ಮನಸ್ಕರು ಬೆಳಗಾವಿಯಲ್ಲಿ ಸೇರಿ ಹೊಸ ನಿಯೋಗ ರಚನೆ ಮಾಡಲಿದ್ದೇವೆ ಎಂದು ರಾಜ್ಯ ಅತಿಥಿ ಉಪನ್ಯಾಸಕರ ಮುಖಂಡ ಡಾ.ರಾಜು ಕಂಬಾರ ಸುದ್ದಿಗಾರರಿಗೆ ತಿಳಿಸಿದರು.

ನೇಮಕಕ್ಕೆ ಅರ್ಜಿ ಆಹ್ವಾನ

ಖಾನಾಪುರ: ಶಿಶು ಅಭಿವೃದ್ಧಿ ಯೋಜನೆಯಡಿ ತಾಲೂಕಿನ 18 ಗ್ರಾಮ ಪಂಚಾಯತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಹೊಸದಾಗಿ ಪ್ರಾರಂಭಗೊಳ್ಳಲಿರುವ ಅಂಗನವಾಡಿ ಕಂ ಕ್ರಷ್ ಕೇಂದ್ರಗಳಲ್ಲಿ (ಶಿಶುಪಾಲನಾ ಕೇಂದ್ರ) ಕಾರ್ಯನಿರ್ವಹಿಸಲು ಕಾರ್ಯಕರ್ತೆ ಮತ್ತು ಸಹಾಯಕಿಯರನ್ನು ನೇಮಕ ಮಾಡಬೇಕಿದ್ದು, ಆಸಕ್ತ ಅಭ್ಯರ್ಥಿಗಳು ಸೂಕ್ತ ದಾಖಲೆಗಳ ಸಮೇತ ಜೂ.16ರೊಳಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: 2026-27ನೇ ಸಾಲಿನ ಬೆಳಗಾವಿ ತಾಲೂಕಿನ ತೋಟಗಾರಿಕೆ ಇಲಾಖೆಯಿಂದ ವಿವಿಧ ಯೋಜನೆಗಳಡಿ ಸಹಾಯಧನ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪ್ರದೇಶ ವಿಸ್ತರಣೆ (ಮಾವು, ಬಾಳೆ, ಪೇರು, ಹೈಬ್ರಿಡ್ ತರಕಾರಿ, ಬಿಡಿ ಹೂ, ಹಳೆ ಗಿಡಮರಗಳ ಪುನಃಶ್ಚೇತನ, ಸಮಗ್ರ ಪೋಷಕಾಂಶ ನಿರ್ವಹಣೆ, ವೈಯಕ್ತಿಕ ಕೃಷಿ ಹೊಂಡ, ಸಂರಕ್ಷಿತ ಬೇಸಾಯ (ಪ್ಲಾಸ್ಟಿಕ್ ಹೊದಿಕೆ) (ರೈತರಿಗೆ ಮಾತ್ರ), ಚಪ್ಪರ, ಆಸರೆ ವ್ಯವಸ್ಥೆಯ ಮೂಲಕ ತರಕಾರಿ ಉತ್ಪಾದನೆ ಮತ್ತು Weed mat (ಕಳೆ ಚಾಪೆ), ಎರೆಹುಳು ಗೊಬ್ಬರ ಘಟಕ, Non-Pressurised Ripening Chamber ಘಟಕಗಳಿಗೆ ಸಹಾಯಧನ ಪಡೆಯಲು ಅವಕಾಶ ಇರುತ್ತದೆ.ಆಸಕ್ತ ರೈತರು ಯೋಜನೆಗಳಿಗೆ ಸಂಬಂಧಪಟ್ಟ ಅವಶ್ಯಕ ದಾಖಲಾತಿಗಳನ್ನು ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ ಅಥವಾ ತಾಲೂಕು ತೋಟಗಾರಿಕೆ ಕಚೇರಿಗೆ ಭೇಟಿ ನೀಡಿ, ಜೂ.30ರೊಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿಪಂ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಬೆಳಗಾವಿ: ಗೋಕಾಕ ರೋಡ-ಘಟಪ್ರಭಾ ರೈಲು ನಿಲ್ದಾಣಗಳ ಮಧ್ಯ ಚಲಿಸುತ್ತಿರುವ ಯಶವಂತರ ವಿಶೇಷ ರೈಲು ಮುಂದೆ ಬಿದ್ದು ಇತ್ತೀಚೆಗೆ ಅಪರಿಚಿತ ವ್ಯಕ್ತಿ (ವಯಸ್ಸು 60-65) ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿದ್ದು, ಈ ಬಗ್ಗೆ ಬೆಳಗಾವಿ ರೈಲ್ವೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತರು 5-4 ಅಡಿ ಎತ್ತರ, ಕೆಂಪು ಮೈಬಣ್ಣ, ಮೈಯಿಂದ ದಪ್ಪ, ದುಂಡು ಮುಖ, ಮೂಗು, ತಲೆಯಲ್ಲಿ ಸಣ್ಣಗೆ ಬಿಳಿ ಕೂದಲು ಇದ್ದು, ತಿಳಿ ಕೆಂಪು ಬಣ್ಣದ ಫುಲ್ ಶರ್ಟ್ ಧರಿಸಿರುತ್ತಾನೆ. ಈ ಚಹರೆ ಪಟ್ಟಿ ಹೋಲುವ ವ್ಯಕ್ತಿ ಕಾಣೆಯಾದ ಬಗ್ಗೆ ತಮ್ಮ ಠಾಣೆಯಲ್ಲಿ ದಾಖಲಾಗಿದ್ದರೆ ಅಥವಾ ಮೃತನ ರಕ್ತ ಸಂಬಂಧಿ ಯಾರಾದರೂ ಪತ್ತೆಯಾದರೆ ನಗರದ ರೈಲ್ವೆ ಪೊಲೀಸ್ ಠಾಣೆ ದೂ:0831-2405273 ಪಿಎಸ್ಐ ಮೊ.9480802127, ರೈಲ್ವೆ ಪೊಲೀಸ್ ನಿಯಂತ್ರಣ ಕೊಠಡಿ ದೂ: 080-22871291 ಗೆ ಸಂಪರ್ಕಿಸಲು ರೈಲ್ವೆ ಪೋಲೀಸ್ ಠಾಣೆ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಬ್ಬಳ್ಳಿ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ನೂತನವಾಗಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ಅವರಿಗೆ ಶಾಸಕ ಪ್ರಸಾದ ಅಬ್ಬಯ್ಯ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು. ಮುಖಂಡ ಅನ್ವರ ಮುಧೋಳ, ರಾಜಶೇಖರ್ ಮೆಣಸಿನಕಾಯಿ, ಮಜರ್ ಖಾನ ಶಫಿ ಮುದ್ದೆಬಿಹಾಳ್, ಸುರೇಶ ಸವಣೂರ, ಶಾಂತವ್ವ ಗುಜ್ಜಳ್, ರೇಣುಕಾ ಕಳ್ಳಿಮನಿ ಇದ್ದರು.


ನೂತನ ಐಜಿಪಿ ಸಂದೀಪ ಪಾಟೀಲಗೆ ಸನ್ಮಾನ

ಬೆಳಗಾವಿ: ಉತ್ತರ ವಲಯದ ನೂತನ ಪೊಲೀಸ್ ಮಹಾನಿರೀಕ್ಷಕರಾಗಿ ಅಧಿಕಾರ ಸ್ವೀಕರಿಸಿರುವ ದಕ್ಷ ಪೊಲೀಸ್ ಅಧಿಕಾರಿ ಸಂದೀಪ ಪಾಟೀಲ ಅವರಿಗೆ ವಕೀಲರ ಸಂಘದ ವತಿಯಿಂದ ಸನ್ಮಾನಿಸಿ ಸ್ವಾಗತಿಸಿಕೊಂಡರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಅವಧಿಯಲ್ಲಿ ಅವರು, ಮಾಡಿದ ಜನಸ್ನೇಹಿ ಕಾರ್ಯವನ್ನು ವಕೀಲರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಬೆಳಗಾವಿಯಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಐಜಿಪಿ ಸಂದೀಪ ಪಾಟೀಲ ದಕ್ಷ ಹಾಗೂ ಜನಸ್ನೇಹಿ ಕಾರ್ಯವೈಖರಿಯನ್ನು ವಕೀಲರು ಕೊಂಡಾಡಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಸಂದೀಪ್ ಪಾಟೀಲ ಅವರು, ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಮತ್ತು ನ್ಯಾಯಾಂಗ ವ್ಯವಸ್ಥೆ ನಡುವಿನ ಸಮನ್ವಯ ಅತ್ಯಂತ ಅಗತ್ಯವಿದೆ ಎಂದರು.

ಈ ವೇಳೆ ವಕೀಲರ ಸಂಘದ ಮಾಜಿ ಉಪಾಧ್ಯಕ್ಷ ಅಣ್ಣಾಸಾಹೇಬ್ ಘೋರ್ಪಡೆ, ಅಡ್ವೋಕೇಟ್‌ಗಳಾದ ಆರ್.ಪಿ.ಪಾಟೀಲ, ಎನ್.ಆರ್.ಲಾತೂರ್, ಮಾರುತಿ ಕಾಮಾಣ್ಣಾಚೆ, ರಾಜು ಹಿರೇಮಠ, ವಿನೋದ್ ಪಾಟೀಲ, ನಿಂಗಪ್ಪ ಮಸ್ತಿ, ಮೋಹಿತೆ, ಮಹೇಂದ್ರ ಕಾಂಬ್ಳೆ, ವಿಭೂತಿಮಠ, ರಾಜೇಂದ್ರ ನಲವಡೆ ಹಾಗೂ ಎಂ.ಬಿ.ಬೋಂದ್ರೆ ಸೇರಿದಂತೆ ಹಲವು ಹಿರಿಯ ವಕೀಲರು ಉಪಸ್ಥಿತರಿದ್ದು, ನೂತನ ಐಜಿಪಿ ಅವರಿಗೆ ಮುಂದಿನ ಯಶಸ್ವಿ ವೃತ್ತಿ ಜೀವನಕ್ಕೆ ಶುಭ ಹಾರೈಸಿದರು.



ಬೆಳಗಾವಿ: ರಾಜ್ಯದ ಮಂತ್ರಿ ಮಂಡಳ ಸಚಿವ ಸಂಪುಟದಲ್ಲಿ 5ನೇ ಬಾರಿಗೆ ಸಚಿವರಾಗಿ ಆಯ್ಕೆಯಾದ ಸಚಿವ ಸತೀಶ ಜಾರಕಿಹೊಳಿ ಗೃಹ ಕಚೇರಿಗೆ ಕೆಪಿಸಿಸಿ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ ಅವರು ಭೇಟಿ ಮಾಡಿ ಶುಭ ಕೋರಿದರು. ಅದೇ ರೀತಿ ಸಚಿವ ಸತೀಶ ಜಾರಕಿಹೊಳಿ ಅವರು ನೂತನ ಕೆಪಿಸಿಸಿ ಅಧ್ಯಕ್ಷರಿಗೆ ಶುಭ ಕೋರಿದರು. ಶಾಸಕ ಆಸೀಫ್ ಸೇಠ್, ಶಾಸಕ ಬಾಬಾಸಾಹೇಬ ಪಾಟೀಲ, ಕಾಂಗ್ರೆಸ್ ಮುಖಂಡರು, ಅಧಿಕಾರಿಗಳು ಇದ್ದರು.

ಬಂಜರು ಭೂಮಿಯಿಂದ ಹಸಿರು ಸ್ವರ್ಗದತ್ತ ಕಬ್ಬೂರು ವಸತಿ ನಿಲಯ

▸ ವಿಮಲಾ ಸಿ.ಚಿನಕೇಕರ, ಚಿಕ್ಕೋಡಿ

ದಿಗಂತ ವಿಶೇಷ

ಚಿಕ್ಕೋಡಿ: ತಾಲೂಕಿನ ಕಬ್ಬೂರು ಪಟ್ಟಣದ ಹೊರವಲಯದಲ್ಲಿರುವ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಹಸಿರಿನಿಂದ ಕಂಗೊಳಿಸುತ್ತಿದೆ. ವಸತಿ ನಿಲಯ ಮೇಲ್ವಿಚಾರಕ ನಾಗೇಶ ಕಾಪಶಿ ಹಾಗೂ ವಸತಿ ನಿಲಯದ ವಿದ್ಯಾರ್ಥಿಗಳ ಪ್ರಯತ್ನದ ಫಲವಾಗಿ ಹಸಿರು ತೋರಣ ಹೊತ್ತು ಗಮನ ಸೆಳೆಯುತ್ತಿದೆ.



1 ಎಕರೆ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಸಹಕಾರದಿಂದ ತೆಂಗು, ಹುಣಸೆ, ಚಿಕ್ಕು, ತೇಗ ಮುಂತಾದ ಬೃಹತ್ ಮರಗಳನ್ನು ಬೆಳೆಸಲಾಗಿದೆ. ಇದರೊಂದಿಗೆ 130ಕ್ಕೂ ಹೆಚ್ಚು ಪೇರಲ, 6 ಲಿಂಬೆ, 6 ಪಪ್ಪಾಯ, 30 ತೇಗದ ಮರ, 20 ಚಿಕ್ಕು ಹಣ್ಣಿನ ಗಿಡ, 15 ತೆಂಗಿನ ಮರಗಳು ವಸತಿ ನಿಲಯದ ಆವರಣದಲ್ಲಿ ಕೈಬೀಸಿ ಕರೆಯುವಂತಿವೆ. ಹೀಗಾಗಿ ಪ್ರತಿದಿನ ಪಕ್ಷಿಗಳ ಕಲರವ ಮನಸ್ಸಿಗೆ ಇಂಪು ನೀಡುತ್ತದೆ. ಪಕ್ಷಿಗಳಿಗಾಗಿ ನೀರು ಮತ್ತು ಆಹಾರವನ್ನು ವಸತಿ ನಿಲಯದ ಆವರಣದಲ್ಲಿ ಇಡುವದರಿಂದ ವಿವಿಧ ಬಗೆಯ ಪಕ್ಷಿಗಳನ್ನು ನೋಡುವ ಭಾಗ್ಯ ಸಿಗುತ್ತದೆ.

ವಸತಿ ನಿಲಯದ ಆವರಣದಲ್ಲಿ ಕೊಳವೆ ಬಾವಿಯಿದ್ದು, ಕೊಳವೆಬಾವಿಯಿಂದ ಪೈಪಲೈನ್ ಮೂಲಕ ಮರ ಗಿಡಗಳಿಗೆ ನೀರು ಪೂರೈಕೆ ಮಾಡಲಾಗಿದೆ. ಹೀಗಾಗಿ ಮರಗಳು ಸೊಂಪಾಗಿ ಬೆಳೆದು ನಿಂತಿದ್ದು, ವಸತಿ ನಿಲಯದಲ್ಲಿರುವ ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣ ನಿರ್ಮಾಣವಾಗಿದೆ. ಆಗಾಗ ಕಳೆ ತೆಗೆಯಲಾಗುತ್ತದೆ. ಆಟ ಪಾಠಗಳ ಬಿಡುವಿನ ವೇಳೆಯಲ್ಲಿ ವಿದ್ಯಾರ್ಥಿಗಳು ಕಳೆ ತೆಗೆದು, ಪಾತಿ ಮಾಡುವ ಮೂಲಕ ಸಂಭ್ರಮಿಸುತ್ತಾರೆ.

ಇನ್ನು 20 ಗುಂಟೆಯಲ್ಲಿ ವಿಶೇಷ ಉದ್ಯಾನ ನಿರ್ಮಿಸಲಾಗಿದ್ದು, ಇಲ್ಲಿ ಕೆಲವೊಂದು ಫ್ಯಾಷನ್ ಗಿಡಗಳು, ಹೂವಿನ ಗಿಡಗಳನ್ನು ಬೆಳೆಸಲಾಗಿದೆ. ವಿವಿಧ ಬಗೆಯ ಹೂವುಗಳು ಮನ ಸೆಳೆಯುತ್ತವೆ. ಬದನೆ, ಟೊಮ್ಯಾಟೋ, ಮೂಲಂಗಿ, ಕೊತ್ತಂಬರಿ, ಕರಿಬೇವು ಮುಂತಾದ ತರಕಾರಿಗಳನ್ನು ಬೆಳೆಯಲಾಗುತ್ತಿದ್ದು, ಇವುಗಳನ್ನು ಅಡುಗೆಗೂ ಬಳಸಲಾಗುತ್ತದೆ. ಇಲ್ಲಿ ಬೆಳೆದ ಹಣ್ಣುಗಳನ್ನು ವಸತಿ ನಿಲಯದ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.

ಹೆಚ್ಚಿನ ಸಂಖ್ಯೆ ವಿದ್ಯಾರ್ಥಿಗಳು ವಸತಿ ನಿಲಯದ ಆವರಣದಲ್ಲಿಯ ಮರ ಗಿಡಗಳ ನೆರಳಿನಲ್ಲಿ ಕುಳಿತು ವಿದ್ಯಾಭ್ಯಾಸದಲ್ಲಿ ತೊಡಗಿಕೊಳ್ಳುತ್ತಾರೆ. ಬಂಜರು ಭೂಮಿಯಾಗಿದ್ದ ವಸತಿ ನಿಲಯದ ಆವರಣ ಹಸಿರ ಸಿರಿಯ ಹೊದ್ದು ನಿಂತು ಸ್ವರ್ಗದಂತೆ ಕಾಣುತ್ತದೆ. ಇಂತಹ ವಸತಿ ನಿಲಯದಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿರುವ ನಾವೇ ಭಾಗ್ಯಶಾಲಿಗಳು ಎಂದು ವಸತಿ ನಿಲಯದ ವಿದ್ಯಾರ್ಥಿಗಳ ಅಭಿಪ್ರಾಯವಾಗಿದೆ.

> **ಬಂಜರು ಭೂಮಿಯಾಗಿದ್ದ ವಸತಿ ನಿಲಯದ ಆವರಣದಲ್ಲಿ ಅರಣ್ಯ ಇಲಾಖೆ ಸಹಕಾರದಿಂದ ವಿವಿಧ ಮರಗಿಡ, ಹೂವು ಹಣ್ಣಿನ ಗಿಡಗಳನ್ನು ಬೆಳಸಲಾಗಿದೆ. ಇದರಿಂದ ಮನಸ್ಸಿಗೆ ಹಿತ ಎನಿಸುತ್ತದೆ.**
> ■ ನಾಗೇಶ ಕಾಪಶಿ, ವಸತಿ ನಿಲಯದ ಮೇಲ್ವಿಚಾರಕ, ಕಬ್ಬೂರ

> **ವಸತಿ ನಿಲಯದ ವಾರ್ಡನ್ ನಾಗೇಶ ಕಾಪಶಿ ಅವರು ವಸತಿ ನಿಲಯಕ್ಕೆ ಹೊಸ ಹೊಳಪು ನೀಡಿದ್ದಾರೆ. ಇವರ ಪರಿಸರ ಪ್ರಜ್ಞೆಯಿಂದ ಹಾಸ್ಟೆಲ್ ಹಸಿರುಮಯವಾಗಿದ್ದು, ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಇನ್ನುಳಿದ ವಸತಿ ನಿಲಯಗಳಿಗೆ ಮಾದರಿಯಾಗಿದೆ.**
> ■ ಅರ್ಚನಾ ಸಾನೆ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ

ದುಶ್ಚಟದಿಂದ ದೂರವಿರಿ: ನ್ಯಾ.ಸಂಕಣ್ಣವರ

ಹುಕ್ಕೇರಿ: ತಂಬಾಕು ಸೇವನೆಯಿಂದ ಹಲವಾರು ಅಡ್ಡ ಪರಿಣಾಮಗಳು ಆಗುತ್ತವೆ ಎಂದು ಗೊತ್ತಿದ್ದರು, ಎಲ್ಲ ವಯೋಮಿತಿಯವರು ಈ ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ. ಇದನ್ನು ತಡೆಗಟ್ಟಲು ಇಂತಹ ಕಾರ್ಯಕ್ರಮಗಳು ಸಹಕಾರಿ ಆಗಿವೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜಣ್ಣ ಸಂಕಣ್ಣವರ ಅವರು ಹೇಳಿದರು.

ಬುಧವಾರದಂದು ಸ್ಥಳೀಯ ನ್ಯಾಯಾಲಯದ ಆವರಣದಲ್ಲಿ ನಡೆದ ವಿಶ್ವ ತಂಬಾಕು ರಹಿತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜನರಲ್ಲಿ ಈ ಚಟದಿಂದ ಉಂಟಾಗುವ ಕ್ಯಾನ್ಸರ್ ರೋಗ ನಿಯಂತ್ರಿಸಲು ಆಗದೆಂದು ಗೊತ್ತಿದ್ದರು, ಜನ ಈ ಚಟ ಬಿಡದಿರುವುದು ವಿಷಾದಕರ ಸಂಗತಿ ಎಂದರು.

ಸಿವಿಲ್ ನ್ಯಾಯಾಧೀಶ ಆದಿತ್ಯ ಕಲಾಲ ಅವರು ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ಕ್ಯಾನ್ಸರ್‌ರೋಗ ಹೆಚ್ಚಾಗಿದೆ. ತಂಬಾಕು ನಿಷೇಧಿಸುವುದರಿಂದ ವಾಮ ಮಾರ್ಗದಲ್ಲಿ ಹೆಚ್ಚು ಮಾರಾಟ ಆಗುತ್ತದೆ. ಆದಕ್ಕಾಗಿ ತಂಬಾಕು ಉತ್ಪನ್ನಗಳ ಮೇಲೆ ಪ್ರಾಣ ಹಾನಿಕಾರಕ ಎಂದು ಬರೆದರೂ ಇದನ್ನು ಗಮನಿಸಿ ಮತ್ತೇ ಚಟ ಮಾಡುತ್ತಾರೆ ಎಂದರು.

ತಾಲೂಕಾ ವೈದ್ಯಾಧಿಕಾರಿ ಡಾ.ಉದಯ ಕುಡಚಿ ಅವರು ಮಾತನಾಡಿ, ತಂಬಾಕು ಸೇವಿಸುವವರು ಹೆಚ್ಚಾಗುತ್ತಿದ್ದಾರೆ. ಶಾಲಾ ವಲಯದಲ್ಲಿ ಮಾರಾಟ ಮಾಡದಂತೆ ನಿರ್ಬಂಧ ಇದೆ. ಆದರೆ ಈ ಕೆಲಸ ಸರ್ಕಾರದ ಎಲ್ಲ ಇಲಾಖಾ ಆವರಣ, ಸುತ್ತಮುತ್ತ ನಿರ್ಬಂಧಿಸಬೇಕು. ಆಗ ಸ್ವಲ್ಪಾದರೂ ಕಡಿಮೆ ಆಗಬಹುದು ಎಂದರು. ವಕೀಲರ ಸಂಘದ ಅಧ್ಯಕ್ಷ ಕೆ.ಬಿ.ಕುರಬೇಟ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇಂಡಿಯನ್ ಕ್ಯಾನ್ಸರ್ ಸೊಸೈಟಿ ಸಿಇಒ ಡಾ.ಗುರು ಸುಹಾಸ ಉಪನ್ಯಾಸ ನೀಡಿದರು. ಪ್ರಾರಂಭದಲ್ಲಿ ಜನ ಜಾಗೃತಿ ಜಾಥಾ ಮತ್ತು ಬೀದಿ ನಾಟಕದ ಮೂಲಕ ಜನರಿಗೆ ತಿಳುವಳಿಕೆ ಕಾರ್ಯಕ್ರಮ ಜರುಗಿತು.

ಪೋಲಿಸ್ ಇನಸ್ಪೆಕ್ಟರ್ ಶಿವಶಂಕರ ಗಣಾಚಾರಿ, ಬಿಇಒ ಪ್ರಭಾವತಿ ಪಾಟೀಲ, ವಕೀಲರ ಸಂಘದ ಉಪಾಧ್ಯಕ್ಷ ಬಿ.ಎಂ. ಜಿನರಾಳಿ, ಕಾರ್ಯದರ್ಶಿ ಎಸ್ .ಜಿ.ನದಾಫ್, ಅಪರ ಸರ್ಕಾರಿ ವಕೀಲ ಅನೀಲ ಕರೋಶಿ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಪ್ರಾಂತೀಯ ವ್ಯವಸ್ಥಾಪಕಿ ಸಂತಾನಿ ದಂಡಿನ, ವೈಜಯಂತಿ ಚೌಗಲಾ, ವಿಠ್ಠಲ ಘಸ್ತಿ, ಅಮರೀಶ ಬಾಗೇವಾಡಿ, ಅನಿತಾ ಕುಲಕರ್ಣಿ ಮತ್ತಿತರರಿದ್ದರು. ಕಿರಣ ಚೌಗಲಾ ಸ್ವಾಗತಿಸಿದರು. ಚೇತನ ಕುಲಕರ್ಣಿ ನಿರೂಪಿಸಿದರು. ಸಂತಾನಿ ದಂಡಿನ ವಂದಿಸಿದರು.



ದುಶ್ಚಟದಿಂದ ದೂರವಿದ್ದು, ಸಾಧನೆ ಮಾಡಿ

ಮೂಡಲಗಿ: ದುಶ್ಚಟಗಳಿಂದ ದೂರವಿರಬೇಕು. ಸಾಧನೆ ಮೆಟ್ಟಿಲುಗಳನ್ನು ಹತ್ತಬೇಕಾದರೆ ದುಶ್ಚಟವೆಂಬ ಮೆಟ್ಟಿಲಿನಿಂದ ದೂರವಿದ್ದು, ಮುನ್ನಡೆಯಬೇಕು ಎಂದು ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ(ರಿ) ಅಥಣಿ-ಚಿಕ್ಕೋಡಿ ವಿಭಾಗದ ಸದಸ್ಯ ಉದಯ ಗೌಡ ಹೇಳಿದರು.

ಬುಧವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ಧರ್ಮಸ್ಥಳದ ಪ್ರಾಯೋಜಿತ ಮೂಡಲಗಿ ಯೋಜನಾ ಕಚೇರಿ ವತಿಯಿಂದ ನಾಗನೂರು ಗ್ರಾಮದ ಆಚಾರ್ಯ ಪದವಿ ಪೂರ್ವ ಮಹಾ ವಿದ್ಯಾಲಯದಲ್ಲಿ ವಿಶ್ವ ತಂಬಾಕು ವಿರೋಧಿ ದಿನಾಚರಣೆಯಲ್ಲಿ ಮಾತನಾಡಿದರು.

ಗೋಕಾಕ್ ತಾಲೂಕು ಆಸ್ಪತ್ರೆ ಆರೋಗ್ಯ ಶಿಕ್ಷಣಾಧಿಕಾರಿ ಬಸನಗೌಡ ಈಶ್ವರಪ್ಪಗೋಳ್ ಮಾತನಾಡಿ, ತಂಬಾಕು ರೈತ ಬೆಳೆಯುವ ಬೆಳೆಯಾಗಿದ್ದು, ಕೀಟನಾಶಕಗಳು ಹಾಗೂ ಗೋಡೆಯ ಬಣ್ಣಗಳಿಗೆ ಬಳಕೆ ಮಾಡುವಂತ ಹದ್ದು, ಕೀಟನಾಶಕಗಳಿಗೆ ಉಪಯೋಗವಾಗುವ ವಿಷಯವನ್ನು ಮನುಷ್ಯ ಸೇವಿಸುತ್ತಾನೆ. ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದು ಎಂದರು.

ಸ್ವಸಹಾಯ ಸಂಘಗಳ ನಿರ್ವಹಣಾ ವಿಭಾಗ ಯೋಜನಾಧಿಕಾರಿ ಸಂತೋಷ ಮಾತನಾಡಿ, ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಅವರ ಮುಖ್ಯ ಪಾತ್ರವಿದೆ. ದುಶ್ಚಟಗಳನ್ನು ದೂರವಿಡುವಲ್ಲಿ ಜನಜಾಗೃತಿ ವೇದಿಕೆ, ಮಧ್ಯವರ್ಜನ ಶಿಬಿರ, ನವ ಜೀವನ ಸಮಿತಿ, ಸ್ವಾಸ್ಥ ಸಂಕಲ್ಪ ಕಾರ್ಯಕ್ರಮ, ತಂಬಾಕು ವಿರೋಧಿ ದಿನಾಚರಣೆ, ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ಜನರಲ್ಲಿ ಜಾಗೃತಿಯನ್ನು ಮೂಡಿಸುತ್ತಿದೆ ಎಂದರು.

ಆರೋಗ್ಯ ಶಿಕ್ಷಣಾಧಿಕಾರಿ ಮಲ್ಲಮ್ಮ ನಾಯಕ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಆಚಾರ್ಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರವೀಣ್ ಕುಲಗೋಡು, ಮೂಡಲಗಿ ಕ್ಷೇತ್ರ ಯೋಜನಾಧಿಕಾರಿ ಹರೀಶ ಮಾತನಾಡಿದರು .

ಶಿಕ್ಷಣ ಸಂಸ್ಥೆಯ ಬೋಧಕ, ಬೋಧಕೇತರ ಸಿಬ್ಬಂದಿಗಳು ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಜ್ಞಾನ ವಿಕಾಸ ಸಮನ್ವಯಾಧಿಕಾರಿ ವಿಜಯಲಕ್ಷ್ಮೀ ನಿರೂಪಿಸಿದರು.



ಆಧುನಿಕತೆಯಿಂದ ಕಿರಿದಾಗುತ್ತಿದೆ ವಿಶಾಲವಾದ ಜಗತ್ತು: ಸಿದ್ಧರಾಮ ಶ್ರೀಗಳು

ಬೆಳಗಾವಿ: ಜಗದಗಲ ಮುಗಿಲಗಲವಾಗಿರುವ ಭಗವಂತನ ಸ್ವರೂಪ ಇಷ್ಟಲಿಂಗ ರೂಪದಲ್ಲಿ ಕಿರಿದಾಗಿ ಅಂಗೈಗೆ ಬಂದಿರುವಂತೆ, ಈ ವಿಶಾಲವಾದ ಜಗತ್ತು ಆಧುನಿಕ ತಂತ್ರಜ್ಞಾನದಿಂದಾಗಿ ಕಿರಿದಾಗುತ್ತಿದೆ. ಟ್ಯಾಬ್, ಮೊಬೈಲ್ ಗಳಂತಹ ತಂತ್ರಜ್ಞಾನದಿಂದ ಜಗತ್ತಿನ ಮಾಹಿತಿ ಇಂದು ಅಂಗೈಯಲ್ಲಿ ದೊರೆಯುತ್ತಿದ್ದು, ವಿಶಾಲವಾದ ಜಗತ್ತು ಕಿರಿದಾಗುತ್ತಿದೆ ಎಂದು ಗದುಗಿನ ತೋಂಟದಾರ್ಯ ಮಠದ ಜಗದ್ಗುರು ಡಾ.ತೋಂಟದ ಸಿದ್ಧರಾಮ ಶ್ರೀಗಳು ಅಭಿಪ್ರಾಯಪಟ್ಟರು.

ಇಲ್ಲಿನ ಶಿವಬಸವ ನಗರದ ಎಸ್.ಜಿ.ಬಾಳೆಕುಂದ್ರಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿನ ಎಸ್.ಜಿ.ಸಂಬರಗಿಮಠ ಸಭಾಭವನದಲ್ಲಿ ಹಮ್ಮಿಕೊಂಡ ನೂತನ ಸಿದ್ಧರಾಮೇಶ್ವರ ಸಿಬಿಎಸ್‌ಇ ಶಾಲೆಯ ಲೋಕಾರ್ಪಣೆಗೊಳಿಸಿ ಮಾತನಾಡಿದರು.



ಸಾನ್ನಿಧ್ಯ ವಹಿಸಿ ನುಡಿಗಳನ್ನಾಡಿದ ನಾಗನೂರು ರುದ್ರಾಕ್ಷಿ ಮಠದ ಡಾ.ಅಲ್ಲಮಪ್ರಭು ಶ್ರೀಗಳು, ತಮ್ಮ ಮಕ್ಕಳನ್ನು ಭವಿಷ್ಯದ ಇಂಜನಿಯರ್ ಹಾಗೂ ವೈದ್ಯರನ್ನಾಗಿಸಬೇಕೆಂಬ ಹಂಬಲ ಎಲ್ಲ ಪಾಲಕರಿಗಿರುತ್ತದೆ. ಉತ್ತಮ ಸಂಸ್ಕಾರದೊಂದಿಗೆ ಕಡಿಮೆ ವೆಚ್ಚದಲ್ಲಿ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಸದುದ್ದೇಶದಿಂದ ಸಿಬಿಎಸ್‌ಇ ಶಾಲೆ ಪ್ರಾರಂಭಿಸಲಾಗಿದ್ದು, ನಾಡಿನ ಜನತೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಪೋತದಾರ್ ಅಂತಾರಾಷ್ಟ್ರೀಯ ಶಾಲೆಯ ಪ್ರಾಚಾರ್ಯ ರಾಜ ಹುಲಮನಿ ಮಾತನಾಡಿದರು. ಈ ವೇಳೆ ಅವರು 21 ನೇ ಶತಮಾನಕ್ಕೆ ತಕ್ಕುದಾದ ಎಲ್ಲ ಸೌಲಭ್ಯಗಳನ್ನು ಹೊಂದಿರುವ ಸಿದ್ಧರಾಮೇಶ್ವರ ಸಿಬಿಎಸ್‌ಇ ಶಾಲೆಯನ್ನು ಆಯ್ಕೆಮಾಡಿಕೊಂಡಿರುವ ಪಾಲಕರನ್ನು ಅಭಿನಂದಿಸಿದರು.

ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎಸ್.ಪಿ. ಹಿರೇಮಠ ಮಾತನಾಡಿ, ದೇಶದಲ್ಲಿ ಎಲ್ಲಾ ಶಾಲೆಗಳು ಶಿಕ್ಷಣ ನೀಡುತ್ತವೆ. ಆದರೆ ಸಂಸ್ಕಾರಯುತ ಶಿಕ್ಷಣ ದೊರೆಯುವುದು ಕಷ್ಟ. ಸಂಸ್ಕಾರಯುತ ಶಿಕ್ಷಣದಿಂದಲೇ ಸದೃಢ ಸಮಾಜ ನಿರ್ಮಾಣ ಸಾಧ್ಯ ಎಂದರು.

ಸಿಬಿಎಸ್‌ಇ ಶಾಲೆಯ ಪ್ರಾಚಾರ್ಯ ಡಾ. ಸಿ.ಬಿ.ಪಾಟೀಲ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿಯರಾದ ಸವಿತಾ ರಾವ್, ಶಿಲ್ಪಾ ಅಮಟೆ ನಿರೂಪಿಸಿದರು. ಸವಿತಾ ಎಚ್. ವಂದಿಸಿದರು.

ವಿಶ್ವ ತಂಬಾಕು ವಿರೋಧಿ ದಿನಾಚರಣೆ

ಸುರೇಬಾನ: ತಂಬಾಕು ಸೇವನೆಯಿಂದ ಉಂಟಾಗುವ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು, ಶ್ವಾಸಕೋಶದ ತೊಂದರೆಗಳು ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿವೆ ಎಂದು ಸುರೇಬಾನ ಪ್ರಾಥಮಿಕ ಆರೋಗ್ಯ ಕೇಂದ್ರದ ನಿವೃತ್ತ ಅಧಿಕಾರಿಗಳಾದ ದಯಾನಂದ ಶಿರೂರ ತಿಳಿಸಿದರು.

ಅವರು ಸಮೀಪದ ಶಿವಪೇಠ ಗ್ರಾಮದ ಬಸವೇಶ್ವರ ಕಲ್ಯಾಣ ಮಂಟಪಲ್ಲಿ ಆಯೋಜಿಸಿದ್ದ, ವಿಶ್ವ ತಂಬಾಕು ವಿರೋಧಿ ದಿನಾಚರಣೆ ಅಂಗವಾಗಿ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ತಂಬಾಕು ಸೇವನೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು, ಕ್ಯಾನ್ಸರ್ ಸೇರಿದಂತೆ ವಿವಿಧ ಮಾರಕ ಕಾಯಿಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದರು.

ಸಂತೋಷ ಗಣಮುಖಿ ಮಾತನಾಡಿ, ಕುಟುಂಬದ ಅಭಿವೃದ್ಧಿಯಲ್ಲಿ ತಾಯಂದಿರ ಪಾತ್ರ ಮಹತ್ವದ್ದಾಗಿದ್ದು, ಮಕ್ಕಳು ಮತ್ತು ಯುವಜನರು ಯಾವುದೇ ದುಶ್ಚಟಗಳಿಗೆ ಬಲಿಯಾಗದಂತೆ ಪೋಷಕರು ವಿಶೇಷವಾಗಿ ತಾಯಂದಿರು ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.



ಬಸವರಾಜ ಬೀಳಗಿ ಮಾತನಾಡಿ, ಸಂಘಟನೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗಬೇಕೆಂದು ಮಾರ್ಗದರ್ಶನ ಮಾಡಿದರು.

ವಲಯದ ಮೇಲ್ವಿಚಾರಕರಾದ ಪ್ರದೀಪ ಮಾತನಾಡಿ, ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ಗ್ರಾಪಂ ಮಾಜಿ ಸದಸ್ಯ ನಾಗಪ್ಪ ಗಣಮುಖಿ, ಒಕ್ಕೂಟದ ಪದಾಧಿಕಾರಿ ಕಾಶವ್ವ ದೇವನಾಳ, ಸಂಘದ ಸದಸ್ಯರು, ಗ್ರಾಮಸ್ಥರು, ಮಹಿಳೆಯರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು. ಪ್ರದೀಪ ನಿರೂಪಿಸಿದರು. ಸೇವಾ ಪ್ರತಿನಿಧಿ ಗಿರಿಜಾ ಗಾಳಿ ಸ್ವಾಗತಿಸಿ, ವಂದಿಸಿದರು.

ಪ್ರತಿದಿನ ಪರಿಸರ ರಕ್ಷಣೆಗೆ ಸಂಕಲ್ಪ ಮಾಡಿ: ಆತ್ಮಾರಾಮ ಶ್ರೀಗಳು

ತೆಲಸಂಗ: ವಿಶ್ವ ಪರಿಸರ ದಿನವನ್ನು ಕೇವಲ ಆಚರಣೆಗೆ ಸೀಮಿತಗೊಳಿಸದೆ, ಪ್ರತಿದಿನ ಪರಿಸರ ರಕ್ಷಣೆಗೆ ಸಂಕಲ್ಪ ಮಾಡಬೇಕು ಎಂದು ಕಕಮರಿಯ ಗುರುದೇವ ಆಶ್ರಮದ ಆತ್ಮಾರಾಮ ಶ್ರೀಗಳು ಹೇಳಿದರು.

ಸಮೀಪದ ಬನ್ನೂರ ಗ್ರಾಮದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ 9 ಗ್ರಾಮದಳ ಸ್ವಚ್ಛತಾ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಪರಿಸರವು ನಮ್ಮ ಜೀವನದ ಆಧಾರವಾಗಿದೆ. ಪರಿಸರ ಸಂರಕ್ಷಣೆ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ, ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಆಗಿದೆ. ನಮ್ಮ ಮನೆ, ರಸ್ತೆ ಹಾಗೂ ಗ್ರಾಮವನ್ನು ಸ್ವಚ್ಛವಾಗಿಟ್ಟರೆ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಪ್ರತಿನಿತ್ಯ ಬೆಳ್ಳಂಬೆಳಗ್ಗೆ ಕೈಯಲ್ಲಿ ಕಸಬರಗಿ ಹಿಡಿದ ಪೂಜ್ಯರು: ಸಿದ್ದೇಶ್ವರ ಶ್ರೀಗಳ ಆರೈಕೆ ಮಾಡುತ್ತ ಹತ್ತಾರು ವರ್ಷ ಅವರಜೊತೆದ್ದ ಆತ್ಮಾರಾಮ ಶ್ರೀಗಳು. ಸಾಮಾನ್ಯವಾಗಿ ಧಾರ್ಮಿಕ ಮುಖಂಡರು ಧರ್ಮ ಸಭೆಗಳಿಗೆ ಸೀಮಿತವಾಗುವ ಈ ಕಾಲದಲ್ಲಿ, ಆತ್ಮರಾಮ ಶ್ರೀಗಳು ಪ್ರತಿನಿತ್ಯ ಬೆಳ್ಳಂಬೆಳಗ್ಗೆ ತಮ್ಮ ಭಕ್ತ ಮಂಡಳಿಯೊಂದಿಗೆ ಕೈಯಲ್ಲಿ ಕಸಬರಗಿ ಹಿಡಿದು ಗ್ರಾಮಗಳ ರಸ್ತೆಗಿಳಿಯುತ್ತಿದ್ದಾರೆ. ಕೇವಲ ಬೋಧನೆ ಮಾಡುವುದಕ್ಕಿಂತ ತಾವೇ ಖುದ್ದಾಗಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಮೂಲಕ ಗ್ರಾಮಸ್ಥರಲ್ಲಿ ಮೂಢನಂಬಿಕೆ ಮತ್ತು ಸ್ವಚ್ಛತೆಯ ಕೊರತೆಯ ವಿರುದ್ಧ ಮೂಕ ಕ್ರಾಂತಿ ಸೃಷ್ಟಿಸುತ್ತಿದ್ದಾರೆ. ರಸ್ತೆಗಳ ಕಸ ಗುಡಿಸಿ, ಚರಂಡಿ ಸ್ವಚ್ಛಗೊಳಿಸುವ ಪೂಜ್ಯರ ಈ ಕಾರ್ಯವನ್ನು ಕಂಡು ಗ್ರಾಮಸ್ಥರು ಕೂಡ ಸ್ವಯಂಪ್ರೇರಿತರಾಗಿ ಅಭಿಯಾನದಲ್ಲಿ ಕೈಜೋಡಿಸುತ್ತಿದ್ದಾರೆ.



ಶ್ರೀಗಳ ಪರಿಸರ ಪ್ರೇಮ ಕೇವಲ ಸ್ವಚ್ಛತೆಗೆ ಮಾತ್ರ ಸೀಮಿತವಾಗಿಲ್ಲ. ಕಕಮರಿಯ ಗುರುದೇವ ಆಶ್ರಮದ ಆವರಣದ 13 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಇಂದು ಬೃಹತ್ ಸಸ್ಯಕಾಶಿಯೊಂದು ತಲೆಎತ್ತಿ ನಿಂತಿದೆ. 80ಕ್ಕೂ ಹೆಚ್ಚು ತರಹದ ಅಪರೂಪದ ಪ್ರಬೇಧದ ಸಸ್ಯಗಳು ಔಷಧೀಯ, ನೆರಳು ನೀಡುವ, ಗಾಳಿ ಹಾಗೂ ಹಣ್ಣಿನ ಗಿಡಗಳನ್ನು ಬೆಳೆಸಿದ್ದಾರೆ. ಶ್ರೀಗಳು ತಮ್ಮ ಅವಿರತ ಶ್ರಮ ಮತ್ತು ಭಕ್ತರ ಸಹಕಾರದಿಂದ ಹಸಿರು ವನವನ್ನಾಗಿ ಪರಿವರ್ತಿಸಿದ್ದಾರೆ. ಇಂದು ಈ 3800 ಗಿಡಗಳು ಹೆಮ್ಮರವಾಗಿ ಬೆಳೆದು ನಿಂತಿದ್ದು, ಪ್ರಕೃತಿಯ ಸಮತೋಲನ ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ವಿಶ್ವ ಪರಿಸರ ದಿನದ ನಿಮಿತ್ತ ಶ್ರೀಗಳು ಪ್ರಸಕ್ತ ಸಾಲಿನಲ್ಲಿ ಅಥಣಿ ತಾಲೂಕಿನ 9 ಪ್ರಮುಖ ಹಳ್ಳಿಗಳನ್ನು ಸ್ವಚ್ಛತಾ ಅಭಿಯಾನಕ್ಕಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಇದರೊಂದಿಗೆ ಈಗಾಗಲೇ ಗರಗಿನ ವಲಯದ 11 ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು, ಹಂತ ಹಂತವಾಗಿ ಅಲ್ಲಿನ ರಸ್ತೆ, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುವ ಬೃಹತ್ ಜನಜಾಗೃತಿ ಕಾರ್ಯಕ್ರಮವನ್ನು ಆಶ್ರಮದ ವತಿಯಿಂದ ಯಶಸ್ವಿಯಾಗಿ ಮುನ್ನಡೆಸಲಾಗುತ್ತಿದೆ. ಪ್ರತಿಯೊಂದು ಹಳ್ಳಿಯಲ್ಲೂ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಿಸುವುದು ಮತ್ತು ಶುದ್ಧ ಕುಡಿಯುವ ನೀರಿನ ಜಾಗೃತಿ ಮೂಡಿಸುವುದು ಗಿಡಮರ ಬೆಳೆಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ.

> **ಬಾಹ್ಯ ಜಗತ್ತಿನ ಸ್ವಚ್ಛತೆಯ ಜೊತೆಗೆ ಪ್ರತಿಯೊಬ್ಬರ ಅಂತರಂಗವೂ ಸ್ವಚ್ಛವಾಗಬೇಕು. ನಮ್ಮ ಗ್ರಾಮಗಳನ್ನು ನಾವೇ ಸ್ವಚ್ಛವಾಗಿಟ್ಟುಕೊಳ್ಳದಿದ್ದರೆ ರೋಗರುಜಿನಗಳಿಗೆ ನಾವೇ ಆಹ್ವಾನ ನೀಡಿದಂತಾಗುತ್ತದೆ. ಆಶ್ರಮದ ಈ ಪುಟ್ಟ ಪ್ರಯತ್ನಕ್ಕೆ ಭಕ್ತರು ಮತ್ತು ಸಾರ್ವಜನಿಕರು ತೋರುತ್ತಿರುವ ಉತ್ಸಾಹ ಪರಿಸರ ದಿನದ ನೈಜ ಆಚರಣೆಯಾಗಿದೆ. ಇದು ಸಿದ್ದೇಶ್ವರ ಶ್ರೀಗಳ ಆಶಯವೂ ಹೌದು.**
> ■ ಆತ್ಮರಾಮ ಸ್ವಾಮೀಜಿ, ಗುರುದೇವ ಆಶ್ರಮ, ಕಕಮರಿ

ಸಬ್ಸಿಡಿ ದರದ ಬಿತ್ತನೆ ಬೀಜ ವಿತರಣೆಗೆ ಚಾಲನೆ

ತೆಲಸಂಗ: ಪ್ರಸುತ ಮುಂಗಾರು ಹಂಗಾಮು ಆರಂಭವಾಗುತ್ತಿರುವುದರಿಂದ ರೈತರು ಕೃಷಿ ಇಲಾಖೆಯಿಂದ ಸಿಗುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಕೃಷಿ ಅಧಿಕಾರಿ ಯಂಕಪ್ಪ ಉಪ್ಪಾರ್ ಕರೆ ನೀಡಿದರು.

ಗುರುವಾರ ಗ್ರಾಮದ ರೈತ ಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ರೈತರಿಗೆ ರಿಯಾಯಿತಿ ದರದಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆಗೆ ಚಾಲನೆ ನೀಡಿ ಅವರು ಮಾತನಾಡಿ, ಉತ್ತರ ಕರ್ನಾಟಕ ಭಾಗದಲ್ಲಿ ಸಕಾಲಕ್ಕೆ ಮಳೆಯಾಗುತ್ತಿದ್ದು, ಮುಂಗಾರು ಬಿತ್ತನೆಗೆ ಭೂಮಿ ಸಿದ್ಧವಾಗುತ್ತಿದೆ. ರೈತರು ಮಾರುಕಟ್ಟೆಯಲ್ಲಿ ಸಿಗುವ ನಕಲಿ ಬಿತ್ತನೆ ಬೀಜಗಳಿಗೆ ಮರುಳಾಗದೆ, ಸರ್ಕಾರದ ರೈತ ಸಂಪರ್ಕ ಕೇಂದ್ರಗಳಲ್ಲಿ ಸಿಗುವ ಪ್ರಮಾಣೀಕೃತ ಹಾಗೂ ಗುಣಮಟ್ಟದ ಬಿತ್ತನೆ ಬೀಜಗಳನ್ನೇ ಖರೀದಿಸಬೇಕು. ಕೃಷಿ ಇಲಾಖೆಯು ರೈತರ ಹಿತದೃಷ್ಟಿಯಿಂದ ರಿಯಾಯಿತಿ ದರದಲ್ಲಿ ಬೀಜಗಳನ್ನು ವಿತರಿಸುತ್ತಿದ್ದು, ಇದರ ಸಂಪೂರ್ಣ ಪ್ರಯೋಜನವನ್ನು ಪ್ರತಿಯೊಬ್ಬ ರೈತರೂ ಪಡೆದುಕೊಳ್ಳಬೇಕು. ಬಿತ್ತನೆಗೂ ಮುನ್ನ ಬೀಜೋಪಚಾರ ಮಾಡುವುದರಿಂದ ರೋಗ ಮುಕ್ತವಾಗಿ ಉತ್ತಮ ಇಳುವರಿ ಪಡೆಯಲು ಸಾಧ್ಯ ಎಂದು ಮಾಹಿತಿ ನೀಡಿದರು. ಉತ್ತರ ಕರ್ನಾಟಕದ ಭಾಗದಲ್ಲಿ ಕೃಷಿಯೇ ಪ್ರಧಾನ ಜೀವನಾಡಿಯಾಗಿದೆ.ಇತ್ತೀಚಿನ ದಿನಗಳಲ್ಲಿ ಕೃಷಿ ವೆಚ್ಚ ಹೆಚ್ಚಾಗುತ್ತಿರುವುದರಿಂದ ರೈತರು ಕಂಗಾಲಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರದ ಸಬ್ಸಿಡಿ ದರದ ಬಿತ್ತನೆ ಬೀಜಗಳು ರೈತರ ಮೇಲಿನ ಆರ್ಥಿಕ ಹೊರೆಯನ್ನು ಗಣನೀಯವಾಗಿ ತಗ್ಗಿಸುತ್ತವೆ. ಮುಂಗಾರು ಹಂಗಾಮಿನ ವಿವಿಧ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ವಿತರಿಸುತ್ತಿರುವುದು ಈ ಭಾಗದ ರೈತರಿಗೆ ವರದಾನವಾಗಿ ಪರಿಣಮಿಸಿದೆ ಎಂದರು.



ಈ ವೇಳೆ ಗ್ರಾಮದ ಹಿರಿಯರಾದ ಅರವಿಂದ್ ಉಂಡೋಡಿ, ಮಾದೇವ ಪೂಜಾರಿ, ವಿಲಾಸ ಮೋರೆ, ವಿವೇಕಾನಂದ ಹಳಿಂಗಳಿ, ಗುಂಡುಬಾ ಪವಾರ, ಆದೀಕ ಲಾಂಖಾನೆ, ಗೋಪಾಲ ಶೆಲ್ಲೆಪ್ಪಗೋಳ, ಅಂಬರೀಶ ಕಂದಾರೆ, ಸಿದ್ದಲಿಂಗ ಮಾದರ, ಕಾಶಿಲಿಂಗ ಲೋಕಂಡೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ಹಾಗೂ ಕೃಷಿ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೨

ಗರಿಷ್ಠ 33° ಕನಿಷ್ಠ 24°

ಶುಕ್ರವಾರ
5 ಜೂನ್ 2026
ಹುಬ್ಬಳ್ಳಿ

ಕಿರುಸುದ್ದಿ

ಧರ್ಮಣ್ಣ ಮಾದರಗೆ ಪಿಎಚ್‌ಡಿ



• **ಬೀಳಗಿ:** ತಾಲೂಕಿನ ಸೊನ್ನ ಗ್ರಾಮದ ಧರ್ಮಣ್ಣ ಮಾದರಗೆ ತುಮಕೂರು ವಿಶ್ವವಿದ್ಯಾನಿಲಯದ 19ನೇ ಘಟಿಕೋತ್ಸವದಲ್ಲಿ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಯಿತು.

ತುಮಕೂರು ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕ ಪ್ರೊ. ಬಸವರಾಜ ಜಿ ಅವರ ಯಶಸ್ವಿ ಮಾರ್ಗದರ್ಶನದಲ್ಲಿ 'ಕರ್ನಾಟಕ ರಾಜಕೀಯ ಇತಿಹಾಸ ಮತ್ತು ಅಸ್ಮಿತೆ ರಾಜಕೀಯ: ರಾಜ್ಯಶಾಸ್ತ್ರೀಯ ಅಧ್ಯಯನ (1956-2020)' ಎಂಬ ವಿಷಯದ ಕುರಿತು ಮಂಡಿಸಿದ ಸಂಶೋಧನಾ ಮಹಾಪ್ರಬಂಧಕ್ಕೆ ಈ ಡಾಕ್ಟರೇಟ್ ಪದವಿ ಲಭಿಸಿದೆ. ರಾಜ್ಯದ ರಾಜಕೀಯ ಸನ್ನಿವೇಶ ಮತ್ತು ಅಸ್ಮಿತೆಯ ವಿವಿಧ ಆಯಾಮಗಳನ್ನು ಅತ್ಯಂತ ಆಳವಾಗಿ ಅಧ್ಯಯನ ಮಾಡಿರುವ ಇವರ ಸಂಶೋಧನಾ ಕಾರ್ಯವು ಶೈಕ್ಷಣಿಕ ವಲಯದಲ್ಲಿ ವಿಶೇಷ ಮನ್ನಣೆ ಪಡೆದಿದೆ. ಗ್ರಾಮೀಣ ಹಿನ್ನೆಲೆಯಿಂದ ಬಂದು ಉನ್ನತ ಶಿಕ್ಷಣದಲ್ಲಿ ಈ ಮಹತ್ವದ ಸಾಧನೆ ಮಾಡಿರುವ ಡಾ.ಧರ್ಮಣ್ಣ ಮಾದರ ಅವರ ಈ ಯಶಸ್ಸಿಗೆ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ವರ್ಗ, ಸ್ನೇಹಿತರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

ಬಸವೇಶ್ವರ ಸೌಹಾರ್ದ ಸಹಕಾರಿ ಸಂಘದ ಉದ್ಘಾಟನೆ ಇಂದು

• **ಬೀಳಗಿ:** ತಾಲೂಕಿನ ಅನಗವಾಡಿ ಗ್ರಾಮದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಅನಗವಾಡಿ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ಉದ್ಘಾಟನೆ ಜೂ.5ರಂದು ಬೆಳಗ್ಗೆ 10.30 ಗಂಟೆಗೆ ಜರುಗಲಿದೆ ಎಂದು ಅನಗವಾಡಿ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಮಿಥುನ ನಾಯಕ ತಿಳಿಸಿದ್ದಾರೆ. ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಹಾಗೂ ಪೂರ್ಣಾನಂದ ಆಶ್ರಮದ ಮಾತೋಶ್ರೀ ಅನಸೂಯಾ ತಾಯಿ ಸಾನ್ನಿಧ್ಯ ವಹಿಸುವರು. ಭಾ.ಜ.ಪ. ರಾಜ್ಯ ಉಪಾಧ್ಯಕ್ಷ, ಮಾಜಿ ಸಚಿವ ಮುರಗೇಶ ನಿರಾಣಿ ಉದ್ಘಾಟಿಸುವರು.

ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಎಸ್.ಆರ್.ಪಾಟೀಲ ಗಣಕಯಂತ್ರ ಉದ್ಘಾಟಿಸುವರು. ಸಂಸದ ಪಿ.ಸಿ.ಗದ್ದಿಗೌಡರ ಹಾಗೂ ಮಾಜಿ ಸಚಿವ ಅಜಯಕುಮಾರ ಸರನಾಯಕ ಜಂಟಿಯಾಗಿ ಸಭಾ ಭವನ ಉದ್ಘಾಟಿಸುವರು.

ಮುಖ್ಯ ಅತಿಥಿಯಾಗಿ ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರಿ. ಬಾಗಲಕೋಟೆ ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಕೆಪಿಸಿಸಿ ಮಾಜಿ ಕಾರ್ಯದರ್ಶಿ ಶ್ರೀಮಂತ ಬಸವಪ್ರಭು ಸರನಾಡಗೌಡ, ಜಿಪಂ ಮಾಜಿ ಸದಸ್ಯ ಬಸವರಾಜ ಖೋತ, ಬೀಳಗಿಯ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಅಧ್ಯಕ್ಷ ಎಂ.ಎನ್.ಪಾಟೀಲ, ಟಿಎಪಿಸಿಎಂಎಸ್ ಅಧ್ಯಕ್ಷ ಎಂ.ಬಿ.ಕಂಬಿ.ಸಹಕಾರಿ ಸಂಘಗಳ ಉಪ ನಿಬಂಧಕ ದಾನಯ್ಯ ಹಿರೇಮಠ, ಸಹಕಾರಿ ಸಂಘಗಳ ಸಹಾಯಕ ಉಪನಿಬಂಧಕ ರಾಮನಗೌಡ ಪಾಟೀಲ, ಸಹಕಾರಿ ಅಭಿವೃದ್ಧಿ ಅಧಿಕಾರಿ ರಮೇಶ ಬುದಿ ಆಗಮಿಸಲಿದ್ದಾರೆಂದು ತಿಳಿಸಿದ್ದಾರೆ.

ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

• **ಗುಳೇದಗುಡ್ಡ:** ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ವಸತಿ ರಹಿತ (ಕಚ್ಚಾ ಮನೆ ಹೊಂದಿರುವ) ಮತ್ತು ನಿವೇಶನ ರಹಿತ ಕುಟುಂಬಗಳಿಗೆ ವಸತಿ ಕಲ್ಪಿಸಲು ಆನಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಅರ್ಜಿ ಸಲ್ಲಿಸಲು ಜೂ.30ರ ವರೆಗೆ ವಿಸ್ತರಣೆ ಮಾಡಲಾಗಿದೆ. ಪುರಸಭೆ ವ್ಯಾಪ್ತಿಯೊಳಗಿನ ಸಾರ್ವಜನಿಕರು ವಸತಿ ರಹಿತರು ಅಥವಾ ಕಚ್ಚಾ ಮನೆ ಹೊಂದಿರುವ ಮತ್ತು ನಿವೇಶನ ರಹಿತ ಅರ್ಹ ಫಲಾನುಭವಿಗಳು ವಸತಿ ಸೌಲಭ್ಯ ಪಡೆಯಲು ನಿಗದಿತ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಪುರಸಭೆ ವಸತಿ ವಿಭಾಗದಲ್ಲಿ ಸಂಪರ್ಕಿಸಬೇಕು ಎಂದು ಪುರಸಭೆ ಮುಖ್ಯಾಧಿಕಾರಿ ಎ.ಎಚ್ ಮುಜಾವರ ತಿಳಿಸಿದ್ದಾರೆ.



ಬಾಗಲಕೋಟೆ: ಬಾದಾಮಿ ನಗರದಲ್ಲಿ ಇರುವ ರೈತ ಸಂಪರ್ಕ ಕೇಂದ್ರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಬೇಟಿ ನೀಡಿ ರೈತರಿಗೆ ಬಿತ್ತನೆ ಬೀಜಗಳ ವಿತರಣೆ ಹಾಗೂ ದಾಸ್ತಾನು ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಇದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

• **ಬೈಲಹೊಂಗಲ:** ಕರ್ನಾಟಕ ರಾಜ್ಯ ಬಣಜಿಗ ಕ್ಷೇಮಾಭಿವೃದ್ಧಿ ಸಂಘ (ರಿ) ಬೆಂಗಳೂರ ಬೈಲಹೊಂಗಲ ತಾಲೂಕಾ ಘಟಕದ ನೇತೃತ್ವದಲ್ಲಿ ಸನ್ 2025-26 ನೇ ಸಾಲಿನ ಎಸ್ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕಾ ಘಟಕ ಅಧ್ಯಕ್ಷ ವಿರೂಪಾಕ್ಷ ವಾಲಿ ತಿಳಿಸಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2026ರಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಶೇ.90% ಕ್ಕಿಂತ ಅಧಿಕ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಸೇ 90% ಅಂಕ ಪಡೆದ ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸಮಾಜದ ವತಿಯಿಂದ ಸನ್ಮಾನಿಸಿ, ಗೌರವಿಸಲಾಗುವದು ಎಂದರು.

ಅರ್ಹ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ತಾಲೂಕಾ ಯುವ ಘಟಕದ ಅಧ್ಯಕ್ಷ ಸಚೀನ್ ಚೀಲದ, ಮೊ. 9980368672, ಪ್ರಧಾನ ಕಾರ್ಯದರ್ಶಿ ಮಂಜುನಾಥ ಕೋರಿಶೆಟ್ಟಿ, ಮೊ.9844039009, ಕೋಶ್ಯಾಧ್ಯಕ್ಷ ಅಮೀತ ಚಿನಗುಡಿ, ಮೊ. 7795300145 ಜಿಲ್ಲಾ ಯುವ ಘಟಕ ವಿ.ಎಂ.ವಾಲಿ, ಇವರನ್ನು ಸಂಪರ್ಕಿಸಬೇಕು. ಅರ್ಹ ವಿದ್ಯಾರ್ಥಿಗಳು ಜೂ.15 ರೊಳಗಾಗಿ ಹೆಸರು ನೋಂದಾಯಿಸಬೇಕೆಂದು ಮನವಿ ಮಾಡಿದ್ದಾರೆ.



ಬೆಳಗಾವಿ: ಕಳೆದ 31 ವರ್ಷಗಳ ಸುದೀರ್ಘ ಕಾಲ ಶಿಕ್ಷಕರಾಗಿ ಜಿಲ್ಲೆಯ ಅನೇಕ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸಿ, ಬಶೀರಅಹ್ಮದ ಮು ತಹಶೀಲ್ದಾರ್ ಇವರು ಸೇವಾ ನಿವೃತ್ತಿ ಹೊಂದಿದ್ದು, ಶಿಕ್ಷಣ ಇಲಾಖೆ ಮತ್ತು ಮೊದಗಾ ಶಾಲೆ, ಗ್ರಾಮಸ್ಥರ ವತಿಯಿಂದ ತಹಶೀಲ್ದಾರ ದಂಪತಿಯನ್ನು ಸತ್ಕರಿಸಲಾಯಿತು. ಶಿಕ್ಷಣ ಇಲಾಖೆ ಸಿಆರ್‌ಪಿ ಗಿರಿಪ್ಪಗೌಡರ ಮೇಡಂ, ಎಸ್‌ಡಿಎಂಸಿ ಅಧ್ಯಕ್ಷ ರಿಯಾಜ್ ಹಿರೇಕೋಡಿ, ಪ್ರಧಾನ ಗುರುಗಳಾದ ಆರ್.ಎಸ್. ಸೊಗಲ, ವಾಯ್.ಎಂ.ಕಲಾಲ, ಎಸ್.ಎಂ.ನದಾಫ್, ಅಶೋಕ ನಾಯ್ಕ, ಮಕ್ತುಂಬಿ ರಾಜೇಖಾನ, ಗ್ರಾಮದ ಹಿರಿಯರು ಇದ್ದರು.

ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ತರಬೇತಿ

ಪರಿಷ್ಕರಣೆಯಲ್ಲಿ ಲೋಪವಾಗದಿರಲಿ

• **ಬಾಗಲಕೋಟೆ:** ಜಿಲ್ಲೆಯಾದ್ಯಂತ ಜೂ.30ರಿಂದ ಪ್ರಾರಂಭವಾಗುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಿನ್ನಲೆಯಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾದ ತರಬೇತಿ ಕಾರ್ಯಾಗಾರದ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿ ಸಂಗಪ್ಪ ಅವರು ಗುರುವಾರ ವೀಕ್ಷಣೆ ಮಾಡಿ, ಅಗತ್ಯ ಮಾರ್ಗದರ್ಶನ ನೀಡಿದರು.

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಪಾರದರ್ಶಕವಾಗಿ ಹಾಗೂ ದೋಷರಹಿತವಾಗಿ ಕೈಗೊಳ್ಳುವ ಉದ್ದೇಶದಿಂದ ಚುನಾವಣಾ ಆಯೋಗದ ನಿರ್ದೇಶನದಂತೆ ಬೂತ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ರಾಜಕೀಯ ಪಕ್ಷಗಳಿಂದ ನೇಮಕಗೊಂಡ ಬೂತ ಮಟ್ಟದ ಏಜೆಂಟರಗಳಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ. ಈ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅವರು ತಾಲೂಕಿನ ವಿವಿಧ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿ ಪ್ರಕ್ರಿಯೆ ವೀಕ್ಷಣೆ ಮಾಡಿದರು.

ಜೂ.30ರಿಂದ ಜು.29ರ ವರೆಗೆ ಒಂದು ತಿಂಗಳುಗಳ ಕಾಲ ನಡೆಯಲಿರುವ ಮನೆ ಮನೆ ಸಮೀಕ್ಷೆ ವೇಳೆ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ನೀಡುವ ಮೂಲಕ ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯದಲ್ಲಿ ಯಾವುದೇ ಲೋಪ ಉಂಟಾಗದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ನಿಗದಿತ ಅವಧಿಯೊಳಗೆ ಕಾರ್ಯ ಪೂರ್ಣಗೊಳಿಸಬೇಕೆಂದು ಹೇಳಿದರು.



> ಮತದಾರ ಪಟ್ಟಿಯು ಚುನಾವಣಾ ಪ್ರಕ್ರಿಯೆಯ ಮೂಲಾಧಾರವಾಗಿದ್ದು, ಅರ್ಹ ಮತದಾರರ ಹೆಸರು ಸೇರ್ಪಡೆ, ಮೃತ ಹಾಗೂ ಸ್ಥಳಾಂತರಗೊಂಡ ಮತದಾರರ ಹೆಸರುಗಳನ್ನು ಕೈಬಿಡುವಿಕೆ ಸೇರಿದಂತೆ ಇತರೆ ಎಲ್ಲ ಕಾರ್ಯಗಳನ್ನು ನಿಯಮಾನುಸಾರ ಮತ್ತು ನಿಖರವಾಗಿ ನಿರ್ವಹಿಸುವಂತೆ ಸೂಚನೆ ನೀಡಿದರು.
> ■ ಸಂಗಪ್ಪ, ಜಿಲ್ಲಾಧಿಕಾರಿ

ಜಿಲ್ಲಾಧಿಕಾರಿ ಸಂಗಪ್ಪ ಅವರು ಬಾದಾಮಿ ನಗರದ ವೀರಪುಲಕೇಶಿ ಶಾಲೆಯ ಸಭಾಭವನ, ಹುನಗುಂದ ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಭವನ ಹಾಗೂ ಬಾಗಲಕೋಟೆ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ನಡೆದ ಎಸ್.ಐ.ಆರ್ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ಪ್ರಕ್ರಿಯೆ ವೀಕ್ಷಣೆ ಮಾಡಿದರೆ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅವರು ಬೀಳಗಿ, ತೇರದಾಳ, ಮುಧೋಳ, ಜಮಖಂಡಿ ಹಾಗೂ ರಬಕವಿ-ಬನಹಟ್ಟಿಗೆ ಭೇಟಿ ನೀಡಿ ಎಸ್.ಐ.ಆರ್ ತರಬೇತಿ ಪ್ರಕ್ರಿಯೆ ವೀಕ್ಷಣೆ ಮಾಡಿದರು.

ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್ಸ್ ವಿತರಣೆ

• **ಬೀಳಗಿ :** ತಾಲೂಕಿನ 11 ಸರ್ಕಾರಿ ಶಾಲೆಗಳಿಗೆ ಡಚ್ ವಿವ್ ಟೆಕ್ನಾಲಜಿಸ್ ಕಂಪನಿಯ ಸಹಾಯದಿಂದ ಬೆಂಗಳೂರಿನ ನಗು ಫೌಂಡೇಶನ್ ಅವರು ಉಚಿತವಾಗಿ ನೀಡಿದ ನೋಟ್ ಪುಸ್ತಕಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಆದಾಪೂರ ಫಲಾನುಭವಿ ಶಾಲೆಯ ಮುಖ್ಯ ಗುರುಗಳಿಗೆ ವಿತರಿಸುವುದರ ಮೂಲಕ ಉದ್ಘಾಟಿಸಿದರು.

ನಗು ಫೌಂಡೇಶನ್ ರವರು ಡಚ್ ವಿವ್ ಟೆಕ್ನಾಲಜೀಸ್ ಕಂಪನಿ ಸಹಾಯದಿಂದ ನಮ್ಮ ತಾಲೂಕಿನ ಶಾಲಾ ಮಕ್ಕಳಿಗೆ ನೀಡಿರುವ ನೋಟ್ ಪುಸ್ತಕಗಳನ್ನು ಸದ್ಬಳಕೆ ಮಾಡಿಕೊಂಡು ಗುಣಮಟ್ಟದ ಶಿಕ್ಷಣ ಮಕ್ಕಳು ಪಡೆಯುವಂತಾಗಬೇಕು. ಫೌಂಡೇಶನ್ ಸಹಾಯದಿಂದ ಹೆಚ್ಚಿನ ಮಕ್ಕಳಿಗೆ ಸೌಲಭ್ಯಗಳು ಮುಂದಿನ ದಿನಮಾನಗಳಲ್ಲಿ ದೊರೆಯುವಂತಾಗಲು ಮಕ್ಕಳು ಉಚಿತ ಕೊಡುಗೆಗಳನ್ನು ಸದ್ಬಳಕೆ ಮಾಡಿಕೊಂಡಿರುವ ಬಗ್ಗೆ ಶಿಕ್ಷಕರು ಉಸ್ತುವಾರಿ ನಿರ್ವಹಣೆ ಮಾಡಬೇಕು. ನಗು ಫೌಂಡೇಶನ್‌ನ ಸ್ಥಾಪಕರಾದ ದೀಪ್ತಿ ಶೇಷಾದ್ರಿರವರ ಕಾರ್ಯ ಶ್ಲಾಘನೀಯವಾದದ್ದು, ಅವರಿಗೆ ಇಲಾಖೆ ಪರವಾಗಿ ಧನ್ಯವಾದ ತಿಳಿಸಿದರು.

ಕ್ಷೇತ್ರ ಸಮನ್ವಯಾಧಿಕಾರಿ ಶಿವಾಜಿ ಕಾಂಬಳೆ ಮಾತನಾಡಿ, ಕೊಪ್ಪ (ಎಸ್.ಕೆ.) ಶಾಲೆಯ ಶಿಕ್ಷಕ ಚಂದ್ರು ವೈ.ಎ.ಮನವಿಯ ಮೇರೆಗೆ ನಗು ಫೌಂಡೇಶನ್ ತಾಲೂಕಿನ 11 ಶಾಲೆಗಳ 462 ಮಕ್ಕಳಿಗೆ ಪ್ರತಿ ಮಗುವಿಗೆ 6 ನೋಟ್ ಪುಸ್ತಕಗಳಂತೆ 2772 ಪುಸ್ತಕಗಳನ್ನು ಒದಗಿಸಿದ್ದು ಸಂತೋಷದ ವಿಷಯ. ಫೌಂಡೇಶನ್ ಹಾಗೂ ಇಲಾಖೆಯ ಆಶಯದಂತೆ ಉತ್ತಮ ರೀತಿಯಲ್ಲಿ ಮಕ್ಕಳು ಬಳಸಿಕೊಳ್ಳುವಂತಾಗಬೇಕೆಂದು ತಿಳಿಸಿದರು.

ಶಿಕ್ಷಕ ಚಂದ್ರು ವೈ.ಎ.ಮಾತನಾಡಿದರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಸೋಮಶೇಖರ ತಳೇವಾಡ, ನಾನಾಗೌಡ ಪಾಟೀಲ, ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ವಿ.ಎನ್.ಸಾಲಾಪೂರ, ಉರ್ದು ಶಾಲೆಗಳ ಸಿಆರ್‌ಪಿ, ಫಲಾನುಭವಿ ಶಾಲೆಗಳ ಮುಖ್ಯ ಗುರುಗಳು ಹಾಗೂ ಕೊರ್ತಿ ಆರ್‌ಸಿ ಉರ್ದು ಶಾಲೆಯ ಶಿಕ್ಷಕರು ಹಾಜರಿದ್ದರು.



ವಿದ್ಯುತ್ ವ್ಯತ್ಯಯ ಇಂದು

• **ತೇರದಾಳ:** ತೇರದಾಳ ಶಾಖೆಯ ತೇರದಾಳ 110/11 ಕೆ.ವಿ ಉಪ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಜೂ.5ರಂದು ಶುಕ್ರವಾರ ಮೊದಲನೇ ತ್ರೈಮಾಸಿಕ ನಿರ್ವಹಣೆ ಕೈಕೊಳ್ಳಬೇಕಾಗಿರುವುದರಿಂದ 110/11 ಕೆ.ವಿ ತೇರದಾಳ ಉಪಕೇಂದ್ರದಿಂದ ವಿತರಣೆಯಾಗುವ ಎಲ್ಲ 11 ಕೆ.ವಿ ವಿದ್ಯುತ್ ಮಾರ್ಗಗಳು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಅಡಚಣೆ ಉಂಟಾಗಲಿದೆ. ಹಾಗಾಗಿ ಪಟ್ಟಣದ ಸಾರ್ವಜನಿಕರು, ಗ್ರಾಹಕರು ಸಹಕರಿಸಬೇಕೆಂದು ಈ ಮೂಲಕ ತೇರದಾಳ ಶಾಖಾಧಿಕಾರಿ ತಿಳಿಸಿದ್ದಾರೆ.

ಯೋಧರ ತ್ಯಾಗ, ದೇಶಪ್ರೇಮ ಸ್ಮರಣೀಯ

• **ಬೀಳಗಿ:** ಭಮನೆ, ಬಂಧು ಬಳಗ ಹಾಗೂ ತಮ್ಮ ಸುಖ ಸಂತೋಷಗಳನ್ನು ತ್ಯಾಗ ಮಾಡಿ, ಗಡಿಯಲ್ಲಿ ದೇಶ ಕಾಯುವ ಯೋಧರ ತ್ಯಾಗ, ದೇಶಪ್ರೇಮವು ಸದಾ ಸ್ಮರಣೀಯ ಎಂದು ಬೀಳಗಿ ಕಲ್ಮಠದ ಗುರುಪಾದ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ನಾಗರಾಳ ಗ್ರಾಮದಲ್ಲಿ ಗುರುವಾರ 24 ವರ್ಷಗಳ ಸೇವಾ ನಿವೃತ್ತಿ ಪಡೆದ ಧನಂಜಯ ಆನಂದಪ್ಪ ರಕ್ಕಸಗಿ ಸ್ವಗ್ರಾಮಕ್ಕೆ ಮರಳಿದ ಹಿನ್ನೆಲೆಯಲ್ಲಿ ಮಾಜಿ ಸೈನಿಕರ ಸಂಘ ಹಾಗೂ ನಾಗರಾಳ ಗ್ರಾಮಸ್ಥರಿಂದ ಏರ್ಪಡಿಸಿದ್ದ ಸ್ವಾಗತ ಹಾಗೂ ಅಭಿನಂದನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಭಾರತವು ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ರೂಪಗೊಳ್ಳಲು ಯೋಧರ ಪರಿಶ್ರಮವಿದೆ. ಯುವಜನರು ದುಶ್ಚಟಗಳ ದಾಸರಾಗದೆ ದೇಶ, ಸಮಾಜ ಸೇವೆಯಲ್ಲಿ ನಿರತರಾಗಬೇಕು ಎಂದರು.

ಕಸಾಪ ತಾಲೂಧ್ಯಕ್ಷ ಗುರುರಾಜ ಲೂತಿ ಮಾತನಾಡಿ, ನಿವೃತ್ತ ಯೋಧ ಧನಂಜಯ ರಕ್ಕಸಗಿ ಮುಂದೆಯೂ ಗ್ರಾಮದಲ್ಲಿ ಪರಿಸರ ಸಂರಕ್ಷಣೆ, ಸ್ವಚ್ಛತೆ, ಶಿಕ್ಷಣದ ಕಾಳಜಿ ವಹಿಸಿಕೊಂಡು ಗ್ರಾಮದ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಬದಲಾವಣೆ ತರಬೇಕು ಎಂದು ತಿಳಿಸಿದರು. 24 ವರ್ಷಗಳ ದೇಶ ಸೇವೆಗೈದು ನಿವೃತ್ತರಾದ ಹವಾಲ್ದಾರ ಧನಂಜಯ ರಕ್ಕಸಗಿ ಸ್ವಗ್ರಾಮಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅದ್ದೂರಿ ಮೆರವಣಿಗೆ ಮೂಲಕ ಯೋಧನಿಗೆ ಸ್ವಾಗತ ನೀಡಿದರು. ಜಾನಪದ ಕಲಾತಂಡಗಳ ಸಂಭ್ರಮದೊಂದಿಗೆ ತೆರೆದ ವಾಹನದಲ್ಲಿ ಗ್ರಾಮದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಯಿತು.

ಗ್ರಾಮದ ಯುವಕರು, ವಿದ್ಯಾರ್ಥಿಗಳು ಹಾಗೂ ಹಿರಿಯರು ಕೈಯಲ್ಲಿ ರಾಷ್ಟ್ರಧ್ವಜ ಹಿಡಿದು ಜೈಘೋಷ ಹಾಕಿ ದೇಶಪ್ರೇಮ ಮೆರೆದರು. ಗ್ರಾಮದಲ್ಲಿನ ಬಂಧು ಮಿತ್ರರು, ಯುವಕರು ಯೋಧನಿಗೆ ಆರತಿ ಬೆಳಗಿ ಶಾಲು ಸನ್ಮಾನದಿಂದ ಸ್ವಾಗತ ಕೋರಿದರು. ಯೋಧನ ಸ್ವಾಗತ ಸಮಾರಂಭದಿಂದ ಗ್ರಾಮದಲ್ಲಿ ಹಬ್ಬದ ವಾತಾವರಣವೇ ನಿರ್ಮಾಣವಾಗಿತ್ತು.

ದಿಗಂಬರೇಶ್ವರ ಮಠದ ಶೇಷಪ್ಪಯ್ಯ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ತಾಲೂಕಾಧ್ಯಕ್ಷಎಂ.ಎಸ್.ಕೊಮಾರದೇಸಾಯಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಪಾಧ್ಯಕ್ಷ ಎಸ್.ಡಿ.ಚೌಕಿಮಠ, ವಸಂತ ರಕ್ಕಸಗಿ ಹಾಗೂ ಮಾಜಿ ಸೈನಿಕರ ಸಂಘದ ಸದಸ್ಯರು ಇದ್ದರು.



ಭೂ ಒಡೆಯ ಈಗ ಪರಿಸರ ಪ್ರೇಮಿ

▸ ಮಲ್ಲಿಕಾರ್ಜುನ ತುಂಗಳ

• **ರಬಕವಿ-ಬನಹಟ್ಟಿ:** ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ಹಣಗಂಡಿ ಗ್ರಾಮದ ನಿವಾಸಿಯಾದ ಪ್ರಸನ್ನಕುಮಾರ ದೇಸಾಯಿ 20 ಎಕರೆಯ ಒಡೆಯ. ತಮ್ಮ ನಿತ್ಯ ಬೆಳೆಗಳೊಂದಿಗೆ ಕಂದಾಯ ಅರಣ್ಯ ಭೂಮಿಯಲ್ಲಿ ಬೇವು, ಹುಣಸೆ, ಸಾಗವಾನಿ, ಹೂವು ಗಿಡಮೂಲಿಕೆಗಳನ್ನು ಬೆಳೆಸಿರುವ ಇವರು ದಿನವಿಡೀ ಕೃಷಿ ಚಟುವಟಿಕೆಯಲ್ಲಿ ತೊಡಗಿ, ಇಲ್ಲಿನ ಗಿಡ, ಮರಗಳನ್ನು ಪೋಷಿಸುವ ಮೂಲಕ ಗಮನಸೆಳೆದು ಪರಿಸರ ಕಾಳಜಿಯಲ್ಲಿರುವದು ವಿಶೇಷ.



ಹನಗಂಡಿ ಗ್ರಾಮದ ಹೊರವಲಯದಲ್ಲಿರುವ ಸುಮಾರು 5 ಎಕರೆಯಷ್ಟು ವಿಶಾಲ ಜಾಗದಲ್ಲಿರುವ ದಿಗಂಬರೇಶ್ವರ ದೇವಾಲಯ ಆವರಣವು ಈಗ ಹಚ್ಚ ಹಸುರಿನ ಕಾಡಾಗಿ ನಿರ್ಮಾಣವಾಗಿದೆ. ಇತರರೂ ಗಿಡ ನೆಡುವಂತೆ, ಪರಿಸರವನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುವಂತೆ ಪ್ರೇರೇಪಿಸುತ್ತಾರೆ.

ಇಡೀ ಆವರಣ ಸುತ್ತಿ ಬಂದರೂ ಪ್ಲಾಸ್ಟಿಕ್, ಬಾಟಲಿ, ಗ್ಲಾಸು ಚೂರು ಸಿಗುವದಿಲ್ಲ. ಬೇಡದ ಕಸ-ಕಡ್ಡಿಗಳಿಲ್ಲ. ಅಷ್ಟು ಸ್ವಚ್ಛವಾಗಿ ಪ್ರದೇಶ ಕಾಯ್ದಿಕೊಂಡಿದ್ದಾರೆ. ಅನವಶ್ಯಕ ಗಿಡ ಕಂಡು ಬಂದರೆ ತಕ್ಷಣವೇ ಕಿತ್ತು ಹಾಕುವ ಕಾರ್ಯ ಇವರದು.

2017ರಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ನಡೆದಾಡುವ ದೇವರು ಸಿದ್ದೇಶ್ವರ ಶ್ರೀಗಳು ಹನಗಂಡಿ ಗ್ರಾಮಕ್ಕೆ ಬಂದಾಗ ಸಸಿ ನೆಟ್ಟು ಹಸಿರು ತೋರಣ ಮಾಡಿಯೆಂದಿದ್ದರು. ಇವರ ಪ್ರೇರಣೆಯಿಂದ 'ಸಾಲು ಮರದ ತಿಮ್ಮಕ್ಕ? ವನ ಸಂಪತ್ತು ಹೆಸರಿನಡಿ ಸುಮಾರು 2 ಸಾವಿರ ಮರಗಳನ್ನು ನೆಟ್ಟು ಇಂದಿಗೂ ಪೋಷಿಸುತ್ತಿದ್ದೇವೆ ಎನ್ನುತ್ತಾರೆ ಪ್ರಸನ್ನಕುಮಾರ ದೇಸಾಯಿ.

ಗ್ರಾಮ ಪಂಚಾಯಿತಿ, ಸಂಘ-ಸಂಸ್ಥೆಯಿಂದ ಮರಗಳನ್ನು ಪೋಷಿಸಲು ಸಾಕಷ್ಟು ಸಹಕಾರ ಒದಗಿ ಬರುತ್ತಿದೆ. ಇದರಿಂದ ಬೃಹತ್ ಹೊಂಡ ನಿರ್ಮಾಣ ಮಾಡಿ ನಿರಂತರ ನೀರು ಸೌಕರ್ಯ ದೊರಕಿದೆ. ಹನಿ ನೀರಾವರಿ ಮೂಲಕ ಮರಗಳನ್ನು ರಕ್ಷಿಸಲು ಸಹಕಾರಿಯಾಗಿದೆ.

ಸರ್ಕಾರದ ಸೌಲಭ್ಯ ಪಡೆಯಿರಿ

• **ಗುಳೇದಗುಡ್ಡ:** ಕರ್ನಾಟಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸದಸ್ಯತ್ವ ಹೊಂದಿದರೆ ನಿಮಗೆ ಕಾರ್ಮಿಕರ ಕಾರ್ಡ್ ದೊರೆಯತ್ತದೆ. ಕಾರ್ಮಿಕರ ಇಲಾಖೆಯಿಂದ ಈ ಸದಸ್ಯತ್ವ ಹೊಂದಿರುವರಿಗೆ ಸಾಕಷ್ಟು ಹಲಾವಾರು ಸೌಲಭ್ಯಗಳು, ಯೋಜನೆಗಳು ದೊರೆಯುತ್ತವೆ ಎಂದು ತಾಲೂಕು ಕಾರ್ಮಿಕರ ಅಧಿಕಾರಿ ರಾಕೇಶ ಕಿರಕನಹಳ್ಳಿ ಹೇಳಿದರು.

ಪಟ್ಟಣದ ಮೂಕೇಶ್ವರಿ ದೇವಸ್ಥಾನದ ಆವರಣದಲ್ಲಿ ವಿದ್ಯುತ್ ಕಾರ್ಮಿಕರು ಹಮ್ಮಿಕೊಂಡಿದ್ದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಕಾರ್ಮಿಕರ ಮಕ್ಕಳಿಗೆ ಶಿಷ್ಯವೇತನ, ಮದುವೆ ಸಹಾಯ, ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ 50,000 ರೂ. ವೈದ್ಯಕೀಯ ಸೌಲಭ್ಯ, ಅಪಘಾತ ಸಂಭವಿಸಿದರೆ ಸಹಾಯಧನ ಸೇರಿದಂತೆ ವಿವಿಧ ಕಲ್ಯಾಣ ಯೋಜನೆಗಳು ದೊರೆಯುತ್ತವೆ. ಹೀಗಾಗಿ ಎಲ್ಲಾ ಕಾರ್ಮಿಕರು ಕಾರ್ಮಿಕರ ಕಾರ್ಡ್ ಹೊಂದಬೇಕು ಎಂದರು.

ಕಲ್ಯಾಣಿಜಿ ಗೋಸಾವಿ, ಸುರೇಶ ಕಠಾರಿಯಾ, ನಾಗಪ್ಪ ನೇಮದಿ, ಶಂಕ್ರಪ್ಪ ಶೇಬಿನಕಟ್ಟಿ, ಜಗದೀಶ ಗಾಣಿಗೇರ, ವಿದ್ಯುತ್ ಕಾರ್ಮಿಕರು ಉಪಸ್ಥಿತರಿದ್ದರು.



ಗ್ಯಾಸ್‌ಗಾಗಿ ಗ್ರಾಹಕರ ಪರದಾಟ



• **ಕಮತಗಿ:** ಪಟ್ಟಣದಲ್ಲಿ ಭಾರತ್ ಗ್ಯಾಸ್ ಗ್ರಾಹಕರು ಗ್ಯಾಸ್‌ಗಾಗಿ ದಿನವಿಡಿ ಪರದಾಡುವಂತಾಗಿದೆ ಎಂದು ಗ್ರಾಹಕರ ಅಸಮಾಧಾನವಾಗಿದೆ. ಜಿಲ್ಲೆಯ ಎಲ್ಲ ಊರುಗಳಲ್ಲಿ ಸಹಜವಾಗಿ ಗ್ಯಾಸ್‌ಗಳು ಲಭ್ಯವಿದ್ದು ಕಮತಗಿ ಪಟ್ಟಣದಲ್ಲಿ ಇಂತಹ ಸ್ಥಿತಿ ಏಕೆ ತಲೆದೋರಿದೆ ಎಂದು ಗ್ರಾಹಕರಲ್ಲಿ ಪ್ರಶ್ನೆ ಮೂಡಿದೆ. ನಮಗೆ ಗ್ಯಾಸಿನ ಬೆಲೆಯು ಹೆಚ್ಚಾಗಿದ್ದು ತಲೆಬಿಸಿ ಇಲ್ಲ ಗ್ಯಾಸ್ ಸಿಗದೇ ಇರುವುದೇ ತಲೆಬಿಸಿಯಾಗಿದೆ ಇದರಿಂದ ಗ್ಯಾಸಿನ ಮಾಲಕರು ಮತ್ತು ಗ್ರಾಹಕರು ದಿನವಿಡೀ ಜಗಳವಾಗುವದು ಸರ್ವೇಸಾಮಾನ್ಯವಾಗಿದೆ. ಮತ್ತು ಗ್ಯಾಸನ್ನು ಹೋಟೆಲ್ ಅಂಗಡಿಗಳಿಗೆ ಹೆಚ್ಚಿನ ಲಾಭಕ್ಕಾಗಿ ಕೊಡುತ್ತಾರೆ ಎಂದು ಗ್ರಾಹಕರು ತಿಳಿಸಿದರು. ಇದರಿಂದ ನಾವುಗಳು ಗ್ಯಾಸ್ ಗಾಗಿ ಪರದಾಡುವ ಸ್ಥಿತಿ ಬಂದಿದೆ ಇದನ್ನು ನಾಗರೀಕ ಆಹಾರ ಸರಬರಾಜು ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ ಗ್ಯಾಸಿನ ಅಭಾವವನ್ನು ಸರಿಪಡಿಸಬೇಕೆಂದು ಗ್ರಾಹಕರ ಮನವಿ ಮಾಡಿದ್ದಾರೆ.

ನೇತ್ರ ಚಿಕಿತ್ಸೆಯ ಲಾಭ ಪಡೆಯಿರಿ

• **ರಬಕವಿ-ಬನಹಟ್ಟಿ:** ಇಲ್ಲಿನ ಕೆಎಚ್‌ಡಿಸಿ ಮುಖ್ಯ ಕಚೇರಿ ಆವರಣದಲ್ಲಿ ಜಮಖಂಡಿಯ ನೇತ್ರ ವಿಜ್ಞಾನ ಕೇಂದ್ರ ಹಾಗು ರೋಟರಿ ಕ್ಲಬ್ ವತಿಯಿಂದ ಡಾ.ಎಂ.ಎಂ.ಜೋಶಿ ತಂಡದಿಂದ ಉಚಿತ ಕಣ್ಣು ತಪಾಸಣೆ, ಶಸ್ತ್ರ ಚಿಕಿತ್ಸೆ ಹಾಗೂ ಕನ್ನಡ ವಿತರಣೆಯು ಕೈಮಗ್ಗ ನೇಕಾರರಿಗಾಗಿ ನಡೆಯಿತು.

ಶಾಸಕ ಸಿದ್ದು ಸವದಿ ಮಾತನಾಡಿ, ಕಷ್ಟದ ಪರಿಸ್ಥಿತಿ ಎದುರಿಸುತ್ತಿರುವ ನೇಕಾರ ಸಮುದಾಯಕ್ಕೆ ಉಚಿತ ನೇತ್ರ ಚಿಕಿತ್ಸೆಯ ಲಾಭ ಪಡೆದುಕೊಂಡು ಸುಂದರ ಜೀವನ ನಡೆಸಬೇಕೆಂದರು. ಸಾಕಷ್ಟು ಯೋಜನೆಗಳು ನೇಕಾರ ಸಮುದಾಯಕ್ಕೆ ಒದಗಿಸಲಾಗುತ್ತಿದ್ದು, ಇದರ ಪ್ರಯೋಜನ ಪಡೆಯುವಲ್ಲಿ ಮುಂದಾಗಬೇಕೆಂದರು.

ನೂರಕ್ಕೂ ಅಧಿಕ ನೇಕಾರರು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಯೋಜನಾಧಿಕಾರಿ ವಿಜಯಕುಮಾರ ಬೀಳಗಿ, ಮಾಜಿ ನಗರಾಧ್ಯಕ್ಷ ಶ್ರೀಶೈಲ ಬೀಳಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಬರಡು ಭೂಮಿ ಈಗ, ಪರಿಸರ ತಾಣ

▸ ಮಲ್ಲಿಕಾರ್ಜುನ ತುಂಗಳ

• **ರಬಕವಿ-ಬನಹಟ್ಟಿ:** ಬಿರುಬಿಸಿಲಿನ ತಾಪಕ್ಕೆ ಕಲ್ಲುಗಳಿಂದ ಗುಡ್ಡ. ಇಲ್ಲಿ ನಡೆಯುತ್ತ ಸಾಗಿದರೆ ಮೈಚೂರ್ ಎನ್ನುವಷ್ಟು ತಾಪ. ಇಲ್ಲೇನು ಬೆಳೆಯಲು ಸಾಧ್ಯವೆಂಬ ಪ್ರಶ್ನೆ. ಇದೆಲ್ಲದಕ್ಕೂ ತೆರೆ ಎಳೆದು ಅರಣ್ಯ ಇಲಾಖೆಯು ಸ್ವಯಂ ಪ್ರೇರಿತವಾಗಿ ನೆಟ್ಟ ಸಸಿಗಳು ಇದೀಗ ಹಸಿರು ಕಾನನವಾಗುವಲ್ಲಿ ಕಾರಣವಾಗಿದೆ.

ರಬಕವಿ-ಬನಹಟ್ಟಿ ತಾಲೂಕಿನ ರಬಕವಿಯ ಸರ್ವೆ ನಂ.64 ರಲ್ಲಿನ ಗುಡ್ಡದ ಪ್ರದೇಶದಲ್ಲಿರುವ ಸರ್ಕಾರಿ ಡಿಪ್ಲೊಮಾ ಕಾಲೇಜು ಆವರಣ ಹಾಗು ನೀರು ಸಂಗ್ರಹಣಾ ಘಟಕದ ಆವರಣದಲ್ಲಿ ಸುಮಾರು 6 ಎಕರೆ ಪ್ರದೇಶದಷ್ಟು ರಸ್ತೆ ಬದಿಯಲ್ಲಿ ಕಳೆದ 2019-20 ರಲ್ಲಿ ಸಾವಿರಕ್ಕೂ ಅಧಿಕ ಸಸಿಗಳನ್ನು ನೆಟ್ಟ ಅರಣ್ಯ ಇಲಾಖೆಯು ನಿರಂತರ ಪೋಷಣೆಯಿಂದ ಇದೀಗ ಹಚ್ಚ ಹಸಿರಿನ ತಾಣವಾಗುವಲ್ಲಿ ಕಾರಣವಾಗಿದೆ.



ಬೇವು, ಹುನಸಿ, ಹೊಂಗೆ, ಗೋಗ್ ಸೇರಿದಂತೆ ಅನೇಕ ತಳಿಗಳ ಗಿಡಗಳು ಈ ಪ್ರದೇಶದಲ್ಲಿದ್ದು, ಸುಮಾರು ಮೂರ್ನಾಲ್ಕು ಕಿ.ಮೀ,ನಷ್ಟು ರಸ್ತೆ ಬದಿಯಲ್ಲಿಯೂ ಇಂತಹ ಸಸಿಗಳಿಂದ ಸ್ವಚ್ಛಂದ ಪರಿಸರ ಕಾಣುವಲ್ಲಿ ಕಾರಣವಾಗಿದೆ. ವಾಯು ವಿಹಾರಿಗಳಿಗಂತೂ ನೆಚ್ಚಿನ ತಾಣವಾಗಿದ್ದು, ದಿನಂಪ್ರತಿ ಬೆಳಗ್ಗೆ ಹಾಗು ಸಂಜೆ ಹೊತ್ತು ಆಗಮಿಸುವವರ ಸಂಖ್ಯೆ ಹೆಚ್ಚುತ್ತಿದೆ.

ಇಷ್ಟೊಂದು ಪರಿಣಾಮಕಾರಿಯಾಗಿ ಕಾರ್ಯ ಸಲ್ಲಿಸುವಲ್ಲಿ ಅರಣ್ಯ ಅಧಿಕಾರಿಗಳ ಪರಿಶ್ರಮ ಮೆಚ್ಚುವಂಥದ್ದು, ನೀರಿನ ಕೊರತೆಯನ್ನು ನೀಗಿಸುವಲ್ಲಿ ಟ್ಯಾಂಕರ್‌ಗಳ ಮೂಲಕವೂ ನೀರು ಪೂರೈಕೆ ಮಾಡುವದರೊಂದಿಗೆ ಪರಿಸರ ಇಲಾಖೆಯ ಪ್ರಾಮಾಣಿಕ ಕಾರ್ಯ ಮೆಚ್ಚುವಂಥದ್ದು.

ಎರಡು ಅಪರಿಚಿತ ಶವ ಪತ್ತೆ

• **ಬೀಳಗಿ:** ರಾಷ್ಟ್ರೀಯ ಹೆದ್ದಾರಿ 218ರಲ್ಲಿ ತಾಲೂಕಿನ ಗೋವಿನದಿನ್ನಿ ಕ್ರಾಸ್ ಬಳಿ ಅಂದಾಜು 50 ವರ್ಷದ ಅನಾಮಧೇಯ ವ್ಯಕ್ತಿಗೆ ಯಾವುದೋ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಅಸುನೀಗಿದ್ದಾನೆ. ಮೃತನ ಹೆಸರು, ಊರು ತಿಳಿದು ಬಂದಿಲ್ಲ, ತಾಲೂಕಿನ ಲಿಂಗಾಪೂರ (ಎಸ್.ಆರ್) ಬ್ರಿಜ್ ಬಳಿ ಘಟಪ್ರಭಾ ನದಿಯಲ್ಲಿ ಅಂದಾಜು 20ರಿಂದ 30 ವರ್ಷದೊಳಗಿನ ಅನಾಮಧೇಯ ವ್ಯಕ್ತಿಯೋರ್ವನ ಶವ ಪತ್ತೆಯಾಗಿದೆ. ಮೃತನ ಹೆಸರು, ಊರು ತಿಳಿದು ಬಂದಿಲ್ಲವೆಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

ಕಿರುಸುದ್ದಿ

ಬೆಳ್ಳುಬ್ಬಿ ಜನ್ಮದಿನ ಇಂದು

ಕೊಲ್ಹಾರ: ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಅವರ ಜನ್ಮದಿನ ಮತ್ತು ವಿಶ್ವ ಪರಿಸರ ದಿನದ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಏಕ್ ಪೇಡ್ ಮಾ ಕೆ ನಾಮ್ ಅಭಿಯಾನದ ಅಂಗವಾಗಿ ಶುಕ್ರವಾರ ಜೂ.5ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ವಿಶ್ವ ಭಾರತಿ ವಿದ್ಯಾ ವರ್ಧಕ ಸಂಘದ ಯಲ್ಲಮ್ಮ ದೇವಿ ಸಿಬಿಎಸ್ಇ ಶಾಲಾ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಆಯೋಜಿಸಲಾಗಿದೆ ಬೆಳ್ಳುಬ್ಬಿಯವರ ಅಣತಿಯಂತೆ ಅಭಿಮಾನಿಗಳು ಯಾರು ಶಾಲು, ಹೂವು ಸೇರಿದಂತೆ ಯಾವದೇ ಆಡಂಬರವಿಲ್ಲದೆ ಕೇವಲ ಸಸಿಗಳನ್ನು ನೆಟ್ಟು ಶುಭ ಕೋರಬೇಕು ಎಂದು ಎಸ್.ಕೆ.ಬೆಳ್ಳುಬ್ಬಿ ಅಭಿಮಾನಿ ಬಳಗ ತಿಳಿಸಿದ್ದಾರೆ.

ಜೂ.7ಕ್ಕೆ ಶಿವಾಜಿ ಜಯತಿ

ಚಡಚಣ: ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ (ಕೆಕೆಎಂಪಿ) ಬೆಂಗಳೂರು, ವಿಜಯಪುರ ಜಿಲ್ಲಾ ಶಾಖೆಯ ವತಿಯಿಂದ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತ್ಯುತ್ಸವ ಹಾಗೂ ಜಿಲ್ಲಾ ಸಮಾವೇಶವನ್ನು ಜೂ.7ರಂದು ವಿಜಯಪುರ ನಗರದಲ್ಲಿ ಆಚರಿಸಲಾಗುವದು ಎಂದು ಚಡಚಣ ತಾಲೂಕು ಕೆಕೆಎಂಪಿ ಅಧ್ಯಕ್ಷ ಅಂಬಾದಾಸ ಸಿಂದಗಿ ಹೇಳಿದರು. ನಗರದ ಆಶ್ರಮ ರಸ್ತೆಯ ಐಶ್ವರ್ಯ ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಸುಸಜ್ಜಿತ ಸಮುದಾಯ ಭವನದಲ್ಲಿ ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯಲಿದೆ. ಸಮಾರಂಭದ ದಿವ್ಯ ಸಾನಿಧ್ಯ ಮಂಜುನಾಥ ಭಾರತಿ ಸ್ವಾಮೀಜಿ, ಗೋಸಾಯಿ ಮಠ, ಗವಿಪುರಂ (ಬೆಂಗಳೂರು) ವಹಿಸಲಿದ್ದು, ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ರಾಜ್ಯಾಧ್ಯಕ್ಷ ಸುರೇಶರಾವ್ ಎಸ್.ಸಾಠೆ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಸಮಾವೇಶದ ಅಂಗವಾಗಿ ಸಮಾಜದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ, ವೃದ್ಧಾಪ್ಯ ವೇತನ, ಅಂಗವಿಕಲ ವೇತನ ಹಾಗೂ ವಿಧವಾ ವೇತನ ವಿತರಣೆ ಕಾರ್ಯಕ್ರಮವೂ ಹಮ್ಮಿಕೊಳ್ಳಲಾಗಿದೆ. ಚಡಚಣ ತಾಲೂಕಿನ ಎಲ್ಲಾ ಮರಾಠಾ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಚಡಚಣ ತಾಲೂಕು ಕೆಕೆಎಂಪಿ ಅಧ್ಯಕ್ಷ ಅಂಬಾದಾಸ ಸಿಂದಗಿ ಮನವಿ ಮಾಡಿದ್ದಾರೆ.

ಪರಿಸರ ರಕ್ಷಕ ಪ್ರಶಸ್ತಿಗೆ ಆಯ್ಕೆ



ಮುದ್ದೇಬಿಹಾಳ: ನಗರದ ಪರಿಸರ ಸಂರಕ್ಷಣಾ ಸಂಘಟನೆ ಹಸಿರು ತೋರಣ ಗೆಳೆಯರ ಬಳಗದ ವತಿಯಿಂದ ಪ್ರತಿವರ್ಷ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ನೀಡುವ ಪರಿಸರ ರಕ್ಷಕ-2026ನೇ ಸಾಲಿನ ಪ್ರಶಸ್ತಿಗೆ ಪರಿಸರ ಪ್ರಜ್ಞೆಯ ಐವರನ್ನು ಆಯ್ಕೆ ಮಾಡಲಾಗಿದೆ. ಪರಿಸರ ಉಳಿಸಿ, ಬೆಳೆಸುವರನ್ನು ಗುರುತಿಸಿ ಕಳೆದ ಒಂಬತ್ತು ವರ್ಷಗಳಿಂದ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಅಡವಿ ಹಲಗಬಾಳ ಗ್ರಾಮ, ಪ್ರಾದೇಶಿಕ ಅರಣ್ಯ ಅಧಿಕಾರಿ ಮೈಥುನ ನೇಮಪ್ಪ ಚವ್ಹಾಣ, ಕಾರಕೂರ ಗ್ರಾಮ, ಆನೇಹೊಸೂರ ಗ್ರಾಮದ, ಸಾಮಾಜಿಕ ಅರಣ್ಯದ ಸಂಗಪ್ಪ ನಂದಪ್ಪ ನಾಗಾವಿ, ಕೆಬಿಜೆಎನ್ಎಲ್ ಅರಣ್ಯದ ಮಾನಪ್ಪ ಸಂಜೀವಪ್ಪ ಕರಡಿ, ಮುದ್ದೇಬಿಹಾಳ, ಸಂತ ಕನಕದಾಸ ಶಾಲೆ ರಾಮಣ್ಣ ಪರಪ್ಪಗೋಳ, ತಂಗಡಗಿ ಸರಕಾರಿ ಪ್ರೌಢಶಾಲೆ, ದೈಹಿಕ ಶಿಕ್ಷಣ ಶಿಕ್ಷಕ ವಿಠ್ಠಲ ಸಿ. ತೆಗ್ಗಿ ಪರಿಸರ ರಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಬರುವ ಜೂನ್ 7 ರವಿವಾರದಂದು ಬೆಳಿಗ್ಗೆ 8 ಗಂಟೆಗೆ ಹಸಿರು ತೋರಣ ಉದ್ಯಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಹಸಿರು ತೋರಣ ಗೆಳೆಯರ ಬಳಗದ ಅಧ್ಯಕ್ಷ ಅಮರೇಶ ಗೂಳಿ, ಕಾರ್ಯದರ್ಶಿ ಬಸವರಾಜ ಜಿಜ್ಜೂರ ಪ್ರಕಟಿಸಿದ್ದಾರೆ.

ಅರ್ಜಿ ಆಹ್ವಾನ

ಮುದ್ದೇಬಿಹಾಳ: ತಾಲೂಕಿನ ಸುಕ್ಷೇತ್ರ ತಂಗಡಗಿ ಗ್ರಾಮದ ಹಡಪದ ಅಪ್ಪಣ್ಣ ದೇವರ ಮಹಾಸಂಸ್ಥಾನ ಮಠದ ಪ್ರಥಮ ಜಗದ್ಗುರು ಲಿಂ.ಬಸವಪ್ರೀಯ ಅಪ್ಪಣ್ಣ ಮಹಾಸ್ವಾಮೀಜಿಯವರ 18ನೇ ಪುಣ್ಯಸ್ಮರಣೋತ್ಸವ ನಿಮಿತ್ತ ಸುಕ್ಷೇತ್ರ ತಂಗಡಗಿ ಹಾಗೂ ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘ (ರಿ),ಬೆಂಗಳೂರು ಅವರ ಸಂಯುಕ್ತ ಆಶ್ರಯದಲ್ಲಿ ಜೂ.22ರಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ಹಡಪದ ಸಮಾಜದ ಎಸೆಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಶೇ.90ರ ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಅತ್ಯುತ್ತಮ ಸಾಧನೆಗೈದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹರು ಅಗತ್ಯ ದಾಖಲೆಗಳೊಂದಿಗೆ ಕೆಳಕಂಡ ವಿಳಾಸಕ್ಕೆ ಜೂ.15 ಸಂಜೆ 5 ಗಂಟೆ ಒಳಗಾಗಿ ಕಳುಹಿಸಿಕೊಡಲು ಮಠದ ಅನ್ನ ದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ ರಾಜ್ಯಾಧ್ಯಕ್ಷ ದೇವು ಹಡಪದ ಮುಂಡರಗಿ ಪ್ರದಾನ ಕಾರ್ಯದರ್ಶಿ ಚಿದಾನಂದ ಹಡಪದ ಬಸರಕೋಡ ತಿಳಿಸಿದ್ದಾರೆ. ಮಾಹಿತಿಗಾಗಿ ಸಂಗಮೇಶ ಹಡಪದ ಕೂಡಲಸಂಗಮ 6362896611 ಹಾಗೂ ಮಲ್ಲಪ್ಪ ಹಡಪದ ಕೂಡಲಸಂಗಮ 8722149344 ಅವರನ್ನು ಸಂಪರ್ಕಿಸಲು ತಿಳಿಸಿದ್ದಾರೆ.



ನಾಲತವಾಡ: ಸಮೀಪದ ನಾಗರಬೆಟ್ಟ ಏತ ನೀರಾವರಿ ಪೂರ್ವ ಕಾಮಗಾರಿ ವೀಕ್ಷಣೆ ಮಾಡಲು ಮುಖ್ಯ ಅಭಿಯಂತರ ಡಿ, ಬಸವರಾಜ, ಅಧೀಕ್ಷಕ ಅಭಿಯಂತರರು ಬಿ.ಎಸ್.ಪಾಟೀಲ, ಕಾರ್ಯನಿರ್ವಾಹಕ ಅಭಿಯಂತರ ಅಮರೇಗೌಡ ಪಾಟೀಲ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಶಿವಾಜಿ ಬಿರಾದಾರ ಹಾಗೂ ಶಾಖಾಧಿಕಾರಿಗಳು ಮತ್ತು ಗುತ್ತಿಗೆದಾರರ ಪ್ರತಿನಿದಿಗಳು ಉಪಸ್ಥಿತರಿದ್ದರು.

ಕಲಾವಿದರಿಂದ ಅರ್ಜಿ ಆಹ್ವಾನ

ವಿಜಯಪುರ: ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಉತ್ಸವ ಹಾಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಕಲಾ ತಂಡಗಳು ಮತ್ತು ಕಲಾವಿದರನ್ನು ಎಂಪೆನ್ನೆಲ್ ಮಾಡುವ ಸಲುವಾಗಿ ಜಿಲ್ಲೆಯ ಕಲಾವಿದರು ನಿಗದಿತ ಅರ್ಜಿ ನಮೂನೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಭಾರತೀಯ ಸಂಸ್ಕೃತಿ ಸಂಬಂಧಗಳ ಇಂಡಿಯನ್ ಕೌನ್ಸಿಲ್ ಕಲ್ಚರಲ್ ರಿಲೇಶನ್ಸ್ (ಐಸಿಸಿಆರ್) ಹಾಗೂ ಕರ್ನಾಟಕ ಸರ್ಕಾರದ ನಡುವೆ ಸಂಸ್ಕೃತಿ,ಕಲೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ.ಹಾಗಾಗಿಐಸಿಸಿಆರ್ಸಂಸ್ಥೆಯವತಿಯಿಂದರಾಜ್ಯ ಸರ್ಕಾರದಸಾಂಸ್ಕೃತಿಕ ಕಲಾತಂಡಗಳು ಹಾಗೂ ಕಲಾವಿದರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಉತ್ಸವ ಹಾಗೂ ಕಾರ್ಯಕ್ರಮಗಳಿಗೆ ಕಳುಹಿಸಿಕೊಡಲಾಗುವುದು. ಆದಕ್ಕಾಗಿ ಜಿಲ್ಲೆಯ ಕಲಾತಂಡಗಳು ಹಾಗೂ ಕಲಾವಿದರನ್ನು ಎಂಪೆನ್ನೆಲ್ ಮಾಡುವುದರೊಂದಿಗೆ ಅವರ ಪ್ರತಿಭೆಯನ್ನು ಪ್ರಚುರಪಡಿಸಲಾಗುವುದು. ಹಾಗಾಗಿ ಜಿಲ್ಲೆಯ ಕಲಾವಿದರು ಹಾಗೂ ಕಲಾತಂಡಗಳು ನಿಗದಿತ ನಮೂನೆಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಂದಗಲ್ ಹನುಮಂತರಾಯ ರಂಗಮಂದಿರ, ಸ್ಟೇಷನ್ ರಸ್ತೆ, ವಿಜಯಪುರ ಅವರಿಗೆ ಜೂ. 12ರೊಳಗೆ ಅರ್ಜಿ ಸಲ್ಲಿಸಿ ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ. ಮಾಹಿತಿಗಾಗಿ 08352-251261 ಸಂಪರ್ಕಿಸಬಹುದಾಗಿದೆ ಎಂದು ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.



ಹುಬ್ಬಳ್ಳಿ: ಶಾಸಕ ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸಂಪುಟದಲ್ಲಿ ಸೇರಿಸಿಕೊಳ್ಳಬೇಕು ಎಂದು ಅವರ ಬೆಂಬಲಿಗರು ಹಾಗೂ ಕಾಂಗ್ರೆಸ್ ಮುಖಂಡರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಪಾರದರ್ಶಕವಾಗಿ ಎಸ್ಐಆರ್ ಪ್ರಕ್ರಿಯೆ | ಡಿಸಿ ಹೇಳಿಕೆ

ಶೇ.90ರಷ್ಟು ಮ್ಯಾಪಿಂಗ್ ಪೂರ್ಣ

ವಿಜಯಪುರ: ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ ಐಆರ್) ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಶೇ.90ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣಗೊಳಿಸಲಾಗಿದೆ. ಜಿಲ್ಲೆಯಲ್ಲಿ ಎಸ್ಐಆರ್ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಆನಂದ.ಕೆ ಅವರು ಹೇಳಿದರು.

ನಗರದ ಜಿಲ್ಲಾ ಪಂಚಾಯತಿಯ ಮಿನಿ ಸಭಾಂಗಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಸಾರ್ವಜನಿಕರಲ್ಲಿ ಯಾವುದೇ ಗೊಂದಲಗಳಾಗದಂತೆ ಪಾರದರ್ಶಕವಾಗಿ ಎಸ್.ಐ.ಆರ್ ಪ್ರಕ್ರಿಯೆ ನಡೆಲಾಗುವುದು. ಅರ್ಹ ಯಾವೊಬ್ಬ ಮತದಾರನೂ ಪಟ್ಟಿಯಿಂದ ಹೊರಗುಳಿಯಬಾರದು. ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಎಂದು ಜಿಲ್ಲಾಧಿಕಾರಿ ಹೇಳಿದರು.

ಚುನಾವಣಾ ಆಯೋಗದ ಮಾರ್ಗಸೂಚಿಯಂತೆ 2002ರ ಮತದಾರರ ಪಟ್ಟಿಯನ್ನು ಮಾನದಂಡವಾಗಿಟ್ಟುಕೊಂಡು ಪ್ರಸ್ತುತ ಇರುವ 2025ರ ಮತದಾರರ ಪಟ್ಟಿಯೊಂದಿಗೆ ಹೋಲಿಕೆ ಹಾಗೂ ಮ್ಯಾಪಿಂಗ್ ಪ್ರಕ್ರಿಯೆ ನಡೆಸಲಾಗಿದೆ ಎಂದರು.

ಜಿಲ್ಲೆಯ ಒಟ್ಟು 2092 ಮತಗಟ್ಟೆಗಳಿದ್ದು, 10,00,805 ಪುರುಷರು, 9,84,687



ಮಹಿಳೆಯರು ಇತರೇ 248 ಸೇರಿ ಒಟ್ಟು 1,9,85,740 ಮತದಾರರಿದ್ದಾರೆ ಎಂದು ಜಿಲ್ಲಾಧಿಕಾರಿಗಳು ವಿವರಿಸಿದರು. ಚುನಾವಣಾ ಆಯೋಗದ https://voters.eci.gov.in (Voters Service Portal) ಹಾಗೂ ಮುಖ್ಯ ಚುನಾವಣಾಧಿಕಾರಿಗಳ ಇವರ Ceokarnataka.gov.in ಅಂತರ ಜಾಲ ತಾಣ ಸರ್ಚ್ ಮಾಡಿ ಮಾಹಿತಿ ಮತ್ತು ದಾಖಲೆಗಳನ್ನು ಪಡೆಯಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಪ್ರತಿಯೊಬ್ಬ ಮತದಾರರ ಮನೆ ಬಾಗಿಲಿಗೆ ಬಿಎಲ್ಒಗಳ ಮೂಲಕ ಗಣತಿ ನಮೂನೆ ತಲುಪಿಸಲಾಗುವುದು. ಇದರಲ್ಲಿ ಮತದಾರರ ಹೆಸರು, ಎಪಿಕ್ ಸಂಖ್ಯೆ, ಸಂಬಂಧಿಕರ ಹೆಸರು ಹಾಗೂ ವಿಧಾನಸಭಾ ಕ್ಷೇತ್ರದ ವಿವರಗಳು ಇರಲಿವೆ. ಬಿಎಲ್ಒಗಳು ಮನೆಗಳಿಗೆ ಕನಿಷ್ಠ ಮೂರು ಬಾರಿ ಭೇಟಿ ನೀಡಿ, ಗಣತಿ ನಮೂನೆಗಳನ್ನು ತಲುಪಿದ ನಂತರ ವಿವರಗಳು ಸರಿಯಾಗಿವೆಯೇ ಎಂಬುದನ್ನು ಮತದಾರರಿಂದ ದೃಢೀಕರಿಸಿಕೊಂಡು ಸಹಿ ಪಡೆದು ವಾಪಸ್ ತರಲಿದ್ದಾರೆ ಎಂದರು.

ಸಾರ್ವಜನಿಕರು ಗಣತಿ ನಮೂನೆ ಸ್ವೀಕರಿಸಿ, ಪರಿಶೀಲಿಸಿ ಕಡ್ಡಾಯವಾಗಿ ಬಿಎಲ್ಒಗಳಿಗೆ ವಾಪಸ್ ನೀಡಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಹಾಗೂ ವಿಜಯಪುರ ತಹಶೀಲ್ದಾರ ಪ್ರಶಾಂತ ಚನಗೊಂಡ, ಜಿಲ್ಲಾಧಿಕಾರಿ ಕಚೇರಿಯ ತೇರದಾಳ ಉಪಸ್ಥಿತರಿದ್ದರು.

ಮುಖ್ಯ ಅಂಶಗಳು

- ಸಾರ್ವಜನಿಕರಲ್ಲಿ ಯಾವುದೇ ಗೊಂದಲಗಳಾಗದಂತೆ ಪಾರದರ್ಶಕವಾಗಿ ಎಸ್ಐಆರ್ ಪ್ರಕ್ರಿಯೆ
- ಅರ್ಹ ಯಾವೊಬ್ಬ ಮತದಾರನೂ ಪಟ್ಟಿಯಿಂದ ಹೊರಗುಳಿಯಬಾರದು.
- ಮತದಾನದ ಹಕ್ಕಿನಿಂದ ವಂಚಿತರಾಗಬಾರದು
- ಪ್ರತಿಯೊಬ್ಬ ಮತದಾರರ ಮನೆ ಬಾಗಿಲಿಗೆ ಬಿಎಲ್ಒಗಳ ಮೂಲಕ ಗಣತಿ ನಮೂನೆ ತಲುಪಿಸಲಾಗುವುದು.
- ಸಾರ್ವಜನಿಕರು ಗಣತಿ ನಮೂನೆ ಸ್ವೀಕರಿಸಿ, ಪರಿಶೀಲಿಸಿ ಕಡ್ಡಾಯವಾಗಿ ಬಿಎಲ್ಒಗಳಿಗೆ ವಾಪಸ್ ನೀಡಬೇಕು

ಪಾಲಕರ ಕನಸು ಸಾಕಾರಗೊಳಿಸಿ

ಸಿಂದಗಿ: ಮಕ್ಕಳಿಗೆ ಶಿಸ್ತಿನಿಂದ ಶಾಲೆಗೆ ಆಗಮಿಸಿ ನಿಮ್ಮ ಶೈಕ್ಷಣಿಕ ವರ್ಷದ ಅಭ್ಯಾಸದ ತರಗತಿಗಳನ್ನು ಆಸಕ್ತಿಯಿಂದ ಆಲಿಸಿ ಪಾಲಕರ ಕನಸನ್ನು ಸಾಕಾರಗೊಳಿಸಬೇಕು ಎಂದು ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ ಹೇಳಿದರು.

ಸಮರ್ಥ ವಿದ್ಯಾವಿಕಾಸ ವಿವಿದೊದ್ದೇಶಗಳ ಸಂಸ್ಥೆಯ ಪ್ರೇರಣಾ ಶಿಶುನಿಕೇತನ, ವಿದ್ಯಾನಿಕೇತನ, ಪ್ರೇರಣಾ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ಹಾಗೂ ಪಬ್ಲಿಕ್ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಾಲಾರಂಭ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳ ಶೈಕ್ಷಣಿಕ ಗುರಿ ಸಾಧನೆಯ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು.

ಈ ವೇಳೆ ಸಿಂದಗಿ ವಿಧಾನಸಭಾ ಮತಕ್ಷೇತ್ರದ ತಾಲೂಕು ಮಟ್ಟದ ಶಿಕ್ಷಣ ಸುಧರಣಾ ಸಮಿತಿ ಸದಸ್ಯೆ ಸುಧಾ ನಂದಶೆಟ್ಟಿ ಮಾತನಾಡಿ, ಹೊಸ ಶೈಕ್ಷಣಿಕ ವರ್ಷದ ಮೊದಲ ದಿನ ವಿದ್ಯಾರ್ಥಿಗಳ ಹಾಜರಾತಿ ತೃಪ್ತಿಕರವಾಗಿದ್ದು, ಶಾಲೆಗೆ ಆಗಮಿಸಿದ ಮಕ್ಕಳಿಗೆ ದೊರೆಯುವ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ಶಾಲಾ ಆರಂಭದಲ್ಲಿ ಎಲ್ಲಾ ಮಕ್ಕಳಿಗೆ ಸಿಹಿ ಹಂಚಿ ಬರಮಾಡಿಕೊಳ್ಳಲಾಯಿತು. ಸಂಸ್ಥೆಯ ನಿರ್ದೇಶಕ ಪಿ.ಡಿ.ಕುಲಕರ್ಣಿ, ಮುಖ್ಯಗುರುಮಾತೆ ಎಂ.ಪಿ.ಬುಕ್ಕಾ, ಎಸ್.ಐ.ಅಸ್ಕಿ, ಶಿಕ್ಷಕರಾದ ಸತೀಶ ಕುಲಕರ್ಣಿ, ಅಲ್ತಾಫ್ ತಾಂಬೋಳಿ, ಕಿರಣ ಕುಲಕರ್ಣಿ, ಸಂತೋಷ ಕುಂಟೋಜಿ, ಅಕ್ಷಯ ಯಲಗಟ್ಟಿ, ಶ್ರೀಕಾಂತ ಹೂನಳ್ಳಿ, ಸಂಜೀವ ಯಂಕಂಚಿ, ಎಮ್.ಎಮ್.ಜುಮನಾಳ, ಬಿ.ಎಸ್.ಪಾಟೀಲ, ಎಸ್.ವಿ.ಕಡಣಿ, ಎಂ.ಜಿ.ಧ್ಯಾಮಗೊಂಡ, ವಿ.ಎ.ನಾಯಕ, ಎನ್.ಜಿ.ಬಳಗಾನೂರ, ಶಿಲ್ಪಾ ಎಸ್.ಪಾಟೀಲ, ರೂಪಾ ಶಿವಸಿಂಪಿಗೇರ, ಸಾವಿತ್ರಿ ವಿರಾಪೂರ, ಆರ್.ಎಂ.ಪಕೀರಪುರ, ಜಿ.ಎಸ್.ಯಂಕಂಚಿ, ಬಿ.ವಿ.ತಳವಾರ, ಎಸ್.ಎಮ್.ಮಠಪತಿ, ಡಿ.ಎಮ್.ಹುಗ್ಗಿ, ಅಶ್ವಿನಿ ನಾವಿ, ನಿವೇದಿತಾ ಉಮ್ಮರಗಿ, ಕವಿತಾ ನಾಯಕ, ಗುರುರಾಜ ಮುದ್ದೆಬಿಹಾಳ, ಯಾಸ್ಮೀನ ಶೇಖ, ಶೈನಾಜ ನದಾಫ, ಶ್ರೀನಿವಾಸ ಪಾಟೀಲ, ಗುರುರಾಜ ಚಳ್ಳಗಿ, ರಾಜಶೇಖರ ಭಂಟನೂರ, ಸಂದೀಪ, ಮಂಜುಳಾ ಭಜಂತ್ರಿ ಸೇರಿದಂತೆ ಬೋಧಕೇತರ ಸಿಬ್ಬಂದಿಗಳು ಮತ್ತು ಪಾಲಕರು ಇದ್ದರು.



ಬಿತ್ತನೆ ಬೀಜ ವಿತರಣೆಗೆ ಚಾಲನೆ

ತಾಳಿಕೋಟೆ: ಸ್ಥಳೀಯ ರೈತ ಸಂಪರ್ಕ ಕೇಂದ್ರದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಯಿತು. ತೊಗರಿ ಬೀಜಗಳ ಬೀಜೋಪಚಾರದ ಪ್ರಾತ್ಯಕ್ಷಿತೆಯು ರೈತರ ಗಮನ ಸೆಳೆಯಿತು.

ಈ ವೇಳೆ ಕೃಷಿ ಅಧಿಕಾರಿಗಳು ಬಿತ್ತನೆಗೂ ಮುನ್ನ ಬೀಜೋಪಚಾರ ಮಾಡುವುದರಿಂದ ಆಗುವ ಪ್ರಯೋಜನಗಳು ಹಾಗೂ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳುವ ಕುರಿತು ರೈತರಿಗೆ ಸವಿಸ್ತಾರವಾದ ಮಾಹಿತಿ ಒದಗಿಸಿದರು. ತೊಗರಿ ಬೆಳೆಯಲ್ಲಿ ಬಂಪರ್ ಇಳುವರಿ ಪಡೆಯಲು ರೈತರು ಸಾಂಪ್ರದಾಯಿಕ ಪದ್ಧತಿಯ ಜೊತೆಗೆ ವೈಜ್ಞಾನಿಕ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕೃಷಿ ಅಧಿಕಾರಿಗಳು ಕರೆ ನೀಡಿದರು. ಅಗಲ ಸಾಲು ಬಿತ್ತನೆ ಮತ್ತು ಸಮರ್ಪಕ ಅಂತರ ಬೇಸಾಯ ಪದ್ಧತಿ ಕೈಗೊಳ್ಳುವುದು, ಬಿತ್ತನೆಯಾದ 45 ದಿನಗಳ ನಂತರ ಕಡ್ಡಾಯವಾಗಿ ಕುಡಿ ಚಿವುಟುವುದು. ಬೆಳೆಯ ಉತ್ತಮ ಬೆಳವಣಿಗೆಗಾಗಿ 'ಪಲ್ಸ್ ಮ್ಯಾಜಿಕ್' ಹಾಗೂ 'ಪಲ್ಸ್ ಬೂಸ್ಟರ್' ಪೋಷಕಾಂಶಗಳನ್ನು ಬಳಸುವುದು. ಈ ಕ್ರಮಗಳಿಂದ ತೊಗರಿ ಬೆಳೆಯಲ್ಲಿ ಗಣನೀಯವಾಗಿ ಇಳುವರಿ ಹೆಚ್ಚಿಸಬಹುದು ಎಂದು ರೈತರಿಗೆ ಮನವರಿಕೆ ಮಾಡಿಕೊಡಲಾಯಿತು. ಸದ್ಯ ಮುಂಗಾರು ಹಂಗಾಮಿಗೆ ಅಗತ್ಯವಿರುವ ಬಿತ್ತನೆ ಬೀಜಗಳು ರೈತ ಸಂಪರ್ಕ ಕೇಂದ್ರದಲ್ಲಿ ಪರ್ಯಾಪ್ತ ಪ್ರಮಾಣದಲ್ಲಿ ದಾಸ್ತಾನಾಗಿವೆ.

ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಬಸನಗೌಡ ಮಾಡಗಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಸಿದ್ದನಗೌಡ ಪಾಟೀಲ ನಾವದಗಿ, ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್, ಪ್ರಮುಖರಾದ ರವಿ ಗೌಡ ಪಾಟೀಲ, ಹನುಮಂತರಾಯಗೌಡ ಗೂಗಲ್ ಉಪಸ್ಥಿತರಿದ್ದರು. ಕೃಷಿ ಅಧಿಕಾರಿ ಮಹೇಶ ಜೋಶಿ, ಸಿಬ್ಬಂದಿಗಳಾದ ಸಂಗಮೇಶ ಪಾಟೀಲ, ಕಿರಣ ಬೊಮ್ಮನಹಳ್ಳಿ, ಹನುಮಂತರಾಯ ಕುಂಟರೆಡ್ಡಿ, ವಿರುಪಾಕ್ಷಿ ನಂದಿಕೋಲ, ಬಸವರಾಜ ಜಾಲವಾದಿ, ಹಿರಗಪ್ಪ ಅರಳಿಕಟ್ಟಿ ಸೇರಿದಂತೆ ಹೋಬಳಿ ವ್ಯಾಪ್ತಿಯ ನೂರಾರು ರೈತರು ಹಾಗೂ ಕೃಷಿ ಸಖಿಯರ ಇದ್ದರು.



ನಿವೃತ್ತರಿಗೆ ತಾಲೂಕು ಆರೋಗ್ಯ ಇಲಾಖೆಯಿಂದ ಬೀಳ್ಕೊಡುಗೆ

ಮುದ್ದೇಬಿಹಾಳ: ತಾಲೂಕು ಆರೋಗ್ಯ ಅಧಿಕಾರಿಗಳ ಇಲಾಖೆಯಲ್ಲಿ ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳಾಗಿ ಸುದೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಮೂರು ಜನರಿಗೆ ತಾಲೂಕು ಆರೋಗ್ಯ ಇಲಾಖೆ ಹಾಗೂ ಆನಂದಗೌಡರ ಗೆಳೆಯರ ಬಳಗದಿಂದ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ತಾಲೂಕು ಆರೋಗ್ಯ ಅಧಿಕಾರಿ ಡಾ.ಸತೀಶ ತಿವಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಹಕಾರಿ ಪತ್ತಿನ ಮಹಾಮಂಡಳ ನಿರ್ದೇಶಕ ಆನಂದಗೌಡ ಎನ್.ಬಿರಾದಾರ ಅವರು ನಿವೃತ್ತಿ ಹೊಂದಿತ್ತಿರುವ ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಮಡಿಕೇಶ್ವರ ಪ್ರಾಥಮಿಕ ಆರೋಗ್ಯ ಕೇಂದ್ರದ ಬಿ.ಜಿ.ಆಲಗುಂಡಿ ಕಾಳಗಿ ಸಮುದಾಯ ಆರೋಗ್ಯ ಕೇಂದ್ರದ ಎ.ಕೆ.ಯರಂತಲಿಮಠ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯದ ಐ.ಸಿ.ಮಾನಕರ ಇವರಿಗೆ ಶುಭ ಹಾರೈಸಿದರು.

ಎಸ್ಎಸ್ಎಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಆರೋಗ್ಯ ಇಲಾಖೆಯ ಸಿಬ್ಬಂದ ಯಲ್ಲಪ್ಪ ಚಲವಾದಿ ಅವರ ಸುಪುತ್ರ ಪರಶುರಾಮ ಚಲವಾದಿ ವಿದ್ಯಾರ್ಥಿನಿಯನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ವೈದ್ಯಾಧಿಕಾರಿ ಡಾ.ಶ್ರೀಶೈಲ ಹುಕ್ಕೇರಿ, ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಎಸ್.ಗೌಡರ ಡಾ.ವಿಜಯಕುಮಾರ ಕಟಕದೊಂಡ ಡಾ.ಬಸವರಾಜ ಆಲಗೂರು ಡಾ.ಸಂಗಮೇಶ ದಶವಂತ ಡಾ. ಸುನಿಲ್ ಹಿರೇಗೌಡರ ಡಾ.ತಹಸಿನ ಶಿವಣಗಿ ಸಿಬ್ಬಂದಿಗಳಾದ ಅನುಸೂಯ ತೇರದಾಳ, ಟಿ.ಎಚ್. ಲಮಾಣಿ, ಸತೀಶ್ ಕುಲಕರ್ಣಿ, ಬಿ.ಎಸ್.ಶಿವಯೋಗಿಮಠ, ವಿಠ್ಠಲ್ ಕೀಲಾರಟ್ಟಿ, ಸಂತೋಷ ಅಂಗಡಗೇರಿ, ಯಲಾಗುರೇಶ ತೊನಿಶ್ಯಾಳ ಚೇತನ್ ಕಲ್ಲುಂಡಿ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.



ಅಗ್ನಿವೀರ ವಿಭಾಗಕ್ಕೆ ಬಿಎಲ್ಡಿಇ ಸಂಸ್ಥೆ ವಿದ್ಯಾರ್ಥಿಗಳು ಆಯ್ಕೆ: ಸನ್ಮಾನ

ಬಸವನಬಾಗೇವಾಡಿ: ಪಟ್ಟಣದ ಬಿ ಎಲ್ ಡಿ ಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾರತೀಯ ಸೈನ್ಯಕ್ಕೆ ಅಗ್ನಿವೀರ ವಿಭಾಗದಲ್ಲಿ ದರ್ಶನ ಹಡಪದ, ಪ್ರಕಾಶ ಚವ್ಹಾಣ, ಅರವಿಂದ ಚವ್ಹಾಣ, ಬಾಗು ಭಜಂತ್ರಿ, ಸಾಗರ ನಾಯಕ, ಶಾರುಖ ಖಾನ್ ಆಯ್ಕೆಯಾಗಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.

ಸೈನ್ಯಕ್ಕೆ ಆಯ್ಕೆಯಾಗದ ವಿದ್ಯಾರ್ಥಿಗಳಿಗೆ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಎ.ವಿ.ಸೂರ್ಯವಂಶಿಯವರು ಸನ್ಮಾನ ಮಾಡಿ ಮಾತನಾಡಿದ ಅವರು, ದೇಶ ಸೇವೆ ಮಾಡುವಂತಹ ಭಾಗ್ಯ ಎಲ್ಲರಿಗೂ ಸಿಗುವುದಿಲ್ಲ ಆದ್ದರಿಂದ ಅವಕಾಶ ಸಿಕ್ಕರೆ ಸೈನ್ಯಕ್ಕೆ ಸೇರಿ ತಾವೆಲ್ಲರೂ ದೇಶ ಸೇವೆ ಮಾಡಿ ಋಣ ತೀರಿಸುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿ ಮುಂದಿನ ದಿನಮಾನಗಳಲ್ಲಿ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ಸೈನ್ಯ, ನಾಗರಿಕ ಸೇವೆ, ಪೊಲೀಸ್ ಇಲಾಖೆ ಹೀಗೆ ಬೇರೆ ಬೇರೆ ಇಲಾಖೆಗಳಿಗೆ ಆಯ್ಕೆಯಾಗಿ ಕೀರ್ತಿ ತರುವಂತಾಗಬೇಕೆಂದು ಹೇಳಿದರು.

ಈ ಎಲ್ಲ ವಿದ್ಯಾರ್ಥಿಗಳಿಗೆ ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿ ರಚಿತ ರಜಪೂತ ಅವರು ಮಾರ್ಗದರ್ಶನ ನೀಡಿದ್ದಾರೆ.

ಪಿಯು ಪ್ರಾಚಾರ್ಯರಾದ ರಾಮಚಂದ್ರ ಪವಾರ ಡಾ.ವೈ.ಬಿ.ನಾಯಕ ಡಾ.ಎಸ್.ಬಿ.ಜನಗೊಂಡ, ಎಂ.ಕೆ.ಯಾದವ, ಎಸ್.ಜೆ.ಸೂರ್ಯವಂಶಿ, ಪಿ.ಎಸ್.ಹೊರಕೇರಿ, ಆರ್.ಎಂ.ಮುಜಾವರ, ವಿ.ಎನ್.ರಜಪೂತ, ಪ್ರಶಾಂತ ಗೂಳನ್ನವರ, ಡಾ.ಕಿರಣ ಸೂಡಿ, ಎ.ಯು.ಪಾಟೀಲ ಸೇರಿ ಎಲ್ಲ ಬೋಧಕೇತರ ಸಿಬ್ಬಂದಿ ಇದ್ದರು.



ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ವಿತರಿಸಿ

ಸಿಂದಗಿ: ಕೃಷಿ ಇಲಾಖೆ ನಿಯಮಾವಳಿಗಳ ಅನುಸಾರ ರೈತರಿಗೆ ಗುಣಮಟ್ಟದ ಬೀಜ, ರಸಗೊಬ್ಬರ ಹಾಗೂ ಕೃಷಿ ಪರಿಕರಗಳನ್ನು ವಿತರಿಸಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಪ್ರಶಾಂತ ಸಾಣಿ ಸೂಚಿಸಿದರು.

ನಗರದ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ತಾಲೂಕಿನ ಆಗ್ರೋ ಕೇಂದ್ರಗಳ ಮಾಲೀಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕೃಷಿ ಪರಿಕರಗಳ ವಿತರಣೆಯು ಪಾರದರ್ಶಕತೆಯಿಂದ ಕಾಯ್ದುಕೊಳ್ಳಬೇಕು. ತಾಲೂಕಿಗೆ ರಸಗೊಬ್ಬರ ಕೊರತೆ ಉಂಟಾಗದಂತೆ ನೋಡಿಕೊಳ್ಳುವುದು ಇಲಾಖೆಯ ಜವಾಬ್ದಾರಿಯಾಗಿದೆ. ಯಾವುದೇ ರೀತಿಯ ಮೋಸ ಮಾಡಿದರೆ ಅಥವಾ ತಪ್ಪು ಮಾಹಿತಿ ನೀಡಿ ವಂಚಿಸಲು ಯತ್ನಿಸಿದರೆ ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗಂಗಾಧರ ಚಿಂಚೋಳಿ, ರೈತ ಮುಖಂಡ ಪೀರು ಕೆರೂರ ಮಾತನಾಡಿ, ಆಗ್ರೋ ಕೇಂದ್ರದ ಮಾಲೀಕರು ರೈತರಿಗೆ ತಪ್ಪು ಮಾಹಿತಿ ನೀಡಿ ಮೋಸ ಮಾಡುವ ಕೆಲಸ ಮಾಡಬಾರದು. ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಕಾರ್ಯನಿರ್ವಹಿಸಬೇಕು. ರೈತರು ಸಹ ಹೆಚ್ಚು ಸಂಖ್ಯೆಯಲ್ಲಿ ಸಾವಯವ ಕೃಷಿಯತ್ತ ಮುಖ ಮಾಡಬೇಕು ಹಾಗೂ ಜಾಗೃತರಾಗಿರಬೇಕು. ಸಿಂದಗಿ ತಾಲೂಕಿನಲ್ಲಿ ಪರವಾನಗಿ ಪಡೆದ ಆಗ್ರೋ ಕೇಂದ್ರಗಳ ಸಂಖ್ಯೆ ಎಷ್ಟು ಎಂಬುದನ್ನು ಕೃಷಿ ಇಲಾಖೆ ಸಾರ್ವಜನಿಕವಾಗಿ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ಸುರೇಶ ಮಳಲಿ ಮಾತನಾಡಿ, ಆಗ್ರೋ ಕೇಂದ್ರದ ಮಾಲಿಕರು ರೈತರ ಮಕ್ಕಳೇ ಆಗಿರುವುದರಿಂದ ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ಪ್ರಾಮಾಣಿಕವಾಗಿ ರಸಗೊಬ್ಬರ, ಕೀಟನಾಶಕ ಹಾಗೂ ಇತರೆ ಕೃಷಿ ಪರಿಕರಗಳನ್ನು ಮಾರಾಟ ಮಾಡಬೇಕು. ಯಾವುದೇ ಕಾರಣಕ್ಕೂ ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಬಾರದು ಎಂದು ಹೇಳಿದರು.

ರಾಚಪ್ಪ ವಾರದ, ಬಾಗಪ್ಪಗೌಡ ಪಾಟೀಲ, ಕೃಷಿ ಪರಿಕರ ಮಾರಾಟಗಾರರು, ಪ್ರಗತಿಪರ ರೈತರು, ರೈತ ಮುಖಂಡರು, ಕೃಷಿ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



> **ತಾಲೂಕಿನಲ್ಲಿ ಪರವಾನಗಿ ಪಡೆದ ಆಗ್ರೋ ಮತ್ತು ಪಡೆಯದ ಕೇಂದ್ರಗಳ ವಿವರವನ್ನು ಕೃಷಿ ಇಲಾಖೆ ಬಹಿರಂಗಪಡಿಸಬೇಕು. ಅನಧಿಕೃತ ಆಗ್ರೋ ಕೇಂದ್ರಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು. ಒಂದು ವೇಳೆ ಕ್ರಮಕೈಗೊಳ್ಳದಿದ್ದರೆ ಕೃಷಿ ಇಲಾಖೆ ಕಚೇರಿ ಎದುರು ಹೋರಾಟದ ಮಾಡಲಾಗುವುದು.**
> ■ ಪೀರು ಕೆರೂರ, ಕಾರ್ಯದರ್ಶಿ

ರೈತರಿಗೆ ಅನ್ಯಾಯ: ಜೂ.8ರಂದು ವಿಚಾರ ಸಂಕಿರಣ

ವಿಜಯಪುರ: ನ್ಯಾ.ಬ್ರಿಜೇಶಕುಮಾರ ನೇತೃತ್ವದ 2ನೇ ನ್ಯಾಯಾಧೀಕರಣದ ತೀರ್ಪಿನಂತೆ ಆಲಮಟ್ಟಿ ಲಾಲ್ ಬಹದ್ದೂರ ಶಾಸ್ತ್ರೀ ಜಲಾಶಯದ ನೀರಿನ ಮಟ್ಟವನ್ನು 519.60ಮೀ ದಿಂದ 524.256ಮೀಗೆ ನೀರು ನಿಲ್ಲಿಸಲು ಗೇಟ್ ಅಳವಡಿಸುವಂತೆ ಹಾಗೂ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸುವುದು ನೀರಿನ ಹಂಚಿಕೆಯಲ್ಲಿ ಅವಳಿ ಜಿಲ್ಲೆಯ ರೈತರಿಗೆ ಆದ ಅನ್ಯಾಯದ ಕುರಿತು ವಿಚಾರ ಸಂಕಿರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರೈತ ಮುಖಂಡ ಅರವಿಂದ ಕುಲಕರ್ಣಿ ಹಾಗೂ ಮಹಾದೇವಪ್ಪ ತೇಲಿ ಹೇಳಿದರು.

ಗುರುವಾರ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಂಡ ಮಾಧ್ಯಮ ಗೋಷ್ಠಿಯ ಮಾತನಾಡಿದ ಅವರು, 2010ರಲ್ಲಿ ನ್ಯಾ.ಬ್ರಜೇಶಕುಮಾರ ನೇತೃತ್ವದ 2ನೇ ನ್ಯಾಯಾಧೀಕರಣ ಮಧ್ಯಂತರ ತೀರ್ಪು ನೀಡಿತು. 2013ರಲ್ಲಿ ಅಂತಿಮ ತೀರ್ಪು ನೀಡಿ ಜಲಾಶಯದ ನೀರಿನ ಮಟ್ಟವನ್ನು 519.60 ಮೀಟರನಿಂದ 524.256ಕ್ಕೆ ನೀರು ನಿಲ್ಲಿಸಲು ಅನುಮತಿ ನೀಡಿತು. ನ್ಯಾಯಾಧೀಕರಣ ಅನುಮತಿ ನೀಡಿ 13ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಆದರೆ ಇಲ್ಲಿಯವರೆಗೂ ಜಲಾಶಯದ ನೀರಿನ ಮಟ್ಟವನ್ನು ಹೆಚ್ಚಿಸಲು ಯಾವ ಸರ್ಕಾರಗಳು ಮನಸ್ಸು ಮಾಡಲಿಲ್ಲ.ಜಲಾಶಯ ನೀರಿನ ಮಟ್ಟವನ್ನು 519.60ರಿಂದ 524.256ಕ್ಕೆ ನೀರು ನಿಲ್ಲಿಸಿದಾಗ ಹಿನ್ನೀರಿನಿಂದ ಮುಳುಗಡೆ ಹೊಂದುವ ಜಮೀನುಗಳಿಗೆ ಪರಿಹಾರ ನೀಡುವುದು, ಪುನರ್ ವಸತಿ ಹಾಗೂ ಪುನರ್ ನಿರ್ಮಾಣಕ್ಕೆ ಈ ಸದ್ಯ 1 ಲಕ್ಷ ಕೋಟಿ ಹಣ ಬೇಕಾಗುತ್ತದೆ. ಇವರನ್ನು ನಂಬಿ ಮತ ಹಾಕಿ ಅಧಿಕಾರ ಕೊಟ್ಟ ರೈತರ ಬೆನ್ನೆಲುಬನ್ನು ಮುರಿದಿದ್ದಾರೆ. ತಕ್ಷಣ ಸಮಸ್ಯೆ ಅರಿತುಕೊಂಡು ಜಲಾಶಯದ ನೀರಿನ ಮಟ್ಟವನ್ನು 524.256ಕ್ಕೆ ನಿಲ್ಲಿಸಿ ನಮ್ಮ ರಾಜ್ಯಕ್ಕೆ ಹಂಚಿಕೆಯಾದ ನೀರನ್ನು ನಮ್ಮ ಪಾಲಿಗೆ ಮೀಸಲಿಡಲು ಹಕ್ಕೊತ್ತಾಯ ಮಾಡುವುದು. ಹಾಗೂ ಅವಳಿ ಜಿಲ್ಲೆಯ ರೈತರಿಗೆ ಹಂಚಿಕೆಯಾದ ಮತ್ತು ಬಳಸಿಕೊಳ್ಳಬೇಕಾದ ನೀರಿನ ಒಟ್ಟು ಪ್ರಮಾಣ ಎಷ್ಟು? ಎಂಬುವುದರ ಕುರಿತು ಚರ್ಚಿಸಲು ವಿಚಾರ ಸಂಕಿರಣವನ್ನು ವಿಜಯಪುರ ನಗರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಜೂ.8ರಂದು ಸೋಮವಾರ ಬೆಳಗ್ಗೆ 10.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದರು.

ರೈತ ಮುಖಂಡ ಸಿದ್ದನಗೌಡ ಪಾಟೀಲ ಹಾಗೂ ಬಸವರಾಜ ಸಿದ್ದಾಪೂರ ಮಾತನಾಡಿ, ವಿಚಾರ ಸಂಕಿರಣದಲ್ಲಿ ಡಾ.ಸಿದ್ದಲಿಂಗ ಸ್ವಾಮಿಗಳು ವಿರಕ್ತಮಠ ಇಂಗಳೇಶ್ವರ, ಸಂಗನಬಸವ ಸ್ವಾಮಿಗಳು ಶ್ರೀಮಠ ಹುಣಶ್ಯಾಳ ಪಿ.ಬಿ ಸಾನಿಧ್ಯ ವಹಿಸಲಿದ್ದು, ವಿಚಾರ ಸಂಕಿರಣದ ವಿಷಯ ಮಂಡನೆ ಡಾ,ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ.ರಾಜೇಂದ್ರ ಪೋದ್ದಾರ, ಪಂಚಪ್ಪ ಕಲಬುರ್ಗಿ ನಡೆಸಿ ಕೊಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ವಿ.ಸಿ.ಬಿರಾದಾರ ಮತ್ತು ಚಾಣಕ್ಯ ಕರಿಯರ್ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷ ನಿಂಗನಗೌಡ ಎಂ.ಬಿರಾದಾರ ಪಾಲ್ಗೊಳ್ಳಲಿದ್ದಾರೆ. ಹೊನಕೇರೆಪ್ಪ ತೆಲಗಿ, ಸಂಗನಗೌಡ ಪಾಟೀಲ ಇದ್ದರು.



ಕಿರುಸುದ್ದಿ

ನಾಲ್ವಡಿ ಕೃಷ್ಣರಾಜ ಒಡೆಯರ ಜಯಂತಿ ಆಚರಣೆ

ಹನುಮಸಾಗರ: ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಪ್ರಾತಃಸ್ಮರಣೀಯ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಸಲ್ಲಿಸಲಾಯಿತು. ಮಾತನಾಡಿದ ಮಹಾಂತಯ್ಯ ಕೋಮಾರಿ ಅವರು, ನಾಲ್ವಡಿ ಕೃಷ್ಣರಾಜ ಒಡೆಯರು ನಾಡಿನ ಅಭಿವೃದ್ಧಿಯ ಹರಿಕಾರರಾಗಿದ್ದು, ಶಿಕ್ಷಣ, ಕೃಷಿ, ನೀರಾವರಿ ಹಾಗೂ ಕೈಗಾರಿಕಾ ಕ್ಷೇತ್ರಗಳ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ. ಕನ್ನಂಬಾಡಿ ಕಟ್ಟೆ, ಮೈಸೂರು ವಿಶ್ವವಿದ್ಯಾಲಯ ಹಾಗೂ ಶಿವನಸಮುದ್ರ ಜಲವಿದ್ಯುತ್ ಕೇಂದ್ರ ಸೇರಿದಂತೆ ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದು ರಾಜ್ಯದ ಅಭಿವೃದ್ಧಿಗೆ ಭದ್ರ ಅಡಿಪಾಯ ಹಾಕಿದರು ಎಂದು ಹೇಳಿದರು. ರಾಜ್ಯದ ವಿಸ್ತರಣೆಗಿಂತ ಪ್ರಜೆಗಳ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ ಅವರು, ಜನಪರ ಆಡಳಿತದ ಮೂಲಕ ಶಾಶ್ವತವಾಗಿ ಜನರ ಹೃದಯದಲ್ಲಿ ಸ್ಥಾನ ಪಡೆದಿದ್ದಾರೆ. ಅವರ ಆದರ್ಶಗಳು ಇಂದಿನ ಜನಪ್ರತಿನಿಧಿಗಳು ಹಾಗೂ ಯುವಜನತೆಗೆ ಮಾರ್ಗದರ್ಶಿಯಾಗಿವೆ ಎಂದು ತಿಳಿಸಿದರು. ಬಸವರಾಜ, ಚಂದಯ್ಯ, ಹನಮೇಶ,ಮಾಬುಸಾಬ್, ರಮೇಶ್ ಬಡಿಗೇರ, ಹುಸೇನಸಾಬ ಪಪಂ ಸಿಬ್ಬಂದಿ ಇದ್ದರು.

ಪ್ರತಿಭಾವಂತ ವಿದ್ಯಾರ್ಥಿ, ಸಾಧಕರಿಗೆ ನಾಳೆ ಸನ್ಮಾನ

ಕಲಬುರಗಿ: ಕಲಬುರಗಿ ಕ್ಷೇತ್ರೀಯ ಮರಾಠಾ ಪರಿಷತ್ತು ವತಿಯಿಂದ ಜೂನ್ 6, 2026ರಂದು ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಕಲ ಸಿದ್ಧತೆಗಳು ಪೂರ್ಣಗೊಂಡಿದ್ದು ,ಸಮಾಜದ ಹಿರಿಯರು, ಗಣ್ಯ ವ್ಯಕ್ತಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಪ್ರತಿಭಾವಂತರನ್ನು ಗೌರವಿಸಿ ಸನ್ಮಾನಿಸಲಾಗುವುದು. ಅಲ್ಲದೆ, 2025-26ನೇ ಸಾಲಿನ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ, ಪ್ರತಿಭಾ ಪುರಸ್ಕಾರ ಹಾಗೂ ಸತ್ಕಾರದ ಮೂಲಕ ಪ್ರೋತ್ಸಾಹ ನೀಡಲಾಗುವುದು. ಸಮಾಜದ ಪ್ರತಿಭೆಗಳನ್ನು ಗುರುತಿಸಿ ಉತ್ತೇಜಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಕಾರ್ಯಕ್ರಮವು ಸಮಾಜದ ಐಕ್ಯತೆ ಮತ್ತು ಸಂಘಟನೆಯನ್ನು ಬಲಪಡಿಸುವ ವೇದಿಕೆಯಾಗಲಿದೆ ಎಂದು ಪರಿಷತ್ತಿನ ಪದಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಸಮಾಜದ ಬಂಧುಗಳು, ಯುವಕರು, ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಲಾಗಿದೆ.ತಾವು ಬನ್ನಿ, ತಮ್ಮವರನ್ನೂ ಕರೆತನ್ನಿ'' ಎಂಬ ಸಂದೇಶದೊಂದಿಗೆ ಸಮಾಜದ ಎಲ್ಲ ವರ್ಗದ ಜನರು ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಕೋರಲಾಗಿದೆ.

ಮೋಟಾರು ಸೈಕಲ್ ಕರ್ಕಶ ಶಬ್ದ: ದೂರು ದಾಖಲು

ಕುಷ್ಟಗಿ: ಪಟ್ಟಣದಲ್ಲಿ ಮೋಟಾರು ಸೈಕಲ್ ಅನ್ನು ಕರ್ಕಶ ಶಬ್ದ ಮಾಡುತ್ತಾ, ವೇಗವಾಗಿ ಚಾಲನೆ ಮಾಡಿಕೊಂಡು, ಹಿರಿಯರಿಗೆ ದುರ್ವತನೆ ತೋರಿ, ಶಾಲೆ, ಕಾಲೇಜು ಹತ್ತಿರ ಹಾಗೂ ಸಾರ್ವಜನಿಕ ಸ್ಥಳದಲ್ಲಿ ಹೆಣ್ಣುಮಕ್ಕಳಿಗೆ ಚುಡಾಯಿಸುತ್ತಿದ್ದ ಮೌನೇಶ ಜೋಗೇರ, ಕುಮಾರ ಟೆಂಗುಂಟಿ, ಶಿವರಾಜ ಟೆಂಗುಂಟಿ, ಗೌತಮ್ ಕಟ್ಟಿಮನಿ, ಅನಂತ ಸೂರ್ವೆ, ಕಾರ್ತಿಕ್ ಚಿತ್ರಗಾರ, ರಾಜು ಧಲಂಬಜನ್, ಮಾರುತಿ ನಾಯಕ, ಸಂಪತ್ ಕಟ್ಟಿಮನಿ, ಪವನಕುಮಾರ ಭೋವಿ, ದುಷ್ಯಂತ್ ಹಿರೇಮನಿ, ಜಾಹೀರ್ ಮುಲ್ಲಾ, ಬಸವರಾಜ ಎಲಿಗಾರ, ಬಸವರಾಜ ಅಳವಂಡಿ, ಶಿವು ಮಾದರ, ಅಮರೇಶ ಮಂಗಳೂರು, ರಾಜಾಭಕ್ಷಿ ಕರಮುಡಿ ಸೇರಿದಂತೆ ಒಟ್ಟು 17 ಜನರ ವಿರುದ್ಧ ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿಶ್ವ ಪರಿಸರ ದಿನಾಚರಣೆ

ಕುಷ್ಟಗಿ: ತಾಲೂಕಿನ ಮದಲಗಟ್ಟಿ ನಿಡಶೇಸಿ ಕೆರೆಯ ದಡದಲ್ಲಿರುವ ಉದ್ಯಾನವನದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಅರಣ್ಯ ಇಲಾಖೆ, ಪೊಲೀಸ್ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಜೂನ್ 05 ರಂದು ಶುಕ್ರವಾರ ಬೆಳಿಗ್ಗೆ 09:3ಕ್ಕೆ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮ ಜರುಗಲಿದೆ. ಹಿರಿಯ ಸಿವಿಲ್ ನ್ಯಾಯಾಧೀಶ ಮಂಜುನಾಥ್ ಆರ್, ಪ್ರಧಾನ ಸಿವಿಲ್ ನ್ಯಾಯಾಧೀಶ ಎಂ.ಎಲ್. ಪೂಜೇರಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮಹಾಂತೇಶ ಚೌವಳಗಿ, ಸಿಪಿಐ ವಿಶ್ವನಾಥ ಹಿರೆಗೌಡ್ರ, ವಲಯ ಅರಣ್ಯಾಧಿಕಾರಿ ಶಿವರಾಜ ಮೇಟಿ, ಸಮಾಜಿಕ ವಲಯ ಅರಣ್ಯಾಧಿಕಾರಿ ಹನಮಂತಪ್ಪ ಸೇರಿದಂತೆ ವಿವಿಧ ಸಂಘ, ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಇನ್ನಿತರರು ಪಾಲ್ಗೊಳ್ಳಲಿದ್ದಾರೆ.



ಹನುಮಸಾಗರ: ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಪ್ರಾತಃ ಸ್ಮರಣೀಯ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ವಿಶ್ವ ಪರಿಸರ ದಿನ: ಸಸಿ ನೆಡುವ ಕಾರ್ಯಕ್ರಮ

ಮಸ್ಕಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶ್ರೀಭ್ರಮರಾಂಬ ಚಾರಿಟೇಬಲ್ ಟ್ರಸ್ಟ್ ಹಾಗೂ ಲಯನ್ಸ್ ಕ್ಲಬ್ ಮತ್ತು ಪ್ರಕೃತಿ ಫೌಂಡೇಶನ್ ಮಸ್ಕಿ ಇವರ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ರುದ್ರಭೂಮಿಯಲ್ಲಿ ಇಂದು ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಪ್ರಸ್ತುತ ಪರಿಸರ ಮಾಲಿನ್ಯ, ಅರಣ್ಯ ನಾಶ ಹಾಗೂ ಹವಾಮಾನ ವೈಪರೀತ್ಯಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು. ಒಂದು ಸಸಿ ನೆಟ್ಟು ಅದನ್ನು ಪೋಷಿಸುವ ಮೂಲಕ ಭವಿಷ್ಯದ ಪೀಳಿಗೆಗೆ ಆರೋಗ್ಯಕರ ಪರಿಸರವನ್ನು ನೀಡಬಹುದು ಎಂದು ಕಾರ್ಯಕ್ರಮದಲ್ಲಿ ತಿಳಿಸಲಾಯಿತು.

ಹಸಿರೇ ಉಸಿರು ಎಂಬ ಸಂದೇಶದೊಂದಿಗೆ ನಡೆದ ಈ ಕಾರ್ಯಕ್ರಮದಲ್ಲಿ ಅಧ್ಯಕ್ಷ ಪಂಪಣ್ಣ ಗುಂಡಳ್ಳಿ,ಉಪಾಧ್ಯಕ್ಷ ಚಿದಾನಂದ,ಆಡಳಿತ ಮಂಡಳಿ ಸದಸ್ಯರಾದ ದಯಾನಂದ ಜೋಗಿನ್, ಪಾರ್ಶ್ವನಾಥ ಕೋಲ್ಹಾರ, ವೀರೇಶ ಸೌದ್ರಿ, ಶರಣಬಸವರಾಜ ಕರಡಕಲ್, ಮಹಾಂತೇಶ ಮಸ್ಕಿ, ಶಿವರಾಜ ಇತ್ಲಿ, ಮುಖ್ಯ ಕಾರ್ಯನಿರ್ವಾಹಕ ಹಾಗೂ ಲಯನ್ಸ್ ಕ್ಲಬ್‌ನ ಅಧ್ಯಕ್ಷರಾದ ವೀರೇಶ ಹಿರೇಮಠ,ಲಯನ್ಸ್ ಕ್ಲಬ್‌ನ ಕಾರ್ಯದರ್ಶಿ ನಾಗರಾಜ ಕಂಬಾರ ಮತ್ತು ಬಿ.ಎಲ್.ಶೆಟ್ಟಿ, ಸಹಕಾರಿಯ ಉಪ-ಪ್ರಧಾನ ವ್ಯವಸ್ಥಾಪಕರಾದ ಸಣ್ಣಕಲ್ಲಪ್ಪ ಹಾಗೂ ಸಿಬ್ಬಂದಿ, ಪ್ರಕೃತಿ ಫೌಂಡೇಶನ್‌ನ ಶಿವಮೂರ್ತಿ ಬಳಗಾನೂರು ಮತ್ತು ಇತರರು ಭಾಗವಹಿಸಿ ಸಸಿ ನೆಟ್ಟು ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು.



ಮಸ್ಕಿ: ವಿಶ್ವಪರಿಸರ ದಿನಾಚರಣೆ ಅಂಗವಾಗಿ ಶ್ರೀಭ್ರಮರಾಂಬ ಚಾರಿಟೇಬಲ್ ಟ್ರಸ್ಟ್ ಹಾಗೂ ಲಯನ್ಸ್ ಕ್ಲಬ್ ಮತ್ತು ಪ್ರಕೃತಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ರುದ್ರಭೂಮಿಯಲ್ಲಿ ಸಸಿ ನೆಡಲಾಯಿತು.

ರೈತರಿಗೆ ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ ಮನವಿ

ಸಂಯುಕ್ತ ರಸಗೊಬ್ಬರ ಬಳಸಿ

ಕೊಪ್ಪಳ: ಯೂರಿಯ ಮತ್ತು ಡಿಎಪಿ ರಸಗೊಬ್ಬರಕ್ಕೆ ಪರ್ಯಾಯ ಸಂಯುಕ್ತ ರಸಗೊಬ್ಬರಗಳ ಬಳಕೆ ಮಾಡುವಂತೆ ಡಿಸಿ ಡಾ.ಸುರೇಶ ಬಿ.ಇಟ್ನಾಳ ಅವರು ಜಿಲ್ಲೆಯ ರೈತರಲ್ಲಿ ಮನವಿ ಮಾಡಿದರು.



ಡಿಸಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಪ್ರಧಾನ ಪೋಷಕಾಂಶಗಳು ಮತ್ತು ಲಘು ಪೋಷಕಾಂಶಗಳಿಗೆ ಭೂಮಿಯೇ ಮುಖ್ಯ ಆಧಾರವಾದರೂ, ಮಣ್ಣಿನಿಂದ ಎಲ್ಲಾ ಪೋಷಕಾಂಶಗಳು ಬೆಳೆಗಳಿಗೆ ಬೇಕಾದ ಪ್ರಮಾಣದಲ್ಲಿ ದೊರೆಯದಿರುವ ಕಾರಣ ಬಾಹ್ಯವಾಗಿ ಗೊಬ್ಬರ ನೀಡುವುದು ಅನಿವಾರ್ಯವಾಗಿದೆ. ಈ ಪೋಷಕಾಂಶಗಳನ್ನು ಸಾವಯವ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಹಿಂಡಿ ಗೊಬ್ಬರ, ಎರೆಹುಳಗೊಬ್ಬರ, ಜೈವಿಕ ಗೊಬ್ಬರ ಮತ್ತು ರಸಗೊಬ್ಬರಗಳಿಂದ ಒದಗಿಸಬೇಕಾಗಿರುತ್ತದೆ. ರಸಗೊಬ್ಬರಗಳಲ್ಲಿ ಪೋಷಕಾಂಶಗಳು ಹೆಚ್ಚಿನ ಪ್ರಮಾಣದಲ್ಲಿ ಮತ್ತು ನೇರವಾಗಿ ದೊರೆಯುವ ರೂಪದಲ್ಲಿದ್ದು ಅವುಗಳ ಬಳಕೆ ಅತ್ಯಗತ್ಯವಾಗಿರುತ್ತದೆ. ಶಿಫಾರಸ್ಸಿನಂತೆ ಪ್ರಧಾನ ಪೋಷಕಾಂಶಗಳಾದ ಸಾರಜನಕ, ರಂಜಕ, ಪೊಟ್ಯಾಷ್ ಅಂಶಗಳನ್ನು 4:2:1 ಅನುಪಾತದಲ್ಲಿ ಬಳಸಬೇಕು. ಆದರೆ ಪ್ರಸ್ತುತ ರೈತರು ಬಳಸುವ ರಸಗೊಬ್ಬರಗಳ ಅನುಪಾತವು 5:3:1 ಇರುತ್ತದೆ. ಇದನ್ನು ಸಮತೋಲನಾತ್ಮಕ

> **ಜಿಲ್ಲೆಯ ಮುಂಗಾರು ಹಂಗಾಮಿನ ಒಟ್ಟು ರಸಗೊಬ್ಬರ ಬೇಡಿಕೆಯು 1,17,703 ಮೆಟ್ರಿಕ್ ಟನ್ ಆಗಿರುತ್ತದೆ. ಹಂಗಾಮಿನ ಆರಂಭದಲ್ಲಿ 26,440 ಮೆಟ್ರಿಕ್ ಟನ್ ಆರಂಭಿಕ ಶಿಲ್ಕು ಲಭ್ಯವಿದ್ದು, ಇದುವರೆಗೆ 20,112 ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆಯಾಗಿದೆ. ಹೀಗಾಗಿ ಒಟ್ಟು ಲಭ್ಯತೆ 46,551 ಮೆಟ್ರಿಕ್ ಟನ್ ಆಗಿದ್ದು, ಇದರಲ್ಲಿ 16,332 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆಗೊಂಡಿರುತ್ತದೆ. ಪ್ರಸ್ತುತ ಜಿಲ್ಲೆಯ ವಿವಿಧ ಮಾರಾಟ ಕೇಂದ್ರಗಳಲ್ಲಿ 30,220 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಲಭ್ಯವಿದೆ.**
> ■ **ಡಾ.ಸುರೇಶ ಬಿ.ಇಟ್ನಾಳ, ಡಿಸಿ**

ರಸಗೊಬ್ಬರಗಳ ಬಳಕೆಯನ್ನು ಉತ್ತೇಜಿಸಲು ಪೊಟ್ಯಾಷ್ ಯುಕ್ತ ರಂಜಕ ಅಥವಾ ಇತರೆ ಸಂಯುಕ್ತ ರಸಗೊಬ್ಬರಗಳನ್ನು ಬಳಕೆ ಮಾಡುವುದು ಅವಶ್ಯಕವಾಗಿರುತ್ತದೆ ಎಂದರು.

ಈ ವರ್ಷ 2026ರ ಜೂನ್ 2 ರವರೆಗೆ ಜಿಲ್ಲೆಯ ವಾಡಿಕೆ ಮಳೆ 87 ಮಿ.ಮೀ. ಇದ್ದು, ವಾಸ್ತವಿಕವಾಗಿ 112.50 ಮಿ.ಮೀ. ಮಳೆಯಾಗಿದೆ. ಇದರಿಂದ ಜಿಲ್ಲೆಯಲ್ಲಿ ಶೇ.29 ಅಧಿಕ ಮಳೆಯಾಗಿದ್ದು, ಜಿಲ್ಲೆಯ ಎಲ್ಲಾ 7 ತಾಲೂಕುಗಳಲ್ಲಿ ಉತ್ತಮ ಹಸಿ ಮಳೆಯಾಗಿದೆ. ಈ ವರ್ಷ ಜಿಲ್ಲೆಯ ಒಟ್ಟು ಬೆಳೆ ವಿಸ್ತೀರ್ಣ ಗುರಿ 3.49 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೈತರು ಈಗಾಗಲೇ ಭೂಮಿ ಸಿದ್ಧತಾ ಕಾರ್ಯಗಳನ್ನು ಕೈಗೊಂಡಿದ್ದಾರೆ. ಜಿಲ್ಲೆಯಲ್ಲಿನ ಹೆಚ್ಚಿನ ಮಳೆಯ ಹಿನ್ನೆಲೆ ರೈತರು ಸುಮಾರು 1.22 ಲಕ್ಷ ಹೆಕ್ಟೇರ್ ಮೆಕ್ಕೆ ಜೋಳ, 0.32 ಲಕ್ಷ ಹೆಕ್ಟೇರ್ ಸಜ್ಜೆ, 0.44 ಲಕ್ಷ ಹೆಕ್ಟೇರ್ ಹೆಸರು ಬೆಳೆ ಹಾಗೂ 0.40 ಲಕ್ಷ ಹೆಕ್ಟೇರ್ ತೊಗರಿ ಬಿತ್ತನೆಗೆ ರೈತರು ಮುಂದಾಗಿರುತ್ತಾರೆ ಎಂದರು.

ಪ್ರಸ್ತುತ ಮಧ್ಯಪ್ರಾಚ್ಯದಲ್ಲಿನ ಸಂಘರ್ಷದಿಂದಾಗಿ ರಸಗೊಬ್ಬರಗಳ ಉತ್ಪಾದನೆಗೆ ಬಳಸಲಾಗುವ ಕಚ್ಚಾವಸ್ತುಗಳು ಮತ್ತು ರಸಗೊಬ್ಬರಗಳ ಆಮದಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದು, ಇದರಿಂದಾಗಿ, ರಾಜ್ಯದಲ್ಲಿ 2026ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿದೆ. ಕೇಂದ್ರ ಸರ್ಕಾರದಿಂದ ಏಪ್ರಿಲ್ ಮತ್ತು ಮೇ-2026ರ ಮಾಹೆಯವರೆಗೆ ರಾಜ್ಯಕ್ಕೆ 2.36 ಲಕ್ಷ ಮೆ.ಟನ್. ಯೂರಿಯಾ ಮತ್ತು 1.61 ಲಕ್ಷ ಮೆ.ಟನ್ ಡಿಎಪಿ ರಸಗೊಬ್ಬರವು ಹಂಚಿಕೆಯಾಗಿರುತ್ತದೆ. ದಿನಾಂಕ: 01.04.2026 ರಿಂದ 20.05.2026 ರವರೆಗೆ ಯೂರಿಯಾ 1.71 ಲಕ್ಷ ಮೆ.ಟನ್ ಮತ್ತು ಡಿ.ಎ.ಪಿ 0.53 ಲಕ್ಷ ಮೆ.ಟನ್ ಸರಬರಾಜಾಗಿದ್ದು, ಯೂರಿಯಾದಲ್ಲಿ 0.65 ಲಕ್ಷ ಮೆ.ಟನ್ ಹಾಗೂ ಡಿಎಪಿಯಲ್ಲಿ 1.08 ಲಕ್ಷ ಮೆ. ಟನ್ ಕೊರತೆಯಾಗಿರುತ್ತದೆ ಎಂದು ತಿಳಿಸಿದರು.

ಎಡಿಸಿ ಸಿದ್ರಾಮೇಶ್ವರ, ಜಿಪಂ ಉಪ ಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಜಂಟಿ ಕೃಷಿ ನಿರ್ದೇಶಕ ಜಿ.ಡಿ.ಕೃಷ್ಣಮೂರ್ತಿ ಸೇರಿದಂತೆ ವಿವಿಧ ಇಲಾಖೆಗಳ ಮತ್ತು ಡಿಸಿ ಕಚೇರಿಯ ಹಾಗೂ ಕೃಷಿ ಇಲಾಖೆಯ ಇತರೆ ಅಧಿಕಾರಿಗಳಿದ್ದರು.

ನರೇಗಾ ಕೂಲಿ ಕಾರ್ಮಿಕರ ಆರೋಗ್ಯ ಶಿಬಿರ

ಮಾನ್ವಿ: ತಾಲೂಕಿನ ಕಪಗಲ್ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಹಾಗೂ ಆರೋಗ್ಯ ಇಲಾಖೆ ವತಿಯಿಂದ ಹಮ್ಮಿಕೊಂಡ ಉಚಿತ ಆರೋಗ್ಯ ಶಿಬಿರವನ್ನು ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರಾದ ದೀಪಾ ಅರಳಿಕಟ್ಟಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕೂಲಿ ಕಾರ್ಮಿಕರ ಉತ್ತಮ ಆರೋಗ್ಯಕ್ಕಾಗಿ ನರೇಗಾ ಕೂಲಿ ಕಾರ್ಮಿಕರಿಗೆ ಕಾಮಗಾರಿ ಸ್ಥಳದಲ್ಲಿಯೇ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಯನ್ನು ಆರೋಗ್ಯ ಇಲಾಖೆಯಿಂದ ನೀಡಲಾಗುತ್ತಿದೆ ಹೆಚ್ಚಿನ ಚಿಕಿತ್ಸೆ ಅಗತ್ಯವಿದಲ್ಲಿ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ತಜ್ಞವೈದ್ಯರಿಂದ ಚಿಕಿತ್ಸೆ ನೀಡಲಾಗುವುದು ಎಂದು ತಿಳಿಸಿದರು.

ರಾಯಚೂರು ಜಿಲ್ಲಾ ಪಂಚಾಯತ್ ಎಡಿಪಿಸಿ ಮಲ್ಲಮ್ಮ ಮಾತನಾಡಿ, ವಲಸೆ ಯಾಕ್ರಿ ನಿಮ್ಮೂರಲ್ಲೇ ಉದ್ಯೋಗ ಖಾತರಿ ಹಾಗೂ ಸ್ತ್ರೀ ಚೇತನ ಅಭಿಯಾನದಡಿ ಗ್ರಾಮ ಪಂಚಾಯಿತಿ ಯಿಂದ ಸಮಾಮ ಕೇಲಸಕ್ಕೆ ಸಮಾನ ವೇತನ ನೀಡಲಾಗುತ್ತಿದೆ. ಸಾಮಾಜಿಕ ಭದ್ರತೆ ಕಲ್ಪಿಸಲು ನರೇಗ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, ವಿಶೇಷ ಚೇತನರು ಹಾಗೂ ಗರ್ಭಿಣಿಯರಿಗೆ ಶೇ. 50 ಕೆಲಸ ಮಾಡಿದರೂ ಕೂಡ ಪೂರ್ತಿ ಪ್ರಮಾಣದ ಕೂಲಿ ನೀಡಲಾಗುತ್ತದೆ. ತಾವು ನಿರ್ವಸುವ ಕೆಲಸದ ಆಧಾರದ ಮೇಲೆ ಕೂಲಿ ನೀಡಲಾಗುವುದು ಮೇಟಿಗಳು ಎನ್ಎಂಎಂಎಸ್ ತಂತ್ರಾಂಶದಲ್ಲಿ ಮುಖ ಚಹಾರೆ ಮೂಲಕ ಕಡ್ಡಾಯವಾಗಿ ಎರಡು ಬಾರಿ ಹಾಜರಾತಿ ದಾಖಲಿಸಬೇಕು ಎಂದು ತಿಳಿಸಿದರು.

ಉಚಿತ ಆರೋಗ್ಯ ಶಿಬಿರದಲ್ಲಿ ಕೂಲಿ ಕಾರ್ಮಿಕರಿಗೆ ಮಧುಮೇಹ. ರಕ್ತದ ಒತ್ತಡ,ಕೆಮ್ಮು,ಜ್ವರ ಸೇರಿದಂತೆ ವಿವಿಧ ಕಾಯಿಲೆಗಳಿಗೆ ಅಗತ್ಯ ಚಿಕಿತ್ಸೆ ನೀಡಲಾಯಿತು.ಕೂಲಿ ಕಾರ್ಮಿಕರಿಗೆ ಪ್ರಧಾನ ಮಂತ್ರಿ ಭೀಮಾ ಸುರಕ್ಷಾ ಯೋಜನೆ ಮತ್ತು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಯಿತು.

ಕಪಗಲ್ ಸಮುದಾಯಿಕ ಆರೋಗ್ಯ ಅಧಿಕಾರಿ ಹನುಮಂತಿ, ಪ್ರಾಥಮಿಕ ಸುರಕ್ಷ ಅಧಿಕಾರಿ ಶಿಲ್ಪಾಕಲಾ ತಾಲೂಕು ಐಇಸಿ ಸಂಯೋಜಕ ಈರೇಶ, ತಾಲೂಕು ತಾಂತ್ರಿಕ ಸಂಯೋಜಕ ಚಿದಾನಂದ, ಬಿಎಫ್ಟಿ ಸಿದ್ದರಾಮ ಸೇರಿದಂತೆ ಆರೋಗ್ಯ ಇಲಾಖೆಯ ಆಶಾಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ, ನರೇಗಾ ಕೂಲಿ ಕಾರ್ಮಿಕರು ಇದ್ದರು.



ವಿದ್ಯಾರ್ಥಿಗಳಿಗೆ ಸೈಕಲ್, ಸಮವಸ್ತ್ರ ವಿತರಣೆ

ಕುಕನೂರು: ತಾಲೂಕಿನ ಸೋಂಪುರ ಗ್ರಾಮದ ಶ್ರೀಶರಣಬಸವೇಶ್ವರ ಪ್ರೌಢ ಶಾಲೆಯಲ್ಲಿ ಇಂದು ಆಯೋಜಿಸಲಾದ ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷ ನವೀನಕುಮಾರ ಗುಳಗಣ್ಣವರ ಅವರು ಎಂಟನೇ ತರಗತಿಯ ವಿದ್ಯಾರ್ಥಿನಿಯರಿಗೆ ಸೈಕಲ್‌ಗಳನ್ನು ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ಶಿಕ್ಷಣವು ವ್ಯಕ್ತಿಯ ಬದುಕನ್ನು ರೂಪಿಸುವ ಅತ್ಯಂತ ಶಕ್ತಿಯುತ ಸಾಧನವಾಗಿದ್ದು, ಸಮಾಜದ ಅಭಿವೃದ್ಧಿಗೆ ಶಿಕ್ಷಣವೇ ಮೂಲ ಆಧಾರ ಎಂದು ಹೇಳಿದರು. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಸಹ ಉತ್ತಮ ಶಿಕ್ಷಣ ಪಡೆಯುವ ಮೂಲಕ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ಸರ್ಕಾರ ಹಾಗೂ ಸಮಾಜದಿಂದ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಸ್ತು, ಪರಿಶ್ರಮ ಮತ್ತು ಆತ್ಮವಿಶ್ವಾಸದಿಂದ ಶಿಕ್ಷಣದಲ್ಲಿ ಸಾಧನೆ ಮಾಡಬೇಕು ಎಂದು ಕರೆ ನೀಡಿದರು.

ವಿದ್ಯಾರ್ಥಿನಿಯರಿಗೆ ಸೈಕಲ್ ವಿತರಿಸುವುದರಿಂದ ಅವರ ಶಾಲಾ ಹಾಜರಾತಿ ಹೆಚ್ಚಾಗುವುದಲ್ಲದೆ, ಶಿಕ್ಷಣದ ಮೇಲಿನ ಆಸಕ್ತಿ ಮತ್ತಷ್ಟು ವೃದ್ಧಿಯಾಗುತ್ತದೆ. ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕಿದ್ದು, ಶಾಲೆಗಳು ಜ್ಞಾನ ದೇಗುಲಗಳಾಗಿವೆ ಎಂದು ತಿಳಿಸಿದರು. ಶಾಲೆಯ ಮುಖ್ಯೋಪಾಧ್ಯಾಯರಾಗಿ ಸುಮಾರು 37 ವರ್ಷಗಳ ಕಾಲ ನಿಷ್ಠೆಯಿಂದ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀತಬರುದ್ದೀನ್ ನೂರಬಾಷ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿರುವ ಅಮೂಲ್ಯ ಕೊಡುಗೆಯನ್ನು ಸ್ಮರಿಸಿದ ನವೀನಕುಮಾರ ಈ ಗುಳಗಣ್ಣವರ ಅವರು, ಶಿಕ್ಷಕರ ಸೇವೆ ಸಮಾಜ ನಿರ್ಮಾಣದಲ್ಲಿಅತ್ಯಂತಮಹತ್ವದ್ದಾಗಿದ್ದು,ಅವರ ತ್ಯಾಗ ಮತ್ತು ಶ್ರಮ ಸದಾ ಸ್ಮರಣೀಯ ಎಂದು ಹೇಳಿದರು. ಸಂಸ್ಥೆಯ ಅಧ್ಯಕ್ಷರಾದ ಮುತ್ತಯ್ಯ ಕಳ್ಳಿಮಠ, ಪ್ರಮುಖರಾದ ಸೋಮಶೇಖರಗೌಡ ಸೋಂಪುರ, ಕೆ.ಬಿ.ನಾಯ್ಕರ, ಶರಣಪ್ಪ ಕೋಳೂರ, ಶರಣಪ್ಪ ಅರಕೇರಿ, ನಿಜಾಮುದ್ದೀನ್ ನದಾಫ್, ಚನ್ನಪ್ಪ ಹಣವಾಳ, ಸಿದ್ದಪ್ಪ ಮಾಸ್ಟರ್ ಸಜ್ಜನ, ಮುಖ್ಯೋಪಾಧ್ಯಾಯರಾದ ಆರ್.ಬಿ.ಅಬ್ಬಿಗೇರಿ, ಯರೇಹಂಚಿನಾಳ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಟಿ.ಅಂಜನಪ್ಪ, ಕರಿಯಪ್ಪ ಹಳ್ಳಿಕೇರಿ, ವಿರೂಪಾಕ್ಷಪ್ಪ ಅಬ್ಬಿಗೇರಿ, ನಾಗರಾಜ ಉಮಚಿಗಿ, ಶರಣಪ್ಪಗೌಡ ಪಾಟೀಲ ಸೇರಿದಂತೆ ಶಾಲೆಯ ಶಿಕ್ಷಕರು, ಸಿಬ್ಬಂದಿ, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ತೈಲ ಬೆಲೆ ಏರಿಕೆ: ಸೌಧೆ ಒಲೆಯಲ್ಲಿ ಚಹಾ ತಯಾರಿಸಿ ಪ್ರತಿಭಟನೆ

ಸಿಂಧನೂರು: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್, ಸಿಎನ್‌ಜಿ ಹಾಗೂ ಅಡುಗೆ ಅನಿಲ ಬೆಲೆಯನ್ನು ಮೇಲಿಂದ ಮೇಲೆ ಏರಿಕೆ ಮಾಡುವ ಮೂಲಕ ದುಡಿಯುವ ಜನರ ಮೇಲೆ ತೆರಿಗೆ ಹೊರೆಯನ್ನು ಹೇರಿದೆಂದು ಆರೋಪಿಸಿ, ಭಗತ್‌ಸಿಂಗ್ ಆಟೋ ಚಾಲಕರ ಸಂಘ ಹಾಗೂ ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ದಿಂದ ನಗರದ ಗಾಂಧಿ ಸರ್ಕಲ್‌ನಲ್ಲಿ ಸೌಧೆ ಒಲೆಯಲ್ಲಿ ಚಹಾ ತಯಾರಿಸುವ ಮೂಲಕ ಬುಧವಾರ ವಿನೂತನ ಪ್ರತಿಭಟನೆ ನಡೆಸಲಾಯಿತು.

ಈ ಪ್ರತಿಭಟನೆಯನ್ನು ಉದ್ದೇಶಿಸಿ ಎಐಸಿಸಿಟಿಯು ರಾಜ್ಯ ಸಹ ಕಾರ್ಯದರ್ಶಿ ನಾಗರಾಜ ಪೂಜಾರ್ ಮಾತನಾಡಿ, ಕೇಂದ್ರ ಸರ್ಕಾರ ಮೇ 15ರಿಂದ ಮೇ 25ರ ಒಳಗೆ ಕೇವಲ 11 ದಿನಗಳಲ್ಲಿ ಪೆಟ್ರೋಲ್ 7.38 ರೂಪಾಯಿ ಹಾಗೂ ಡಿಸೇಲ್ 7.52 ರೂ. ಹಾಗೂ ಸಿಎನ್‌ಜಿ 6 ರೂಪಾಯಿ ಹಾಗೂ ವಾಣಿಜ್ಯ ಸಿಲಿಂಡರ್ ಗ್ಯಾಸ್ ಬೆಲೆಯನ್ನು 3113 ರೂಪಾಯಿಗೆ ಏರಿಕೆ ಮಾಡಿದೆ



ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಭಗತ್‌ಸಿಂಗ್ ಆಟೋ ಚಾಲಕರ ಸಂಘದ ಅಧ್ಯಕ್ಷ ಬಸವರಾಜ ಕೊಂಡೆ, ತದನಂತರ ಸಿಪಿಐ(ಎಂಎಲ್) ಲಿಬರೇಶನ್ ತಾಲೂಕು ಕಾರ್ಯದರ್ಶಿ ಬಸವರಾಜ ಬೆಳಗುರ್ಕಿ ಮಾತನಾಡಿದರು.

ಪ್ರತಿಭಟನೆ ಬಳಿಕ ತಹಶೀಲ್ದಾರ್ ಕಚೇರಿಯ ಶಿರಸ್ತೆದಾರ್ ಅಂಬಾದಾಸ್ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಭಗತ್‌ಸಿಂಗ್ ಆಟೋ ಚಾಲಕರ ಸಂಘದ ಶೇಕ್ಷಾವಲಿ, ಖಾಜಾಹುಸೇನ್, ಶೌಕತ್ ,ಅಕ್ಬರ್, ಹುಸೇನ್‌ಬಾಷಾ, ಸಲೀಮ್, ಮಹ್ಮದ್ ರಫಿ, ಹುಸೇನ್‌ಸಾಬ್, ರಾಜ, ಪಂಪಾಪತಿ, ಮಹ್ಮದ್ ರಫಿ, ರಾಜಶೇಖರ್, ದುರುಗಪ್ಪ, ಮಹ್ಮದ್ ರಫಿ, ಅಲಿಬಾಬಾ, ಅಂಬರೇಶ್, ಮಹೆಬೂಬ್, ರಾಘವೇಂದ್ರ ಉಪ್ಪಳ, ಮಹಾದೇವ ಅಮರಾಪುರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜೂ.6ರಂದು ವಿದ್ಯುತ್ ವ್ಯತ್ಯಯ

ಕೊಪ್ಪಳ: ಜೆಸ್ಕಾಂ ಮುನಿರಾಬಾದ್ ಉಪ-ವಿಭಾಗದ ವ್ಯಾಪ್ತಿಯ ಗಿಣಿಗೇರಾ 110/33/11 ಕೆವಿ ವಿದ್ಯುತ್ ವಿತರಣಾ ಉಪ ಕೇಂದ್ರದಲ್ಲಿ ತ್ರೈಮಾಸಿಕ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿರುವ ಹಿನ್ನೆಲೆಯಲ್ಲಿ ಜೂನ್ 6 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕು.

ಅಂದು ಗಿಣಿಗೇರಾ ಮತ್ತು ಗಿಣಿಗೇರಾ ಬೈಪಾಸ್, ಹಳೆ ಕನಕಾಪುರ, ಹೊಸ ಕನಕಾಪುರ, ಕನಕಾಪುರ ತಾಂಡಾ, ಹಿರೇ ಬಗನಾಳ, ಕುಟುಗನಹಳ್ಳಿ, ಚಿಕ್ಕ ಬಗನಾಳ, ಅಲ್ಲಾನಗರ, ಕಲ್ ತಾವರಗೇರಾ, ಗಬ್ಬೂರು, ಹಾಲಹಳ್ಳಿ ಹಾಗೂ ಭೀಮನೂರು, ಎಫ್3 ಬಗನಾಳ ಎನ್‌ಜೆವೈ ಫೀಡರ್, ಎಫ್13 ಹಾಲಹಳ್ಳಿ ಎನ್‌ಜೆವೈ ಫೀಡರ್, ಎಫ್7 ಎಸ್.ಆರ್.ಸಿ ಇಂಡಸ್ಟ್ರಿಯಲ್ ಫೀಡರ್, ಎಫ್10 ಗಾಳೆಮ್ಮ, ಎಫ್12 ಗಿಣಿಗೇರಾ ಮತ್ತು ಎಫ್11 ಕಲ್ ತಾವರಗೇರಾ, ಎಫ್9 ಎನ್‌ಜೆವೈ, ಎಫ್33 ಕೋಕಾ ಕೋಲಾ ಫೀಡರ್‌ಗೆ ಸಂಬಂಧಪಟ್ಟ ಎಲ್ಲಾ ಇಂಡಸ್ಟ್ರೀಸ್, ಕೆಎನ್ಎನ್ಎಲ್ ಎಲ್‌ಐಎಸ್ ಫೀಡರ್, ಎಫ್1 ಕುಣಿಕೇರಿ ಐಪಿ, ಎಫ್2 ಕರ್ಕಿಹಳ್ಳಿ ಐಪಿ, ಎಫ್5 ಅಲ್ಲಾನಗರ ಐಪಿ, ಎಫ್4 ಪೌಲ್ಟ್ರಿ ಫಾರ್ಮ್, ಎಫ್6 ಐಪಿ ಕಾಸನಕಂಡಿ ಹಾಗೂ ಪಿಬಿಎಸ್ ಸೋಲಾರ್ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಕಾಮಗಾರಿಯು ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಪೂರ್ಣಗೊಂಡಲ್ಲಿ ಯಾವುದೇ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು. ಆದ್ದರಿಂದ ಈ ಅವಧಿಯಲ್ಲಿ ಸಾರ್ವಜನಿಕರು ಯಾವುದೇ ತರಹದ ವಿದ್ಯುತ್ ದುರಸ್ತಿ ಕೆಲಸಗಳನ್ನು ಕೈಗೊಳ್ಳಬಾರದೆಂದು ಸೂಚಿಸಲಾಗಿದೆ. ಎಂದು ಜೆಸ್ಕಾಂ ಮುನಿರಾಬಾದ್‌ನ ಕಾರ್ಯ ಮತ್ತು ಪಾಲನಾ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಕರು ದುಶ್ಚಟಗಳಿಂದ ದೂರವಿರಲಿ: ನ್ಯಾ.ಪ್ರಮೀಳಾ

ಯಲಬುರ್ಗಾ: ವಿದ್ಯಾರ್ಥಿಗಳು ತಂಬಾಕು, ಗಾಂಜಾ, ಅಫೀಮ್, ಗುಟ್ಕಾ, ವಿಮಲ್ ಸ್ಟಾರ, ಸಿಗರೇಟ, ಬೀಡಿಗಳಂತಹ ದುಶ್ಚಟಗಳ ಸೇವನೆಯಿಂದ ದೂರವಿದಷ್ಟು ಉತ್ತಮ ಆರೋಗ್ಯವನ್ನು ಪಡೆದುಕೊಳ್ಳಲು ಸಾಧ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಪ್ರಮೀಳಾ ಎಂ. ಹೇಳಿದರು.

ಪಟ್ಟಣದ ಸರಕಾರಿ ಶುಶ್ರೂಷಾ ಮಹಾವಿದ್ಯಾಲಯದಲ್ಲಿ ಗುರುವಾರ ತಾಲೂಕಾ ಕಾನೂನು ಸೇವಾ ಸಮಿತಿ, ವಕೀಲರ ಸಂಘ,ಆರೋಗ್ಯ, ಪೋಲಿಸ್, ಅಭಿಯೋಜನಾ ಇಲಾಖೆಸಹಯೋಗದಲ್ಲಿನಡೆದವಿಶ್ವ ತಂಬಾಕು ರಹಿತ ದಿನಾಚರಣೆ ನಿಮಿತ್ಯ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಿರಂತರ ತಂಬಾಕು ಸೇವನೆಯಿಂದ ಹೃದಯಾಘಾತ, ಪಾರ್ಶ್ವವಾಯು, ಕ್ಯಾನ್ಸರ್‌ನಂತಹ ರೋಗಗಳು ಬರುತ್ತೇವೆ. ಧೂಮಪಾನ



ಮಾಡುವುದರಿಂದ ಅವರ ಸುತ್ತಮುತ್ತ ಇರುವ ವ್ಯಕ್ತಿಗಳಿಗೂ ಅದರ ಪರಿಣಾಮ ಉಂಟಾಗುತ್ತೇವೆ ಎಂದರು.

ಸಮಾಜದಲ್ಲಿ ಎಲ್ಲರೂ ಉತ್ತಮ ಜೀವನ ನಡೆಸಬೇಕು. ತಂಬಾಕು ಸೇವನೆಯಿಂದ ಉಂಟಾಗುವ ಸಮಸ್ಯೆಗಲ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಜತೆಗೆ ತಂಬಾಕು ಉತ್ಪನ್ನಗಲ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಎಂದು ಹೇಳಿದರು.

ಕಿರಿಯ ಸಿವಿಲ್ ನ್ಯಾಯಾಧೀಶ ಸಂಜುಕುಮಾರ ಪಚ್ಚಾಪೂರೆ ಮಾತನಾಡಿ, ದೂಮಪಾನ ಮತ್ತು ತಂಬಾಕು ಉತ್ಪನ್ನಗಳ ಸೇವನೆಯು ಕ್ಯಾನ್ಸರ್ ಹೃದಯ ಸಂಬಂಧಿ ಕಾಯಿಲೆ ಹಾಗೂ ಶ್ವಾಸಕೋಶದ ಸಮಸ್ಯೆಗಳಿಗೆ ಪ್ರಮುಖ ಕಾರಣವಾಗಿದೆ.ಈ ವ್ಯಸನ ಕೇವಲ ಒಬ್ಬ ವ್ಯಕ್ತಿಯ ಆರೋಗ್ಯವನ್ನಷ್ಟೇ ಅಲ್ಲದೆ ಇಡೀ ಕುಟುಂಬದ ನೆಮ್ಮದಿಯನ್ನು ಹಾಳು ಮಾಡುತ್ತದೆ ಎಂದರು. ತಹಶೀಲ್ದಾರ್ ಪ್ರಕಾಶ ನಾಶಿ ಮಾತನಾಡಿ, ವಿದ್ಯಾರ್ಥಿಗಳು ಸಿಗರೇಟ್, ಬೀಡಿ, ತಂಬಾಕು ಸೇವನೆಯ ಇಂತಹ ಅನೇಕ ದುಶ್ಚಟಗಳಿಂದ ದೂರವಿರಬೇಕು ನಮ್ಮನ್ನು ನಂಬಿಕೊಂಡ ಕುಟುಂಬಗಳಿಗೆ ಆಸರೆಯಾಗಿರಬೇಕೆಂದರೆ ಇಂತಹ ಚಟಗಳಿಂದ ದೂರವಿದ್ದಾಗ ಮಾತ್ರ ಉತ್ತಮ ಜೀವನ ಸಾಧ್ಯ ಎಂದು ಹೇಳಿದರು. ತಾಲೂಕು ಆರೋಗ್ಯ ಇಲಾಖೆ ಅಧಿಕಾರಿ ನೇತ್ರಾವತಿ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ವಕೀಲರ ಸಂಘದ ತಾಲೂಕಾಧ್ಯಕ್ಷ ಎಸ್.ಎಸ್.ಹೊಂಬಳ ಹಾಗೂ ಉಪಾಧ್ಯಕ್ಷ ಎಂ.ಎಸ್.ನಾಯ್ಕರ್ ಮಾತನಾಡಿದರು.

ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯದಪ್ರಾಂಶುಪಾಲ ಎಚ್.ಬಿ.ರಾಮದುರ್ಗಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅತಿಥಿಗಳಾಗಿ ಸಹಾಯಕ ಸರ್ಕಾರಿ ಅಬಿಯೋಜಕರಾದ ಗೀತಾ ಅಸೂಟಿ, ಅಪರ ಸರ್ಕಾರಿ ವಕೀಲ ಮಲ್ಲನಗೌಡ ಪಾಟಿಲ, ನ್ಯಾಯವಾದಿ ಎಸ್.ಎನ್.ಶ್ಯಾಗೋಟಿ, ಆರೋಗ್ಯ ಇಲಾಖೆ ಕಾಳಪ್ಪ ಬಡಿಗೇರ, ಮಹಾವಿದ್ಯಾಲಯದ ಉಪನ್ಯಾಸಕರು, ನ್ಯಾಯಾಂಗ ಸಿಬ್ಬಂದಿಗಳಾದ ರಾಘವೇಂದ್ರ ಕೋಳಿಹಾಳ, ವಿನಾಯಕ ಇದ್ದರು.

ಒತ್ತಡವನ್ನು ಯಶಸ್ಸಿನ ಮೆಟ್ಟಿಲಾಗಿಸಿಕೊಳ್ಳಿ: ಡಾ.ಬಾಳೆಕುಂದ್ರಿ

ಕಲಬುರಗಿ: ಯಶಸ್ಸಿನ ಮೂಲಾಧಾರವು ವ್ಯಕ್ತಿಯ ಮನಸ್ಥಿತಿಯಲ್ಲಿದೆ. ಪ್ರತಿಭೆಗಿಂತಲೂ ಕಲಿಯುವ ಮನೋಭಾವ, ನಿರಂತರ ಪ್ರಯತ್ನ ಮತ್ತು ಆತ್ಮವಿಶ್ವಾಸವೇ ವ್ಯಕ್ತಿಯನ್ನು ಉನ್ನತ ಸಾಧ ನೆಯತ್ತ ಕೊಂಡೊಯ್ಯುತ್ತವೆ ಎಂದು ಖ್ಯಾತ ಮಕ್ಕಳ ಹೃದ್ರೋಗ ತಜ್ಞೆ ಹಾಗೂ ಜನಪ್ರಿಯ ಸಾಹಿತಿ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ ವಿದ್ಯಾರ್ಥಿಗಳಿಗೆ ತಿಳಿಸಿದರು.

ಶರಣಬಸವೇಶ್ವರ ವಸತಿ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗಾಗಿ ಒತ್ತಡದಿಂದ ಯಶಸ್ಸಿನತ್ತ ಎಂಬ ವಿಶೇಷ ಪ್ರೇರಣಾತ್ಮಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಅವರು,ಸ್ಥಿರ ಮನೋಭಾವ ಹೊಂದಿರುವವರು ತಮ್ಮ ಸಾಮರ್ಥ್ಯವನ್ನು ಸೀಮಿತಗೊಳಿಸಿಕೊಳ್ಳುತ್ತಾರೆ. ಆದರೆ ಬೆಳವಣಿಗೆಯ ಮನೋಭಾವ ಹೊಂದಿದವರು ಪ್ರತಿಯೊಂದು ಸವಾಲನ್ನೂ ಅವಕಾಶವಾಗಿ ಪರಿವರ್ತಿಸಿಕೊಳ್ಳುತ್ತಾರೆ ಎಂದು ವಿವರಿಸಿದರು.

ವಿದ್ಯಾರ್ಥಿಗಳು ಜೀವನದಲ್ಲಿ ಶ್ರೇಯಸ್ಸಿನ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಬೇಕು. ಉತ್ತಮ ಚಿಂತನೆ, ಉತ್ತಮ ಅಭ್ಯಾಸಗಳು ಹಾಗೂ ಸತತ ಅಧ್ಯಯನವು ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವೆಂದು ಅವರು ಹೇಳಿದರು. ಜಗತ್ತಿನ ಶ್ರೇಷ್ಠ ಸಾಧಕರ ಯಶಸ್ಸಿನ ಹಿಂದೆ ಉತ್ತಮ ಮನೋಭಾವ ಮತ್ತು ನಿರಂತರ ಪರಿಶ್ರಮವೇ ಕಾರಣ. ಸಮಾಜದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಪ್ರಮುಖವಾಗಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ ಶಿಕ್ಷಕರು ಹಾಗೂ ಪೋಷಕರ ಕೊಡುಗೆ ಅನನ್ಯವಾಗಿದ್ದು, ಅವರ ಮಾರ್ಗದರ್ಶನವನ್ನು ಗೌರವಿಸುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯ ಎಂದು ಹೇಳಿದರು.



> **ಯಶಸ್ಸು ಎನ್ನುವುದು ಒಂದು ದಿನದಲ್ಲಿ ದೊರೆಯುವ ಫಲವಲ್ಲ, ಅದು ನಿರಂತರ ಪರಿಶ್ರಮ, ಶಿಸ್ತು, ಸಮಯದ ಸದ್ಬಳಕೆ ಮತ್ತು ಗುರಿಯ ಮೇಲಿನ ಅಚಲ ನಂಬಿಕೆಯಿಂದ ಲಭಿಸುವ ಸಾಧನೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನದೇ ಆದ ವಿಶೇಷ ಸಾಮರ್ಥ್ಯವನ್ನು ಹೊಂದಿದ್ದಾನೆ. ಇತರರೊಂದಿಗೆ ಹೋಲಿಕೆ ಮಾಡಿಕೊಳ್ಳುವ ಬದಲು ತನ್ನ ಸಾಮರ್ಥ್ಯವನ್ನು ಗುರುತಿಸಿ ಅದನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು.**
> ■ **ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ಸಾಹಿತಿ**

ಇಂದಿನ ಯುವಜನತೆ ಮೊಬೈಲ್ ಫೋನ್, ಸಾಮಾಜಿಕ ಜಾಲತಾಣಗಳು ಹಾಗೂ ಅನಗತ್ಯ ಒತ್ತಡಗಳಿಗೆ ಹೆಚ್ಚು ಸಮಯ ಮೀಸಲಿಡುತ್ತಿರುವುದು ವಿಷಾದನೀಯ. ವಿದ್ಯಾರ್ಥಿಗಳು ತಮ್ಮ ಸಮಯವನ್ನು ಜ್ಞಾನಾರ್ಜನೆ, ಕೌಶಲ್ಯ ಅಭಿವೃದ್ಧಿ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಬಳಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥ ಡಾ. ಚಂದ್ರಕಾಂತ ಪಾಟೀಲ ಅವರು,ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಒತ್ತಡಕ್ಕೆ ಮಣಿಯದೆ ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟು ನಿರಂತರ ಕಲಿಕೆಯ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕಿರುಸುದ್ದಿ

ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನಾಚರಣೆ

ಕುಷ್ಟಗಿ: ಪಟ್ಟಣದ ಹಳೇ ಪ್ರವಾಸಿ ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಕುಷ್ಟಗಿ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನವನ್ನು ಗುರುವಾರ ಆಚರಿಸಲಾಯಿತು. ಕಸಾಪ ಸದಸ್ಯ ನಿಂಗಪ್ಪ ಸಜ್ಜನ್ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕನ್ನಡ ನಾಡು, ನುಡಿ, ಸಂಸ್ಕೃತಿ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಅಪಾರ ಕೊಡುಗೆಗಳನ್ನು ಸ್ಮರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಅವರು ನೀಡಿದ ಪ್ರೋತ್ಸಾಹ ಹಾಗೂ ಕನ್ನಡದ ಬೆಳವಣಿಗೆಗೆ ಸಲ್ಲಿಸಿದ ಸೇವೆಯನ್ನು ವಿವರಿಸಿದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲೆಂಕಪ್ಪ ವಾಲಿಕಾರ್ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಪದಾಧಿಕಾರಿಗಳಾದ ಗೌರವ ಕಾರ್ಯದರ್ಶಿಗಳಾದ ಶರಣಪ್ಪ ಲೈನದ ದೇವರಾಜ ವಿಶ್ವಕರ್ಮ ಹನುಮೇಶ ಗುಮಗೇರಿ, ಶರಣಪ್ಪ ವಡಗೇರಿ, ಉಮೇಶ ಹಿರೇಮಠ, ರವಿಂದ್ರ ಬಾಕಳೆ, ಮುತ್ತಣ್ಣ ಬಾಚಲಾಪುರ ಪರಶಿವಮೂರ್ತಿ ಮಾಟಲದಿನ್ನಿ, ಪವಾಡೆಪ್ಪ ಚೌಡಕಿ, ಬಸವರಾಜ ಉಪ್ಪಲದಿನ್ನಿ, ದೊಡ್ಡಪ್ಪ ಕೈಲವಾಡಗಿ, ಮಂಜೂರಲಿ ಕೇಸೂರು, ಸೇರಿದಂತೆ ಪರಿಷತ್ತಿನ ಪದಾಧಿಕಾರಿಗಳು, ಆಜೀವ ಸದಸ್ಯರು ಹಾಗೂ ಕನ್ನಡಾಭಿಮಾನಿಗಳು ಇದ್ದರು.

ಕೆರೆಗಳ ಪುನಶ್ಚೇತನ ಕಾರ್ಯಕ್ರಮಕ್ಕೆ ಚಾಲನೆ

ವಿಜಯನಗರ: ಜಿಲ್ಲಾಡಳಿತ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಂಸ್ಥೆಯ 2026-27ನೇ ಸಾಲಿನ ಕರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಡಿ ಜೂ.5ರಂದು ಬೆಳಗ್ಗೆ 11.30ಕ್ಕೆ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ನಾಲ್ಕು ಪ್ರಮುಖ ಕೆರೆಗಳ ಪುನಶ್ಚೇತನ ಕರ್ಯಕ್ರಮಕ್ಕೆ ಕೇಂದ್ರ ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಚಾಲನೆ ನೀಡುವರು. ಕೂಡ್ಲಿಗಿ ತಾಲೂಕಿನ ಜಲಮೂಲ ವೃದ್ಧಿಸುವ ಹಾಗೂ ಅಂರ್ಜಲ ಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಮಹದೇವಪುರ ಕೆರೆ, ರ್‍ಳೋದಯ ಕೆರೆ, ಹುಲಿಕುಂಟೆ ಕೆರೆ, ಗುಂಡುಮುನುಗು ಕೆರೆಗಳ ಪುನಶ್ಚೇತನ ಕಾಮಗಾರಿಗಳಿಗೆ ಕೇಂದ್ರ ಹಣಕಾಸು ಮತ್ತು ಕರ್ಪೊರೇಟ್ ವ್ಯವಹಾರಗಳ ಸಚಿವೆ ನರ್ಮಲಾ ಸೀತಾರಾಮನ್ ಚಾಲನೆ ನೀಡುವರು. ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರು ವೃತ್ತದ ಚೀಫ್ ಜನರಲ್ ಮ್ಯಾನೇಜರ್ ಜೂಹಿ ಸ್ಮಿತಾ ಸಿನ್ಹಾ ಉಪಸ್ಥಿತರಿರುವರು. ಬಳ್ಳಾರಿ ಲೋಕಸಭಾ ಕ್ಷೇತ್ರದ ಸಂಸದ ಇ.ತುಕಾರಾಂ ಜಿಲ್ಲೆಯ ಶಾಸಕರು, ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ಜಿ.ಪಂ. ಸಿಇಒ ನೋಂಗ್ಜಯ್ ಮಹಮ್ಮದ್ ಅಲಿ ಅಕ್ರಂ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಹರಿಪ್ರಸಾದ್‌ಗೆ ಅಭಿನಂದಿಸಿದ ಆಂಜನೇಯಲೂ

ಬಳ್ಳಾರಿ: ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ಕೆ. ಹರಿಪ್ರಸಾದ್ ಅವರನ್ನು ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲೂ, ಕೆಪಿಸಿಸಿ ಮಾಧ್ಯಮ ವಕ್ತಾರ ಮತ್ತು ಕೆಪಿಸಿಸಿ ರಾಜ್ಯ ಸಂಯೋಜಕರು ಪ್ರಚಾರ ಸಮಿತಿಯ ವೆಂಕಟೇಶ್ ಹೆಗಡೆ ಅವರು ಹೂಗುಚ್ಛ ನೀಡಿ, ಅಭಿನಂದಿಸಿ, ಶುಭಾಶಯಗಳನ್ನು ಕೋರಿದರು. ನಂತರ ಸಿಎಂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ನೂತನ ಸರ್ಕಾರದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆ.ಎಚ್.ಮುನಿಯಪ್ಪ ಅವರನ್ನು ಭೇಟಿ ಮಾಡಿ ಶುಭಾಶಯ ಕೋರಿದರು. ಪಕ್ಷದ ಹಿರಿಯ ನಾಯಕರಾದ ಇಬ್ಬರಿಗೂ ಸೂಕ್ತ ಸ್ಥಾನ ನೀಡಿದ ಕಾಂಗ್ರೆಸ್ ನಾಯಕರು, ವರಿಷ್ಠರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಮುಖಂಡರಾದ ಟಿ.ಆನಂದ್, ಅನಿಲ್, ನಿಂಬಗಲ್ ರಾಮಕೃಷ್ಣ ಸೇರಿದಂತೆ ಇತರರಿದ್ದರು.



ನಿಧನ ಸುದ್ದಿ

ಜಡೇಪ್ಪ ಸಜ್ಜನ್

ಕುರುಗೋಡು: ಎಮ್ಮಿಗನೂರು ಗ್ರಾಮದ ಜಡೇಪ್ಪ ಸಜ್ಜನ್ (76) ಗುರುವಾರ ನಿಧನರಾಗಿದ್ದಾರೆ. ಗ್ರಾಮದ ದೇವಸ್ಥಾನದ ಧಾರ್ಮಿಕ ಕಾರ್ಯದಲ್ಲಿ ಭಜನೆ ಹಾಗೂ ಹಾಡುವ ಪದಗಳ ಮೂಲಕ ಪ್ರಸಿದ್ಧಿಯಾಗಿದ್ದು, ಇವರಿಗೆ ಪತ್ನಿ, ಮೂವರು ಪುತ್ರಿಯರು ಇದ್ದು, ಗುರುವಾರ ಅಂತ್ಯಕ್ರಿಯೆ ಜರುಗಿತು.



ರಾಮು

ಕುರುಗೋಡು: ಎಮ್ಮಿಗನೂರು ಗ್ರಾಮದ ರಾಮು (44) ಬುಧವಾರ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದು, ಗುರುವಾರ ಅಂತ್ಯಕ್ರಿಯೆ ಜರುಗಿತು.





ಕುಷ್ಟಗಿ: ಪಟ್ಟಣದ ಹಳೇ ಪ್ರವಾಸಿ ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಕುಷ್ಟಗಿ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನವನ್ನು ಗುರುವಾರ ಆಚರಿಸಲಾಯಿತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ

ಕುರುಗೋಡು: ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸುಮಾರು ನಾಲ್ಕು ದಶಕಗಳ ಕಾಲ ಮೈಸೂರನ್ನು ಆಳಿದರು. ಅವರು ಒಬ್ಬ ಪ್ರಾಮಾಣಿಕ ಹಾಗೂ ದಕ್ಷ ಆಡಳಿತಗಾರರಾಗಿದ್ದರು ಎಂದು ತಹಶೀಲ್ದಾರ್ ನರಸಪ್ಪ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಗುರುವಾರ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ ವೇಳೆ ಅವರು ಮಾತನಾಡಿದರು. ಜನಸಾಮಾನ್ಯರ ಏಳಿಗೆಯೇ ಮುಖ್ಯವೆಂದು ನಂಬಿ ಅದೇ ನಿಟ್ಟಿನಲ್ಲಿ ಕೆಲಸ ಮಾಡಿದವರು. ದಕ್ಷ ಆಡಳಿತಗಾರರನ್ನು ನೇಮಕ ಮಾಡಿ ಭ್ರಷ್ಟಾಚಾರಕ್ಕೆ ಆಸ್ಪದ ಕೊಡದವರು. ಜನಸಾಮಾನ್ಯರಿಗಾಗಿ ಜಾರಿ ಮಾಡಿದ ಸಾಮಾಜಿಕ ನ್ಯಾಯ ಮತ್ತು ಮೈಸೂರು ರಾಜ್ಯದ ರಾಜಕೀಯ ಸ್ವಾಯತ್ತತೆಗಾಗಿ ಬ್ರಿಟಿಷರೊಂದಿಗೆ ನಡೆಸಿದ ಸೆಣಸಾಟ ಇವು ಅವರ ಅಪರೂಪದ ಕೊಡುಗೆಗಳು ಎಂದು ಸ್ಮರಿಸಿದರು.

ಪ್ರಥಮವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಸಲ್ಲಿಸಲಾಯಿತು.

ಈ ವೇಳೆ ಗ್ರೇಡ್-2 ತಹಶೀಲ್ದಾರ್ ಮಲ್ಲೇಶಪ್ಪ ವಿಜಯಕುಮಾರ್ ಶಿರಸ್ತೇದಾರರು ಹಾಗೂ ಸಿಬ್ಬಂದಿ ವಿವಿಧ ಸಂಘಟನೆಗಳ ಮುಖಂಡರು ಊರಿನ ಮುಖಂಡರು ಇದ್ದರು.



ಕುರುಗೋಡು: ಪಟ್ಟಣದ ತಾಲೂಕು ಕಚೇರಿಯಲ್ಲಿ ಗುರುವಾರ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಿಸಲಾಯಿತು. ಈ ವೇಳೆ ತಹಶೀಲ್ದಾರ್ ನರಸಪ್ಪ, ವಿಜಯಕುಮಾರ್ ಶಿರಸ್ತೇದಾರರು ಹಾಗೂ ಸಿಬ್ಬಂದಿ ವಿವಿಧ ಸಂಘಟನೆಗಳ ಮುಖಂಡರು ಊರಿನ ಮುಖಂಡರು ಇದ್ದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಾರಂಭ: ಜಿಲ್ಲಾಧಿಕಾರಿ

ಬಳ್ಳಾರಿ: ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಬಳ್ಳಾರಿ ಜಿಲ್ಲಾದ್ಯಂತ 2026ರ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಅವರು ಹೇಳಿದರು.

ನಗರದನೂತನಜಿಲ್ಲಾಡಳಿತಭವನದವಿಸಿಹಾಲ್‌ನಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ 2026ರ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ನಿಮಿತ್ತ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಪ್ರತಿಯೊಬ್ಬ ಮತದಾರರ ಮನೆ ಮನೆಗೂ ಕಡ್ಡಾಯವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಪ್ರತಿ ವರ್ಷ ಜ.1ರಂದು ಮತದಾರರ ಪಟ್ಟಿಯನ್ನು ಪ್ರಕಟಿಸುತ್ತೇವೆ. ಸಾಮಾನ್ಯ ಪರಿಷ್ಕರಣೆಯಲ್ಲಿ ಮನೆ ಮನೆಗೆ ಹೋಗುವುದಿಲ್ಲ. ಈ ವಿಶೇಷ ಅಭಿಯಾನದಲ್ಲಿ ನಮ್ಮ ಬೂತ್ ಮಟ್ಟದ ಅಧಿಕಾರಿಗಳು 2025ರ ಜ.1ರ ಮತದಾರರ ಪಟ್ಟಿಯಲ್ಲಿರುವ ಪ್ರತಿಯೊಬ್ಬ ಮತದಾರರ ಮನೆಗೂ ಖುದ್ದಾಗಿ ಭೇಟಿ ನೀಡಿ, ವಿವರಗಳನ್ನು ಪರಿಶೀಲಿಸಿ ದೃಢೀಕರಿಸಲಿದ್ದಾರೆ ಎಂದರು.

ಜೂ.30ರಿಂದ ಜು. 21ರ ವರೆಗೆ ಬಿಎಲ್‌ಒಗಳು ಪ್ರತಿ ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಭೇಟಿ ವೇಳೆ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಿಂದ ನೀಡಿರುವ ಎರಡು ಪುಟಗಳ 'ಎನ್ಯುಮರೇಷನ್ ಫಾರ್ಮ್' (ನೋಂದಣಿ ನಮೂನೆ) ಅನ್ನು ಪ್ರತಿಯೊಬ್ಬ ಮತದಾರರಿಗೂ ತಲುಪಿಸಲಾಗುತ್ತದೆ ಎಂದರು.

ಈ ಬಾರಿಯ ಪರಿಷ್ಕರಣೆಗೆ 1.10.2026 ಅನ್ನು ಅರ್ಹತಾ ದಿನಾಂಕವಾಗಿ ನಿಗದಿಪಡಿಸಲಾಗಿದೆ. ಈ ದಿನಾಂಕಕ್ಕೆ 18 ವರ್ಷ ತುಂಬುವ ಪ್ರತಿಯೊಬ್ಬ ನಾಗರಿಕನೂ ಮತದಾರರ ಪಟ್ಟಿಗೆ ಹೆಸರು ಸೇರಿಸಲು ಅರ್ಹನಾಗಿದ್ದಾರೆ. ಜಿಲ್ಲೆಯ 2025ರ ಪಟ್ಟಿಯ ಅನ್ವಯ ಇರುವ ಒಟ್ಟು 12,28,958 ಮತದಾರರ ಪೈಕಿ ಒರೋಬ್ಬರಿ 12,00,463 (ಶೇ 97.68 ರಷ್ಟು) ಜನರನ್ನು ಯಶಸ್ವಿಯಾಗಿ ಪತ್ತೆಹಚ್ಚಿ, ಅವರ ಕುಟುಂಬದವರೊಂದಿಗೆ ಕೊಂಡಿಕಲ್ಪಿಸುವ ಕೆಲಸ ಯಶಸ್ವಿಯಾಗಿದೆ. ಇನ್ನೂ ಮ್ಯಾಪ್ ಆಗದೇ ಉಳಿದಿರುವ 28,495 ಮತದಾರರನ್ನು ಪತ್ತೆ ಹಚ್ಚಲು ಮುಂದಿನ ದಿನಗಳಲ್ಲಿ ವಿಶೇಷ ಕಾರ್ಯಾಚರಣೆ ಹಮ್ಮಿಕೊಳ್ಳಲಾಗುವುದು ಎಂದರು.



> ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಅರ್ಹ ನಾಗರಿಕನೂ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಎಷ್ಟು ಮುಖ್ಯವೋ, ಅಷ್ಟೇ ಜವಾಬ್ದಾರಿಯುತವಾಗಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವುದು ಅಗತ್ಯವಾಗಿದೆ. ಅರ್ಹ ಮತದಾರರು ಯಾರೂ ಪಟ್ಟಿಯಿಂದ ಹೊರಗುಳಿಯದಂತೆ ಮತ್ತು ದೋಷರಹಿತ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಉದ್ದೇಶದಿಂದ ಪ್ರಕ್ರಿಯೆ ನಡೆಯಲಿದೆ.
>
> ■ ನಾಗೇಂದ್ರ ಪ್ರಸಾದ್ ಕೆ., ಜಿಲ್ಲಾ ಚುನಾವಣಾಧಿಕಾರಿ

» ಜೂ.30ರಿಂದ ಜು.21ರ ವರೆಗೆ ಬಿಎಲ್‌ಒಗಳು ಪ್ರತಿ ಮನೆ ಮನೆಗೆ ಭೇಟಿ

» ಪ್ರತಿ ವರ್ಷ ಜ.1ರಂದು ಮತದಾರರ ಪಟ್ಟಿಯನ್ನು ಪ್ರಕಟಿಸುತ್ತೇವೆ.

ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ, ವಿವಿಧ ನಮೂನೆಗಳು ಮತ್ತು ವೇಳಾಪಟ್ಟಿಯ ಹೆಚ್ಚಿನ ವಿವರಗಳಿಗಾಗಿ ಸಾರ್ವಜನಿಕರು ಬಳ್ಳಾರಿ ಜಿಲ್ಲೆಯ ಅಧಿಕೃತ ವೆಬ್‌ಸೈಟ್ https://ballari.nic.in/ ಅಥವಾ ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ ವೆಬ್‌ಸೈಟ್ https://ceo.karnataka.gov.in/en ಗೆ ಭೇಟಿ ನೀಡಬಹುದು ಎಂದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ., ಜಿಪಂ ಉಪ ಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಚಿದಾನಂದಪ್ಪ, ಕೆ.ಎಂ.ಸೋಮಸುಂದರ್,. ಕೆ.ಆರ್.ದೇವರಾಜ್ ಉಪಸ್ಥಿತರಿದ್ದರು.

ಎಸ್‌ಐಆರ್ ವಿರೋಧಿಸಿ ಜೂ.17ಕ್ಕೆ ಪ್ರತಿಭಟನೆ

ಹಗರಿಬೊಮ್ಮನಹಳ್ಳಿ: ಎಸ್‌ಐಆರ್ ವಿರೋಧಿಸಿ ಜಾತ್ಯಾತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟದಿಂದ ಜೂ.17ರಂದು ಪಟ್ಟಣದ ಈಶ್ವರ ದೇವಸ್ಥಾನದಿಂದ ಬಸವೇಶ್ವರ ವೃತ್ತದವರೆಗೂ ಬಂದು ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ರೈತ ಸಂಘದ ಕಾರ್ಯಾಧ್ಯಕ್ಷ ಜೆ.ಎಂ.ವೀರಸಂಗಯ್ಯ ತಿಳಿಸಿದರು.

ಬುಧವಾರ ಪಟ್ಟಣದ ಕೃಷಿಕ ಭವನದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಎಫ್‌ಐಆರ್ ನಿಂದ ಮತದಾರರ ಹಕ್ಕನ್ನು ರಕ್ಷಿಸಲು, ಮತದಾರರ ಪಟ್ಟಿ ಮತದಾರರ ಹೆಸರನ್ನು ಸುಲಭವಾಗಿ ಹುಡುಕಬಹುದಾದ ರೀತಿಯಲ್ಲಿ ಕಂಪ್ಯೂಟರ್ ರೀಡಬಲ್ ಫಾರ್ಮಟ್‌ನಲ್ಲಿ ನೀಡಲು, ಮತದಾರರ ಕರಡು ಪಟ್ಟಿಯನ್ನು ಬಹಿರಂಗವಾಗಿ ಪ್ರಕಟಿಸಲು ವಿವಾಹಿತ ಮಹಿಳೆಯರು ವಲಸೆ ಕಾರ್ಮಿಕರು ವಿದ್ಯಾರ್ಥಿಗಳು ಅಲೆಮಾರಿಗಳು ಆದಿವಾಸಿಗಳು ಮತ ಪ್ರಕ್ರಿಯೆಯಿಂದ ಮತದಾರರ ಪಟ್ಟಿಯಿಂದ ವಂಚಿತರಾಗದಂತೆ ಕ್ರಮ ವಹಿಸಬೇಕು.

ಚೆಕ್ ಮೇಟ್ ಪಟ್ಟಿ ತಯಾರಿಸುವ ಜೊತೆಗೆ ವೈಜ್ಞಾನಿಕ ಮತ್ತು ಜನಸ್ನೇಹಿ ವಿಧಾನವನ್ನು ಬಳಸಿ ಚುನಾವಣೆ ಆಯೋಗದ ಮೂಲಕ ರಾಜ್ಯದ ಮತದಾರರ ಪಟ್ಟಿಯನ್ನು ಪರಿಷ್ಕರಿಸಬೇಕು.

ವಿಶೇಷ ಗ್ರಾಮ ಸಭೆ ವಾರ್ಡಗಳ ಸಭೆ ನಡೆಸಿ ಮತದಾರರ ಪಟ್ಟಿಯನ್ನು ಪರಿಶೀಲನೆ ನಡೆಸಿ ಸಿದ್ಧಪಡಿಸಬೇಕು. ಮತದಾರರ ನೆರವು ಕೇಂದ್ರಗಳನ್ನು ತೆರೆಯಬೇಕು ಅಧಿಕಾರಿ ವರ್ಗಕ್ಕೆ ಕಟ್ಟುನಿಟಿನ ಆದೇಶ ನೀಡಬೇಕು ಎಂದು ಇನ್ನಿತರ ವಿಷಯಗಳು ಕುರಿತಂತೆ ಒತ್ತಾಯಿಸಿ ಜಾತ್ಯಾತೀತ ಪಕ್ಷಗಳು ಮತ್ತು ಜನಪರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಗುವುದು ಎಂದರು.

ಜಿಪಂ ಮಾಜಿ ಸದಸ್ಯ ಅಕ್ಕಿ ತೋಟೇಶ್, ಗ್ಯಾರಂಟಿ ಅನುಷ್ಠಾನದ ಅಧ್ಯಕ್ಷ ಸೊನ್ನದ ಗುರುಬಸವರಾಜ, ಅಂಬೇಡ್ಕರ್ ಸಂಘದ ಅಧ್ಯಕ್ಷ ಗದ್ದಿಕೇರಿ ದೊಡ್ಡಬಸಪ್ಪ, ಕೃಷಿಕ ಸಮಾಜದ ಹನಸಿ ದೇವರಾಜ, ಇರ್ಫಾನ್ ಸಾಬ್, ರಾಜ ಭಕ್ಷಿ, ಬಿ.ನಜೀರ್, ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಮಂಜುನಾಥ, ಸಂಘದ ಸದಸ್ಯ ರೋಶನ್, ಕೈತ ಸಂಘದ ಬಸವನಗೌಡ, ಜಿಲ್ಲಾ ಯುವ ಘಟಕದ ಅಧ್ಯಕ್ಷ ತಂಬ್ರಹಳ್ಳಿ ರವಿಕುಮಾರ್, ವಿವಿಧ ಸಂಘಟನೆಗಳ ಅಧ್ಯಕ್ಷರು ಪದಾಧಿಕಾರಿಗಳು ಮುಖಂಡರು ಉಪಸ್ಥಿತರಿದ್ದರು.



ತಂಬಾಕು ಬಳಕೆ ಆರೋಗ್ಯಕ್ಕೆ ಮಾರಕ: ವಿಠ್ಠಲ್

ಬಳ್ಳಾರಿ: ನಿಕೋಟಿನ್ ಹಾಗೂ ತಂಬಾಕು ಬಳಕೆ ಆರೋಗ್ಯಕ್ಕೆ ಅತ್ಯಂತ ಹಾನಿಕರವಾಗಿದೆ. ಉತ್ತಮ ಆರೋಗ್ಯಕ್ಕೆ ಇದನ್ನು ಇಂದೇ ತ್ಯಜಿಸಬೇಕು. ನಿಕೋಟಿನ್ ಮತ್ತು ತಂಬಾಕು ವ್ಯಸನದ ಆಕರ್ಷಣೆಯ ಮುಖವಾಡವನ್ನು ಇಂದೇ ಕಳಚಬೇಕು ಎಂದು ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಬಳ್ಳಾರಿ ಶಾಖೆ ಅಧ್ಯಕ್ಷ ಟಿ.ಜಿ.ವಿಠ್ಠಲ್ ಹೇಳಿದರು.

ನಗರದ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಕಚೇರಿಯಲ್ಲಿ ವಿಶ್ವ ತಂಬಾಕು ಮುಕ್ತ ದಿನಾಚರಣೆ 2026ರ ನಿಮಿತ್ತ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಸಮಾಜಶಾಸ್ತ್ರ ವಿಭಾಗ, ಭಾರತೀಯ ಸೇವಾ ಸಂಸ್ಥೆ ಹಾಗೂ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಬಳ್ಳಾರಿ ಶಾಖೆ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಮಾದಕ ವಸ್ತುಗಳ ದಂಧೆ ಹಾಗೂ ತಂಬಾಕು ಬಳಕೆಯು ಯುವಜನತೆಯನ್ನು ಹೇಗೆ ದಾರಿ ತಪ್ಪಿಸುತ್ತಿದೆ ಎನ್ನುವ ಕುರಿತು ಹೇಳಲು ಸಾಲದು. ಯುವಕರು ವ್ಯಸನದ ವಿರುದ್ಧ ಜಾಗೃತರಾಗಿ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಮುಂದಾಗಬೇಕು ಎಂದು ಕರೆ ನೀಡಿದರು. 'ಯುವಕರೇ, ವ್ಯಸನ ಮುಕ್ತ ಸಮಾಜದತ್ತ ಹೆಜ್ಜೆ ಹಾಕಿ' ಎಂಬ ಸಂದೇಶವನ್ನು ವಿದ್ಯಾರ್ಥಿಗಳಿಗೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಕುಮಾರ್ ಮಾತನಾಡಿ, ಸಮಾಜವನ್ನು ಹಾಳು ಮಾಡುವ ಯಾವುದೇ ದುಷ್ಪ್ರವೃತ್ತಿಗಳ ವಿರುದ್ಧ ಯುವಕರು ತಕ್ಷಣ ಪ್ರತಿಕ್ರಿಯಿಸಿ, ಜವಾಬ್ದಾರಿಯುತ ನಾಗರಿಕರಾಗಿ ಕಾರ್ಯನಿರ್ವಹಿಸಬೇಕು ಎಂದರು. ವಿಶೇಷವಾಗಿ ಸಮಾಜಶಾಸ್ತ್ರದ ವಿದ್ಯಾರ್ಥಿಗಳು ಸಮಾಜದಲ್ಲಿನ ಸಮಸ್ಯೆಗಳನ್ನು ಗುರುತಿಸಿ, ಅವುಗಳ ಮೂಲ ಕಾರಣಗಳನ್ನು ಅರ್ಥಮಾಡಿಕೊಂಡು, ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಕರೆ ನೀಡಿದರು.

ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಬಳ್ಳಾರಿ ಶಾಖೆ ವ್ಯವಸ್ಥಾಪಕಿ ಎಸ್. ವಿಜಯಲಕ್ಷ್ಮಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯಕ್ರಮದ ಮುಖ್ಯ ಉದ್ದೇಶದ ಕುರಿತು ಮಾತನಾಡಿದರು. ವಿವಿಧ ಗಣ್ಯರು, ಅಧಿಕಾರಿಗಳು, ಸಿಬ್ಬಂದಿ ಇದ್ದರು.



ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರಗೆ ಸಚಿವ ಸ್ಥಾನ ನೀಡಿ

ಬಳ್ಳಾರಿ: ಮಾಜಿ ಸಚಿವ, ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮೋಕ, ರೂಪನಗುಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಮೇಶ್ ಗೌಡ ಅವರು ಮನವಿ ಮಾಡಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಟ್ರಬಲ್ ಶೂಟರ್, ಮಾದರಿ ರಾಜಕಾರಣಿ, ಸಿಎಂ ಡಿ.ಕೆ.ಶಿವಕುಮಾರ್ ಅವರ ನೂತನ ಸರ್ಕಾರದ ಮೊದಲ ಪಟ್ಟಿಯಲ್ಲಿ ನಮ್ಮ ನೆಚ್ಚಿನ ನಾಯಕ, ಮಾಜಿ ಸಚಿವ, ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರಿಗೆ ಸಚಿವ ಸ್ಥಾನ ನೀಡುವ ವಿಶ್ವಾಸ ಇತ್ತು. ಆದರೆ, ಅದು ನಾನಾ ಕಾರಣಗಳಿಂದ ಕೈತಪ್ಪಿದ್ದು, ಅಭಿಮಾನಿಗಳಲ್ಲಿ, ಕಾರ್ಯಕರ್ತರಲ್ಲಿ, ಬೆಂಬಲಿಗರಲ್ಲಿ ಅತ್ಯಂತ ನಿರಾಸೆಯನ್ನುಂಟು ಮಾಡಿದೆ. ಎರಡನೇ ಪಟ್ಟಿಯಲ್ಲಿ ನಾಗೇಂದ್ರ ಅವರಿಗೆ ಸಚಿವ ಸ್ಥಾನ ನೀಡಿ ಸಾಮಾಜಿಕ ನ್ಯಾಯ ಕಲ್ಪಿಸಬೇಕು. ಬೆಂಬಲಿಗರಲ್ಲಿ, ಅಭಿಮಾನಿಗಳಲ್ಲಿ, ಕಾರ್ಯಕರ್ತರಲ್ಲಿ ಮತ್ತಷ್ಟು ಉತ್ಸಾಹವನ್ನು ಹೆಚ್ಚಿಸಬೇಕು ಎಂದು ವರಿಷ್ಠರಲ್ಲಿ ಮನವಿ ಮಾಡಿದರು.

ಜಿಲ್ಲಾಧ್ಯಕ್ಷ ಶ್ರೀಕಾಂತ್ ಮಾತನಾಡಿ, ಮಾಜಿ ಸಚಿವ ಬಿ.ನಾಗೇಂದ್ರ, ಸಚಿವರಾಗಿದ್ದಾಗ ರಾಜ್ಯದ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿದ್ದಾರೆ. ಎಲ್ಲ ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ಇತರಿಗೆ ಮಾದರಿಯಾಗಿದ್ದಾರೆ. ವರಿಷ್ಠರು ಕೂಡಲೇ ನಾಗೇಂದ್ರ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕು ಎಂದು ಒತ್ತಾಯಿಸಿದರು.

ಸಂಗನಕಲ್ ವಿಜಯಕುಮಾರ್ ಮಾತನಾಡಿ, ಮಾಜಿ ಸಚಿವ, ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರಿಗೆ ನೂತನ ಸರ್ಕಾರದಲ್ಲಿ ಸಚಿವ ಸ್ಥಾನ ಕೈತಪ್ಪಿದ್ದು ಅತ್ಯಂತ ಬೇಸರವನ್ನುಂಟು ಮಾಡಿದೆ ಎಂದರು. ಮುಖಂಡರಾದ ಅಸುಂಡಿ ಹನುಮೇಶ ಸೇರಿದಂತೆ ಇತರರಿದ್ದರು.



ಇಂದಿರಾ ಗಾಂಧಿ ಬಾಲಕಿಯರ ಪ್ರೌಢಶಾಲೆ ಮುಚ್ಚದಿರಿ

ಹಗರಿಬೊಮ್ಮನಹಳ್ಳಿ: ಇಂದಿರಾಗಾಂಧಿ ಬಾಲಕಿಯರ ಪ್ರೌಢಶಾಲೆ ಬಾಲಕಿಯರಿಗಾಗಿಯೇ ಪ್ರತ್ಯೇಕವಾಗಿರುವ ಶಾಲೆ ಇದಾಗಿದ್ದು ಆಡಳಿತ ಮಂಡಳಿಯವರು ಬರುವ ವಿದ್ಯಾರ್ಥಿಗಳನ್ನು ಶಾಲೆಗೆ ದಾಖಲಾತಿ ಮಾಡಿಕೊಳ್ಳದೆ ವಾಪಸ್ ಕಳಿಸುವುದು ಸರಿಯಲ್ಲ ಶಿಕ್ಷಣ ಇಲಾಖೆ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಿ ಎಂದು ಹೇಳಿರುವ ನೆಪವನ್ನು ಇಟ್ಟುಕೊಂಡು ಶಾಲೆ ಮುಚ್ಚುವುದು ಸರಿಯಲ್ಲ ಎಂದು ಕರವೇ ಅಧ್ಯಕ್ಷ ಬುಡ್ಡಿ ಬಸವರಾಜ್ ತಿಳಿಸಿದರು.

ಬುಧವಾರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮುಂದೆ ವಿವಿಧ ಕನ್ನಡ ಪರ ಸಂಘಟನೆಗಳ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು 2006ರಲ್ಲಿ ಅನುದಾನಕ್ಕೆ ಒಳಪಟ್ಟಿದ್ದ ಈ ಶಾಲೆಗೆ ಅಂದಿನಿಂದ ಇಂದಿನವರೆಗೂ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಹೆಚ್ಚುತ್ತಿದ್ದು ಖರ್ಚು ವೆಚ್ಚಗಳ ನಿರ್ವಹಣೆಯನ್ನು ಸರ್ಕಾರವೇ ಮಾಡುತ್ತಿದೆ. ಶಾಲೆಯ ಆಡಳಿತ ಮಂಡಳಿಯವರು ಸರ್ಕಾರದ ನಿಯಮಗಳನ್ನು ಸರಿಯಾಗಿ ಪಾಲಿಸದೆ ಶಾಲೆ ಮುಚ್ಚುವ ನಿರ್ಧಾರಕ್ಕೆ ಬಂದಿರುವುದು ಆಡಳಿತ ಮಂಡಳಿಯ ನಿರ್ಲಕ್ಷಕ್ಕೆ ಸಾಕ್ಷಿಯಾಗಿದೆ ಶಾಲೆಯ ಮುಖ್ಯ ಶಿಕ್ಷಕಿ ವಿದ್ಯಾರ್ಥಿಗಳು ಶಾಲೆಗೆ ದಾಖಲಾತಿಗೆ ಬಂದರೆ ವಾಪಸ್ ಕಳಿಸುತ್ತಿದ್ದಾರೆ ಮುಖ್ಯ ಶಿಕ್ಷಕಿಯ ವಿರುದ್ಧ ಕ್ರಮ ಜರುಗಿಸಬೇಕು. ವಿದ್ಯಾರ್ಥಿಗಳನ್ನು ಶಾಲೆಗೆ ದಾಖಲಾತಿ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಶಾಲೆಯನ್ನು ಮುಚ್ಚಬಾರದು ಎಂದು ಆಗ್ರಹಿಸಿದರು.

ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿ ಜಗದೀಶ್ ಅವರಿಗೆ ಮನವಿ ಸಲ್ಲಿಸಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ಜಗದೀಶ್ ಮನವಿಯನ್ನು ಮೇಲಾಧಿಕಾರಿಗೆ ಕಳಿಸುವ ಮೂಲಕ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಹಿರಿಯ ಮುಖಂಡರಾದ ಕಿನ್ನಾಳ ಸುಭಾಷ್, ಕನ್ನಡ ಪರ ಸಂಘಟನೆಯ ಸಾಲುಮನಿ ನಾಗರಾಜ, ಎನ್.ಎಂ.ಗೌಸ್, ಬಿ.ಕೆ.ಬಸವರಾಜ, ಸೋಮನಾಥ, ರಮೇಶ್ ಇತರರಿದ್ದರು.



ದೇವದಾಸಿಯರನ್ನು ಗೌರವದಿಂದ ಕಾಣಿ



ವಿಜಯನಗರ: ದೇವದಾಸಿ ಸಮುದಾಯದ ಮಹಿಳೆಯರನ್ನು ಕನಿಕರದಿಂದ ನೋಡುವ ಬದಲು ಗೌರವದಿಂದ ಕಾಣಬೇಕು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕಿ ಡಾ. ಶೈಲಜ ಇಂ. ಹಿರೇಮಠ ಹೇಳಿತಿದರು.

ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ವತಿಯಿಂದ ಆಯೋಜಿಸಿದ್ದ ದೇವದಾಸಿ ಪರಂಪರೆ ಮತ್ತು ಸಂಸ್ಕೃತಿ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದೇವದಾಸಿ ಸಮುದಾಯವು ಕೇವಲ ಸಾಮಾಜಿಕ ಸಮಸ್ಯೆಯಲ್ಲ, ಅದು ಅಕ್ಷರಜ್ಞಾನ, ವಚನ, ತತ್ವಪದ ಹಾಗೂ ಕಲಾ ಪರಂಪರೆಯೊಂದಿಗೆ ಆಳವಾದ ಸಂಬಂಧ ಹೊಂದಿದೆ. ಇತಿಹಾಸದಲ್ಲಿ ಈ ಸಮುದಾಯದವರು ಆರ್ಥಿಕವಾಗಿ ಸಮೃದ್ಧರಾಗಿದ್ದು, ಕೆರೆಗಳ ನಿರ್ಮಾಣ, ದಾನಧರ್ಮದಂತಹ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಪೂರ್ವಗ್ರಹಗಳನ್ನು ಬಿಟ್ಟು, ಆಳವಾದ ಅಧ್ಯಯನದ ಮೂಲಕ ಈ ಪರಂಪರೆಯನ್ನು ಅರ್ಥೈಸಿಕೊಳ್ಳಬೇಕು ಎಂದರು. ದೃಶ್ಯಕಲಾ ವಿಭಾಗದ ಮುಖ್ಯಸ್ಥ ಡಾ. ಮೋಹನ್‌ರಾವ್ ಬಿ. ಪಂಚಾಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕ ಡಾ.ಕೃಷ್ಣೇಗೌಡ, ಮಮ್ತಾಜ್ ಬಿ. ಹಾಗೂ ವಿವಿಧ ವಿಭಾಗಗಳ ಡೀನರು, ಸಂಶೋಧನಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಎನ್‌ಎಂಡಿಸಿಯಿಂದ ಸರ್ಕಾರದ ನಿಯಮ ಉಲ್ಲಂಘನೆ: ಆರೋಪ

ಬಳ್ಳಾರಿ: ಕೇಂದ್ರ ಸರ್ಕಾರದ ಒಡೆತನದ ಸಂಡೂರಿನ ಎನ್‌ಎಂಡಿಸಿ ಕಂಪನಿ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಪರಿಸರ ನಿಯಮಗಳು ಇದ್ದರೂ ಇಲ್ಲಿ ಯಾವುದೂ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ. ಇದರಿಂದ ವ್ಯಾಪ್ತಿಯ ಜನರ ಆರೋಗ್ಯ, ಪರಿಸರ ಹಾಳಾಗುತ್ತಿದೆ. ಕೂಡಲೇ ಸರ್ಕಾರ ಇದಕ್ಕೆ ಕಡಿವಾಣ ಹಾಕಬೇಕು, ನಿರ್ಲಕ್ಷ್ಯ ವಹಿಸಿದ ಯಾವುದೇ ಗಣಿ ಕಂಪನಿಗಳಿರಲಿ ಎಲ್ಲರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್.ಆರ್.ಹಿರೇಮಠ ಒತ್ತಾಯಿಸಿದರು.

ನಗರದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ (ಎನ್ ಎಂ ಡಿಸಿ) ಕುಮಾರಸ್ವಾಮಿ ಕಬ್ಬಿಣದ ಅದಿರು ಗಣಿಯಲ್ಲಿ ನಡೆದಿರುವ ಸರ್ಕಾರದ ನಿಯಮಗಳ ಉಲ್ಲಂಘನೆ ಕುರಿತು ಸಾಕಷ್ಟು ಬಾರಿ ಗಮನಸೆಳೆದರು ಇಲ್ಲಿವರೆಗೂ ಕ್ರಮವಿಲ್ಲ. ಪರಿಸರ ಇಲಾಖೆಯ ಅನುಮತಿ ಷರತ್ತುಗಳ ಉಲ್ಲಂಘನೆ ಕುರಿತು ಕೇಂದ್ರ ಪರಿಸರ, ಅರಣ್ಯ ಇಲಾಖೆ ಕೂಡಲೇ ಪರಿಣಾಮಕಾರಿಯಾಗಿ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಟಿ.ಎಂ.ಶಿವಕುಮಾರ್, ರಾಘವೇಂದ್ರ ಕುಷ್ಟಗಿ, ವೀರಣ್ಣ, ಖಲೀಲ್ ಇತರರಿದ್ದರು.



ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಗೈರು: ಸಭೆ ಮುಂದೂಡಿಕೆ

ಕೊಟ್ಟೂರು: ಪಟ್ಟಣದಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿಗೆ ತಡೆಹಾಕಲು ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಸಭೆಯನ್ನು ಕರೆಯಲಾಗಿತ್ತು. ಆದರೆ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಸಭೆಗೆ ಗೈರು ಹಾಜರಾಗಿದ್ದರಿಂದ ಸಭೆ ಮುಂದೂಡಲಾಯಿತು.

ಖಾಸಗಿ ಶಿಕ್ಷಣ ಸಂಸ್ಥೆಯವರು ಆಡಳಿತ ಮಂಡಳಿಯವರು ಹಾಜರಾಗದೆ ಆ ಶಾಲೆಗಳ ಮುಖ್ಯ ಶಿಕ್ಷಕರನ್ನು ಹಾಗೂ ಶಿಕ್ಷಕರನ್ನು ಕಳುಹಿಸಿದರೆ ಪರಿಣಾಮವಾಗಿ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರು ಪರಿಣಾಮವಾಗಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ತಹಶೀಲ್ದಾರ್ ಜಿ.ಕೆ.ಅಮರೇಶ್ ಅವರು ಸಭೆಯನ್ನು ಮುಂದೂಡಿದರು. ತಾಲೂಕು ಆಡಳಿತ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಕರೆದ ಸಭೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಮುಖ್ಯಸ್ಥರಾಗಲಿ, ಸದಸ್ಯರಾಗಲಿ ಸಭೆಗೆ ಹಾಜರಾಗದಿರುವುದು ಹಾಗೂ ನಿರ್ಲಕ್ಷತನ ತೋರುತ್ತಿರುವುದು ತಾಲೂಕು ಆಡಳಿತಾಧಿಕಾರಿಗಳ ಮಾತಿಗೆ ಆಡಳಿತ ಮಂಡಳಿಯವರು ನಿರ್ಲಕ್ಷ ತೋರುತ್ತಿರುವುದರ ಬಗ್ಗೆ ಸಂಘಟನಾರು ತೀವ್ರ ಆಕ್ರೋಶ ವ್ಯಕ್ತಪಡಿಸಿ, ತಕ್ಷಣವೇ ಆಡಳಿತ ಮಂಡಳಿಯವರ ವಿರುದ್ಧ ಎಷ್ಟು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಪ್ರಗತಿಪರ ಸಂಘಟನೆಗಳ ಮುಖ್ಯಸ್ಥ ಮಲ್ಲಿಕಾರ್ಜುನ್ ಮಾತನಾಡಿ, ಜೂ.11ರಂದು ಖಾಸಗಿ ಸಂಸ್ಥೆಗಳ ಡೊನೇಷನ್ ಹಾವಳಿಯ ವಿರುದ್ಧ ಕೊಟ್ಟೂರು ಬಂದ್ ಮಾಡಿ ಪ್ರತಿಭಟಿಸುವುದಾಗಿ ತಿಳಿಸಿದರು. ತಹಶೀಲ್ದಾರ್ ಜಿ.ಕೆ.ಅಮರೇಶ್ ಮಾತನಾಡಿ, ಜೂ.11ರೊಳಗಾಗಿ ಪುನಃ ಸಭೆಯನ್ನು ಕರೆಯಲಾಗುವುದು. ಆ ಸಭೆಗೆ ಕಡ್ಡಾಯವಾಗಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗುವುದೆಂದರು. ಬಿಇಒ ಮೈಲೇಶ್ ಬೇವೂರ್ ಹಾಗೂ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳಿದ್ದರು.

ಯಾದಗಿರಿಗೆ ಏಮ್ಸ್ ಮಂಜೂರುಗೊಳಿಸಿ: ಕಂದಕೂರು

ಯಾದಗಿರಿ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಾದೇಶಿಕ ಅಸಮಾನತೆ ದೂರವಾಗಬೇಕಾದರೆ ಕೇಂದ್ರ ಸರ್ಕಾರ ರಾಯಚೂರು ಅಥವಾ ಯಾದಗಿರಿಗೆ ಏಮ್ಸ್ ಅನ್ನು ಮಂಜೂರುಗೊಳಿಸುವಂತೆ ಗುರಮಠಕಲ್ ಶಾಸಕ ಶರಣಗೌಡ ಕಂದಕೂರು ಒತ್ತಾಯಿಸಿದರು.

ಗುರಮಠಕಲ್ ತಾಲೂಕಿನ ಬದ್ದೆಪಲ್ಲಿ ಗ್ರಾಮದಲ್ಲಿ ನಬಾರ್ಡ್ ಸಹಯೋಗದಡಿ ಆಯೋಜಿಸಿದ್ದ ಕೃಷಿ ಸಂಸ್ಕರಣೆಗಾಗಿ ರೈತರ ತರಬೇತಿ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರದ ಉದ್ಘಾಟನೆಗೆ ಆಗಮಿಸಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಲ್ಲಿ ಮನವಿ ಮಾಡಿದ ಶಾಸಕರು, ನಮ್ಮ ಭಾಗದ ಜನತೆ ಮೂಲಸೌಲಭ್ಯಗಳ ಅಭಾವದಿಂದ ಬಳಲುತ್ತಿದ್ದಾರೆ. ನಮ್ಮಲ್ಲಿ ಶಾಲಾ ಕಟ್ಟಡಗಳಿವೆ ಆದರೆ, ಶಿಕ್ಷಕರಿಲ್ಲ, ಆಸ್ಪತ್ರೆಗಳಿವೆ ನುರಿತ ವೈದ್ಯರಿಲ್ಲ ಎಂದರು.

ಗುರಮಠಕಲ್ ಕ್ಷೇತ್ರದ ಕಡೇಚೂರು ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪನೆಯಾಗಿರುವ ರೈಲ್ವೆ ಫಿಯೆಟ್ ಭೋಗಿ ಕಾರ್ಖಾನೆ ನಿಗಧಿತ ಪ್ರಮಾಣದಲ್ಲಿ ಬೋಗಿಗಳನ್ನು ತಯಾರು ಮಾಡುತ್ತಿಲ್ಲ. ಹೀಗಾಗಿ ಕಾರ್ಖಾನೆಯನ್ನು ಮೇಲ್ದರ್ಜೆಗೆ ಏರಿಸುವಬೇಕು. ಅಲ್ಲದೆ, ಸಿಂದಗಿ- ಕೊಡಂಗಲ್ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ವಿಳಂಬವಾಗುತ್ತಿದ್ದು, ಅದನ್ನು ಚಾಲನೆಗೊಳಿಸಲು ಕ್ರಮ ಕೈಗೊಳ್ಳಬೇಕು. ಯಾದಗಿರಿ ಜಿಲ್ಲೆ ಮತ್ತು ಗುರಮಠಕಲ್ ಕ್ಷೇತ್ರದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ವಿಶೇಷ ಆರ್ಥಿಕ ವಲಯ ಸ್ಥಾಪನೆ ಮಾಡುವಂತೆ ಒತ್ತಾಯಿಸಿದರು.